ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಋತುರಾಜ್ ಶತಕ

ಭಾರತ ತಂಡದ ಋತುರಾಜ್ ಗಾಯಕವಾಡ ಅವರು ದಕ್ಷಿಣ ಆಫ್ರಿಕಾ ವಿರುದ್ಧದ 2ನೇ ಪಂದ್ಯದಲ್ಲಿ ಶತಕ ಬಾರಿಸಿದರು. ಇದು, ಏಕದಿನ ಮಾದರಿಯಲ್ಲಿ ಋತುರಾಜ್ ಅವರ ಚೊಚ್ಚಲ ಶತಕ

ಕಣ್ಗಾವಲು

ಚಿಕ್ಕಮಗಳೂರಿನಲ್ಲಿ ಬುಧವಾರ 'ಶೋಭಾ ಯಾತ್ರೆ' ನಡೆದಿದ್ದು, ಭದ್ರತಾ ಸಿಬ್ಬಂದಿಯೊಬ್ಬರು ಕಣ್ಗಾವಲಿನಲ್ಲಿ ಇದ್ದರು

ಸೆನ್ಸೆಕ್ಸ್ 85,106 | ನಿಫ್ಟಿ 25,986 | $/₹ 90.15 | ಚಿನ್ನ (Std. 10g) ₹1,34,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,93,600 (ಬೆಂಗಳೂರು)

ಬಹಿಷ್ಕಾರ ಶಿಕ್ಷಾರ್ಹ ಅಪರಾಧ

ಮಸೂದೆ ಸಿದ್ಧಪಡಿಸಿದ ರಾಜ್ಯ ಸರ್ಕಾರ ಅಧಿವೇಶನದಲ್ಲಿ ಮಂಡನೆ ಸಂಭವ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಯಾವುದೇ ವ್ಯಕ್ತಿ, ಕುಟುಂಬ ಅಥವಾ ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸಿದರೆ, ಅಂತಹ ಹೀನ ಕ್ರಮ ಎಸಗಿದವರು ₹ 1 ಲಕ್ಷ ದಂಡ ಹಾಗೂ ಮೂರು ವರ್ಷದವರೆಗಿನ ಜೈಲು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಸಾಮಾಜಿಕ ಬಹಿಷ್ಕಾರವನ್ನು ನಿಷೇಧಿಸಲು ಮುಂದಾಗಿರುವ ರಾಜ್ಯ ಸರ್ಕಾರ, ಬಹಿಷ್ಕರಿಸುವ ತೀರ್ಮಾನ ತೆಗೆದುಕೊಂಡವರು, ಬಹಿಷ್ಕಾರ ಹಾಕುವ ಬಗ್ಗೆ ಸಭೆ–ಪಂಚಾಯ್ತಿ ನಡೆಸಿದವರು ಅಪರಾಧಿಗಳು ಎಂದು ಶಿಕ್ಷೆಗೆ ಗುರಿ ಮಾಡುವ ಮಹತ್ವದ ಹೆಜ್ಜೆಯನ್ನು ಇಟ್ಟಿದೆ.

ಈ ಉದ್ದೇಶಕ್ಕಾಗಿ, 'ಕರ್ನಾಟಕ ಸಾಮಾಜಿಕ ಬಹಿಷ್ಕಾರದಿಂದ ಜನರ ರಕ್ಷಣೆ (ತಡೆ, ನಿಷೇಧ ಮತ್ತು ಪರಿಹಾರ) ಮಸೂದೆ-2025'ಯನ್ನು ಸಿದ್ಧಪಡಿಸಲಾಗಿದೆ. ಬೆಳಗಾವಿಯಲ್ಲಿ ಡಿ.8ರಿಂದ ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಮಸೂದೆ ಮಂಡಿಸುವ ತಯಾರಿಯನ್ನು ಸರ್ಕಾರ ನಡೆಸಿದೆ.

ಬಹಿಷ್ಕಾರಕ್ಕೆ ಸಹಾಯ, ಪ್ರಚೋದನೆ ಶಿಕ್ಷಾರ್ಹ ಅಪರಾಧವಾಗಲಿದೆ. ಅದಕ್ಕೂ ಮೂರು ವರ್ಷಗಳವರೆಗೆ ಜೈಲು, ₹1 ಲಕ್ಷ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶ ಇದೆ. ಸಭೆಯಲ್ಲಿ ಹಾಜರಿಲ್ಲದಿದ್ದರೂ ಬಹಿಷ್ಕಾರಕ್ಕೆ ಒತ್ತಡ ಹೇರುವ ಮೂಲಕ ನಿರ್ಧಾರಕ್ಕೆ ಕಾರಣರಾದವರು, ಬಹಿಷ್ಕಾರದ ಪರವಾಗಿ ಮತ ಹಾಕಿದವರು ಅಥವಾ ಚರ್ಚೆಯಲ್ಲಿ ಪಾಲ್ಗೊಂಡವರನ್ನೂ ಅಪರಾಧಿಗಳೆಂದು ನಿರ್ಧರಿಸಲಾಗುತ್ತದೆ. ಈ ಕುರಿತು ಸಭೆ, ಜಮಾವಣೆ, ಸಮಾವೇಶ ನಡೆಸುವುದು ಅಕ್ರಮ ಎಂದು ಮಸೂದೆ ಉಲ್ಲೇಖಿಸಿದೆ.

ಬಹಿಷ್ಕಾರಕ್ಕೆ ಒಳಗಾಗುವವರು ಠಾಣೆ ಅಥವಾ ನ್ಯಾಯಾಧೀಶರಿಗೆ ನೇರವಾಗಿ ದೂರು ಸಲ್ಲಿಸಬಹುದು.

▶10

> ಸಾಮಾಜಿಕ ಬಹಿಷ್ಕಾರವು ಮಾನವ ಘನತೆಗೆ ಧಕ್ಕೆ ತರುವ ಕ್ರಿಯೆ. ಈಗಿರುವ ಕಾನೂನುಗಳು ಬಹಿಷ್ಕಾರ ತಡೆಗೆ ಪರಿಣಾಮಕಾರಿಯಾಗಿಲ್ಲ. ಹಾಗಾಗಿ, ಹೊಸ ಕಾಯ್ದೆ ಜಾರಿಗೆ ನಿರ್ಧರಿಸಲಾಗಿದೆ
>
> **ಎಚ್.ಕೆ.ಪಾಟೀಲ**
> ಸಂಸದೀಯ ವ್ಯವಹಾರಗಳ ಸಚಿವ

ಕಲೆ: ಸಂತೋಷ್ ಸಸಿಹಿತ್ಲು

ಮೊದಲ ರಾಜ್ಯ ಮಹಾರಾಷ್ಟ್ರ

ಸಾಮಾಜಿಕ ಬಹಿಷ್ಕಾರ ನಿಷೇಧ ಕಾಯ್ದೆ ಜಾರಿಗೆ ತಂದ ಭಾರತದ ಮೊದಲ ರಾಜ್ಯ ಮಹಾರಾಷ್ಟ್ರ.

ಬಹಿಷ್ಕಾರದ ಮೂಲಕ ದಲಿತರು ಮತ್ತು ಇತರ ಅಳಿವಿನ ಅಂಚಿನಲ್ಲಿರುವ ಸಮುದಾಯಗಳಿಗೆ ರಕ್ಷಣೆ ನೀಡಲು 2016ರಲ್ಲಿ ಕಾಯ್ದೆ ಜಾರಿಗೆ ತರಲಾಯಿತು. 2017ರ ಜುಲೈನಲ್ಲಿ ರಾಷ್ಟ್ರಪತಿ ಅನುಮೋದನೆ ದೊರೆಯಿತು.

ಜಾತಿ, ಸಮುದಾಯ, ಧರ್ಮ, ಆಚರಣೆಗಳು ಅಥವಾ ವೈಯಕ್ತಿಕ ಜೀವನಶೈಲಿಯಂತಹ ಯಾವುದೇ ಆಧಾರದ ಮೇಲೆ ಒಬ್ಬ ವ್ಯಕ್ತಿ ಅಥವಾ ಗುಂಪನ್ನು ಬಹಿಷ್ಕರಿಸುವುದನ್ನು ಈ ಕಾಯ್ದೆ ನಿಷೇಧಿಸಿತ್ತು. ಇಂತಹ ಕೃತ್ಯ ಎಸಗುವ ಅಪರಾಧಿಗಳಿಗೆ ಏಳು ವರ್ಷ ಜೈಲು ಶಿಕ್ಷೆ, ₹5 ಲಕ್ಷ ದಂಡ ವಿಧಿಸಲು ಅವಕಾಶ ನೀಡಿದೆ.

ಯಾವ್ಯಾವುದಕ್ಕೆ ನಿಷೇಧ?

- ಗ್ರಾಮ ಅಥವಾ ಸಮುದಾಯದಿಂದ ಹೊರ ಹಾಕುವುದು
- ಧಾರ್ಮಿಕ, ಸಾರ್ವಜನಿಕ ಸ್ಥಳಗಳ ಬಳಕೆಗೆ ನಿರ್ಬಂಧ ವಿಧಿಸುವುದು
- ಪೂಜಾ ಸ್ಥಳಗಳ ಪ್ರವೇಶಕ್ಕೆ ಅಡ್ಡಿ ಮಾಡುವುದು
- ಸಾಮಾಜಿಕ–ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುವುದಕ್ಕೆ ತಡೆಯೊಡ್ಡುವುದು
- ವ್ಯವಹಾರ ಅಥವಾ ಉದ್ಯೋಗ ತಿರಸ್ಕಾರ ಮಾಡುವುದು
- ಶಾಲೆ, ಆಸ್ಪತ್ರೆ, ಸಮುದಾಯ ಭವನಗಳ ಪ್ರವೇಶಕ್ಕೆ ತಡೆಯೊಡ್ಡುವುದು
- ಸೇವೆಗಳು, ಅವಕಾಶಗಳನ್ನು ನಿರಾಕರಿಸುವುದು
- ಮದುವೆ, ಅಂತ್ಯಕ್ರಿಯೆಗಳಲ್ಲಿ ಭಾಗವಹಿಸುವುದಕ್ಕೆ ತಡೆಯೊಡ್ಡುವುದು
- ಸಂಬಂಧ ಕಡಿತಗೊಳಿಸಲು ಪ್ರಚೋದನೆ ನೀಡುವುದು
- ಲಿಂಗತ್ವದ ಆಧಾರದ ಮೇಲೆ ಭೇದ ಮಾಡುವುದು
- ವ್ಯಾಪಾರ, ಸಾಮಾಜಿಕ ಸಂಬಂಧಗಳಿಗೆ ತಡೆಯೊಡ್ಡುವುದು
- ಮಕ್ಕಳನ್ನು ಒಟ್ಟಿಗೆ ಆಡಲು ಅಡ್ಡಿಪಡಿಸುವುದು
- ಮಾನವ ಹಕ್ಕುಗಳನ್ನು ನಿರಾಕರಿಸುವುದು
- ಬಟ್ಟೆ, ಭಾಷೆ, ಸಾಂಸ್ಕೃತಿಕ ಭೇದ ಎಸಗುವುದು

ದರ್ಶನ್ ಬಳಿ ಜಪ್ತಿ ₹82 ಲಕ್ಷ ಐ.ಟಿಗೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಗಳಿಂದ ಜಪ್ತಿ ಮಾಡಿದ್ದ ₹82 ಲಕ್ಷ ಹಣವನ್ನು ಆದಾಯ ತೆರಿಗೆ (ಐ.ಟಿ) ಇಲಾಖೆಗೆ ಹಸ್ತಾಂತರಿಸುವಂತೆ ನ್ಯಾಯಾಲಯವು ಆದೇಶಿಸಿದೆ.

▶6

ಮತ್ತೆ ದುಬಾರಿ ವಾಚ್ ಸದ್ದು

ಸಿ.ಎಂ– ಡಿಸಿಎಂ ಕೈಯಲ್ಲಿ 'ಸ್ಯಾಂಟೋಸ್ ಕಾರ್ಟಿಯರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ಅವರು ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ಅವರ ಕೈಯಲ್ಲಿದ್ದ ದುಬಾರಿ ಬೆಲೆಯ 'ಹುಬ್ಲೊ ವಾಚ್' ದೊಡ್ಡ ಸದ್ದು ಮಾಡಿತ್ತು. ಈಗ ಮತ್ತೊಮ್ಮೆ, ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಟ್ಟಿಕೊಂಡಿದ್ದ 'ಸ್ಯಾಂಟೋಸ್ ಕಾರ್ಟಿಯರ್' ವಾಚ್ ವಿರೋಧ ಪಕ್ಷಗಳಿಗೆ ಆಹಾರವಾಗಿದೆ.

'ಸ್ಯಾಂಟೋಸ್ ಕಾರ್ಟಿಯರ್ ಬೆಲೆ ₹43 ಲಕ್ಷ' ಎಂದು ಹೇಳಿರುವ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್, ಸಿದ್ದರಾಮಯ್ಯ ಅವರ ವಿರುದ್ಧ ಟೀಕೆ ಮಾಡಿವೆ.

ಬೆಳಗಾವಿ ಅಧಿವೇಶನ ಶುರುವಾಗುವ ಕೆಲವೇ ದಿನಗಳ ಮೊದಲು, 'ದುಬಾರಿ ವಾಚ್'ನ ವಿಷಯ ಪ್ರತಿಪಕ್ಷಗಳ ಕೈಗೆ ಹೊಸ ಅಸ್ತ್ರವನ್ನು ಕೊಟ್ಟಿದೆ.

▶6

ಸಿದ್ದರಾಮಯ್ಯ– ಶಿವಕುಮಾರ್ ಅವರ ಕೈಯಲ್ಲಿ ಸ್ಯಾಂಟೋಸ್ ಕಾರ್ಟಿಯರ್ ವಾಚ್

ಈ ವಾಚ್‌ನ ಬೆಲೆ ಎಷ್ಟು?

ಫ್ರಾನ್ಸ್‌ನ ಸ್ಯಾಂಟೋಸ್ ಕಾರ್ಟಿಯರ್ ಕಂಪನಿಯು ವಾಚ್, ಆಭರಣ, ಬ್ಯಾಗ್, ಸೆಂಟ್ ಸೇರಿದಂತೆ ದುಬಾರಿ ಬೆಲೆಯ ಲೈಫ್‌ಸ್ಟೈಲ್ ಉತ್ಪನ್ನಗಳನ್ನು ತಯಾರಿಸುತ್ತದೆ. ಈ ಕಂಪನಿಯ ವಾಚ್‌ನ ಬೆಲೆ ಸರಿಸುಮಾರು ₹4 ಲಕ್ಷದಿಂದ ಆರಂಭವಾಗಿ ₹2.5 ಕೋಟಿಯವರೆಗೂ ಇದೆ. ವಾಚ್ ಕುರಿತು ಸಿದ್ದರಾಮಯ್ಯ ಹಾಗೂ ಅವರ ಸಚಿವಾಲಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕರ್ನಾಟಕದಲ್ಲಿ ಶೇ 63ರಷ್ಟು ಭ್ರಷ್ಟಾಚಾರ: ನ್ಯಾ. ವೀರಪ್ಪ

ಬೆಂಗಳೂರು: 'ಇಂದು ಕೇರಳದಲ್ಲಿ ಶೇ 10ರಷ್ಟು ಮಾತ್ರವೇ ಭ್ರಷ್ಟಾಚಾರ ಇದ್ದರೆ ಕರ್ನಾಟಕದಲ್ಲಿ ಶೇ 63ರಷ್ಟು ಭ್ರಷ್ಟಾಚಾರ ಇದೆ. ನಾನು ಉಪ ಲೋಕಾಯುಕ್ತ ಆದ ಮೇಲೆ ಇದನ್ನೆಲ್ಲಾ ಕಣ್ಣಾರೆ ನೋಡುವ ಅವಕಾಶ ದಕ್ಕಿದೆ' ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಹೇಳಿದರು.

ಹೈಕೋರ್ಟ್ ವಕೀಲ ತುಳವನೂರು ಶಂಕರಪ್ಪ ಅವರು ಬರೆದಿರುವ 'ಓವರ್‌ಸೀಸ್ ಟ್ರಾವೆಲಾಗ್' ಪ್ರವಾಸ ಕಥನವನ್ನು ಹೈಕೋರ್ಟ್ ವಕೀಲರ ಸಭಾಂಗಣದಲ್ಲಿ ಬುಧವಾರ ಅವರು ಬಿಡುಗಡೆ ಮಾತನಾಡಿದರು.

'ರಾಜ್ಯದ ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದ್ದು, ಕರ್ನಾಟಕ ಭ್ರಷ್ಟಾಚಾರದ ಅಗ್ರಪಟ್ಟಿಯಲ್ಲಿ ಐದನೆಯ ಸ್ಥಾನ ಪಡೆದಿದೆ. ಈ ಪಿಡುಗನ್ನು ಕೂಡಲೇ ತಡೆಯದೇ ಹೋದರೆ ಭವಿಷ್ಯದಲ್ಲಿ ಭೀಕರ ಅಪಾಯ ಕಟ್ಟಿಟ್ಟ ಬುತ್ತಿ' ಎಂದು ಎಚ್ಚರಿಸಿದರು.

▶5

ದಾಖಲೆ ಮಟ್ಟಕ್ಕೆ ಕುಸಿದ ರೂಪಾಯಿ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಬುಧವಾರ ₹90.15ಕ್ಕೆ ಕುಸಿದಿದೆ. ರೂಪಾಯಿಯ ಮೌಲ್ಯವು ವಹಿವಾಟಿನ ಅಂತ್ಯಕ್ಕೆ 90ಕ್ಕಿಂತ ಕಡಿಮೆ ಮಟ್ಟಕ್ಕೆ ಬಂದಿರುವುದು ಇದೇ ಮೊದಲು.

▶10

ಸಂಚಾರ ಸಾಥಿ ಆದೇಶ ಹಿಂದಕ್ಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೇಶದಲ್ಲಿ ಮಾರಾಟವಾಗುವ ಎಲ್ಲ ಸ್ಮಾರ್ಟ್‌ಫೋನ್ ಗಳಲ್ಲಿ 'ಸಂಚಾರ ಸಾಥಿ' ಸೈಬರ್ ಭದ್ರತಾ 'ಆ್ಯಪ್'ನ ಪೂರ್ವ ಅಳವಡಿಕೆಯನ್ನು ಕಡ್ಡಾಯಗೊಳಿಸಿ ಹೊರಡಿಸಿದ್ದ ಆದೇಶವನ್ನು ಕೇಂದ್ರ ಸರ್ಕಾರ ಬುಧವಾರ ಹಿಂಪಡೆದಿದೆ.

'ಆ್ಯಪ್'ನ ಕಡ್ಡಾಯ ಅಳವಡಿಕೆಯಿಂದ ನಾಗರಿಕರ ಖಾಸಗಿತನ, ವೈಯಕ್ತಿಕ ಹಕ್ಕುಗಳಿಗೆ ಚ್ಯುತಿ ಬರುತ್ತದೆ. ಸರ್ಕಾರ ಜನರ ಮೇಲೆ ಕಣ್ಗಾವಲು ಇಡುವುದು, ಗೂಢಚಾರಿಕೆ ನಡೆಸುವುದು ಸರಿಯಲ್ಲ. ಇದು ಸರ್ವಾಧಿಕಾರಿ ನಡೆ' ಎಂದು ಆರೋಪಿಸುವ ಮೂಲಕ ವಿರೋಧ ಪಕ್ಷಗಳು ಕೇಂದ್ರದ ನಿರ್ಧಾರವನ್ನು ವ್ಯಾಪಕವಾಗಿ ಟೀಕಿಸಿದ್ದವು. ಸಂಸತ್ತಿನ ಒಳಗೆ ಮತ್ತು ಹೊರಗೆ ಪ್ರತಿಭಟಿಸಿ, ಆದೇಶ ಹಿಂಪಡೆಯುವಂತೆ ಆಗ್ರಹಿಸಿದ್ದವು.

ಲೋಕಸಭೆಯಲ್ಲಿ ಬುಧವಾರ ಕಲಾಪದ ವೇಳೆ ಈ ವಿಷಯವನ್ನು ಪ್ರಸ್ತಾಪಿಸಿದ ವಿರೋಧ ಪಕ್ಷಗಳ ಮುಖಂಡರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

▶10

ಚಿನಕುರುಳಿ

ಪ್ರಕಾಶ್ ಶೆಟ್ಟಿ

Aditi Solar ಅದಿತಿ ಸೋಲಾರ್ ಪ್ರೈವೇಟ್ ಲಿಮಿಟೆಡ್

Megha Drip & Sprinkler / Micro Irrigation Systems
MEGHA AGROTECH Pvt. Ltd.

ಪಿ.ಎಂ ಕುಸುಮ್–ಬಿ ಯೋಜನೆಯಡಿ ಸೋಲಾರ್ ಪಂಪ್–ಸೆಟ್‌ಗಾಗಿ ಅರ್ಜಿ ಆಹ್ವಾನ

ರೈತರ ಗಮನಕ್ಕೆ

ರಾಜ್ಯದಲ್ಲಿ MNRE ಮತ್ತು KREDL ಸಹಯೋಗದೊಂದಿಗೆ ರೈತರ ಜಮೀನಿನ ಕೊಳವೆ / ತೆರೆದ ಬಾವಿಗಳಿಗೆ ಸೋಲಾರ್ ಪಂಪ್–ಸೆಟ್‌ಗಳನ್ನು ಅಳವಡಿಸಲು ರೈತರಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲಾಗಿದೆ.

ಆತ್ಮೀಯ ರೈತ ಬಾಂಧವರೇ, ಅದಿತಿ ಸೋಲಾರ್ ಪ್ರೈವೇಟ್ ಲಿಮಿಟೆಡ್, ನ ಕರ್ನಾಟಕದ ಅಧಿಕೃತ ಮಾರಾಟಗಾರರು ಮೇಘ ಆಗ್ರೋಟೆಕ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು, ತಿಳಿಸುವುದೇನೆಂದರೆ ಕರ್ನಾಟಕ ರಾಜ್ಯ ಸರ್ಕಾರವು ಕೆಡಲ್ ಸಂಸ್ಥೆ ವತಿಯಿಂದ PM-KUSUM-B ಯೋಜನೆಯಡಿ ಶೇಕಡ 80% ರ ಸಬ್ಸಿಡಿ ದರದಲ್ಲಿ ಸೋಲಾರ್ ಪಂಪ್‌ಸೆಟ್‌ಗೆ ಅರ್ಜಿ ಸಲ್ಲಿಸಲು ರಾಜ್ಯದ ಎಲ್ಲಾ ರೈತರಿಗೆ ಸುವರ್ಣಾವಕಾಶ ನೀಡಿದೆ, ಆಸಕ್ತ ರೈತರು souramitra.com ನಲ್ಲಿ ನೋಂದಣಿ ಮಾಡುವವರು ADITI SOLAR PVT. LTD. ಅನ್ನು ಆಯ್ಕೆ ಮಾಡಬೇಕಾಗಿ ವಿನಂತಿ.

3 HP, 5 HP, 7.5 HP, 10 HP ಉನ್ನತ ಕಾರ್ಯಕ್ಷಮತೆ ಮತ್ತು ದಕ್ಷತೆಯ ಅತ್ಯುನ್ನತ ಗುಣಮಟ್ಟ ಮತ್ತು ಇತ್ತೀಚಿನ ತಂತ್ರಜ್ಞಾನದೊಂದಿಗೆ ಮೊನೋಬ್ಲಾಕ್ (ಸರ್ಫೇಸ್) & ಸಬ್‌ಮರ್ಸಿಬಲ್ ಪಂಪ್‌ಗಳನ್ನು ತಯಾರಿಸಲಾಗಿದೆ.

ಫಲಾನುಭವಿಗಳು ಪಾವತಿಸಬೇಕಾದ ಮೊತ್ತ

ಪಂಪ್ ಪ್ರಕಾರ	ರೈತರ ಕೊಡುಗೆ
3 H.P ಡಿ.ಸಿ ಸರ್ಫೇಸ್ ಪಂಪ್	43,276/-
3 H.P ಡಿ.ಸಿ ಸಬ್ಮರ್ಸಿಬಲ್ ಪಂಪ್	44,828/-
5 H.P ಡಿ.ಸಿ ಸರ್ಫೇಸ್ ಪಂಪ್	57,734/-
5 H.P ಡಿ.ಸಿ ಸಬ್ಮರ್ಸಿಬಲ್ ಪಂಪ್	58,509/-
7.5 H.P ಡಿ.ಸಿ ಸರ್ಫೇಸ್ ಪಂಪ್	92,628/-
7.5 H.P ಡಿ.ಸಿ ಸಬ್ಮರ್ಸಿಬಲ್ ಪಂಪ್	81,817/-
10 H.P ಡಿ.ಸಿ ಸರ್ಫೇಸ್ ಪಂಪ್	1,91,983/-
10 H.P ಡಿ.ಸಿ ಸಬ್ಮರ್ಸಿಬಲ್ ಪಂಪ್	1,81,911/-

ಪ್ರತಿ ಜಿಲ್ಲೆಯಲ್ಲೂ ನುರಿತ ತಂತ್ರಜ್ಞರನ್ನು ಒಳಗೊಂಡ ಸೇವಾ ಕೇಂದ್ರ ಲಭ್ಯ

ಹನಿ ಮತ್ತು ತುಂತುರು ನೀರಾವರಿಯಲ್ಲಿ 30 ವರ್ಷಗಳ ಅನುಭವ

MEGHA AGROTECH Pvt. Ltd.

: ತಯಾರಕರು : ಮೇಘಾ ಹನಿ ಮತ್ತು ತುಂತುರು ಉಪಕರಣಗಳು

196, ಅರಕೆರೆ ಗೇಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076

99160 37976 / 89519 06471 / 90369 85192 / 99026 87845

ಹೆಸ್ಕಾಂ: ಅವಿನಾಶ್ 90369 85198 | ಬೆಸ್ಕಾಂ: ವಿಶ್ವನಾಥ್ 77956 81627 | ಮೆಸ್ಕಾಂ: ದ್ವಾರಕಿ 94487 41419 | ಚೆಸ್ಕಾಂ: ಮಹದೇವಸ್ವಾಮಿ 77956 81626 | ಜೆಸ್ಕಾಂ: ವೆಂಕಟರೆಡ್ಡಿ 96069 59471

ತಾಲ್ಲೂಕು ಮಟ್ಟದಲ್ಲಿ ಡೀಲರ್ಸ್ / ಇನ್‌ಸ್ಟಾಲರ್‌ಗಳು ಬೇಕಾಗಿದ್ದಾರೆ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ.

ನಗರ ವಿ.ವಿಯ ಘಟಕ ಕಾಲೇಜು ಮಾಡುವುದಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಾಮ್ ನಾರಾಯಣ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜನ್ನು(ಆರ್‌ಸಿ ಕಾಲೇಜು) ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜನ್ನಾಗಿ ಪರಿವರ್ತಿಸುವ ಪ್ರಯತ್ನ ಶುರುವಾಗಿದೆ.

‘ಈ ಕಾಲೇಜನ್ನು ಘಟಕ ಕಾಲೇಜನ್ನಾಗಿ ಪರಿವರ್ತಿಸುವ ಮೊದಲು ಸಾಧಕ, ಬಾಧಕಗಳನ್ನು ಪರಿಶೀಲಿಸಲಾಗುತ್ತಿದೆ. ಇದರಿಂದ ಕಾಲೇಜಿನ ಕಾಯಂ ಬೋಧಕ ಹಾಗೂ ಬೋಧಕರ ಹುದ್ದೆ, ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲಿರುವವರ ಪಿಂಚಣಿ ವಿವರ, ನಿವೃತ್ತ ಹಾಗೂ ನಿವೃತ್ತಗೊಳ್ಳಲಿರುವವರ ಒಪಿಎಸ್ ಹಾಗೂ ಎನ್‌ಪಿಎಸ್ ವಿವರ, ಸರ್ಕಾರ ನೀಡುತ್ತಿರುವ ಅನುದಾನ, ಕಾಲೇಜಿನ ಗುತ್ತಿಗೆ, ಹೊರಗುತ್ತಿಗೆ ಸಿಬ್ಬಂದಿ ವಿವರ ಒದಗಿಸಬೇಕು’ ಎಂದು ಕುಲಸಚಿವ ನವೀನ್ ಜೋಸೆಫ್ ಅವರು ಪ್ರಾಂಶುಪಾಲರಿಗೆ ಪತ್ರ ಬರೆದಿದ್ದಾರೆ.

ಎಐಡಿಎಸ್‌ಒ ವಿರೋಧ: ಇತಿಹಾಸ ಪ್ರಸಿದ್ಧ ಆರ್‌ಸಿ ಕಾಲೇಜನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯ ಘಟಕ ಕಾಲೇಜನ್ನಾಗಿ ಪರಿವರ್ತಿಸುವುದಕ್ಕೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ವಿರೋಧ ವ್ಯಕ್ತಪಡಿಸಿದೆ. ‘ಘಟಕ ಕಾಲೇಜನ್ನಾಗಿ ಪರಿವರ್ತಿಸುವುದರಿಂದ ಶುಲ್ಕ ಹೆಚ್ಚಳಕ್ಕೆ ದಾರಿಯಾಗಲಿದೆ. ಇದರಿಂದ ಕಾರ್ಮಿಕ, ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣ ದುಬಾರಿಯಾಗಲಿದೆ. ಈ ಪ್ರಕ್ರಿಯೆ ನಿಲ್ಲಿಸಿ ಸರ್ಕಾರಿ ಕಾಲೇಜು ಆಗಿಯೇ ಬಲಪಡಿಸಬೇಕು. ಇಲ್ಲದೇ ಇದ್ದರೆ ಪ್ರತಿಭಟನೆಗೆ ಮುಂದಾಗಬೇಕಾಗುತ್ತದೆ’ ಎಂದು ಸಂಘಟನೆ ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ಕುಮಾರ್ ತಿಳಿಸಿದ್ದಾರೆ.

‘ಅರಿವು ವಿಸ್ತರಿಸುವ ವಚನಗಳು’

ಬಸವಗೀತೆ ಸತ್ಯಸಂವಾದ 9 ಸಂಪುಟಗಳ ಜನಾರ್ಪಣೆ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜ ಹಾಗೂ ಮನೋ ವಿಜ್ಞಾನದ ರೂಪದಂತಿರುವ ವಚನಗಳಿಗೆ ಪ್ರತಿಯೊಬ್ಬರ ತನು ಮತ್ತು ಮನದ ಅರಿವನ್ನು ವಿಸ್ತರಿಸಿ, ನಮ್ಮ ನಡುವಿನ ಭೇದಗಳನ್ನು ದೂರ ಮಾಡುವ ಶಕ್ತಿಯಿದೆ’ ಎಂದು ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ ಹೇಳಿದರು.

ಬಸವ ಸೇವಾ ಪ್ರತಿಷ್ಠಾನ, ಸುದ್ದಿಮೂಲ ದಿನಪತ್ರಿಕೆ ಬುಧವಾರ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಪತ್ರಕರ್ತ ಬಸವರಾಜ ಸ್ವಾಮಿ ಅವರು ಸಂಪಾದಿಸಿರುವ ಬಸವಗೀತೆ ಸತ್ಯಸಂವಾದ 9 ಸಂಪುಟಗಳ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹೊರಲೋಕದಲ್ಲಿ ಜಾತಿ, ಧರ್ಮ, ಲಿಂಗ ಭೇದ, ನಾನಾ ಸಿದ್ಧಾಂತಗಳ ಆಧಾರದ ಮೇಲೆ ಸಂಘರ್ಷಗಳು ಹೆಚ್ಚಾಗಿವೆ. ಇವುಗಳನ್ನು ನಿವಾರಿಸಿ ಲೋಕಕ್ಷೇಮ ಸಾಧಿಸಬೇಕಾದರೆ, ಅದಕ್ಕೆ ಅರಿವಿನ ಮೀಮಾಂಸೆ ಅಗತ್ಯ. ಅಂತಹ ಅರಿವಿನ ಸ್ಫೋಟ ತನು, ಮನದ ಮೂಲಕವೇ ಆಗಬೇಕಿದೆ’ ಎಂದು ತಿಳಿಸಿದರು.

ಜನಾರ್ಪಣೆ ಮಾಡಿದ ಸಚಿವ ಎನ್.ಎಸ್. ಬೋಸರಾಜು ಮಾತನಾಡಿ, ‘ಕರ್ನಾಟಕ ಮಾತ್ರವಲ್ಲದೇ ಎಲ್ಲೆಡೆ ಬಸವತತ್ವ ಅನುಯಾಯಿಗಳು ಇದ್ದಾರೆ. ಬಸವ ತತ್ವ ಪ್ರಚಾರವು ಸಮಾಜದಲ್ಲಿ ಬದಲಾವಣೆಗೆ ದಾರಿಯಾಗಿದೆ. ಬಸವರಾಜ ಸ್ವಾಮಿ ಅವರು ಸಾಮಾಜಿಕ ಪರಿವರ್ತನೆಯ ಕೆಲಸ ಮಾಡುತ್ತಲೇ ಬಸವಗೀತೆ ಸತ್ಯ ಸಂವಾದದ ಸಂಪುಟಗಳ ಮೂಲಕ ವಚನಗಳನ್ನು ವ್ಯಾಖ್ಯಾನಿಸಿರುವುದು ಶ್ಲಾಘನೀಯ’ ಎಂದರು.

ಅಧ್ಯಕ್ಷತೆ ವಹಿಸಿದ್ದ ವಿದ್ವಾಂಸ ಲಕ್ಷ್ಮೀಶ ತೋಳ್ಪಾಡಿ ಮಾತನಾಡಿ, ಅಧ್ಯಾತ್ಮ ಎನ್ನುವುದು ನಮ್ಮೊಳಗಿನ ಸಂವಹನದ ಒಂದು ಹಾದಿ. ಲೌಕಿಕವೇ ಅಧ್ಯಾತ್ಮದ ಬಂಡವಾಳವಾಗಿದ್ದರೂ ಅದನ್ನು ಲೌಕಿಕದ ಬಂಡವಾಳಕ್ಕೆ ಅಧ್ಯಾತ್ಮವನ್ನು ಬಳಸಿಕೊಳ್ಳುವ ಪ್ರಯತ್ನಗಳು ಹೆಚ್ಚುತ್ತಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು.

ಲೇಖಕ ಬಸವರಾಜ ಸ್ವಾಮಿ, ಪ್ರಕಾಶಕ ವಿಶ್ವನಾಥ ಬಸವರಾಜ ಸ್ವಾಮಿ ಉಪಸ್ಥಿತರಿದ್ದರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯ ವಿದ್ವಾನ್ ಎಂ. ಖಾಸೀಮ್ ಮಲ್ಲಿಗೆಮಡುವು, ಕಲಾವಿದ ಮುರಳೀಧರ ರಾಥೋಡ್ ಅವರನ್ನು ಸನ್ಮಾನಿಸಲಾಯಿತು.

ನಗರದ ಗಾಂಧಿ ಭವನದಲ್ಲಿ ಬಸವ ಸೇವಾ ಪ್ರತಿಷ್ಠಾನ ಆಯೋಜಿಸಿದ್ದ ಬಸವ ಗೀತೆ 9 ಸಂಪುಟಗಳ ಜನಾರ್ಪಣೆ ಕಾರ್ಯಕ್ರಮದಲ್ಲಿ ವಿಶ್ವನಾಥ ಬಸವರಾಜ ಸ್ವಾಮಿ, ಬಸವರಾಜ ಸ್ವಾಮಿ, ಸಚಿವ ಎನ್.ಎಸ್. ಬೋಸರಾಜು, ಲಕ್ಷ್ಮೀಶ ತೋಳ್ಪಾಡಿ ಮತ್ತು ಮಲ್ಲೇಪುರಂ ಜಿ. ವೆಂಕಟೇಶ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101
ದೂರವಾಣಿ ಸಂಖ್ಯೆ: ಕಛೇರಿ: 08156-295427 ಫ್ಯಾಕ್ಸ್: 08156-295427
ಇಮೇಲ್:eemidcbpura@gmail.com

ಮರು ಟೆಂಡರ್ ಅಧಿಸೂಚನೆ

ಸಂಖ್ಯೆ: ಕಾಸಬ/ತಾಂಶಾ/ತಾಂಸ/ ಮರು ಟೆಂಡರ್/2058/2025-26 ದಿ:01/12/2025

ಈ ಕಚೇರಿ ಪ್ರೀ ಕ್ವಾಲಿಫಿಕೇಶನ್ ಟೆಂಡರ್ ಪ್ರಕಟಣೆ ಸಂಖ್ಯೆ : 14/2025-26, ದಿನಾಂಕ: 10/11/2025. ರಲ್ಲಿ ಆಹ್ವಾನಿಸಲಾಗಿದ್ದ 4702 ಏತ ನೀರಾವರಿ ಯೋಜನೆ ಅಡಿಯಲ್ಲಿನ ಕಾಮಗಾರಿಯ ಟೆಂಡರ್‌ನಲ್ಲಿ ಏಕೈಕ ಗುತ್ತಿಗೆದಾರರು ಭಾಗವಹಿಸಿರುವ ಕಾರಣದಿಂದ ಹಾಗೂ ಇನ್ನೂ ಸಾಕಷ್ಟು ಜನ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸುವ ಹಿತದೃಷ್ಟಿಯಿಂದ ಮರು ಟೆಂಡರ್ ಕರೆಯಲಾಗಿರುತ್ತದೆ ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಪ್ರೀ ಬಿಡ್ ಸಭೆಯನ್ನು ದಿನಾಂಕ : 05/12/2025 ರಂದು ಅಧೀಕ್ಷಕ ಇಂಜಿನಿಯರ್ ರವರ ಕಚೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವೃತ್ತ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ ಬೆಂಗಳೂರು ಇಲ್ಲಿ ಆಯೋಜಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 09/12/2025 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 11/12/2025 ಬೆಳಿಗ್ಗೆ 11.00 ಗಂಟೆಗೆ (ಸಾಧ್ಯವಾದ್ದಲ್ಲಿ). ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156-295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91-8068948777 ಮತ್ತು 91-8046010000 ರಿಂದ ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ.

ನಗರಸಭಾ ಕಾರ್ಯಾಲಯ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ-562114,
ದೂರವಾಣಿ:-27931221, ಸಹಾಯವಾಣಿ: 27931759
Email:-itstaff_ulb_hosakote@yahoo.com Website: www.hosakotecity.mrc.gov.in

ನಂ.ನಸಹೊ/ತಾಂತ್ರಿಕ ಶಾಖೆ/ಟೆಂಡರ್/ಸಿಆರ್/08/2025-26 ದಿನಾಂಕ: 03.12.2025

"ಮರು ಟೆಂಡರ್ ಪ್ರಕಟಣೆ" (ಇ-ಪ್ರೊಕ್ಯೂರ್‌ಮೆಂಟ್ ಕೆ.ಟಿ.ಪಿ.ಪಿ ಪೋರ್ಟಲ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2025-26ನೇ ಸಾಲಿನ ಅಮೃತ್-2.0 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ 02 ರ ಪ್ರಕಾರ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ. ಕಾಮಗಾರಿಗಳ ವಿವರ **(1)DMA/2025-26/OW/WORK_INDENT47899/Call-2,** ಅಂದಾಜು ಮೊತ್ತ **ರೂ. 49.82 ಲಕ್ಷಗಳು,** ಇ.ಎಂ.ಡಿ. **ರೂ.84,394/-**

(1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **19.12.2025** ರ ಸಂಜೆ **5:30** ಗಂಟೆಯವರೆಗೆ ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **22.12.2025** ರ ಬೆಳಿಗ್ಗೆ **11:30** ಗಂಟೆಗೆ ನಿಗಧಿಪಡಿಸಲಾಗಿರುತ್ತದೆ. (2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in/#/portal/portal-home** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

ಸಹಿ/-
ಪೌರಾಯುಕ್ತರು
ನಗರಸಭೆ, ಹೊಸಕೋಟೆ.

ವಾಸಾಸಂಇ/ವಾ.ಪ್ರ/ಎಸ್‌ಎಸ್‌ಸಿ/4184/2025-26

ಪುರಸಭಾ ಕಾರ್ಯಾಲಯ, ಚಂದಾಪುರ
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560081
ಫೋನ್: 080-27832411, E-Mail: ka.chandapura.tmc@gmail.com

ಸಂ: ಚಂ.ಪು./ಟೆ.ಪ್ರ/ಸಿ.ಆರ್/04/2025-26 ದಿನಾಂಕ:03.12.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮುಖ್ಯಾಧಿಕಾರಿ, ಪುರಸಭೆ, ಚಂದಾಪುರರವರಿಂದ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 & 2000 ರ ಪ್ರಕಾರ 2025-26 ಪುರಸಭಾ ನಿಧಿಯಡಿಯಲ್ಲಿ ಈ ಕೆಳಕಂಡ ವಿವರಗಳಂತೆ ಟೆಂಡರ್ ಕರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಗುತ್ತಿಗೆದಾರರು/ಸರಬರಾಜುದಾರರು ಕೆಪಿಪಿ ಪೋರ್ಟಲ್‌ನ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಪುರಸಭಾ ಕಛೇರಿಯಿಂದ ಮತ್ತು ಕಛೇರಿ ವೆಬ್‌ಸೈಟ್ **https://www.chandapuratown.mrc.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ.ಸಂ.	ವಿವರ
1	DMA/2024-25/SE3471
2	DMA/2025-26/SE6751
3	DMA/2024-25/SE4581

ವೇಳಾಪಟ್ಟಿ: 1) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ:18.12.2025 ಸಂಜೆ 4:30 ಗಂಟೆವರೆಗೆ.** 2) ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ತೆರೆಯುವ **ದಿನಾಂಕ: 20.12.2025ರ ಸಂಜೆ 4:30 ಗಂಟೆಗೆ.**

ಸಹಿ/-
ಮುಖ್ಯಾಧಿಕಾರಿ
ಪುರಸಭೆ, ಚಂದಾಪುರ

ವಾಸಾಸಂಇ/ವಾಪ್ರ/ಜಿಎ/4182/2025-26

ತುಮಕೂರು ಜಿಲ್ಲಾ ಪಂಚಾಯತ್,
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ತುಮಕೂರು ವಿಭಾಗ,
ತುಮಕೂರು. ದೂ:0816-2252937

ಸಂಖ್ಯೆ:12/ಕಾಪಾಅ/ಪಂರಾತುಮ/ಹೊರಗುತ್ತಿಗೆ/ಟೆಂಡರ್/2025-26 ದಿನಾಂಕ: 01.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-12/2025-26
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಂಕ್ಯುಮೆಂಟ್ ಸೇವೆಗಳಿಗೆ ನಿಬಂಧನೆಗೊಳಪಟ್ಟಂತೆ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮತ್ತು ಉಪ ವಿಭಾಗ ಗುಬ್ಬಿ, ಕುಣಿಗಲ್, ತಿಪಟೂರು, ತುಮಕೂರು ಮತ್ತು ತುರುವೇಕೆರೆ ತಾಲ್ಲೂಕುಗಳ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯಲು ದ್ವಿ ಲಕೋಟೆ ಪದ್ಧತಿ ಟೆಂಡರ್ ಕರೆಯಲಾಗಿದೆ.

ಇ-ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://kppp.karnataka.gov.in) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಟೆಂಡರ್ ಮೊತ್ತ ರೂ.39.31ಲಕ್ಷಗಳು, ಇ.ಎಂ.ಡಿ ಮೊತ್ತ ರೂ.78618/- ಗಳು (1) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ: 08-12-2025 ಸಂಜೆ 5:00 ಘಂಟೆ ವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09-12-2025 ಸಂಜೆ 5:10 ಘಂಟೆಯ ನಂತರ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 10-12-2025 ಸಂಜೆ 5:30 ಘಂಟೆಯ ನಂತರ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/360/KSMCA/2025-26

‘ನಮ್ಮ ಕಾರ್ಖಾನೆ ಎಕ್ಸ್‌ಪೋ’

ಪ್ರಜಾವಾಣಿ ವಾರ್ತೆ

ಪೀಣ್ಯದಲ್ಲಿ ನಾಳೆಯಿಂದ ಆಯೋಜನೆ

ಬೆಂಗಳೂರು: ‘ಲಘು ಉದ್ಯೋಗ್ ಭಾರತಿ’ ಬೆಂಗಳೂರು ಉತ್ತರ ವತಿಯಿಂದ ‘ನಮ್ಮ ಕಾರ್ಖಾನೆ ಎಕ್ಸ್‌ಪೋ 2025’ ಅನ್ನು ಡಿ. 5 ಮತ್ತು 6ರಂದು ಪೀಣ್ಯ ಜಿಮ್ಖಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಣ್ಣ ಉತ್ಪಾದಕರು, ವ್ಯಾಪಾರಸ್ಥರು, ಎಂಎಸ್‌ಎಂಇ ಸಂಸ್ಥೆಗಳು, ವಿತರಕರು ಹಾಗೂ ಸೇವಾ ಪೂರೈಕೆದಾರರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ, ಸಂಪರ್ಕ ಜಾಲ ಏರ್ಪಡಿಸುವ ಉದ್ದೇಶದಿಂದ ಎಕ್ಸ್‌ಪೋ ಹಮ್ಮಿಕೊಳ್ಳಲಾಗಿದೆ. ಖರೀದಿದಾರರು ಮತ್ತು ಮಾರಾಟಗಾರರನ್ನು ಉತ್ತೇಜಿಸಿ, ನವೀನ ಹಾಗೂ ಅವಶ್ಯಕ ಕೈಗಾರಿಕಾ ಉತ್ಪನ್ನಗಳು ಮತ್ತು ಸೇವೆಗಳನ್ನು ಪರಿಚಯಿಸುವ ಮೂಲಕ ಬೆಂಗಳೂರು ಕೈಗಾರಿಕಾ ಪರಿಸರವನ್ನು ಬಲಪಡಿಸಲಾಗುವುದು ಎಂದು ‘ಲಘು ಉದ್ಯೋಗ್ ಭಾರತಿ’ ಅಧ್ಯಕ್ಷ ಮಯಾಂಕ್ ಕೌಶಿಕ್ ಮಾಹಿತಿ ನೀಡಿದರು.

ಎಂಜಿನಿಯರಿಂಗ್, ವಿದ್ಯುತ್ ಉಪಕರಣಗಳು, ಸಾಧನಗಳು ಮತ್ತು ಯಂತ್ರೋಪಕರಣಗಳು, ಆಟೊಮೇಶನ್, ಸುರಕ್ಷತಾ ಸಾಧನಗಳು, ಲಾಜಿಸ್ಟಿಕ್ಸ್, ಪ್ಯಾಕೇಜಿಂಗ್, ಕಚ್ಚಾ ವಸ್ತುಗಳು ಮತ್ತು ಸಂಬಂಧಿತ ಸೇವೆಗಳಂತಹ ಹಲವು ಕ್ಷೇತ್ರಗಳಿಂದ ಪ್ರದರ್ಶಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಮಾಹಿತಿಗೆ ಸಂಪರ್ಕ ಸಂಖ್ಯೆ: 9845025181

₹10.51 ಕೋಟಿ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿಯಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಕಲ್ಪಿಸಿದ್ದ ಅವಕಾಶ ಬಳಸಿಕೊಂಡು, ನಗರದಲ್ಲಿ 3,71,538 ವಾಹನಗಳ ಮಾಲೀಕರು ದಂಡ ಪಾವತಿಸಿದ್ದಾರೆ.

ನ.21ರಿಂದ ಡಿ.3ರವರೆಗೆ ಒಟ್ಟು ₹10.51 ಕೋಟಿ ದಂಡ ಸಂಗ್ರಹವಾಗಿದೆ ಎಂದು ಸಂಚಾರ ವಿಭಾಗದ ಮೂಲಗಳು ಹೇಳಿವೆ.

ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್(ಕೆಎಸ್‌ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಂಡು ವಾಹನ ಮಾಲೀಕರು ದಂಡ ಪಾವತಿಸಬಹುದು. ಡಿ.12ರ ವರೆಗೆ ಈ ರಿಯಾಯಿತಿ ಅಡಿ ದಂಡ ಪಾವತಿಗೆ ಅವಕಾಶವಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ನೈಋತ್ಯ ರೈಲ್ವೆ
ಮುಕ್ತ ಟೆಂಡರ್ ಪ್ರಕಟಣೆ ಸಂಖ್ಯೆ ಬಿಇ-29-2025-26-ಒಟಿ-18 (ಇ-ಟೆಂಡರಿಂಗ್ ಮೂಲಕ)

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಗಳಿಗೆ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
1) ಬೆಂಗಳೂರು ವಿಭಾಗದಲ್ಲಿ [illegible]	ರೂ. 1,62,85,636/-

[illegible]

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿದ್ಯುತ್ ಅಭಿಯಂತರರು/ಸಾಮಾನ್ಯ/ ಬೆಂಗಳೂರು

ಪಿಯುಬಿ/691/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025-26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

PUBLIC NOTICE

It is hereby notified that, my clients have agreed to purchase the Schedule property from its owner **SRI.KESHAVAN K TIRUVALLUR** S/o late T.V.Krishnamachari.

Apart from the said owner, if any other person/s have any manner of claim or interest or demand over the Schedule property or any part thereof by way of sale, lease, mortgage, gift, lien, charge, trust, maintenance, easement, pre-emption or otherwise howsoever, they are hereby requested to file their objection/s (along with the photocopies of the documents on which they are relying), with the undersigned within **14 days** from the date of publication of this notice. Objection/s received thereafter will not be binding on my clients.

SCHEDULE

All that piece and parcel of the residential property bearing Municipal No.39/1, PID No.51-10-39/1, New EPID No.9076834065, measuring East to West 60' 6" and North to South 68' 6", situated at Police Station Road, Basavanagudi, Bangalore and bounded on:

East by : Market Road;
West by : Property of Sri.Bheemasena;
North by : Private property;
South by : Property of Sri.T.K.Raghunath.

Sd/- **S.F. GOUTAM CHAND,**
Advocate,
GOUTAM ASSOCIATES,
No.60, 2nd Floor, Old Kanakapura Road, Basavanagudi,
Bengaluru - 560004

ನೈಋತ್ಯ ರೈಲ್ವೆ
ಇ-(ಐಆರ್‌ಇಪಿಎಸ್) ಟೆಂಡರ್
ಪ್ರಕಟಣೆ ಸಂಖ್ಯೆ 40 ಯುಬಿಎಲ್ 2025-26
ದಿನಾಂಕ: 26.11.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಗಳಿಗೆ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ [illegible]	ರೂ. 2,69,06,250.00
2	ಹುಬ್ಬಳ್ಳಿ ವಿಭಾಗ [illegible]	ರೂ. 9,65,02,558.00
3	ಹುಬ್ಬಳ್ಳಿ ವಿಭಾಗ [illegible]	ರೂ. 3,03,79,842.00
4	ಕೂ[illegible]	ರೂ. 3,22,39,095.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24-12-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಅಭಿಯಂತರರು/ಸಮನ್ವಯ/ ಹುಬ್ಬಳ್ಳಿ

ಪಿಯುಬಿ/696/ಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025-26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ರೈಲು ಗಾಲಿ ಕಾರ್ಖಾನೆ
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂ. ಆರ್‌ಡಬ್ಲ್ಯುಎಫ್/ಎಸ್/146/2025-26/09 ದಿನಾಂಕ : 01-12-2025

ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಕೆಳಕಂಡ ಕಾಮಗಾರಿಗಳಿಗಾಗಿ ವೆಬ್‌ಸೈಟ್ **http://www.ireps.gov.in** ಮೂಲಕ ಕ್ಷೇತ್ರದಲ್ಲಿನ ಅನುಭವವುಳ್ಳ / ಹೆಸರಾಂತ ಗುತ್ತಿಗೆದಾರರಿಂದ ಎಲೆಕ್ಟ್ರಾನಿಕ್ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಸಂ.	ಮುಕ್ತಾಯದ ದಿನಾಂಕ ಮತ್ತು ಸಮಯ	ಅಂತರ ಶ್ರೇಣಿ	ಪ್ರಮಾಣ	ಟೆಂಡರ್‌ನ ಅಂದಾಜು ಮೌಲ್ಯ	ಇಎಂಡಿ ಮೊತ್ತ
ಆರ್‌ಡಬ್ಲ್ಯುಎಫ್‌ಎಸ್‌ಟಿಪಿಟಿ_ಸಿಡಬ್ಲ್ಯುಡಿ_ಆರ್‌ಎಐಪಿಯುಆರ್-25-26	17.12.2025 ರಂದು 14.15 ಗಂಟೆ	1355 ಕಿ.ಮೀ.ಗಳು	400 ಎಂಟಿ	ರೂ.18,04,860/-	ರೂ.36,100/-
ಆರ್‌ಡಬ್ಲ್ಯುಎಫ್‌ಎಸ್‌ಟಿಪಿಟಿ_ಎಲ್‌ಎಂಎಸ್_3ಆರ್‌ಡಿಎಸ್‌ಎಲ್‌ಎಬಿ_25-26	29.12.2025 ರಂದು 14.15 ಗಂಟೆ	1000 ಕಿ.ಮೀ. ಗಿಂತಲೂ ಹೆಚ್ಚು (ಸರಾಸರಿ 2500 ಕಿ.ಮೀ.)	8,400 ಎಂಟಿ	ರೂ.7,14,00,000/-	ರೂ.5,07,000/-
ಆರ್‌ಡಬ್ಲ್ಯುಎಫ್‌ಎಸ್‌ಟಿಪಿಟಿ_ಸಿಡಬ್ಲ್ಯುಎಸ್_ಆರ್‌ಎಐಪಿಯುಆರ್-25-26	22.12.2025 ರಂದು 14.15 ಗಂಟೆ	1355 ಕಿ.ಮೀ.ಗಳು	150 ಎಂಟಿ	ರೂ.6,95,115/-	ರೂ.13,900/-
ಆರ್‌ಡಬ್ಲ್ಯುಎಫ್‌ಎಸ್‌ಟಿಪಿಟಿ_ಸಿಎ_ಆರ್‌ಎಐಪಿಯುಆರ್-25-26	22.12.2025 ರಂದು 14.15 ಗಂಟೆ	1355 ಕಿ.ಮೀ.ಗಳು	300 ಎಂಟಿ	ರೂ.13,53,645/-	ರೂ.27,100/-

ಗುತ್ತಿಗೆಯ ಅವಧಿಯು ಅನುಮೋದನಾ ಪತ್ರವನ್ನು ನೀಡಿದ ದಿನಾಂಕದಿಂದ ಕನಿಷ್ಠ 12 (ಹನ್ನೆರಡು) ತಿಂಗಳು.
ಕಾಮಗಾರಿಯ ವ್ಯಾಪ್ತಿ : ದಯವಿಟ್ಟು ಆರ್‌ಡಬ್ಲ್ಯುಎಫ್ ಮತ್ತು ಐಆರ್‌ಇಪಿಎಸ್ ವೆಬ್‌ಸೈಟ್‌ಗಳಿಗೆ ಭೇಟಿ ನೀಡಿ.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

₹28.75 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಇಬ್ಬರು ವಿದೇಶಿ ಡ್ರಗ್ಸ್ ಪೆಡ್ಲರ್‌ಗಳ ಸೆರೆ, ಸಿಸಿಬಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಡೆಯುವ ಪಾರ್ಟಿಗಳಿಗೆ ಪೂರೈಸಲು ಸಂಗ್ರಹಿಸಿಕೊಂಡಿದ್ದ ₹28.75 ಕೋಟಿ ಮೌಲ್ಯದ ವಿವಿಧ ಮಾದರಿಯ ಡ್ರಗ್ಸ್ ಅನ್ನು ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಜಪ್ತಿ ಮಾಡಿದ್ದು ವಿದೇಶದ ಇಬ್ಬರು ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ತಾಂಜಾನಿಯಾದ ನ್ಯಾನ್ಸಿ ಒಮಾರಿಲಾವಾ ಹಾಗೂ ನೈಜೀರಿಯಾದ ಎಮ್ಯುನಲ್ ಅರೆಂಜಿ ಇಡಿಕೊ ಬಂಧಿತರು.

ನ್ಯಾನ್ಸಿ


ಎಮ್ಯುನಲ್

ಬಂಧಿತರಿಂದ 10 ಕೆ.ಜಿ 369 ಗ್ರಾಂ ಎಂಡಿಎಂಎ ಕ್ರಿಸ್ಟಲ್ಸ್, ಎಂಟು ಕೆ.ಜಿ ಹೈಡ್ರೊಗಾಂಜಾ ಸೇರಿದಂತೆ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು.

2023ರಲ್ಲಿ ಪ್ರವಾಸಿ ವೀಸಾ ಪಡೆದು ಭಾರತಕ್ಕೆ ಬಂದಿದ್ದ ನ್ಯಾನ್ಸಿ, ನಗರದ ಸಂಪಿಗೆಹಳ್ಳಿಯ ಪಿ ಆ್ಯಂಡ್ ಟಿ ಲೇಔಟ್‌ನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಹೇರ್ ಡಿಸೈನ್ ಕೆಲಸ ಮಾಡಿಕೊಂಡಿದ್ದರು. ದೆಹಲಿಯಲ್ಲಿ ಎಂಡಿಎಂಎ ಕ್ರಿಸ್ಟೆಲ್ಸ್ ಖರೀದಿಸಿ ತರುತ್ತಿದ್ದ ಆರೋಪಿ, ಪರಿಚಯಸ್ಥ ಗಿರಾಕಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಆರೋಪಿ ದಾಸ್ತಾನು ಮಾಡಿಕೊಂಡಿದ್ದ ₹18.50 ಕೋಟಿ ಮೌಲ್ಯದ 9 ಕೆ.ಜಿ 254 ಗ್ರಾಂ ಎಂಡಿಎಂಎ ಕ್ರಿಸ್ಟೆಲ್ಸ್ ಹಾಗೂ ಕೃತ್ಯಕ್ಕೆ ಬಳಸಲಾಗಿದ್ದ ಮೊಬೈಲ್ ಫೋನ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಲಾಲ್‌ಬಾಗ್ ಸೌತ್ ಗೇಟ್ ಬಳಿ ಡ್ರಗ್ಸ್ ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಎಮ್ಯುನಲ್ ಅರೆಂಜಿ ಇಡಿಕೊ ಎಂಬುವವರನ್ನು ಬಂಧಿಸಲಾಗಿದೆ. 2021ರಲ್ಲಿ ಬ್ಯುಸಿನೆಸ್ ವೀಸಾ ಪಡೆದು ದೆಹಲಿಗೆ ಬಂದಿದ್ದ ಆರೋಪಿ, ನಂತರ 2022ರಲ್ಲಿ ಬೆಂಗಳೂರಿಗೆ ಬಂದು ನೆಲಸಿದ್ದರು. ದೆಹಲಿ, ಗೋವಾದಲ್ಲಿ ವಿದೇಶಿ ಡ್ರಗ್ಸ್ ಪೆಡ್ಲರ್‌ಗಳಿಂದ ಎಂಡಿಎಂಎ ಕ್ರಿಸ್ಟೆಲ್ಸ್ ಕಡಿಮೆ ಬೆಲೆಗೆ ಖರೀದಿಸಿ ನಗರಕ್ಕೆ ತಂದು ಮಾರಾಟ ಮಾಡುತ್ತಿದ್ದರು. ಆರೋಪಿ ಬಳಿಯಿದ್ದ ₹2.25 ಕೋಟಿ ಮೌಲ್ಯದ 1 ಕೆ.ಜಿ 115 ಗ್ರಾಂ ಎಂಡಿಎಂಎ ಕ್ರಿಸ್ಟಲ್ಸ್ ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಆರೋಪಿ ಎಮ್ಯುನಲ್ ವಿರುದ್ಧ 2024ರ ಫೆಬ್ರುವರಿಯಲ್ಲಿ ಗೋವಿಂದಪುರ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯ ಅಡಿ ಪ್ರಕರಣ ದಾಖಲಾಗಿತ್ತು ಎಂದು ಮೂಲಗಳು ಹೇಳಿವೆ.

ವಿದೇಶಿ ಪೆಡ್ಲರ್‌ಗಳಿಂದ ಜಪ್ತಿ ಮಾಡಿದ ವಿವಿಧ ಮಾದರಿ ಡ್ರಗ್ಸ್

₹8 ಕೋಟಿ ಹೈಡ್ರೊಗಾಂಜಾ ಜಪ್ತಿ

ಚಾಮರಾಜಪೇಟೆಯಲ್ಲಿರುವ ವಿದೇಶಿ ಅಂಚೆ ಕಚೇರಿಗೆ ಪಾರ್ಸೆಲ್‌ಗಳಲ್ಲಿ ಬಂದಿದ್ದ ₹8 ಕೋಟಿ ಮೌಲ್ಯದ 8 ಕೆ.ಜಿ ಹೈಡ್ರೊಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ವಿದೇಶದಿಂದ ಹೈಡ್ರೊಗಾಂಜಾವನ್ನು ಖರೀದಿಸಿ ಅವುಗಳನ್ನು ವ್ಯವಸ್ಥಿತವಾಗಿ ಪ್ಯಾಕ್ ಮಾಡಿ ನಗರಕ್ಕೆ ತರಿಸಿಕೊಂಡಿರುವುದು ಪತ್ತೆಯಾಗಿದೆ. ವಿದೇಶದಿಂದ ಯಾರು ಡ್ರಗ್ಸ್ ತರಿಸಿಕೊಂಡಿದ್ದರು ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

120 ಮೊಬೈಲ್ ಜಪ್ತಿ: ನಾಲ್ವರ ಸೆರೆ

ಬೆಂಗಳೂರು: ಮೊಬೈಲ್ ಫೋನ್ ಕಳ್ಳತನ ಮಾಡುತ್ತಿದ್ದ ಹಾಗೂ ಕದ್ದ ಮೊಬೈಲ್ ಖರೀದಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಗೋವಿಂದರಾಜನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕಾರು ಮೆಕ್ಯಾನಿಕ್‌ಗಳಾದ ಗೋರಿಪಾಳ್ಯದ ಪರ್ವೇಜ್ ಖಾನ್ (29), ಜುಬೇರ್ ಉದ್ದೀನ್ ಹಾಗೂ ಕದ್ದ ಮೊಬೈಲ್ ಖರೀದಿಸುತ್ತಿದ್ದ ಸದ್ದಾಂ ಹುಸೇನ್ (30), ಅಮ್ಜದ್ ಪಾಷಾ (34) ಬಂಧಿತರು. ಬಂಧಿತರಿಂದ ₹18 ಲಕ್ಷ ಮೌಲ್ಯದ 120 ಮೊಬೈಲ್ ಫೋನ್‌ಗಳು, ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದೂರುದಾರರು ವಿನಾಯಕ ಸ್ಟಡಿ ಸೆಂಟರ್‌ವೊಂದರಿಂದ ರೂಂಗೆ ತಲುಪಲು ಪಿ.ಎಫ್ ಲೇಔಟ್‌ನ ಬಿಬಿಎಂಪಿ ಕಚೇರಿಯ ಬಳಿ ನಡೆದುಕೊಂಡು ಹೋಗುತ್ತಿದ್ದರು. ಆಗ ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು, ಮೊಬೈಲ್ ಕಸಿದುಕೊಂಡು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಹೊರ ರಾಜ್ಯದ ಆರೋಪಿ ಸೆರೆ: ಮನೆಗೆ ನುಗ್ಗಿ ಕಳವು ಮಾಡುತ್ತಿದ್ದ ಕೆ.ಜಿ. ಹಳ್ಳಿಯ ನಿವಾಸಿ ಇಸ್ರಾರ್ ಎಂಬ ಆರೋಪಿಯನ್ನು ಕೆ.ಆರ್.ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹34 ಸಾವಿರ ನಗದು, ₹70 ಲಕ್ಷ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಮನೆ ನಿರ್ಮಾಣಕ್ಕೆ ಅಡ್ಡಿ: ಟೆಕಿ ಆತ್ಮಹತ್ಯೆ

ಕೆ.ಆರ್.ಪುರ: 'ಖರೀದಿಸಿದ್ದ ನಿವೇಶನದಲ್ಲಿ ಮನೆ ನಿರ್ಮಿಸಲು ಅಡ್ಡಿಪಡಿಸಿದ್ದಾರೆ' ಎನ್ನುವ ಕಾರಣಕ್ಕೆ ನೊಂದು ಐ.ಟಿ ಕಂಪನಿ ಉದ್ಯೋಗಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವೈಟ್‌ಫೀಲ್ಡ್ ಪೊಲೀಸ್ ಠಾಣೆ ವ್ಯಾಪ್ತಿಯ ನಲ್ಲೂರಹಳ್ಳಿ ಬಳಿ ನಡೆದಿದೆ.

ಮುರುಳಿ

ಮುರುಳಿ (45) ಆತ್ಮಹತ್ಯೆ ಮಾಡಿಕೊಂಡವರು. ಈ ಘಟನೆ ಸಂಬಂಧ ಉಷಾ ನಂಬಿಯಾರ್ ಹಾಗೂ ಶಶಿ ನಂಬಿಯಾರ್ ಎಂಬುವರನ್ನು ಬಂಧಿಸಲಾಗಿದೆ. ಉಷಾ ನಂಬಿಯಾರ್ ಹಾಗೂ ಶಶಿ ನಂಬಿಯಾರ್ ಅವರ ಸಂಬಂಧಿಯೊಬ್ಬರಿಂದ 2018ರಲ್ಲಿ ಮುರುಳಿ ಅವರು ನಿವೇಶನ ಖರೀದಿಸಿದ್ದರು. ಅದೇ ನಿವೇಶನದಲ್ಲಿ ಮನೆ ನಿರ್ಮಿಸಲು ಮುಂದಾಗಿದ್ದರು. ಮನೆ ಪಕ್ಕದಲ್ಲಿಯೇ ನೆಲಸಿದ್ದ ಉಷಾ ಹಾಗೂ ಶಶಿ ಅವರು ₹20 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಸಂಬಂಧಿಕರು ದೂರಿದ್ದಾರೆ.

'ಹಣ ಕೊಡಲು ನಿರಾಕರಿಸಿದ್ದಕ್ಕೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಧಿಕಾರಿಗಳ ಜೊತೆಗೂಡಿ ಆರೋಪಿಗಳು, ಮನೆ ನಿರ್ಮಾಣಕ್ಕೆ ಅಡ್ಡಿ ಪಡಿಸುತ್ತಿದ್ದರು. ಇದರಿಂದ ನೊಂದು ಪುತ್ರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಮುರುಳಿ ಅವರ ತಾಯಿ ದೂರು ನೀಡಿದ್ದು, ಇಬ್ಬರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಇನ್‌ಸ್ಪೆಕ್ಟರ್ ಸೇರಿ ನಾಲ್ವರ ಅಮಾನತು

ಬೆಂಗಳೂರು: ಅಡಕಮಾರನಹಳ್ಳಿಯ ವ್ಯಸನ ಮುಕ್ತ ಕೇಂದ್ರದಲ್ಲಿದ್ದ ಯುವಕನ ಅನುಮಾನಾಸ್ಪದ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ವಿವೇಕನಗರ ಠಾಣೆಯ ಇನ್‌ಸ್ಪೆಕ್ಟರ್ ಶಿವಕುಮಾರ್ ಹಾಗೂ ಮೂವರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಿ ನಗರ ಜಂಟಿ ಪೊಲೀಸ್ ಕಮಿಷನರ್ ಆದೇಶಿಸಿದ್ದಾರೆ. ಸಿಸಿಬಿ ಇನ್‌ಸ್ಪೆಕ್ಟರ್ ಆರ್.ವೀರೇಶ್ ಅವರನ್ನು ವಿವೇಕನಗರ ಠಾಣೆಗೆ ವರ್ಗಾವಣೆ ಮಾಡಿ, ಆದೇಶಿಸಲಾಗಿದೆ.

ಸೊಣ್ಣೇನಹಳ್ಳಿಯ ನಿವಾಸಿ ದರ್ಶನ್(23) ಅವರು ಮೃತಪಟ್ಟಿದ್ದ ಪ್ರಕರಣದಲ್ಲಿ ಪೊಲೀಸರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ.



ದರ್ಶನ್ ಅವರ ತಾಯಿ ಆದಿಲಕ್ಷ್ಮಿ ಅವರು ನೀಡಿದ್ದ ದೂರು ಆಧರಿಸಿ, ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಶಿವಕುಮಾರ್, ಸಿಬ್ಬಂದಿ ಪವನ್ ಹಾಗೂ ಸೋಷಿಯಲ್ ಸರ್ವಿಸ್ ಕೇಂದ್ರದ ಮಾಲೀಕರ ವಿರುದ್ಧ ಕೊಲೆ ಮತ್ತು ಜಾತಿ ನಿಂದನೆ ಪ್ರಕರಣ ದಾಖಲಾಗಿತ್ತು. ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿತ್ತು.

ಏನಿದು ಪ್ರಕರಣ?: 'ನನ್ನ ಮಗ ದರ್ಶನ್ ಅವರಿಗೆ ಪ್ರತಿನಿತ್ಯ ಮದ್ಯ ಸೇವಿಸುವ ಅಭ್ಯಾಸವಿತ್ತು. ಮದ್ಯ ಸೇವಿಸಿ ಬಂದು ರಸ್ತೆಯಲ್ಲಿ ಗಲಾಟೆ ಮಾಡುತ್ತಿದ್ದ. ಇದೇ ವಿಚಾರವಾಗಿ ವಿವೇಕನಗರ ಠಾಣೆಯ ಪೊಲೀಸರು ದರ್ಶನ್‌ನನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು. ನ.15ರಂದು ಠಾಣೆಗೆ ತೆರಳಿ ಮಗನನ್ನು ಮನೆಗೆ ಕಳುಹಿಸುವಂತೆ ಕೋರಿಕೊಂಡಿದ್ದೆ. ಅವನು ಎಲ್ಲರ ಬಳಿ ಗಲಾಟೆ ಮಾಡಿಕೊಳ್ಳುತ್ತಿದ್ದಾನೆ. ಅವನನ್ನು ಜೈಲಿಗೆ ಕಳುಹಿಸುತ್ತೇವೆ ಎಂದು ಪೊಲೀಸರು ಹೇಳಿದ್ದರು. ಮಗನಿಗೆ ಕುಡಿತದ ಚಟ ಬಿಡಿಸಲು ವ್ಯಸನ ಮುಕ್ತ ಕೇಂದ್ರಕ್ಕೆ ಸೇರಿಸುವಂತೆ ನಾನೇ ಪೊಲೀಸರ ಬಳಿ ಮನವಿ ಮಾಡಿದ್ದೆ. ಅವರು ಕೇಂದ್ರಕ್ಕೆ ಸೇರಿಸಿದ್ದರು' ಎಂದು ಆದಿಲಕ್ಷ್ಮಿ ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿತ್ತು.

'ವ್ಯಸನ ಮುಕ್ತ ಕೇಂದ್ರಕ್ಕೆ ಪ್ರತಿನಿತ್ಯ ಕರೆ ಮಾಡಿ ವಿಚಾರಿಸಿಕೊಳ್ಳುತ್ತಿದ್ದೆ. ಮಗ ಚೆನ್ನಾಗಿದ್ದಾನೆ ಎಂದು ಅಲ್ಲಿನ ಸಿಬ್ಬಂದಿ ಹೇಳುತ್ತಿದ್ದರು. ನ.26ರ ಬೆಳಿಗ್ಗೆ 11ರ ಸುಮಾರಿಗೆ ಕೇಂದ್ರದ ಸಿಬ್ಬಂದಿ ಕರೆ ಮಾಡಿ ನಿಮ್ಮ ಮಗ ಮೃತಪಟ್ಟಿದ್ದಾನೆ ಎಂದು ತಿಳಿಸಿದ್ದರು. ಆ ಕೇಂದ್ರಕ್ಕೆ ಹೋಗುವಷ್ಟರಲ್ಲಿ ಮೃತದೇಹವನ್ನು ನೆಲಮಂಗಲ ಆಸ್ಪತ್ರೆಗೆ ಸಾಗಿಸಲಾಗಿತ್ತು. ಈ ಸಂಬಂಧ ಯಾವುದೇ ಮಾಹಿತಿ ನೀಡಿರಲಿಲ್ಲ. ಉಸಿರಾಟದ ತೊಂದರೆ ಇತ್ತು ಎಂಬುದಾಗಿ ಹೇಳುತ್ತಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ಚಟಕ ಸುದ್ದಿ

ಅಪಹಾಸ್ಯ: ನಟ ರಣವೀರ್ ಸಿಂಗ್ ವಿರುದ್ಧ ದೂರು

ಬೆಂಗಳೂರು: ಬಾಲಿವುಡ್ ನಟ ರಣವೀರ್ ಸಿಂಗ್ ಅವರು 'ಕಾಂತಾರ' ಚಿತ್ರದಲ್ಲಿನ 'ದೈವಾರಾಧನೆ' ಸಂಪ್ರದಾಯವನ್ನು ಅಪಹಾಸ್ಯ ಮಾಡುವ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ. ನಟನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಕೋರಿ ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ಪ್ರಶಾಂತ್ ಮೆಥಲ್ ಎಂಬುವವರು ದೂರು ನೀಡಿದ್ದಾರೆ. ದೂರುದಾರರಿಗೆ ಸ್ವೀಕೃತಿ ಪತ್ರ ನೀಡಲಾಗಿದೆ. ಪ್ರಕರಣ ದಾಖಲಿಸಿಕೊಂಡಿಲ್ಲ ಎಂದು ಪೊಲೀಸರು ಹೇಳಿದರು.


ರಣವೀರ್ ಸಿಂಗ್

ರಣವೀರ್ ಸಿಂಗ್ ಅವರು ಹಿಂದೂಗಳು ಹಾಗೂ ಕರ್ನಾಟಕದ ತುಳು ಭಾಷಿಕರ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಯಿಂದ ನೋವು ಉಂಟಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಗೋವಾದಲ್ಲಿ ನ.28ರಂದು ನಡೆದ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ರಣವೀರ್ ಸಿಂಗ್ ಅಪಹಾಸ್ಯ ಮಾಡಿದ್ದಾರೆ. ನಟನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್‌ಗಳಾದ 299, 302, 196, 352ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು ಎಂದು ದೂರಿನಲ್ಲಿ ಕೋರಿದ್ದಾರೆ. ನಟ ನೀಡಿದ ಹೇಳಿಕೆ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ಬಳಿಕ ರಣವೀರ್ ಸಿಂಗ್ ಅವರು ಕ್ಷಮೆ ಕೋರಿದ್ದರು.

ಸಂವಾದ 9ಕ್ಕೆ

ಬೆಂಗಳೂರು: 'ಭಾರತ ಜಿಡಿಪಿಯಲ್ಲಿ ಮುಂದಿದ್ದರೂ ಮಾನವ ಹಕ್ಕುಗಳಲ್ಲಿ ಹಿಂದಿನ ಸ್ಥಾನ ಪಡೆಯಲು ಕಾರಣವೇನು' ಬಗ್ಗೆ ಯುನಿವರ್ಸಲ್ ಸ್ಕೂಲ್ ಆಫ್ ಲಾ ವತಿಯಿಂದ ವಿಶೇಷ ಉಪನ್ಯಾಸ, ಸಂವಾದ ಕಾರ್ಯಕ್ರಮವನ್ನು ಡಿ.9ರಂದು ಕಬ್ಬನ್ ಪಾರ್ಕ್‌ನಲ್ಲಿರುವ ಕರ್ನಾಟಕ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಯುನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಅಧ್ಯಕ್ಷ ಯು.ಆರ್. ಉಪೇಂದ್ರ ಶೆಟ್ಟಿ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ನ್ಯಾ. ಅಶೋಕ ಬಿ. ಹಿಂಚಿಗೇರಿ, ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸೀನಿಯರ್ ಫೆಲೋ ಸಲೀಲ್ ಶೆಟ್ಟಿ, ಯುನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟೇಷನ್ ನಿರ್ದೇಶಕಿ ಮೀರಾ ಕೃಷ್ಣಪ್ಪ ಭಾಗವಹಿಸಲಿದ್ದಾರೆ. https://forms.gle/DW7S7HrMuAwW23yK7 ಮೂಲಕ ನೋಂದಣಿ ಮಾಡಿಕೊಳ್ಳಬಹುದು ಎಂದು ಸಂಘಟಕರು ತಿಳಿಸಿದ್ದಾರೆ.

ಲಕ್ಷ್ಮಣರಾವ್‌ಗೆ 'ಕನ್ನಡ ರತ್ನ ಪ್ರಶಸ್ತಿ'

ಬೆಂಗಳೂರು: ಕನ್ನಡ ರಾಜ್ಯೋತ್ಸವ ಸಮಿತಿ ಹಾಗೂ ಮನರಂಜನಾ ಕೂಟ ನೀಡುವ 2025ನೇ ಸಾಲಿನ 'ಇ.ಎಸ್.ಐ.ಸಿ. ಕನ್ನಡ ರತ್ನ' ಪ್ರಶಸ್ತಿಗೆ ಕವಿ ಬಿ.ಆರ್. ಲಕ್ಷ್ಮಣರಾವ್ ಆಯ್ಕೆ ಆಗಿದ್ದಾರೆ. ಡಿ. 5ರಂದು ಇ.ಎಸ್.ಐ.ಸಿ ಆಸ್ಪತ್ರೆಯಲ್ಲಿ ಆಯೋಜಿಸಿರುವ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.



ಜೂಜಾಟದ ಗೀಳು: ಸಾಲ ಮರುಪಾವತಿಸಲು ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣವನ್ನು ರಿಪೇರಿ ಮಾಡಿಕೊಡುವ ನೆಪದಲ್ಲಿ ವಂಚಿಸುತ್ತಿದ್ದ ಆರೋಪಿಯನ್ನು ಕೆಂಗೇರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಪವನ್ ಕುಮಾರ್ ಬಂಧಿತ. ಆರೋಪಿಯ ತಂದೆ ಮುನಿರಾಜು ಅವರ ಬಂಧನಕ್ಕಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕೆಂಗೇರಿ ಉಪನಗರದಲ್ಲಿ ಚಿನ್ನಾಭರಣಗಳ ರಿಪೇರಿ ಅಂಗಡಿ ನಡೆಸುತ್ತಿದ್ದ ಆರೋಪಿಗಳು, ಜೂಜಾಟದ ಗೀಳಿಗೆ ಬಿದ್ದಿದ್ದರು. ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡಿದ್ದರು. ಸಾಲ ಮರುಪಾವತಿಸಲು ವಂಚನೆ ಎಸಗಿದ್ದರು ಎಂದು ಪೊಲೀಸರು ತಿಳಿಸಿದರು.

'ತಂದೆ ಹಾಗೂ ಪುತ್ರ 2019ರಿಂದ ಕೆಂಗೇರಿ ಉಪನಗರದಲ್ಲಿ ಚಿನ್ನದ ಆಭರಣಗಳ ರಿಪೇರಿ ಅಂಗಡಿ ನಡೆಸುತ್ತಿದ್ದರು. ಚಿಕ್ಕಪುಟ್ಟ ಆಭರಣಗಳ ರಿಪೇರಿ ಮತ್ತು ಹೊಳಪಿನ ಕೆಲಸ ಮಾಡುವ ಮೂಲಕ ಸ್ಥಳೀಯ ಗ್ರಾಹಕರ ನಂಬಿಕೆ ಗಳಿಸಿದ್ದರು. ಆದರೆ, ಇತ್ತೀಚೆಗೆ ಆರೋಪಿಗಳು ಆಂಧ್ರಪ್ರದೇಶದಲ್ಲಿ ಮಟ್ಕಾ ಸೇರಿದಂತೆ ವಿವಿಧ ರೀತಿಯ ಜೂಜಿನ ಚಟಕ್ಕೆ ಬಿದ್ದು, ಹಣ ಕಳೆದುಕೊಂಡಿದ್ದರು. ಅದಕ್ಕಾಗಿ ಸಾಲ ಮಾಡಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

ಅಂಗಡಿ ಮುಚ್ಚಿ ತಂದೆ, ಮಗ ಪರಾರಿ: ಸಾಲ ತೀರಿಸುವ ಉದ್ದೇಶದಿಂದ, ಗ್ರಾಹಕರು ರಿಪೇರಿಗೆ ತಂದ ಚಿನ್ನಾಭರಣಗಳನ್ನು ವಾಪಸ್ ನೀಡದೇ ಅವರು ವಿಳಂಬ ಮಾಡಲು ಆರಂಭಿಸಿದ್ದರು. ಕೆಲವು ತಿಂಗಳ ಹಿಂದೆ ಗ್ರಾಹಕರು ನೀಡಿದ್ದ ಚಿನ್ನಾಭರಣವನ್ನು ಒಟ್ಟುಗೂಡಿಸಿ, ಅಂಗಡಿ ಬಂದ್ ಮಾಡಿಕೊಂಡು ಪರಾರಿ ಆಗಿದ್ದರು. ವಂಚನೆಗೆ ಒಳಗಾದ ಗ್ರಾಹಕರೊಬ್ಬರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಇದುವರೆಗೂ ನಡೆದ ತನಿಖೆಯಲ್ಲಿ ಆರೋಪಿಗಳು 20 ಮಂದಿ ಗ್ರಾಹಕರಿಗೆ ವಂಚನೆ ಮಾಡಿರುವುದು ಗೊತ್ತಾಗಿದೆ. ತನಿಖೆ ಮುಂದುವರಿಸಲಾಗಿದೆ ಎಂದು ಪೊಲೀಸರು ಹೇಳಿದರು.

ತಿರುಪತಿಯಲ್ಲಿ ಚಿನ್ನ ಮಾರಾಟ

ಆರೋಪಿಯ ತಂದೆ ಮುನಿರಾಜು ತಿರುಪತಿಯಲ್ಲಿ ಎರಡು ತಿಂಗಳ ಹಿಂದೆ ಹೊಸದಾಗಿ ಚಿನ್ನ ರಿಪೇರಿ ಅಂಗಡಿ ತೆರೆದಿದ್ದು, ಬೆಂಗಳೂರಿನಲ್ಲಿ ವಂಚಿಸಿದ ಚಿನ್ನಾಭರಣವನ್ನು ಆ ಅಂಗಡಿಯಲ್ಲಿಟ್ಟು ಮಾರಾಟ ಮಾಡುತ್ತಿದ್ದರು ಎಂದು ಮೂಲಗಳು ಹೇಳಿವೆ.

₹1.14 ಕೋಟಿ ನಗದು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಲಿಮಂಗಲ ಗ್ರಾಮದ ಎಲಿಗೆನ್ಸ್ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿರುವ ಉದ್ಯಮಿಯೊಬ್ಬರ ಫ್ಲ್ಯಾಟ್‌ನಲ್ಲಿ ನಡೆದಿದ್ದ ಕಳ್ಳತನ ಪ್ರಕರಣದಲ್ಲಿ ಇಬ್ಬರನ್ನು ಹೆಬ್ಬಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸುಂಕದಕಟ್ಟೆಯ ವಿಘ್ನೇಶ್ವರ ನಗರದ ಎಚ್.ಕೆ.ಶ್ರೀನಿವಾಸಮೂರ್ತಿ ಹಾಗೂ ದಾಸನಪುರ ಹೋಬಳಿ ಚಿಕ್ಕಗೊಲ್ಲರಹಟ್ಟಿ ಗ್ರಾಮದ ಬಿ.ಎನ್. ಅರುಣ್‌ಕುಮಾರ್ ಬಂಧಿತರು. ಚಿಕ್ಕಪೇಟೆ ಯಲ್ಲಿ ಶ್ರೀನಿವಾಸಮೂರ್ತಿ ಅವರು ಬಟ್ಟೆ ಅಂಗಡಿ ಇಟ್ಟುಕೊಂಡಿದ್ದರು. ಅರುಣ್ ಅವರು ನೈಸ್ ಕಂಪನಿಯಲ್ಲಿ ಎಲೆಕ್ಟ್ರಿಷಿಯನ್ ಆಗಿದ್ದರು.

'ಬಂಧಿತರಿಂದ 16 ಗ್ರಾಂ ಚಿನ್ನಾಭರಣ, ಒಂದು ಕಾರು ಹಾಗೂ ₹1.14 ಕೋಟಿ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. ಆರ್.ಸುನಿಲ್‌ಕುಮಾರ್ ಅವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅರುಣ್

ಶ್ರೀನಿವಾಸಮೂರ್ತಿ

'ಪ್ರಿಸಮ್ ಸರ್ಫೆಸ್ ಕೋಟಿಂಗ್ ಕಂಪನಿ ಮಾಲೀಕ ಸುನಿಲ್ ಕುಮಾರ್ ಅವರು ಉದ್ಯಮದ ವ್ಯವಹಾರಕ್ಕಾಗಿ ₹1.14 ಕೋಟಿ ನಗದನ್ನು ಮನೆಯಲ್ಲಿ ಇಟ್ಟುಕೊಂಡಿದ್ದರು. ಫ್ಲ್ಯಾಟ್‌ನಲ್ಲಿ ಹಣ ಇದ್ದ ಮಾಹಿತಿಯನ್ನು ಆರೋಪಿಗಳು ತಿಳಿದುಕೊಂಡಿದ್ದರು. ನ.7ರಂದು ಸುನಿಲ್ ಅವರು ಕುಟುಂಬ ಸಮೇತ ಕೋಲಾರಕ್ಕೆ ತೆರಳಿದ್ದರು. ಅಂದು ಫ್ಲ್ಯಾಟ್‌ಗೆ ಬಂದಿದ್ದ ಆರೋಪಿಗಳು, ಬೀಗ ಒಡೆದು ಬೀರುವಿನಲ್ಲಿದ್ದ ನಗದು ಕಳ್ಳತನ ಮಾಡಿದ್ದರು' ಎಂದರು.

ಆರೋಪಿಗಳ ಬಂಧನಕ್ಕೆ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು. ಸುಳಿವು ಆಧರಿಸಿ ಚಿಕ್ಕಪೇಟೆ ಹಾಗೂ ದಾಸನಪುರದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

62 ಇಂಡಿಗೊ ವಿಮಾನ ಸಂಚಾರ ರದ್ದು

ಕೆಂಪೇಗೌಡ ಅಂತರರಾಷ್ಟ್ರೀಯ ನಿಲ್ದಾಣದ ಟರ್ಮಿನಲ್–2ರಲ್ಲಿ ಕಿಕ್ಕಿರಿದ ಜನಸಂದಣಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ಸವಾಲು ಮತ್ತು ತಾಂತ್ರಿಕ ಕಾರಣಗಳಿಂದಾಗಿ ಬುಧವಾರ 62 ಇಂಡಿಗೊ ವಿಮಾನಗಳ ಸಂಚಾರ ರದ್ದಾಗಿದೆ. ಇದರಿಂದಾಗಿ ಬೆಂಗಳೂರಿನಿಂದ ವಿವಿಧೆಡೆ ತೆರಳಲು ಸಿದ್ಧರಾಗಿದ್ದ ಪ್ರಯಾಣಿಕರು ಟರ್ಮಿನಲ್–2ರಲ್ಲಿಯೇ ಕಾಯುವ ಅನಿವಾರ್ಯತೆಗೆ ಸಿಲುಕಿದರು. ಇದರ ಪರಿಣಾಮ ಕಿಕ್ಕಿರಿದ ಜನಸಂದಣಿ ಇತ್ತು.

'ವಿಮಾನ ನಿಲ್ದಾಣದಲ್ಲಿ ದಟ್ಟಣೆ, ತಾಂತ್ರಿಕ ಸಮಸ್ಯೆ ಮತ್ತು ಕಾರ್ಯಾಚರಣೆ ಅಗತ್ಯ ಸೇರಿದಂತೆ ಇನ್ನಿತರ ಕಾರಣಗಳಿಂದಾಗಿ ಕಳೆದ ಕೆಲವು ದಿನಗಳಿಂದ ಇಂಡಿಗೊ ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಮತ್ತು ಕೆಲವು ಸೇವೆಗಳು ರದ್ದಾಗಿವೆ' ಎಂದು ವಿಮಾನಯಾನ ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

ದೇಶದ ವಿವಿಧ ಭಾಗಗಳಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರಬೇಕಿದ್ದ 31 ಇಂಡಿಗೊ ವಿಮಾನಗಳು ಹಾಗೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಿವಿಧೆಡೆ ಹೊರಡಬೇಕಿದ್ದ 31 ವಿಮಾನಗಳು ರದ್ದಾಗಿವೆ. ಈ ಕುರಿತು ಪ್ರಯಾಣಿಕರಿಗೆ ಮುಂಚಿತವಾಗಿಯೇ ಮಾಹಿತಿ ನೀಡದ ಕಾರಣ ಟರ್ಮಿನಲ್‌ಗಳಲ್ಲಿ ಪ್ರಯಾಣಿಕರು ತಮ್ಮ ಲಗೇಜುಗಳೊಂದಿಗೆ ಕಿಕ್ಕಿರಿದು ನಿಂತಿದ್ದ ದೃಶ್ಯ ಕಂಡು ಬಂದಿತು.

ಪ್ರಯಾಣಿಕರು ಬೋರ್ಡಿಂಗ್ ಪಾಸ್ ಪಡೆಯಲು ಬಂದಾಗ, ವಿಮಾನ ಸಂಚಾರ ರದ್ದಾಗಿರುವ ವಿಚಾರವನ್ನು ಸಿಬ್ಬಂದಿ ತಿಳಿಸಿದ್ದಾರೆ. ಇದರಿಂದ ಆಕ್ರೋಶಗೊಂಡ ಪ್ರಯಾಣಿಕರ ಗುಂಪು, ಸಿಬ್ಬಂದಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹಲವರು ಸಾಮಾಜಿಕ ಮಾಧ್ಯಮಗಳ ಮೂಲಕ ಅವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಭದ್ರತಾ ತಪಾಸಣೆಗೆ ಒಳಗಾದಾಗ ವಿಮಾನ ಹಾರಾಟ ವಿಳಂಬವಾಗಲಿದೆ ಎಂದು ಸಿಬ್ಬಂದಿ ತಿಳಿಸಿದರು. ಆ ಬಳಿಕ ಕೊನೆಗೆ ವಿಮಾನ ರದ್ದಾಗಿದೆ ಎಂದು ಸಿಬ್ಬಂದಿ ಘೋಷಿಸಿದರು ಎಂದು ಪ್ರಯಾಣಿಕರು ಕಿಡಿಕಾರಿದ್ದಾರೆ.

ವಿಮಾನ ರದ್ದಾಗಿರುವ ಕಾರಣ ಪ್ರಯಾಣಿಕರಿಗೆ ಟಿಕೆಟ್ ಬುಕ್ಕಿಂಗ್‌ನ ಪೂರ್ಣ ಪ್ರಮಾಣದ ಹಣ ಮರು ಪಾವತಿ ಮಾಡಲಾಗುವುದು ಎಂದು ಇಂಡಿಗೊ ಸಂಸ್ಥೆಯು ಪ್ರಯಾಣಿಕರಿಗೆ ಸಂದೇಶ ರವಾನಿಸಿದೆ.

ಏರ್‌ಬಸ್ ತಾಂತ್ರಿಕ ದೋಷ ಕಾರಣ?

ಏರ್‌ಬಸ್ ಎ–320 ಸರಣಿ ವಿಮಾನಗಳಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ತೀವ್ರವಾದ ಸೌರ ವಿಕಿರಣಗಳು ಈ ಸರಣಿಯ ವಿಮಾನದಲ್ಲಿರುವ ಪ್ರಮುಖ ದತ್ತಾಂಶವನ್ನು ಹಾನಿಗೊಳಿಸುತ್ತಿವೆ. ಕೂಡಲೇ ಎಲ್ಲ ವಿಮಾನಯಾನ ಸಂಸ್ಥೆಗಳು ಏರ್‌ಬಸ್ ಎ–320 ಸರಣಿಯ ಸಾಫ್ಟ್‌ವೇರ್ ಅಪ್‌ಡೇಟ್ ಮಾಡಿಕೊಳ್ಳಬೇಕು. ಹಾರಾಟ ನಡೆಸುವ ಮುನ್ನ ದೋಷಪೂರಿತ ಭಾಗಗಳನ್ನು ಬದಲಾಯಿಸಬೇಕು ಎಂದು ಇಎಎಸ್‌ಎ ಸಂಸ್ಥೆ ಸೂಚಿಸಿದೆ. ಇದರ ಬೆನ್ನಲೇ ಇಂಡಿಗೊ ವಿಮಾನ ಸೇವೆ ರದ್ದಾಗುತ್ತಿದೆ. ಏರ್‌ಬಸ್ ತಾಂತ್ರಿಕ ದೋಷ ವಿಮಾನಗಳು ರದ್ದಾಗುತ್ತಿರುವುದಕ್ಕೆ ಕಾರಣವಿರಬಹುದು ಎಂದು ವಿಮಾನಯಾನ ಸಂಸ್ಥೆ ವಕ್ತಾರರು ತಿಳಿಸಿದ್ದಾರೆ.

100ಕ್ಕೂ ಅಧಿಕ ವಿಮಾನ ರದ್ದು

ಬೆಂಗಳೂರು ಅಲ್ಲದೆ ಹೈದರಾಬಾದ್, ಕೋಲ್ಕತ್ತ ಮತ್ತು ನವದೆಹಲಿ ಸೇರಿದಂತೆ ವಿವಿಧೆಡೆಯಿಂದ ಸಂಚರಿಸಬೇಕಿದ್ದ 100ಕ್ಕೂ ಹೆಚ್ಚು ಇಂಡಿಗೊ ವಿಮಾನಗಳ ಸಂಚಾರ ಬುಧವಾರ ರದ್ದುಗೊಂಡಿವೆ ಎಂದು ಮೂಲಗಳು ತಿಳಿಸಿವೆ.

ಹೈದರಾಬಾದ್‌ನಿಂದ ನಿರ್ಗಮಿಸಬೇಕಿದ್ದ ಮತ್ತು ಆಗಮಿಸಬೇಕಿದ್ದ 19 ವಿಮಾನಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ ಎಂದು ಮಾಹಿತಿ ನೀಡಿವೆ.

ಕುಲಸಚಿವರಾಗಿ ಮಂಜುನಾಥ್ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕ ಮಂಜುನಾಥ್ ಟಿ.ಎಂ. ಅವರನ್ನು ನೃಪತುಂಗ ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ (ಮೌಲ್ಯಮಾಪನ) ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ. ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದ ಮಂಜುಳಾ ಎ.ಸಿ. ಅವರು ಕೂಡಲೇ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಚಿತ್ರಾವಳಿ

'ನೌಕಾದಳ ದಿನಾಚರಣೆ' ಅಂಗವಾಗಿ ರೆಜೆನ್ಸಿ ಪಬ್ಲಿಕ್ ಶಾಲೆಯ 'ಸೀ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಆಫ್ ಇಂಡಿಯಾ' –ಬೆಂಗಳೂರು ವಿಭಾಗದ ಮಕ್ಕಳಿಂದ ನಡೆದ ವಿಶಿಷ್ಟ ಕಾರ್ಯಕ್ರಮದಲ್ಲಿ ನೌಕಾಪಡೆಯ ನಿವೃತ್ತ ಅಧಿಕಾರಿ ಕ್ಯಾಪ್ಟನ್ ಉದಯ್ ಚಂದ್ ಕೊಂಡತ್, ಸೀ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಇಂಡಿಯಾ ಸಂಸ್ಥಾಪಕ ಗೋಪಿ ಶೆಟ್ಟಿ, ಬಿಪ್ಯಾಕ್ ಉಸ್ತುವಾರಿ ರಾಘವೇಂದ್ರ ಪೂಜಾರಿ ಎಚ್.ಎಸ್, ಗೀತಾ ಚಂದ್ರಶೇಖರ್, ಪ್ರಾಂಶುಪಾಲೆ ರಮಾ ಕಾರ್ತಿಕ್, ಶಿಕ್ಷಕರಾದ ದೀಪಿಕಾ, ಕೃಪಾ ಡಿ. ಶಾ, ಕೋಕಿಲ ಭಾಗವಹಿಸಿದ್ದರು

ರಾಜಸ್ಥಾನದಲ್ಲಿ ನಡೆದ ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ತಂಡ ಹಾಕಿ ಪಂದ್ಯಾವಳಿಯಲ್ಲಿ ಕಂಚಿನ ಪದಕ ಗಳಿಸಿದೆ. ಜೈಪುರದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಪೂರ್ವಾಂಚಲದ ವೀರಬಹದ್ದೂರ್ ಸಿಂಗ್ ವಿಶ್ವವಿದ್ಯಾಲಯ ವಿರುದ್ಧ ಬಿಸಿಯು ತಂಡ 3–0 ಗೋಲುಗಳ ಅಂತರದಲ್ಲಿ ಜಯಗಳಿಸಿ ಮೂರನೇ ಸ್ಥಾನವನ್ನು ತನ್ನದಾಗಿಸಿಕೊಂಡಿತು ಎಂದು ಪ್ರಭಾರ ಕ್ರೀಡಾ ನಿರ್ದೇಶಕ ಕೆ. ಶಿವಶಂಕರ್ ತಿಳಿಸಿದ್ದಾರೆ

ಬೆಂಗಳೂರಿನ ಶಿಕ್ಷಣ ಇಲಾಖೆ ಕಚೇರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿ ಮಾಹಿತಿ ಕಲೆ ಹಾಕಿತು

ಶಿಕ್ಷಣ ಇಲಾಖೆ ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಜನಪಕ್ಷಪಾತ, ಭ್ರಷ್ಟಾಚಾರ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ಅಧಿಕಾರಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ 12 ಕಚೇರಿಗಳ ಮೇಲೆ ಬುಧವಾರ ಏಕಕಾಲಕ್ಕೆ ದಾಳಿ ನಡೆಸಿದರು.

ಲೋಕಾಯುಕ್ತ ಬಿ.ಎಸ್.ಪಾಟೀಲ ಅವರ ಸೂಚನೆ ಮೇರೆಗೆ ನ್ಯಾಯಾಂಗ ಹಾಗೂ ಪೊಲೀಸ್ ಅಧಿಕಾರಿಗಳನ್ನೊಳಗೊಂಡ 12 ತಂಡಗಳು ದಾಳಿ ನಡೆಸಿ ಮಧ್ಯರಾತ್ರಿವರೆಗೂ ದಾಖಲೆಗಳ ಪರಿಶೀಲನೆಯಲ್ಲಿ ತೊಡಗಿದ್ದವು.

'ದೂರಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ವಶಪಡಿಸಿಕೊಂಡು ಯಾವ ಕಚೇರಿಯಲ್ಲಿ ಏನೆಲ್ಲ ಅಕ್ರಮಗಳು ನಡೆದಿವೆ ಎನ್ನುವ ವಿವರಣೆ ಆಧರಿಸಿ ಅಧಿಕಾರಿಗಳ ಮೇಲೆ ಮೊಕದ್ದಮೆ ದಾಖಲಿಸಲಾಗುತ್ತದೆ' ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಇಲಾಖೆಯಲ್ಲಿ ಸಿಬ್ಬಂದಿಯ ರಜೆ, ವೇತನ, ಕಾಲಬದ್ಧ ವೇತನ, ವಾರ್ಷಿಕ ಬಡ್ತಿ, ಲಂಚಕ್ಕೆ ಬೇಡಿಕೆ, ಅನುಕಂಪದ ನೌಕರಿ, ಹೊಸ ಕಾಲೇಜುಗಳ ನೋಂದಣಿ, ಮಾನ್ಯತೆ ನವೀಕರಣ, ಅನುದಾನ ಮಂಜೂರು ಸೇರಿದಂತೆ ಹಲವು ವಿಷಯಗಳಲ್ಲಿ ಭ್ರಷ್ಟಾಚಾರ, ಕರ್ತವ್ಯ ಲೋಪದ ದೂರುಗಳು ಕೇಳಿ ಬಂದ ನಂತರ ಲೋಕಾಯುಕ್ತ ಬಿ.ಎಸ್.ಪಾಟೀಲ ಅವರೇ ಇದನ್ನು ಖಚಿತಪಡಿಸಿಕೊಂಡಿದ್ದರು. ಆ ನಂತರ ಇಲಾಖೆಯ ಒಬ್ಬ ಜಂಟಿ ನಿರ್ದೇಶಕ, ಇಬ್ಬರು ಉಪನಿರ್ದೇಶಕರು, 9 ಕ್ಷೇತ್ರ ಶಿಕ್ಷಣಾಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದರು.

ಗಾಂಧಿ ಬಜಾರ್‌ನಲ್ಲಿ ಮಳಿಗೆ ತೆರವು

ಪಾದಚಾರಿ ಮಾರ್ಗದಲ್ಲಿನ ಅಂಗಡಿಗಳ ತೆರವು ಕಾರ್ಯ ನಡೆಯಿತು

ಬೆಂಗಳೂರು: ಚಿಕ್ಕಪೇಟೆ ವಿಭಾಗದ ಗಾಂಧಿಬಜಾರ್ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಗಾಂಧಿಬಜಾರ್‌ನಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಅನುಕೂಲವಾಗಲು ಸುಮಾರು 120 ಮಳಿಗೆಗಳಿಗೆ ಸ್ಥಳ ಗುರುತಿಸಿ, ಆ ಸ್ಥಳದಲ್ಲಿಯೇ ವ್ಯಾಪಾರ ಮಾಡಲು ಸೂಚನೆ ನೀಡಲಾಗಿತ್ತು. ಆದರೆ ನಿಗದಿಪಡಿಸಿರುವ ಸ್ಥಳ ಬಿಟ್ಟು ಬೇರೆ ಜಾಗದಲ್ಲಿ ವ್ಯಾಪಾರ ಮಾಡುತ್ತಿದ್ದು, ಇದರಿಂದ ಪಾದಚಾರಿಗಳಿಗೆ ಸಾಕಷ್ಟು ಸಮಸ್ಯೆ ಆಗುತ್ತಿದೆ ಎಂದು ಚಿಕ್ಕಪೇಟೆ ಕಾರ್ಯಪಾಲಕ ಎಂಜಿನಿಯರ್ ಪ್ರದೀಪ್ ಕುಮಾರ್ ಹೇಳಿದರು.

ಸಾಕಷ್ಟು ಬಾರಿ ತಿಳಿಸಿದ್ದರೂ ಒತ್ತುವರಿ ತೆರವುಗೊಳಿಸಿರಲಿಲ್ಲ. ಎರಡು ಜೆಸಿಬಿ, ಏಳು ಟ್ರ್ಯಾಕ್ಟರ್, ಮೂರು ಲಾರಿ ಹಾಗೂ 40 ಸಿಬ್ಬಂದಿ ಕಾರ್ಯನಿರ್ವಹಿಸಿದ್ದು, ಐದು ಅಂಗಡಿಗಳನ್ನು ತೆರವುಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮೆಂಟಲ್ ತರ ಮಾತಾಡ್ತೀರಲ್ರೀ...

ನಮ್ಮ ಮೆಟ್ರೊ ಕಾಮಗಾರಿ ವಿಳಂಬ ಅಧಿಕಾರಿಗಳಿಗೆ ಸಚಿವ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೆಂಟಲ್ ತರ ಮಾತಾಡ್ತೀರಲ್ರೀ, ನನಗೆ ಈಗ ಪಿತ್ತ ನೆತ್ತಿಗೇರುತ್ತೆ...'

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಬಿಎಂಆರ್‌ಸಿಎಲ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದು ಹೀಗೆ. ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ನಮ್ಮ ಮೆಟ್ರೊ ಕಾಮಗಾರಿಯನ್ನು ಬುಧವಾರ ಪರಿಶೀಲಿಸಿದ ಅವರು, ವಿಳಂಬಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

'ಒಂದು ಪಿಲ್ಲರ್ ನಿರ್ಮಿಸಲು ಎರಡು ತಿಂಗಳು ಸಾಕು, ಎರಡು ವರ್ಷ ಏಕೆ ತೆಗೆದುಕೊಳ್ಳುತ್ತಿದ್ದೀರಿ' ಎಂದು ಕೃಷ್ಣಬೈರೇಗೌಡ ಪ್ರಶ್ನಿಸಿದರು. 'ಅಷ್ಟು ಬೇಗ ಆಗೊಲ್ಲ ಸರ್' ಎಂದು ಅಧಿಕಾರಿ ಉತ್ತರಿಸಿದರು. ಆಗ ಸಿಟ್ಟಾದ ಕೃಷ್ಣಬೈರೇಗೌಡ, 'ಎಷ್ಟು ಕೆಲಸ ಮಾಡಿದ್ದೀರಿ, ನೀವ್ಯಾರ್ರಿ, ಏನೂ ಗೊತ್ತಿಲ್ಲ. ಮೆಂಟಲ್ ತರ ಮಾತಾಡಿ, ನನ್ನ ಪಿತ್ತ ನೆತ್ತಿಗೇರಿಸುತ್ತಿದ್ದೀರಿ' ಎಂದು ತರಾಟೆಗೆ ತೆಗೆದುಕೊಂಡರು.

'ನಮ್ಮ ಮೆಟ್ರೊ ಕಾಮಗಾರಿಗೆ ಸ್ವಲ್ಪ ರಸ್ತೆಯಲ್ಲ, ಬಹುತೇಕ ತೆಗೆದುಕೊಂಡಿದ್ದೀರಿ. ಇದರಿಂದ ನಾಗರಿಕರಿಗೆ ಸಾಕಷ್ಟು ಸಮಸ್ಯೆ ಆಗುತ್ತಿದೆ. ಸಂಚಾರ ದಟ್ಟಣೆಯಾದರೂ ನೀವು ಕ್ರಮ ಕೈಗೊಳ್ಳುವುದಿಲ್ಲ. ಎರಡು ತಿಂಗಳಲ್ಲಿ ಆಗಬೇಕಾದ ಕೆಲಸವನ್ನು ಎರಡು–ಮೂರು ವರ್ಷ ಮಾಡುತ್ತಿದ್ದೀರಿ. ಬೇಗ ಕೆಲಸ ಮುಗಿಸಲು ನಿಮಗೇನು ಸಮಸ್ಯೆ' ಎಂಬ ಸಚಿವರ ಪ್ರಶ್ನೆಗೆ ಅಧಿಕಾರಿಗಳು ನಿರುತ್ತರರಾದರು.

'ನಾಗವಾರ, ವೀರಣ್ಣ, ಕೊಡಿಗೆಹಳ್ಳಿ ಜಂಕ್ಷನ್ ಸೇರಿದಂತೆ ಮೆಟ್ರೊ ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ಸ್ವಚ್ಛತೆ ಕಾಪಾಡಿಕೊಂಡು, ಬೇಡವಾದದ್ದನ್ನು ಕೂಡಲೇ ತೆರವುಗೊಳಿಸಬೇಕು' ಎಂದು ತಾಕೀತು ಮಾಡಿದರು.

ಹೊರವರ್ತುಲ ಸರ್ವಿಸ್ ರಸ್ತೆಯ ಎರಡೂ ಬದಿಗಳನ್ನು ಮುಚ್ಚಿರುವುದು ಗಮನಿಸಿ, ಕನಿಷ್ಠ ಒಂದು ಪಥವನ್ನು ಸಂಚಾರಕ್ಕೆ ತೆರೆಯಬೇಕು. ರಸ್ತೆ ಯೋಗ್ಯ ಸ್ಥಿತಿಯಲ್ಲಿ ಇರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಎಸ್ಟೀಮ್ ಮಾಲ್ ಬಳಿ ಸರ್ವಿಸ್ ರಸ್ತೆಗೆ ಪ್ರವೇಶ ಹಾಗೂ ನಿರ್ಗಮನ ವ್ಯವಸ್ಥೆ ಕಲ್ಪಿಸಲು, ಎರಡೂ ಬದಿಗಳಲ್ಲಿ ಬಸ್ ಬೇ ವ್ಯವಸ್ಥೆಗೆ ಅಗತ್ಯವಾದ ಜಾಗ ಒದಗಿಸಲು ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಹೆಬ್ಬಾಳದಿಂದ ಬಾಗಲೂರು ಕ್ರಾಸ್‌ವರೆಗೆ ಉತ್ತರ ನಗರ ಪಾಲಿಕೆ, ರಾಷ್ಟ್ರೀಯ ಹೆದ್ದಾರಿ ಮತ್ತು ಮೆಟ್ರೊ ಸಂಸ್ಥೆಗಳು ಒಟ್ಟಾಗಿ ಸ್ವಚ್ಛತಾ ಅಭಿಯಾನ ಕೈಗೊಳ್ಳುವಂತೆ ಆದೇಶಿಸಿದರು.

ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್, ಮೆಟ್ರೊ ವ್ಯವಸ್ಥಾಪಕ ನಿರ್ದೇಶಕ ರವಿಶಂಕರ್, ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಉಪಸ್ಥಿತರಿದ್ದರು.

ಕೃಷ್ಣಬೈರೇಗೌಡ ಅವರು ಮೆಟ್ರೊ ಕಾಮಗಾರಿಯನ್ನು ಬುಧವಾರ ಪರಿಶೀಲಿಸಿದರು. ಪೊಮ್ಮಲ ಸುನೀಲ್ ಕುಮಾರ್, ರವಿಶಂಕರ್ ಉಪಸ್ಥಿತರಿದ್ದರು

ಮೆಟ್ರೊ ಅಧಿಕಾರಿಗಳಿಗೆ ಕೇಳಿದ ಪ್ರಶ್ನೆಗಳು

- ಒಂದು ಮೆಟ್ರೊ ಪಿಲ್ಲರ್ ಹಾಕಲು ಎರಡು ತಿಂಗಳು ಸಾಕು, ಎರಡು ವರ್ಷ ಏಕೆ?
- ಮೆಟ್ರೊ ಕಾಮಗಾರಿ ಶೀಘ್ರ ಮುಗಿಸಲು ಇರುವ ಸಮಸ್ಯೆ ಏನು?
- ಕಾಮಗಾರಿ ತಡವಾಗುತ್ತಿರುವುದರಿಂದ ಜನರಿಗಾಗುತ್ತಿರುವ ಸಮಸ್ಯೆ ನಿಮಗೆ ಗೊತ್ತೆ?
- ಮೆಟ್ರೊ ಕಾಮಗಾರಿಯಿಂದ ರಸ್ತೆ ಗುಣಮಟ್ಟ ಕ್ಷೀಣಿಸುತ್ತಿದೆ, ನಿಮಗೆ ಇದರ ಅರಿವಿದೆಯೇ?
- ಟ್ರಾಫಿಕ್ ಕಿರಿಕಿರಿಯಿಂದ ಜನರು ಬೇಸತ್ತಿರುವುದು ಗೊತ್ತಿದೆಯೇ?
- ಮೆಟ್ರೊ ಕಾಮಗಾರಿ ನಂತರ, ಅನಗತ್ಯ ವಸ್ತುಗಳ ವಿಲೇವಾರಿ ಮಾಡುತ್ತಿಲ್ಲ ಏಕೆ?
- ಮಳೆ ಬಂದರೆ ನೀರು ಹರಿಯಲು ಏಕೆ ವ್ಯವಸ್ಥೆ ಮಾಡಿಲ್ಲ?

ಸುದ್ದಿ 2 ನಿಮಿಷ

ಪ್ರಜ್ವಲ್ ಶಿಕ್ಷೆ ಅಮಾನತಿಗೆ ನಕಾರ

ಬೆಂಗಳೂರು: ಅತ್ಯಾಚಾರ ಪ್ರಕರಣದ ಅಪರಾಧಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ, ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ವಿಧಿಸಿರುವ ಜೀವಿತಾವಧಿ ಜೈಲು ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿ ಜಾಮೀನು ಮಂಜೂರು ಮಾಡಲು ಹೈಕೋರ್ಟ್ ಸ್ಪಷ್ಟವಾಗಿ ನಿರಾಕರಿಸಿದೆ.

ಈ ಸಂಬಂಧ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ಬುಧವಾರ ವಜಾಗೊಳಿಸಿದ ಮಧ್ಯಂತರ ಆದೇಶವನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ತೆರೆದ ನ್ಯಾಯಾಲಯ ದಲ್ಲಿ ಉಕ್ತ ಲೇಖನದ ಮೂಲಕ ದಾಖಲಿಸಿದರು.

'ತೀರ್ಪಿನಲ್ಲಿ ಅಲ್ಲೊಂದು ಇಲ್ಲೊಂದು ಇರುವ ಲೋಪಗಳನ್ನು ಪರಿಗಣಿಸಲಾಗದು. ಅಪರಾಧದ ಗಂಭೀರತೆ ಮತ್ತು ದಾಖಲೆಗಳನ್ನು ಪರಿಗಣಿಸಿದಾಗ ಪ್ರಜ್ವಲ್ ಬಿಡುಗಡೆ ಮಾಡುವುದು ಸೂಕ್ತವಲ್ಲ. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರು ಎತ್ತಿರುವ ಪ್ರಶ್ನೆಗಳನ್ನು ಅಂತಿಮ ವಿಚಾರಣೆಯ ಸಂದರ್ಭದಲ್ಲಿ ಪರಿಗಣಿಸಲಾಗುವುದು' ಎಂದು ನ್ಯಾಯಪೀಠ ಹೇಳಿದೆ. ಅಂತಿಮ ವಿಚಾರಣೆಯನ್ನು 2026ರ ಜನವರಿ 12ಕ್ಕೆ ಮುಂದೂಡಲಾಗಿದೆ.

ಪ್ರಜ್ವಲ್ ರೇವಣ್ಣ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ಮತ್ತು ಪ್ರಾಸಿಕ್ಯೂಷನ್ ಪರ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್ ಹಾಗೂ ರಾಜ್ಯದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದಾರೆ.

ಜಲಮಂಡಳಿ: ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ಗುರುವಾರ (ಡಿ.4) ನೀರಿನ ಅದಾಲತ್ ಹಮ್ಮಿಕೊಂಡಿದೆ.

ಬಿಇಎಂಎಲ್ ಲೇಔಟ್, ಕಲ್ಯಾಣ ನಗರ, ಹಲಸೂರು, ಎಚ್‌ಎಎಲ್, ಆರ್‌ಪಿಸಿ ಲೇಔಟ್, ರಾಜರಾಜೇಶ್ವರಿ ನಗರ, ರಾಜಾಜಿನಗರ, ಹೆಸರಘಟ್ಟ ರಸ್ತೆಯ ಎಂಇಐ ಲೇಔಟ್, ಹೈಗ್ರೌಂಡ್, ಸುವರ್ಣ ಭವನ ಮಲ್ಲೇಶ್ವರಂ, ಜಕ್ಕೂರಿನಲ್ಲಿ ಬೆಳಿಗ್ಗೆ 9.30ರಿಂದ 11ರವರೆಗೆ ಅದಾಲತ್ ನಡೆಯಲಿವೆ.

ನೀರಿನ ಬಿಲ್, ನೀರು ಹಾಗೂ ಒಳಚರಂಡಿ ಸಂಪರ್ಕಿಸುವಲ್ಲಿನ ವಿಳಂಬ, ಗೃಹಬಳಕೆಯಿಂದ ಗೃಹೇತರ ಬಳಕೆಗೆ ಪರಿವರ್ತನೆ ವಿಳಂಬ ಕುರಿತ ಸಮಸ್ಯೆಗಳಿಗೆ ಅದಾಲತ್‌ನಲ್ಲಿ ಪರಿಹಾರ ಪಡೆಯಬಹುದು. 1916ಕ್ಕೆ ಕರೆ ಮಾಡಿ ದೂರು ದಾಖಲಿಸಬಹುದು. ಇಲ್ಲವೇ 876228888 ವಾಟ್ಸ್‌ಆ್ಯಪ್ ಸಂಖ್ಯೆಗೆ ಸಂದೇಶ ರೂಪದಲ್ಲಿ ದೂರು ದಾಖಲಿಸಬಹುದು ಎಂದು ತಿಳಿಸಲಾಗಿದೆ.

ಪೀಣ್ಯ ದಾಸರಹಳ್ಳಿ ಸಮೀಪದ ಬಾಗಲಗುಂಟೆಯ ಸಿದ್ದೇಶ್ವರ ಬಡಾವಣೆಯಲ್ಲಿ ಜೆಡಿಎಸ್ ಮುಖಂಡ ಭರತ್ ಗುಂಡಪ್ಪ ಕುಟುಂಬದವರಿಂದ ಹನುಮ ಜಯಂತಿ ಆಚರಿಸಲಾಯಿತು. ಅನ್ನ ದಾಸೋಹ ನಡೆಯಿತು. ಹೊಸ ವರ್ಷದ 10 ಸಾವಿರಕ್ಕೂ ಹೆಚ್ಚು 'ಪ್ರಜಾವಾಣಿ' ಕ್ಯಾಲೆಂಡರ್‌ಗಳನ್ನು ವಿತರಿಸಿದರು. (ಬಲಗಡೆ) ಭರತ್ ಗುಂಡಪ್ಪ, ಸ್ಥಳೀಯ ಜೆಡಿಎಸ್ ಮಹಿಳಾ ಮುಖಂಡರಾದ ರಾಣಿ ಪ್ರತಾಪ್, (ಎಡಗಡೆ)ಬಿಜೆಪಿ ಮುಖಂಡ ಮುರಳಿ ಮತ್ತು ಪತ್ನಿ ರಾಜಮ್ಮ ಇದ್ದರು

ಆರು ಮಂದಿ ಅಮಾನತು

ಅಕ್ರಮವಾಗಿ ಬಿ ಖಾತಾ: ಸಿಬ್ಬಂದಿ ಕರ್ತವ್ಯಲೋಪ ಸಾಬೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮವಾಗಿ ಬಿ ಖಾತಾ ನೋಂದಣಿ ಮಾಡಿದ್ದ, ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಕಂದಾಯ ವಿಭಾಗದ ಆರು ಸಿಬ್ಬಂದಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತರು ಅಮಾನತುಗೊಳಿಸಿದ್ದಾರೆ. ಬೊಮ್ಮನಹಳ್ಳಿ ಜಂಟಿ ಆಯುಕ್ತರು ಸಲ್ಲಿಸಿದ ವರದಿಯಂತೆ, ಬಿ ಖಾತಾ ನೀಡುವ ಅರ್ಜಿ ಜೊತೆಗೆ ಕೇವಲ ಪ್ರಮಾಣ ಪತ್ರ ನೀಡಿದವರಿಗೆ ಆರು ಜನರು 'ಬಿ ಖಾತಾ'ವನ್ನು ಮಂಜೂರು ಮಾಡಿದ್ದಾರೆ. ಆದ್ದರಿಂದ, ಗಂಭೀರ ಕರ್ತವ್ಯಲೋಪದ ಮೇಲೆ ಸೇವೆಯಿಂದ ಅಮಾನತುಗೊಳಿಸಿ, ವೇತನ ಬಟವಾಡೆಗೆ ಅವರನ್ನು ಬೇರೆ ನಗರ ಪಾಲಿಕೆಗಳ ಹುದ್ದೆಗಳಿಗೆ ನಿಯುಕ್ತಿಗೊಳಿಸಲಾಗಿದೆ.

ಎಂ. ಮೋಹನ್ ಬಾಬು ಅವರ ದೂರಿನಂತೆ, ಜಂಟಿ ಆಯುಕ್ತರು ಪ್ರಕರಣವನ್ನು ತನಿಖೆ ನಡೆಸಿದಾಗ ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿಯಲ್ಲಿನ ಜಮೀನುಗಳಿಗೆ ಅನಧಿಕೃತವಾಗಿ ಬಿ ಖಾತಾ ಮಾಡಿದ್ದಾರೆ ಎಂಬುದು ಸಾಬೀತಾಗಿದೆ. ಜಿಬಿಎ ರಚನೆ ಬಳಿಕ ಮೊದಲ ಅಮಾನತು ಆದೇಶ ಇದಾಗಿದೆ.

ಅಮಾನತುಗೊಂಡವರು: ನರಸಿಂಹಲು, ಸಹಾಯಕ ಕಂದಾಯ ಅಧಿಕಾರಿ, ಬೇಗೂರು ಉಪವಿಭಾಗ; ಭಾಗ್ಯಶ್ರೀ, ದ್ವಿತೀಯ ದರ್ಜೆ ಸಹಾಯಕಿ; ಬಾಲಲಿಂಗರಾಜು, ದ್ವಿತೀಯ ದರ್ಜೆ ಸಹಾಯಕ; ಶಾಂತೇಶ್, ಉಪ ಕಂದಾಯ ಅಧಿಕಾರಿ, ಬೊಮ್ಮನಹಳ್ಳಿ ವಿಭಾಗ ಕಂದಾಯ ಅಧಿಕಾರಿ; ಸುರೇಶ್ ಮೌಲ್ಯಮಾಪಕ–ವಾರ್ಡ್ 192; ಹೇಮಂತ್ ಕುಮಾರ್, ಮೌಲ್ಯಮಾಪಕ.

ಯಾರಿಗೆ ಎಲ್ಲಿ ಅಕ್ರಮ ಬಿ ಖಾತಾ: ನಾಗನಾಥಪುರ ಗ್ರಾಮದ ಸರ್ವೆ ನಂ. 31/2ರಲ್ಲಿ 1 ಎಕರೆ 35 ಗುಂಟೆಯಲ್ಲಿ ಸಂಸ್ಕೃತಿ ಡೆವಲಪರ್ಸ್‌ಗೆ 49 ನಿವೇಶನಗಳಿಗೆ ಬಿ ಖಾತಾ. ಬಸವನಪುರ ಗ್ರಾಮದ ಸರ್ವೆ ನಂ. 48/3ರಲ್ಲಿನ 10.12 ಗುಂಟೆ ಜಮೀನಿನಲ್ಲಿ ರಿಟೋ ವೈಲೋ ಫರ್ನಾಂಡೀಸ್ ಮತ್ತು ಇತರರಿಗೆ 37 ಬಿಡಿ ನಿವೇಶನಗಳಿಗೆ ಬಿ ಖಾತಾ. ಬೇಗೂರು ಗ್ರಾಮದ ಸರ್ವೆ ನಂ. 5/52/53ರಲ್ಲಿ 2 ಎಕರೆ 11 ಗುಂಟೆಯಲ್ಲಿ ಕಮಲಮ್ಮ ಮತ್ತು ಇತರರಿಗೆ 52 ಬಿಡಿ ನಿವೇಶನಗಳಿಗೆ ಬಿ ಖಾತಾ.

40 ಸಾವಿರಕ್ಕೂ ಹೆಚ್ಚು ಅಕ್ರಮ ಎ ಖಾತಾ

ಬಿಬಿಎಂಪಿ ವ್ಯಾಪ್ತಿಯಲ್ಲಿ 40 ಸಾವಿರಕ್ಕೂ ಹೆಚ್ಚು ಆಸ್ತಿಗಳಿಗೆ ಅಕ್ರಮವಾಗಿ 'ಎ' ಖಾತಾ ಮಾಡಿಕೊಟ್ಟಿರುವುದನ್ನು 2023ರ ಜುಲೈನಲ್ಲಿ ಅಂದಿನ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ಪತ್ತೆ ಹಚ್ಚಿದ್ದರು.

ಬಿ ಖಾತಾಗೆ ಅರ್ಹವಾಗಿರುವ ಆಸ್ತಿಗಳಿಗೆ ಅಕ್ರಮವಾಗಿ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು, 'ಐಎಫ್‌ಎಂಎಸ್' ತಂತ್ರಾಂಶದ 'ಆರ್ ಕೋಡ್ 130' ಬಳಸಿ 'ಎ' ಖಾತಾ ನೀಡಿರುವುದು ತನಿಖೆಯಿಂದ ಗೊತ್ತಾಗಿತ್ತು. 2015ರಿಂದ 2023ರವರೆಗೆ ಒಟ್ಟು 45,133 ಪ್ರಕರಣಗಳಲ್ಲಿ ₹898.70 ಕೋಟಿ ಪಾವತಿಸಿಕೊಳ್ಳಲಾಗಿದೆ. ಇವುಗಳಲ್ಲಿ ಶೇ 90ರಷ್ಟು ಪ್ರಕರಣಗಳು ಅಕ್ರಮ ಎಂದು ಪರಿಗಣಿಸಲಾಗಿತ್ತು. ಆ ಸಂದರ್ಭದಲ್ಲಿ ಜಯರಾಂ ಅವರನ್ನು ವರ್ಗಾಯಿಸಲಾಗಿತ್ತು. ಅಕ್ರಮ ಎ ಖಾತಾದ ಬಗ್ಗೆ ಕ್ರಮ ಕೈಗೊಳ್ಳಲು ಕಂದಾಯ ವಿಭಾಗದ ವಿಶೇಷ ಆಯುಕ್ತರಿಗೆ ವರದಿ ನೀಡಲು ಸೂಚಿಸಲಾಗಿತ್ತು. ಆದರೆ, ಈವರೆಗೂ ಕ್ರಮವಾಗಿಲ್ಲ.

'ಬೆಂಗಳೂರು ವಿಜಯಪುರ ನೇರ ರೈಲಿಗೆ ಪತ್ರ'

ಬೆಂಗಳೂರು: 'ಬೆಂಗಳೂರು ಹಾಗೂ ವಿಜಯಪುರ ನಡುವಿನ ಸಂಚಾರ ಅವಧಿಯನ್ನು ಐದು ಗಂಟೆ ಕಡಿತ ಮಾಡಲು ಪ್ರತ್ಯೇಕ ರೈಲು ಸಂಚಾರ ಆರಂಭಿಸುವಂತೆ ಕೇಂದ್ರ ಸಚಿವರಿಗೆ ಪತ್ರ ಬರೆಯಲಾಗುವುದು' ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ರಾಜ್ಯದಲ್ಲಿ ಅನುಷ್ಠಾನ ಹಂತದಲ್ಲಿರುವ ವಿವಿಧ ರೈಲ್ವೆ ಯೋಜನೆಗಳ ಕುರಿತು ನಗರದಲ್ಲಿ ಬುಧವಾರ ನಡೆದ ನೈರುತ್ಯ ರೈಲ್ವೆ ಅಧಿಕಾರಿಗಳ ಸಭೆಯಲ್ಲಿ ಸಚಿವರು ಮಾಹಿತಿ ಪಡೆದುಕೊಂಡರು.

ಹುಬ್ಬಳ್ಳಿ-ಗದಗ ಬೈಪಾಸ್ ಮಾರ್ಗಗಳಲ್ಲಿ ಬೆಂಗಳೂರು–ವಿಜಯಪುರ ನಡುವಿನ ರೈಲು ಓಡಿಸಲು ತೊಂದರೆ ಇಲ್ಲ. ಚಾಲ್ತಿಯಲ್ಲಿರುವ ರೈಲುಗಳ ಮಾರ್ಗ ಬದಲಿಸಲು ಸಾಧ್ಯವಿಲ್ಲ. ಇದಕ್ಕಾಗಿ ರೈಲ್ವೆ ಮಂಡಳಿಯಿಂದ ಹೊಸ ರೈಲು ಮಂಜೂರು ಮಾಡಿಸಿಕೊಳ್ಳಬೇಕು ಎಂದು ಅಧಿಕಾರಿಗಳು ವಿವರಣೆ ನೀಡಿದ್ದಾರೆ. ಈ ಸಂಬಂಧ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಹಾಗೂ ವಿ.ಸೋಮಣ್ಣ ಅವರಿಗೆ ಪತ್ರ ಬರೆಯಲಾಗುವುದು ಎಂದು ಪಾಟೀಲ ಹೇಳಿದರು.

ನಗರದಲ್ಲಿ ಇಂದು

'ಡಿಎಚ್‌ಐಇ ಎಕ್ಸ್‌ಪ್ರೆಷನ್ಸ್' ಅಂತರ ಶಾಲಾ ಸ್ಪರ್ಧೆ, ಸ್ಪೆಲ್ ಬೀ ಆ್ಯಂಡ್ ವರ್ಡ್ ವಿಂಡರ್, ಆಯೋಜನೆ: ಡೆಕ್ಕನ್ ಹೆರಾಲ್ಡ್ ಇನ್ ಎಜುಕೇಶನ್ (ಡಿಎಚ್‌ಐಇ), ಸ್ಥಳ: ಬಾಲ ಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ಮಹಿಳಾ ನೌಕರರ ಸಮ್ಮೇಳನದ ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅತಿಥಿಗಳು: ಸತೀಶ್ ಜಾರಕಿಹೊಳಿ, ಎಚ್.ಕೆ.ಪಾಟೀಲ, ದಿನೇಶ್ ಗುಂಡೂರಾವ್, ಎನ್.ಚಲುವರಾಯಸ್ವಾಮಿ, ಸಂತೋಷ್ ಲಾಡ್, ಲಕ್ಷ್ಮೀ ಹೆಬ್ಬಾಳಕರ, ಬಿ.ಝಡ್. ಜಮೀರ್ ಅಹಮದ್ ಖಾನ್, ಅಧ್ಯಕ್ಷತೆ: ರೋಶನಿಗೌಡ, ಆಯೋಜನೆ: ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10

ಅಖಿಲ ಭಾರತ ಆರ್ಯ ಈಡಿಗ ಮಹಿಳಾ ಸಮ್ಮೇಳನ: ಆಯೋಜನೆ: ಕರ್ನಾಟಕ ಆರ್ಯ ಈಡಿಗ ಮಹಿಳಾ ಸಂಘ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಹೊಸೂರು ರಸ್ತೆ, ಬೆಳಿಗ್ಗೆ 10ರಿಂದ

ವಾಲ್ಮೀಕಿವೇದ-ಪ್ರಬೋಧ, ಪ್ರಸಾರ: ಗೌರವ ಸಮರ್ಪಣೆ: ಕೆ.ಇ.ದೇವನಾಥನ್, ಶತಾವಧಾನಿ ಆರ್. ಗಣೇಶ್, ಬಿ.ನಾಗೇಶಪ್ಪ, ಭಾಷಣ: ಬಿ.ಎನ್. ಶಶಿಕಿರಣ, ಆಯೋಜನೆ: ಸಾಕೇತ ಪ್ರತಿಷ್ಠಾನಮ್, ಸ್ಥಳ: ಡಿವಿಜಿ ಸಭಾಂಗಣ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಸವನಗುಡಿ ರಸ್ತೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10ರಿಂದ

'ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ' ಕುರಿತು ಕಾರ್ಯಾಗಾರ: ಅಧ್ಯಕ್ಷತೆ: ಎಚ್.ಕೆ.ಪಾಟೀಲ, ಅತಿಥಿಗಳು: ಶಾಲಿನಿ ರಜನೀಶ್, ತ್ರಿಲೋಕ್ ಚಂದ್ರ ಕೆ.ವಿ., ಖುಷ್ಬು ಗೋಯಲ್ ಚೌಧರಿ, ಬಿ. ಗೋಪಾಚಾರ್ಯ, ಆಯೋಜನೆ: ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪ್ರವಾಸೋದ್ಯಮ ಇಲಾಖೆ ಮತ್ತು ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಸ್ಥಳ: ವೆಂಕಟಪ್ಪ ಚಿತ್ರ ಶಾಲೆಯ ಸಭಾಂಗಣ, ಕಸ್ತೂರಬಾ ರಸ್ತೆ, ಬೆಳಿಗ್ಗೆ 10

ಸಿಲ್ಕ್ ಮಾರ್ಕ್ ಎಕ್ಸ್‌ಪೊ–2025: ಉದ್ಘಾಟನೆ: ಪ್ರಗತಿ ರಿಷಬ್ ಶೆಟ್ಟಿ, ಉಪಸ್ಥಿತಿ: ಪಿ. ಶಿವಕುಮಾರ್, ಆಯೋಜನೆ: ಸಿಲ್ಕ್ ಮಾರ್ಕ್, ಸೆಂಟ್ರಲ್ ಸಿಲ್ಕ್ ಬೋರ್ಡ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಪ್ರಗತಿ ರಿಷಬ್ ಶೆಟ್ಟಿ

ಹುಣ್ಣಿಮೆ ಹಾಡಿನ 226ನೇ ಸಂಚಿಕೆ: ಭರತನಾಟ್ಯ ಪ್ರದರ್ಶನ, ಅತಿಥಿಗಳು: ಶೈಲಾ ದರ್ಶನ್, ಬಿ.ಕೆ. ಶಿವರಾಂ, ಆಯೋಜನೆ: ಶ್ರೀ ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡು ಮಲ್ಲೇಶ್ವರ ದೇವಸ್ಥಾನದ ಆವರಣ, ಮಲ್ಲೇಶ್ವರ, ಸಂಜೆ 6.30

'ದಸರಾ' ಶಾಲಾ ವಿದ್ಯಾರ್ಥಿಗಳ ಪ್ರಬಂಧ ಸಂಕಲನ ಬಿಡುಗಡೆ: ಅಧ್ಯಕ್ಷತೆ: ಕೃಷ್ಣಪ್ಪ, ಉಪಸ್ಥಿತಿ: ಅಭಿನಯ, ಅಕ್ಷತಾ ಪಾಂಡವಪುರ, ಆಯೋಜನೆ ಮತ್ತು ಸ್ಥಳ: ಕನ್ನಡ ಭಾಷಾ ಸಂಘ, ಸರ್ಕಾರಿ ಪ್ರೌಢಶಾಲೆ, ಪ್ಯಾಲೇಸ್ ಗುಟ್ಟಹಳ್ಳಿ, ಬೆಳಿಗ್ಗೆ 11

'ನಲ್ಲತಂಗಾ ಅಥವಾ ಶನಿಪ್ರಭಾವ' ನಾಟಕ ಪ್ರದರ್ಶನ: ಅಧ್ಯಕ್ಷತೆ: ಬಿ.ಮುನಿರಾಜು, ಅತಿಥಿಗಳು: ಬಿ.ರಂಗನಾಥ, ಜ್ಯೋತಿರ್ಲಿಂಗಪ್ಪ, ವೆಂಕಟೇಶ್, ಕೇಶವ, ಆಯೋಜನೆ: ಧನಸ್ಸು ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ಶ್ರೀನಿವಾಸ ಸಮುದಾಯ ಭವನ ಪಕ್ಕ, ಕೆಇಬಿ ಆಫೀಸ್ ಹಿಂಭಾಗ, ನೆಲಮಂಗಲ ಪಟ್ಟಣ, ಬೆಳಿಗ್ಗೆ 11

ಭಗವದ್ಗೀತಾ ಪಠಣ: ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪ್ಲಾಟ್ ಫಾರಂ ರಸ್ತೆ, ಮಂತ್ರಿಮಾಲ್ ಮೆಟ್ರೊ ರೈಲು ನಿಲ್ದಾಣದ ಎದುರು, ಶೇಷಾದ್ರಿಪುರ, ಮಧ್ಯಾಹ್ನ 3.30

ರಾಜ್ಯಮಟ್ಟದ 17 ವರ್ಷದೊಳಗಿನ ಬಾಲಕ, ಬಾಲಕಿಯರ ಅಥ್ಲೆಟಿಕ್ಸ್ ಕ್ರೀಡಾಕೂಟದ ಉದ್ಘಾಟನೆ: ಮಧು ಬಂಗಾರಪ್ಪ, ಆಯೋಜನೆ: ಶಾಲಾ ಶಿಕ್ಷಣ ಇಲಾಖೆ, ಸ್ಥಳ: ಕಂಠೀರವ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಸಂಜೆ 4

ರಾವ್ ಬಹದ್ದೂರ್, ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿ ಅವರ ಕುರಿತು ಪುಸ್ತಕ ಬಿಡುಗಡೆ, ಸಾಕ್ಷ್ಯಚಿತ್ರ ಪೂರ್ವವೀಕ್ಷಣಾ ಸಮಾರಂಭ: ಉದ್ಘಾಟನೆ: ಈಶ್ವರ ಬಿ. ಖಂಡ್ರೆ, ಪುಸ್ತಕ ಬಿಡುಗಡೆ: ಲೀಲಾದೇವಿ ಆರ್. ಪ್ರಸಾದ್, ಅಧ್ಯಕ್ಷತೆ: ಶಂಕರ ಮಹಾದೇವ ಬಿದರಿ, ಪ್ರಾಸ್ತಾವಿಕ ನುಡಿ: ಚಿದಾನಂದ ಎಸ್. ಮಠದ, ಆಯೋಜನೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಸ್ಥಳ: ಹಾನಗಲ್ ಕುಮಾರಸ್ವಾಮಿ ಸಭಾಂಗಣ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಸದಾಶಿವನಗರ, ಸಂಜೆ 5

ಗೀತ ಗಾಯನ, ರಂಗ ಗೌರವ, ನಾಟಕ ಪ್ರದರ್ಶನ: ಅತಿಥಿಗಳು: ಸಿದ್ಧಾರ್ಥ ಸ್ವಾಮೀಜಿ, ಕೊಟ್ರೇಶ್, ಮುನಿಕೃಷ್ಣ, 'ಗುರು ಶಿಷ್ಯರು' ನಾಟಕ ಪ್ರದರ್ಶನ: ರಚನೆ: ಬೇಲೂರು ಕೃಷ್ಣಮೂರ್ತಿ, ನಿರ್ದೇಶನ: ಪೂರ್ಣಿಮಾ ಪವಾರ್, ಆಯೋಜನೆ: ರಂಗ ಬೆಳಕು ಕಲಾ ತಂಡ, ಸ್ಥಳ: ಡಾ.ಪುನೀತ್ ರಾಜ್‌ಕುಮಾರ್ ಕಲಾಭವನ, ಶಾಂತಿನಗರ, ಸಂಜೆ 5

'ಶ್ರೀ ಮೆಕ್ಕೆಕಟ್ಟು ಕ್ಷೇತ್ರ ಮಹಾತ್ಮೆ' ಯಕ್ಷಗಾನ ಪ್ರದರ್ಶನ: ಆಯೋಜನೆ: ಶ್ರೀ ನಂದಿಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿ, ಸ್ಥಳ: ಮದ್ದೂರಮ್ಮ ಮೈದಾನ, ಶ್ರೀನಗರ, ಸಂಜೆ 5.30

ಅಭಿನಂದನಾ ಸಮಾರಂಭ, ನಾಟಕ ಪ್ರದರ್ಶನ: ಅಭಿನಂದಿಸುವವರು: ಎಚ್.ಎಂ. ರೇವಣ್ಣ, ಅತಿಥಿ: ಕಾ.ತ. ಚಿಕ್ಕಣ್ಣ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, 'ಕಾಲಜ್ಞಾನಿ ಕನಕ' ನಾಟಕ ಪ್ರದರ್ಶನ: ರಚನೆ: ಕಿ.ರಂ. ನಾಗರಾಜ, ನಿರ್ದೇಶನ: ಸಿಜಿಕೆ, ಮರು ನಿರ್ದೇಶನ: ಟಿ. ರಘು, ಆಯೋಜನೆ: ಪ್ರಯೋಗರಂಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

'ಪು.ತಿ. ನರಸಿಂಹಚಾರ್ ವಿರಚಿತ ಶ್ರೀಹರಿ ಚರಿತೆ' ವಾಚನ ಮತ್ತು ವ್ಯಾಖ್ಯಾನ: ರಾಜಶ್ರೀ, ವೀಣಾದೇವಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ. nagaradalli_indu@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Announcements

I,DHEERAJ NAHAR S/o Shobhag Chand Nahar Residing at No.183/a, 12th Main, 3rd Stage, 1st Block, Manjunath Nagar, Bangalore-560010 hereby declare that my Name is in Aadhar card DHEERAJ NAHAR & in Passport DHEERAJ NAHAR SAUBHAG CHAND NAHAR I state that's both Names is for me Same person only vide Affidavit Dtd:03.12.2025 Sworn Before Notary H.R.Karunakara, Bangalore

Lost

DOCUMENT LOST
I, Leela Rao R/at No. 74, 2nd Main Road, Anjaneya layout, Banashankari 3rd Stage, Bangalore-560085, have lost the Original House Documents, Document / Identification No.: Site No.74, Sale Deed, Katha, Katha Extract, Tax Paid Reciept, Mother Deed, while in transit. If found please Contact No: 9663284269.

ಸಾರ್ವಜನಿಕ ಸೂಚನೆ (ದಾಖಲೆ ಕಾಣೆಯಾಗಿದೆ)
ಬೆಂಗಳೂರು ದಕ್ಷಿಣ ತಾಲ್ಲೂಕಿನ ಉಪ-ನೋಂದಣಿ ಕಚೇರಿಯಲ್ಲಿ ದಾಖಲೆ ಸಂಖ್ಯೆ.BNG(U)-BLR(S)/1599/2003-2004 ರಲ್ಲಿ ನೋಂದಾಯಿಸಲಾದ ಕೆಳಗಿನ ವೇಳಾಪಟ್ಟಿ ಆಸ್ತಿಯ ಮೂಲ ನೋಂದಾಯಿತ ಮಾರಾಟ ಪತ್ರವು ಹಿಂತಿರುಗಿಸಲಾಗದಂತೆ ಕಳೆದುಹೋಗಿದೆ. ಕಂಡುಬಂದಲ್ಲಿ ಅಥವಾ ಯಾರಾದರೂ ಯಾವುದೇ ಹಕ್ಕುಗಳು/ಆಕ್ಷೇಪಣೆಗಳನ್ನು ಹೊಂದಿದ್ದರೆ ಈ ಸೂಚನೆಯ 15 ದಿನಗಳಲ್ಲಿ - ಜಯರಾಮ್ ಕೃಷ್ಣನ್, ನಂ.114, 13 ನೇ ಮುಖ್ಯ ರಸ್ತೆ, HSR ಸೆಕ್ಟರ್ 5, ಬೆಂಗಳೂರು - 560102, ಮೊಬೈಲ್ ಸಂಖ್ಯೆ 9740069637 ಗೆ ಬರೆಯಬಹುದು.
ಆಸ್ತಿಯ ವೇಳಾಪಟ್ಟಿ (ಆಸ್ತಿಯ ವಿವರಣೆ)
ಆ ಎಲ್ಲಾ ಸ್ಥಿರ ಆಸ್ತಿ ಮೂರು ಮಲಗುವ ಕೋಣೆ ವಸತಿ ಪ್ರದೇಶವಾಗಿದೆ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 73 ರೊಳಗೆ ವರ್ತೂರು ಹೋಬಳಿ, ಕೋಡಿಹಳ್ಳಿಯಲ್ಲಿರುವ ಸಂಯೋಜಿತ ಖಾತಾ ಸಂಖ್ಯೆ 28/3 ರಲ್ಲಿ ನಿರ್ಮಿಸಲಾದ "ಜ್ಯೋತಿ ಮೆಡೋಸ್" ಕಟ್ಟಡದ ಮೊದಲ ಮಹಡಿಯಲ್ಲಿ 1527 ಚದರ ಅಡಿ ವಿಸ್ತೀರ್ಣದ ಅಪಾರ್ಟ್ಮೆಂಟ್ ಸಂಖ್ಯೆ 104, ಆನಂದಪುರ ಮುಖ್ಯ ರಸ್ತೆ, ಎಲ್.ಬಿ. ಶಿವಲಿಂಗಯ್ಯ ಕಾಲೋನಿ, ನಂಜಾ ರೆಡ್ಡಿ ಕಾಲೋನಿ, ಬೆಂಗಳೂರು, ಒಂದು ಕಾರು ಪಾರ್ಕಿಂಗ್ ಸ್ಥಳ ಮತ್ತು ಭೂಮಿಯಲ್ಲಿ 432.78 (1/38 ನೇ) ಚದರ ಅಡಿ ಅವಿಭಜಿತ ಪಾಲು ಅಪಾರ್ಟ್‌ಮೆಂಟ್ ಅನ್ನು ನಿರ್ಮಿಸಲಾಗಿದೆ ಮತ್ತು ಸುತ್ತುವರೆದಿದೆ
ಪೂರ್ವದಿಂದ - ಬಿಡಿಎ ಮುಖ್ಯ ರಸ್ತೆ
ಪಶ್ಚಿಮದಿಂದ - ಖಾಸಗಿ ಆಸ್ತಿ
ಉತ್ತರದಿಂದ - ಖಾಸಗಿ ಆಸ್ತಿ ಮತ್ತು ರಸ್ತೆ
ದಕ್ಷಿಣದಿಂದ - ಖಾಸಗಿ ಆಸ್ತಿ

CONNECT ಕ್ಲಾಸಿಫೈಡ್ಸ್

B K Jain Group, Bengaluru, has announced a funding infusion of ₹250 crore to drive the development of its upcoming mixed-use commercial and residential real estate project in the city.

The investment will accelerate the Group's vision of creating a modern, sustainable designed green urban destination that seamlessly integrates premium residential spaces with high-value commercial infrastructure. The project is poised to unlock substantial growth opportunities for the region and contribute to Bengaluru's evolving urban landscape.

"This milestone reflects the trust and confidence our investors have in our growth journey and future roadmap, in the Group's long-term vision." Mr Kalp Kumar Jain, Director - BK Jain Group, said in a statement.

Change of Name

CHANGE OF NAME
I, SESHADRI residing at # 33/1, Singapura Main Road, Vidyaranyapura Post, Bengaluru-560097, have changed my name to SHESHADRI vide affidavit dated 03/12/2025, before notary S.I.Balaguru, Bengaluru.

CHANGE OF NAME
I, SPOORTHY P.D. D/o DINESH P.R., aged about 30 years, resident of davangere. That my all recorded name in school, collage, investments, marriage certificate, bank a/c, in all transactions upto 26.04.2024 is SPOORTHY P.D. But I myself desire choose and select SPOORTHY D. D/O Dinesh PR as my new name from this date 27.04.2024 and I make an affidavit in front of notary public in future all my transactions in my new name only hence forth I shall be known with my new name for all old and new transactions, investments and all documents.
Ph: 94481-80019

CHANGE OF NAME
I, AKSHAYA L. IYER @ AKSHAYA LALITHA IYER UPPATI, D/o.V.V.Pathy, permanent Resident of No.203, Classic Aloha Rahat Bagh Enclave, C.V. Raman Nagar, Bengaluru – 560 093, having Aadhar No.7577 1890 4974, and presently resident of United States of America, do hereby declare that, both the above names pertain to me only and henceforth I shall be known as AKSHAYA LALITHA IYER UPPATI, vide Affidavit dated 27.11.2025 sworn to before Notary L. GOPALKRISHNA, Bengaluru.

CHANGE OF NAME
I, Gowravva Marekeshwar, residing at No.66, Shobha Estate, Nadanahalli, Alanahalli Post, Mysore Dist, Karnataka - 570028, have changed my name to G F MADAKESHWAR vide affidavit dated 03.12.2025 before notary L Gopalakrishna, Bengaluru. Henceforth I shall be called G F MADAKESHWAR only

I, MANI, R/at No.10, 9th Cross, Kanshiramnagar Vidyarnyapura Post Bangalore- 560097 have changed my name to MANI RANGANATH vide affidavit dated: 3/12/2025 Before Notary Onkarappa.N.R Bangalore.

CHANGE OF NAME
I, Haritha Reddy Thatiparti, residing at Flat No. 329, 3rd Floor, SLS Silicon Valey, Belathur, Kadugodi Post, Bengaluru-560067, have changed my name to HARITHA KOLLI REDDY vide affidavit dated 02.12.2025 before notary Manjunath T, Bengaluru. Henceforth I shall be called HARITHA KOLLI REDDY only

I, LEKHA Chanda Pillai Reasiding at Astro Maison Douce, Flat No. MB-3-013, Radha Reddy layout Road, Doddakanahalli, off Sarjapur road, post Karmaleram, Bangalore 560035 Have changed my Name to LEKHA SAJU vide affidavit Dated 02/12/2025 before Notory Ganesh Gowda.M.V, Bangalore-29.

CHANGE OF NAME
I, Manjunath N and N Manju, residing at No. 409, Holenarasipura Taluk, Halli Mysore, Hassan, Karnataka - 573210, declare that the above names pertain to me only & henceforth I shall be known as MANJUNATH N Aadhar No. xxxx xxxx 6348 vide affidavit dated 22-11-2025 before notary Chikkanna, Bengaluru.

Heartiest Congratulations to Dr. Ayesha Zubair, Ph.D.

Dr. Ayesha Zubair, daughter of Syed Zubair has been awarded a Ph.D. degree by CMR University, Bengaluru.

Her research thesis titled "A Study on Analysis of Anomalies in the Indian Stock Market" was completed under the guidance of Dr. Bhupendra Bahadur Tiwari, Professor & Director, School of Economics and Commerce, CMR University.

Dr. Ayesha Zubair is currently serving as an Assistant Professor in the Postgraduate Department of Commerce, Mount Carmel College, Bengaluru.

BUSINESS

Business Offers

Business For Sale

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

JOB OPPORTUNITIES

Wanted

FACTORY HELPERS for Laundry in Bannergatta, Bangalore Salary 17,000 + Food + accommodation 8am to 8pm Call 8050666007/ 9880266007/ 9148899007

Engg/ Production Technical

URGENT REQUIREMENT- BE/ Diploma (Civil)/ Any Degree-Freshers/ Experienced in Bangalore, 2 Wheeler Must. 9845009445

TEAK WOOD DISCOUNT SALE
BURMA TEAK ~~Rs.14000~~ Rs.8500/- per Cft
INDIAN TEAK ~~Rs.7000~~ Rs.4500/- per Cft
BIJA(HONNE) HALDU ~~Rs.2000~~ Rs.1250/- per Cft
NALLAMADDI ~~Rs.1900~~ Rs.1150/- per Cft
ALL WOOD VERY VALUABLE & STRONG LIFE MORE THAN 100 YEARS
FREE TRANSPORT
ASIAN TIMBER ESTATES
Beside ORR, Gachibowli Kollur, Hyderabad
Ph: 098480 28811, 09948517777, 081799 22021, 07842576789

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

'ಪ್ರಜಾವಾಣಿ' ವಲಯ ಮಟ್ಟದ ಕ್ವಿಜ್ 15ಕ್ಕೆ

ಬೆಂಗಳೂರು: ಬೆಂಗಳೂರು ವಲಯ ಮಟ್ಟದ 'ಪ್ರಜಾವಾಣಿ- ರಸಪ್ರಶ್ನೆ ಚಾಂಪಿಯನ್‌ಶಿಪ್' ಡಿಸೆಂಬರ್ 15ರಂದು ಜಯನಗರದಲ್ಲಿರುವ ರಾಷ್ಟ್ರೀಯ ವಿದ್ಯಾಲಯದ ಆರ್.ವಿ. ಆಡಿಟೋರಿಯಂನಲ್ಲಿ ನಡೆಯಲಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಾಯಿಸಿಕೊಳ್ಳಬಹುದು.

ಬೆಂಗಳೂರು ನಗರ, ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳ 7 ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು.

'ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು. ಒಂದು ಶಾಲೆಯಿಂದ ಎಷ್ಟು ತಂಡಗಳು ಬೇಕಾದರೂ ಇರಬಹುದು. ಕ್ವಿಜ್ ಎಲ್ಲರಿಗೂ ಉಚಿತ ಪ್ರವೇಶವಿದೆ. ಸ್ಪರ್ಧೆ ನಡೆಯುವ ಸ್ಥಳದಲ್ಲೂ ಹೆಸರನ್ನು ನೋಂದಾಯಿಸಲು ಅವಕಾಶವಿದೆ. ಈ ವಲಯದಲ್ಲಿ ವಿಜೇತರಾದವರು ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಹರಾಗುತ್ತಾರೆ. ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಯುತ್ತದೆ.

ಹೆಚ್ಚಿನ ಮಾಹಿತಿಗೆ ಬೆಳಿಗ್ಗೆ 10 ರಿಂದ ಸಂಜೆ 5ರೊಳಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 7338018541.

'ಬಿಎಸ್‌ಎನ್‌ಎಲ್ ಟವರ್ ಸ್ಥಾಪಿಸಿ'

ನವದೆಹಲಿ: ಬಿಎಸ್‌ಎನ್‌ಎಲ್ ಟವರ್ ಸಮಸ್ಯೆ ಬಗೆಹರಿಸಬೇಕು ಹಾಗೂ ಬಿಎಸ್‌ಎನ್‌ಎಲ್ ನೌಕರರ ವೇತನ ಪರಿಷ್ಕರಿಸಿ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಆಗ್ರಹಿಸಿದರು.

ಲೋಕಸಭೆಯಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿ, ಚನ್ನಗಿರಿ ತಾಲ್ಲೂಕಿನ ಹಾಲೇಶಪುರ ಸೇರಿ ಅನೇಕ ಹಳ್ಳಿಗಳಲ್ಲಿ ಇನ್ನೂ ನೆಟ್‌ವರ್ಕ್ ಸಿಗುತ್ತಿಲ್ಲ. ಇದರಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಅಧಿಕಾರಿಗಳಿಗೆ ಹಲವು ಬಾರಿ ಪತ್ರ ಬರೆದರೂ ಪ್ರಯೋಜನ ಆಗಿಲ್ಲ. ತಕ್ಷಣವೇ ಟವರ್ ಸ್ಥಾಪಿಸಿ ಎಂದು ಆಗ್ರಹಿಸಿದರು.

ಕಲರವ ಸೃಷ್ಟಿಸಿದ 'ಡಿಎಚ್‌ಐಇ ಎಕ್ಸ್‌ಪ್ರೆಷನ್ಸ್'

ಉತ್ಸಾಹಭರಿತವಾಗಿ ಆರಂಭಗೊಂಡ ಸ್ಪರ್ಧೆ • 350ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರಸಪ್ರಶ್ನೆ ಸ್ಪರ್ಧೆಯಲ್ಲಿ 45ಕ್ಕೂ ಅಧಿಕ ತಂಡಗಳು ಭಾಗಿ
- ಚಿತ್ರಕಲಾ ಸ್ಪರ್ಧೆಯಲ್ಲಿ ಚಿತ್ರ ಬಿಡಿಸಿದ 5ರಿಂದ 10ನೇ ತರಗತಿ ಮಕ್ಕಳು
- ಡಿ.4ರಂದು ಸ್ಪೆಲ್ ಬೀ ಮತ್ತು ವರ್ಡ್ ವೈಂಡರ್, ಡಿ.5ರಂದು ನೃತ್ಯ ಸ್ಪರ್ಧೆ

ಬೆಂಗಳೂರು: ಬಾಲಭವನದಲ್ಲಿ ಬುಧವಾರ ಶಾಲಾ ಮಕ್ಕಳ ಕಲರವ, ಸಂಭ್ರಮ ವಾತಾವರಣವನ್ನೇ ಉಲ್ಲಾಸಗೊಳಿಸಿತು. ಡೆಕ್ಕನ್ ಹೆರಾಲ್ಡ್ ಇನ್ ಎಜುಕೇಶನ್ (ಡಿಎಚ್‌ಐಇ) ಹಮ್ಮಿಕೊಂಡಿದ್ದ 'ಡಿಎಚ್‌ಐಇ ಎಕ್ಸ್‌ಪ್ರೆಷನ್ಸ್' ಅಂತರ ಶಾಲಾ ಸ್ಪರ್ಧೆ ಇದಕ್ಕೆ ಕಾರಣವಾಗಿತ್ತು.

ಮೂರು ದಿನಗಳ ಈ ಹಬ್ಬದ ಮೊದಲ ದಿನ 350ಕ್ಕೂ ಅಧಿಕ ವಿದ್ಯಾರ್ಥಿಗಳು ಕೈಯಲ್ಲಿ ಬಣ್ಣ, ಪುಸ್ತಕ ಮತ್ತು ಇತರ ಸಾಮಗ್ರಿಗಳನ್ನು ಹಿಡಿದುಕೊಂಡು ಬಂದಿದ್ದರು.

ಚಿತ್ರಕಲಾ ಸ್ಪರ್ಧೆಯಲ್ಲಿ 5ನೇ ತರಗತಿಯಿಂದ 10ನೇ ತರಗತಿಯವರೆಗಿನ ಮಕ್ಕಳು ಭಾಗವಹಿಸಿದ್ದರು. ನೀರಿನೊಳಗಿನ ಜೀವನ, ಭಾರತದ ಉತ್ಸವಗಳ ಬಗ್ಗೆ ಕಿರಿಯ ವಿದ್ಯಾರ್ಥಿಗಳು ಚಿತ್ರ ಬಿಡಿಸಿದರು. ಸಮುದ್ರ ಜೀವಿಗಳು, ಹವಳದ ಬಂಡೆಗಳು, ದೇಶದ ವಿವಿಧ ಪ್ರದೇಶಗಳ ವಿವಿಧ ಹಬ್ಬಗಳ ದೃಶ್ಯಗಳು ಬಿಳಿ ಹಾಳೆ ಮೇಲೆ ಪಡಿಮೂಡಿದವು. ಭಾರತೀಯ ಪರಂಪರೆ ಮತ್ತು ಸಂಸ್ಕೃತಿ, ಸುಸ್ಥಿರ ಭವಿಷ್ಯಕ್ಕಾಗಿ ಹಸಿರು ಭಾರತದ ಬಗ್ಗೆ ಹಿರಿಯ ವಿದ್ಯಾರ್ಥಿಗಳು ಚಿತ್ರಾರ ಬಿಡಿಸಿದರು. ಸಾಂಸ್ಕೃತಿಕ ಗುರುತುಗಳು, ಪರಿಸರ ಕಾಳಜಿ ಚಿತ್ರಗಳ ಮೂಲಕ ಅರಳಿದವು.

ಚಿತ್ರಕಲಾ ಪರಿಷತ್ತಿನ ರೋಹಿಣಿ ಭಾರ್ವಾಡಿಯಾ ಮತ್ತು ತರಂಗ್ ಆಚಾರ್ಯ, ಕ್ಯಾಲಿಗ್ರಫಿ ತಜ್ಞೆ ಕಲ್ಪನಾ ಬ್ರಹ್ಮದೇಶಮ್ ಅವರು ಅತ್ಯುತ್ತಮ ಕಲಾಕೃತಿಗಳನ್ನು ನಿರ್ಣಯಿಸಿದರು. ಅವುಗಳ ವ್ಯಾಖ್ಯಾನ ಮತ್ತು ತಂತ್ರಗಳನ್ನು ಗಮನಿಸಿ ಪ್ರಶಸ್ತಿ ಯಾರಿಗೆ ಎಂದು ತೀರ್ಮಾನಿಸಲಾಯಿತು.

ರಸಪ್ರಶ್ನೆ: ಹಿರಿಯ ಮತ್ತು ಕಿರಿಯ ವಿಭಾಗದ ವಿದ್ಯಾರ್ಥಿಗಳಿಗೆ ಕ್ವಿಜ್ ಮಾಸ್ಟರ್, ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅರುಳ್‌ಮಣಿ ಅವರು ರಸಪ್ರಶ್ನೆ ನಡೆಸಿಕೊಟ್ಟರು. 45ಕ್ಕೂ ಅಧಿಕ ತಂಡಗಳು ಭಾಗವಹಿಸಿದ್ದವು. ಅವರಿಗೆ 20 ಪ್ರಶ್ನೆಗಳನ್ನು ನೀಡಿದರು. ಎರಡೂ ವಿಭಾಗದಲ್ಲಿ ಮೊದಲ ಸ್ಥಾನಗಳನ್ನು ಪಡೆದ ತಲಾ ಆರು ತಂಡಗಳು ಅಂತಿಮ ಸುತ್ತಿಗೆ ಆಯ್ಕೆಯಾದವು.

ಅಂತಿಮ ಸುತ್ತಿನಲ್ಲಿ ಕಿರಿಯರ ವಿಭಾಗದಲ್ಲಿ ಜಿದ್ದಾಜಿದ್ದಿನ ಪೈಪೋಟಿ ಕಂಡುಬಂತು. ಎರಡೆರಡು ತಂಡಗಳು ಒಂದೇ ರೀತಿ ಅಂಕಗಳಿಸಿ ಕ್ವಿಜ್ ಮಾಸ್ಟರ್‌ಗೆ ಸವಾಲೆಸೆದವು. ಎರಡನೇ ಸ್ಥಾನಕ್ಕೆ ಮತ್ತು ನಾಲ್ಕನೇ ಸ್ಥಾನಕ್ಕೆ ಹೆಚ್ಚುವರಿ ಪ್ರಶ್ನೆಗಳನ್ನು ನೀಡಿ ತಂಡಗಳನ್ನು ನಿರ್ಣಯಿಸಲಾಯಿತು.

ಸ್ವಿಟ್ಜರ್ ಲೆಂಡ್‌ನಲ್ಲಿರುವ ಆಲ್ಬರ್ಟ್ ಐನ್‌ಸ್ಟೈನ್ ಪ್ರತಿಮೆ ಗುರುತಿಸುವುದು, ಹಿಮ ಚಿರತೆ, ಸ್ಯಾಂಕಿ ಕೆರೆ ಪತ್ತೆಹಚ್ಚು-ವುದು ಮತ್ತು ಕಾಲ್ಬೆರಳುಗಳ ಸಂಖ್ಯೆಯ ಆಧಾರದ ಮೇಲೆ ಪ್ರಾಣಿಗಳನ್ನು ಗುರುತಿಸುವುದೂ ಸೇರಿದಂತೆ ಕುತೂಹಲಕಾರಿ ಪ್ರಶ್ನೆಗಳು ಮಕ್ಕಳ ಬುದ್ಧಿಮತ್ತೆಗೆ ಸವಾಲು ಎಸೆದವು.

ಸ್ಪರ್ಧಾ ತಂಡಗಳು ಉತ್ತರಿಸದ ಪ್ರಶ್ನೆಗಳು ಪ್ರೇಕ್ಷಕರತ್ತ ತಿರುಗಿದವು. ಉತ್ತರಿಸಿದವರಿಗೆ ಸ್ಥಳದಲ್ಲೇ ವಿಶೇಷ ಬಹುಮಾನ ನೀಡಲಾಯಿತು.

ಡಿ.4ರಂದು ಸ್ಪೆಲ್ ಬೀ ಮತ್ತು ವರ್ಡ್ ವೈಂಡರ್, ಡಿ.5ರಂದು ನೃತ್ಯ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

'ಡಿಎಚ್‌ಐಇ ಎಕ್ಸ್‌ಪ್ರೆಷನ್ಸ್' ಅಂತರ ಶಾಲಾ ಸ್ಪರ್ಧೆಯಲ್ಲಿ ಚಿತ್ರಕಲೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು —ಪ್ರಜಾವಾಣಿ ಚಿತ್ರಗಳು

ರಸಪ್ರಶ್ನೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು

ರಸಪ್ರಶ್ನೆ ವಿಜೇತರು

ಹಿರಿಯರ ವಿಭಾಗ

ಪ್ರಥಮ: ವೇದಾಂತ್ ಮತ್ತು ಹಿಮಾಂಶು, ಬಂಟ್ಸ್ ಸಂಘ ಆರ್‌ಎನ್‌ಎಸ್ ವಿದ್ಯಾನಿಕೇತನ
ದ್ವಿತೀಯ: ಪ್ರಣವ್ ಮತ್ತು ಶ್ರೀಕಿರಣ್, ಅಯ್ಯಪ್ಪ ಶಿಕ್ಷಣ ಕೇಂದ್ರ, ಚಿಕ್ಕಬಾಣಾವರ
ತೃತೀಯ: ಧೀರಜ್ ಮತ್ತು ಶಾನ್, ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್
ಚತುರ್ಥ: ವಿಹಾನ್ ಮತ್ತು ಅಭಿಷೇಕ್, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಕೋರಮಂಗಲ

ಕಿರಿಯರ ವಿಭಾಗ

ಪ್ರಥಮ: ಅಬಿನಾಶ್ ಮೊಹಪಾತ್ರೊ ಮತ್ತು ಟಿ. ಪ್ರಣವ್ - ಸೇಂಟ್ ಮೈಕೆಲ್ಸ್ ಹೈಸ್ಕೂಲ್
ದ್ವಿತೀಯ: ನಿಖಿಲ್ ಮತ್ತು ಅದ್ವೈತ್, ಚಿನ್ಮಯ ವಿದ್ಯಾಲಯ, ಹಲಸೂರು
ತೃತೀಯ: ಪಾರ್ಥ್ ಅಗರ್ವಾಲ್ ಮತ್ತು ಸಿದ್ಧಾರ್ಥ್ ಸಿ., ನ್ಯಾಷನಲ್ ಪಬ್ಲಿಕ್ ಸ್ಕೂಲ್, ಸಿಲ್ಕ್ ಬೋರ್ಡ್
ಚತುರ್ಥ: ವೈಷ್ಣವಿ ಎಸ್.ಕೆ. ಮತ್ತು ಪ್ರಣವ್ ಎಸ್., ನ್ಯಾಷನಲ್ ಪಬ್ಲಿಕ್ ಸ್ಕೂಲ್, ರಾಜಾಜಿನಗರ

ಚಿತ್ರಕಲಾ ಸ್ಪರ್ಧೆ ವಿಜೇತರು

ಹಿರಿಯರ ವಿಭಾಗ

ಪ್ರಥಮ: ನಿಧಿ ಎಸ್., ಎಂಬೆಸಿ ಪಬ್ಲಿಕ್ ಸ್ಕೂಲ್, ಮಾಗಡಿ ರಸ್ತೆ
ದ್ವಿತೀಯ: ತನ್ಮಯ್ ಎಚ್.ಆರ್., ಶ್ರೀ ಅಯ್ಯಪ್ಪ ಶಿಕ್ಷಣ ಕೇಂದ್ರ, ಚಿಕ್ಕಬಾಣಾವರ
ತೃತೀಯ: ನಿಯಾನಾಗಲ್, ಬಾಲ್ಡ್ವಿನ್ ಇಂಟರ್‌ನ್ಯಾಷನಲ್ ಸ್ಕೂಲ್
ಸಮಾಧಾನಕರ: ಹಲಸೂರು ಚಿನ್ಮಯ ವಿದ್ಯಾಲಯದ ಪೂರ್ಣಶ್ರೀ, ಹಾವನೂರು ಸೌಂದರ್ಯ ಶಾಲೆಯ ವರ್ಷಾ ಹೆಗಡೆ, ಎಂಟಿಬಿ ಜ್ಞಾನ ಜ್ಯೋತಿ ವಿದ್ಯಾನಿಕೇತನದ ಪ್ರೀತು ಪಿ., ಶ್ರೀವಿದ್ಯಾ ಮಂದಿರ ಎಜುಕೇಷನ್ ಸೊಸೈಟಿಯ ನಮ್ರತಾ ದಾಸರಿ, ಮಾರತ್‌ಹಳ್ಳಿಯ ಎಂವಿಜೆ ಇಂಟರ್‌ನ್ಯಾಷನಲ್ ಸ್ಕೂಲ್‌ನ ದಿವ್ಯಾಂಶಿ ಮಂಡಲ್

ಕಿರಿಯರ ವಿಭಾಗ

ಪ್ರಥಮ: ಆರುಷ್ ಆರ್., ನ್ಯಾಷನಲ್ ಪಬ್ಲಿಕ್ ಸ್ಕೂಲ್, ಯಶವಂತಪುರ
ದ್ವಿತೀಯ: ದಾನಂತಿ ಭಟ್ ಎಸ್., ಶ್ರೀ ಅಯ್ಯಪ್ಪ ಶೈಕ್ಷಣಿಕ ಕೇಂದ್ರ
ತೃತೀಯ: ವೈಭವಿ ಕೆ.ಎಂ., ವಿಎಲ್‌ಎಸ್ ಇಂಟರ್‌ನ್ಯಾಷನಲ್ ಸ್ಕೂಲ್
ಸಮಾಧಾನಕರ: ಕನಕಪುರ ಬ್ಲಾಸಮ್ ಸ್ಕೂಲ್‌ನ ಹರ್ಷಿಣಿ ಜಿ., ಯಶವಂತಪುರ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಯುವನ್ ಸಿಂಗ್, ಅತ್ತಿಗುಪ್ಪೆ ಬಂಟ್ಸ್ ಸಂಘ ಆರ್‌ಎನ್‌ಎಸ್‌ನ ತನಿಷ್ ಗರೋಡಿ, ಸೋಫಿಯಾ ಪ್ರೌಢಶಾಲೆಯ ವನಾಲಿಕಾ ಕೆ., ಅತ್ತಿಗುಪ್ಪೆ ಬಂಟ್ಸ್ ಸಂಘ ಆರ್‌ಎನ್‌ಎಸ್‌ನ ಇಶಾನ್ ಎನ್. ಶೆಟ್ಟಿ

ಆರ್‌ಸಿ, ಡಿಎಲ್ ಸ್ಮಾರ್ಟ್‌ಕಾರ್ಡ್‌ಗೆ ಚಾಲನೆ: ಸಚಿವ ರಾಮಲಿಂಗಾರೆಡ್ಡಿ

ದೇಶದಲ್ಲೇ ಮೊದಲ ಸ್ಮಾರ್ಟ್‌ಕಾರ್ಡ್ ಯಂತ್ರದ ಪರಿಚಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಾರಿಗೆ ಸಚಿವಾಲಯದ ಸೂಚನೆ ಮೇರೆಗೆ ಕ್ರಮ
- ಇಟಲಿಯಿಂದ ₹5.8 ಕೋಟಿ ವೆಚ್ಚದಲ್ಲಿ ಯಂತ್ರ ಖರೀದಿ



ರಾಮಲಿಂಗಾರೆಡ್ಡಿ

ಬೆಂಗಳೂರು: ದೇಶದಲ್ಲಿ ಇದೇ ಮೊದಲ ಬಾರಿಗೆ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ವಾಹನ ನೋಂದಣಿ ಪ್ರಮಾಣ ಪತ್ರ (ಆರ್‌ಸಿ) ಹಾಗೂ ಚಾಲನಾ ಅನುಜ್ಞಾ ಪತ್ರದ (ಡಿಎಲ್) ಸ್ಮಾರ್ಟ್‌ಕಾರ್ಡ್‌ಗಳನ್ನು ಮುದ್ರಿಸುವ ಯಂತ್ರವನ್ನು ಪರಿಚಯಿಸಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸಾರಿಗೆ ಇಲಾಖೆ ವತಿಯಿಂದ ಸ್ಮಾರ್ಟ್‌ಕಾರ್ಡ್‌ಗೆ ಬುಧವಾರ ಚಾಲನೆ ನೀಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಒಂದು ದೇಶ, ಒಂದು ಕಾರ್ಡ್ ಇರಬೇಕೆಂದು ಕೇಂದ್ರ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯವು ಎಲ್ಲ ರಾಜ್ಯಗಳಿಗೆ ಸೂಚಿಸಿತ್ತು. ಅದರಂತೆ ಒಂದೇ ಮಾದರಿಯಲ್ಲಿ ಸ್ಮಾರ್ಟ್‌ಕಾರ್ಡ್‌ಗಳನ್ನು ಮುದ್ರಿಸಿ ವಾಹನ ಮಾಲೀಕರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಮೊದಲು ಪಾಲಿವಿನೈಲ್ ಕ್ಲೋರೈಡ್ ಕಾರ್ಡ್‌ಗಳನ್ನು ವಿತರಿಸಲಾಗುತ್ತಿತ್ತು' ಎಂದು ಮಾಹಿತಿ ನೀಡಿದರು.

ಬುಧವಾರದಿಂದ ಆರ್‌ಸಿ ಸ್ಮಾರ್ಟ್‌ಕಾರ್ಡ್, ಡಿ.15ರಿಂದ ಡಿಎಲ್ ಸ್ಮಾರ್ಟ್‌ಕಾರ್ಡ್ ವಿತರಿಸಲಾಗುತ್ತದೆ ಎಂದರು.

ಸ್ಮಾರ್ಟ್‌ಕಾರ್ಡ್ ಯಂತ್ರವನ್ನು ಇಟಲಿಯಿಂದ ಸುಮಾರು ₹5.8 ಕೋಟಿ ವೆಚ್ಚದಲ್ಲಿ ಆಮದು ಮಾಡಲಾಗಿದೆ. ಪ್ರಸ್ತುತ ಎರಡು ಯಂತ್ರಗಳಿವೆ. ಶೀಘ್ರವೇ ಇನ್ನೊಂದು ಯಂತ್ರ ಬರಲಿದೆ. ಒಂದು ಯಂತ್ರದಲ್ಲಿ ದಿನಕ್ಕೆ 16 ಸಾವಿರ ಕಾರ್ಡ್‌ಗಳನ್ನು ಮುದ್ರಿಸಲು ಸಾಧ್ಯ ಎಂದು ಅವರು ಹೇಳಿದರು.

ಪ್ರತಿ ಸ್ಮಾರ್ಟ್‌ಕಾರ್ಡ್‌ಗೆ ಶುಲ್ಕ ₹200 ಸಂಗ್ರಹಿಸಲಾಗುತ್ತದೆ. ಆರ್‌ಸಿಯಲ್ಲಿ ನೋಂದಣಿ ಸಂಖ್ಯೆ, ನೋಂದಣಿ ದಿನಾಂಕ, ವಿಳಾಸ, ಸಿಂಧುತ್ವ ಅವಧಿ, ಜನ್ಮ ದಿನಾಂಕ, ರಕ್ತದ ಗುಂಪು, ಮೊಬೈಲ್ ಸಂಖ್ಯೆ, ತುರ್ತು ಸಂಪರ್ಕ, ವಾಹನ ಶೈಲಿ, ಆಸನ ಸಾಮರ್ಥ್ಯ ಸೇರಿದಂತೆ 25ಕ್ಕೂ ಹೆಚ್ಚಿನ ಮಾಹಿತಿ ಇರುತ್ತದೆ. ಜೊತೆಗೆ ಚಿಪ್ ಹಾಗೂ ಕ್ಯೂಆರ್ ಕೋಡ್‌ಗಳಿರಲಿವೆ ಎಂದು ವಿವರಿಸಿದರು.

ಸ್ಮಾರ್ಟ್‌ಕಾರ್ಡ್‌ಗಳನ್ನು ಸಾರಿಗೆ ಆಯುಕ್ತರ ಕಚೇರಿಯಲ್ಲಿನ ಕೇಂದ್ರೀಕೃತ ಮುದ್ರಣ ಸೌಲಭ್ಯ ವ್ಯವಸ್ಥೆಯಡಿಯಲ್ಲಿ ಸೇವಾದಾರರ ಮೂಲಕ ಸ್ಮಾರ್ಟ್‌ಕಾರ್ಡ್‌ಗಳನ್ನು ಮುದ್ರಣ ಮಾಡಿ, ಸಂಬಂಧಪಟ್ಟ ಕಚೇರಿಗೆ ಕಳುಹಿಸಲಾಗುವುದು. ಅಧಿಕಾರಿಗಳು ಪರಿಶೀಲನೆ ನಡೆಸಿದ ಬಳಿಕ ಸ್ಪೀಡ್‌ಪೋಸ್ಟ್ ಮೂಲಕ ಅರ್ಜಿದಾರರಿಗೆ ರವಾನಿಸಲಾಗುವುದು. ಬೆಂಗಳೂರಿನ ಅರ್ಜಿದಾರರಿಗೆ 48 ಗಂಟೆ ಹಾಗೂ ಇತರ ಜಿಲ್ಲೆಗಳ ಅರ್ಜಿದಾರರಿಗೆ ನಾಲ್ಕು ದಿನಗಳಲ್ಲಿ ಸ್ಮಾರ್ಟ್ ಕಾರ್ಡ್ ತಲುಪಿದೆ ಎಂದು ತಿಳಿಸಿದರು.

ಇಂಟಿಗ್ರೇಟೆಡ್ ವ್ಯವಸ್ಥೆ: ಮುನೀಶ್ ಮೌದ್ಗಿಲ್

ಇ-ಖಾತಾದಲ್ಲಿ ಯುಪಿಒಆರ್ ಮಾಹಿತಿ

ಪ್ರಜಾವಾಣಿ ವಾರ್ತೆ

ಲಭ್ಯವಿರುವ ಮಾಹಿತಿ
- ಮಾಲೀಕರ ವಿವರ
- ಆಸ್ತಿಯ ಚಿತ್ರ
- ಆಸ್ತಿಯ ಜಿಪಿಎಸ್ ಅಂಕಿಗಳು
- ಆಸ್ತಿಯ ತೆರಿಗೆ, ಬಳಕೆ ವಿವರ
- ಆಸ್ತಿ ಮಾಲೀಕತ್ವ ಪಡೆದಿರುವ ದಾಖಲೆ ಸಂಖ್ಯೆ
- ಆಸ್ತಿಯ ಎಲ್ಲ ವಿವರ
- ಮಾಲೀಕರ ಚಿತ್ರ
- ಆಸ್ತಿಯ ಡಿಜಿಟಲ್ ಮ್ಯಾಪ್, ಸ್ಥಳದ ಚಿತ್ರ
- ಬೆಸ್ಕಾಂ ಮೀಟರ್ ಸಂಖ್ಯೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿನ ಆಸ್ತಿಗಳ ಇ-ಖಾತಾದಲ್ಲಿ ನಗರ ಆಸ್ತಿ ಮಾಲೀಕತ್ವದ ದಾಖಲೆಗಳನ್ನು (ಯುಪಿಒಆರ್) ಅಳವಡಿಸುವ 'ಇಂಟಿಗ್ರೇಟೆಡ್ ಇ-ಖಾತಾ ವ್ಯವಸ್ಥೆ'ಯನ್ನು ಜಾರಿ ಮಾಡಲಾಗಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ನಗರ ಸಮೀಕ್ಷೆಯಲ್ಲಿ ಯುಪಿಒಆರ್‌ನಲ್ಲಿ ಆಸ್ತಿ ನಕ್ಷೆಗಳು, ಡ್ರೋನ್ ಮೂಲಕ ಪಡೆದುಕೊಂಡ ಓವರ್-ವ್ಯೂ ಚಿತ್ರಗಳನ್ನು ಜಿಬಿಎ ನೀಡುತ್ತಿರುವ ಇ-ಖಾತಾ ವ್ಯವಸ್ಥೆಯೊಂದಿಗೆ ಸಂಯೋಜಿಸಲಾಗಿದೆ. ನಗರದಲ್ಲಿ ಸುಮಾರು ಎರಡು ವರ್ಷಗಳಿಂದ ಯುಪಿಒಆರ್ ಯೋಜನೆಯಡಿ ನಿರ್ವಹಿಸಲಾಗಿರುವ ಕಾರ್ಯವನ್ನು ಇ-ಖಾತಾ ವ್ಯವಸ್ಥೆಗೆ ಸಂಯೋಜಿಸಲು ಕಂದಾಯ ಇಲಾಖೆ ಅಧಿಕಾರಿಗಳು ಮಾಡಿರುವ ಕಾರ್ಯ ಶ್ಲಾಘನೀಯ ಎಂದರು.

ಇ-ಖಾತಾದಲ್ಲಿರುವ ನಿಖರ ಜಿಪಿಎಸ್ ಮಾಹಿತಿ, ಯುಪಿಒಆರ್ ನಕ್ಷೆ ಮತ್ತು ಚಿತ್ರಗಳನ್ನು ಜೋಡಿಸುವುದು ಅತ್ಯಂತ ಪ್ರಮುಖವಾಗಿದೆ. ಈಗಾಗಲೇ ಸುಮಾರು ಒಂದು ಲಕ್ಷ ಸಂಯೋಜಿತ ಇ-ಖಾತಾಗಳನ್ನು ನೀಡಲಾಗಿದ್ದು, ಪ್ರತಿದಿನವೂ ಈ ಸಂಖ್ಯೆ ಮತ್ತಷ್ಟು ಹೆಚ್ಚಿಸಲು ಕ್ರಮವಹಿಸಲಾಗುವುದು ಎಂದು ಹೇಳಿದರು.

ಜಿಬಿಎ ವ್ಯಾಪ್ತಿಯಲ್ಲಿ ಸುಮಾರು 9 ಲಕ್ಷ ಅಂತಿಮ ಇ-ಖಾತಾ ನೀಡಲಾಗಿದ್ದು, ಪ್ರತಿದಿನ ಸರಾಸರಿ 2,500 ಇ-ಖಾತಾಗಳನ್ನು ನೀಡಲಾಗುತ್ತಿದೆ. ಕಾಯುವ ಅವಧಿ ಸರಾಸರಿ ಎರಡು ದಿನ ಎಂದು ಮಾಹಿತಿ ನೀಡಿದರು.

ಕೆಎಸ್‌ಆರ್‌ಟಿಸಿಗೆ ಭೇಟಿ ನೀಡಿದ ಜರ್ಮನ್ ನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜರ್ಮನಿ ಸರ್ಕಾರದ ಫೆಡರಲ್ ಸಚಿವಾಲಯ ಎಕನಾಮಿಕ್ ಕೋ ಆಪರೇಶನ್ ಆ್ಯಂಡ್ ಡೆವಲಪ್‌ಮೆಂಟ್‌ನ (ಬಿಎಂಝಡ್) ಉನ್ನತ ಮಟ್ಟದ ನಿಯೋಗವು ಭಾರತದ ಪ್ರವಾಸದ ಭಾಗವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಭೇಟಿ ನೀಡಿತು.

ದೃಷ್ಟಿ ದೋಷ ಹೊಂದಿದ ಪ್ರಯಾಣಿಕರ ಅನುಕೂಲಕ್ಕಾಗಿ ವಿನ್ಯಾಸಗೊಳಿಸಲಾದ 'ಧ್ವನಿ ಸ್ಪಂದನ – ಆನ್ ಬೋರ್ಡ್' ಬಗ್ಗೆ ಮಾಹಿತಿ ಪಡೆದರು. ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಮಾಹಿತಿ ನೀಡಿದರು.

ನಿಯೋಗದಲ್ಲಿ ಬಿಎಂಝಡ್ ಮಹಾ ನಿರ್ದೇಶಕಿ ಕ್ರಿಸ್ಟೀನ್ ಟೋಟ್‌ರ್ಝ್ಕಿ, ಬಾರ್ಬರಾ ಶಾಫರ್, ಕ್ರಿಸ್ಟೋಫ್ ವಾನ್ ಸ್ಟೆಕೋವ್, ದೆಹಲಿಯಲ್ಲಿರುವ ಜರ್ಮನ್ ರಾಯಭಾರ ಕಚೇರಿಯ ಗೊಟ್‌ಫ್ರೈಡ್ ವಾನ್ ಗೆಮಿಂಗನ್, ಪಾಮೇಲಾ ಬೈಜಲ್, ಜೋಹಾನ್ಸ್ ಶ್ನೈಡರ್, ಶೀನಂ ಪುರಿ, ಜಾಸ್ಮಿನ್ ಕೌರ್, ಜಿಐಝಡ್ ನಿರ್ದೇಶಕಿ ಜುಲಿ ರೆವಿಯರ್ ಉಪಸ್ಥಿತರಿದ್ದರು.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ–561 203
ಸಂ.: DPA/TP/CLU/32/2025-26 ದಿನಾಂಕ: 03.12.2025

"ತಿದ್ದುಪಡಿ ಪ್ರಕಟಣೆ"

ದಿನಾಂಕ: 23–09–2025 ರಂದು ದಿನಪತ್ರಿಕೆಗಳಲ್ಲಿ ಪ್ರಚುರಪಡಿಸಲಾಗಿರುವ ಪ್ರಕಟಣೆ ಸಂಖ್ಯೆ: DPA/TP/CLU/32/2025-26 ರಲ್ಲಿ **'ಕಸಬಾ ಹೋಬಳಿ'** ಎಂದಿರುವುದನ್ನು ಬದಲಾಗಿ **'ಮಧುರೆ ಹೋಬಳಿ'** ಎಂದು ತಿದ್ದುಪಡಿ ಅಳವಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಸಾಂಸ್ಕೃತಿಕ ಮುನ್ನೋಟ

'ಶ್ರೀ ಮಣಿಕಲ್ಲು ಕ್ಷೇತ್ರ ಮಹಾತ್ಮೆ' ಯಕ್ಷಗಾನ ಪ್ರದರ್ಶನ ನಾಳೆ

ಬೆಂಗಳೂರು: ಶ್ರೀ ನಂದಿಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿಯಿಂದ ಇದೇ 5ರಂದು ಚಂದ್ರಾ ಲೇಔಟ್‌ನ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ 'ಶ್ರೀ ಮಣಿಕಲ್ಲು ಕ್ಷೇತ್ರ ಮಹಾತ್ಮೆ' ಯಕ್ಷಗಾನ ಪ್ರದರ್ಶನ ಆಯೋಜಿಸಲಾಗಿದೆ.

ಹಿಮ್ಮೇಳದಲ್ಲಿ ಭಾಗವತರಾಗಿ ಸುಧೀರ್ ಭಟ್ ಪೆರ್ಡೂರು, ಪ್ರಭಾಕರ್ ಹೆಗಡೆ ಸಾಣ್ಮನೆ, ಸುಬ್ರಹ್ಮಣ್ಯ ಹೆಗಡೆ ಮೂರೂರು (ಮದ್ದಳೆ), ಗುರುದತ್ತ ಪಡಿಯಾರ್ (ಚಂಡೆ), ಮುಮ್ಮೇಳದಲ್ಲಿ ಮಾರುತಿ ನಾಯ್ಕ ಚಿಕ್ಕನಕೋಡು, ಶ್ರೀಕಾಂತ್ ಪೂಜಾರಿ ರಟ್ಟಾಡಿ, ಯೋಗೀಶ್ ಪೂಜಾರಿ ನೇರಳಕಟ್ಟೆ, ಪ್ರವೀಣ್ ಬಿ. ಸ್ತ್ರೀ ವೇಷ ಧರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಾಂದರ್ಭಿಕ ಚಿತ್ರ

ಸಂಗೀತ ಕಛೇರಿ 6ಕ್ಕೆ

ತ್ರಿಚೂರ್ ಸಹೋದರರು

ಬೆಂಗಳೂರು: ನಾಲ್ಕನೇ ಆವೃತ್ತಿಯ ನಾಡ ಸಂಭ್ರಮದ ಅಂಗವಾಗಿ ನಡತೂರ್ ಫೌಂಡೇಷನ್ ವತಿಯಿಂದ ಇದೇ 6ರಂದು ಎನ್‌ಎಂಕೆಆರ್‌ವಿ ಆವರಣದ ಮಂಡಲ ಮಂಟಪದಲ್ಲಿ ತ್ರಿಚೂರ್ ಸಹೋದರರಾದ ಟಿ.ಎಸ್. ಶ್ರೀಕೃಷ್ಣಮೋಹನ್ ಹಾಗೂ ಟಿ.ಎಸ್. ರಾಮ್‌ಕುಮಾರ್ ಅವರು ಭಾರತೀಯ ಶಾಸ್ತ್ರೀಯ ಸಂಗೀತ ಕಛೇರಿ ಪ್ರಸ್ತುತಪಡಿಸಲಿದ್ದಾರೆ.

ಡಿ. 6ರಂದು ಸಂಜೆ 6.30ಕ್ಕೆ ಸಂಗೀತ ಕಛೇರಿ ನಡೆಯಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದು ಪ್ರಕಟಣೆ ತಿಳಿಸಿದೆ. **ಮಾಹಿತಿಗೆ: 9740002383.**

'ಡಾನ್ಸ್ ಕರ್ಮಾ' ಭವ್ಯ ನೃತ್ಯೋತ್ಸವ 6ರಿಂದ

ಬೆಂಗಳೂರು: ನಿರುಪಮಾ ರಾಜೇಂದ್ರ ಮತ್ತು ಟಿ.ಡಿ. ರಾಜೇಂದ್ರ ಅವರ ನೇತೃತ್ವದಲ್ಲಿ ಇದೇ 6 ಮತ್ತು 7ರಂದು ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಡಾ. ಪ್ರೇಮಚಂದ್ರ ಸಾಗರ್ ಕಲಾಕ್ಷೇತ್ರದಲ್ಲಿ 500ಕ್ಕೂ ಹೆಚ್ಚು ಕಲಾವಿದರಿಂದ 'ಡಾನ್ಸ್ ಕರ್ಮಾ–2025' ಭವ್ಯ ನೃತ್ಯೋತ್ಸವ ಪ್ರದರ್ಶನ ನಡೆಯಲಿದೆ.

ಈ ನೃತ್ಯೋತ್ಸವದಲ್ಲಿ ಪಾಲ್ಗೊಳ್ಳುವ ಕಲಾವಿದರು ಕಥಕ್ ಮತ್ತು ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ. ಇದರ ಜೊತೆಗೆ ವಿವಿಧ ವೇಷಭೂಷಣಗಳು, ಮನಸೂರೆಗೊಳ್ಳುವ ನೃತ್ಯ ಸಂಯೋಜನೆ ಹಾಗೂ ಅದ್ಭುತ ಬೆಳಕು ವಿನ್ಯಾಸ ಒಳಗೊಂಡಿದೆ. ಪ್ರದರ್ಶನವು ಬೆಳಿಗ್ಗೆ 10ರಿಂದ ಮಧ್ಯಾಹ್ನ 12 ಹಾಗೂ ಸಂಜೆ 5.30ರಿಂದ ರಾತ್ರಿ 8ರ ವರೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ 7ಕ್ಕೆ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗ ತಂಡದಿಂದ ಡಿ. 7ರಂದು ಎನ್.ಆರ್. ಕಾಲೊನಿಯಲ್ಲಿರುವ ಡಾ.ಸಿ. ಅಶ್ವತ್ ಕಲಾ-ಭವನದಲ್ಲಿ ಸಂಜೆ 5 ಮತ್ತು 7ಕ್ಕೆ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ ನಡೆಯಲಿದೆ. ಈ ನಾಟಕವನ್ನು ರಾಜೇಂದ್ರ ಕಾರಂತ ರಚಿಸಿದ್ದು, ಅಶೋಕ್ ಬಿ. ಅವರು ನಿರ್ದೇಶಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ–2, ಬೆಂಗಳೂರು
ಸತ್ಯಮೇವ ಜಯತೇ
4ನೇ ಮಹಡಿ, ಬಿಎಸ್‌ಎನ್‌ಎಲ್ ಬಿಲ್ಡಿಂಗ್, ಟೆಲಿಫೋನ್ ಹೌಸ್, ರಾಜಭವನ್ ರಸ್ತೆ, ಬೆಂಗಳೂರು–560 001.

ಮಾರಾಟ ಉದ್ಘೋಷಣೆ ಮತ್ತು ಇ- ಹರಾಜು ಸೂಚನೆ ಫಾರಂ ನಂ–22
ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲ್‌ನ ನಿಯಮ 38 ಮತ್ತು 52(2)ಅನ್ನು ಓದಿಕೊಂಡಂತೆ ರಿಕವರಿ ಆಫ್ ಡೆಟ್ಸ್ ಅಂಡ್ ಬ್ಯಾಂಕರಪ್ಟ್ಸಿ ಆಕ್ಟ್ 1993ರ ಅನ್ವಯ ಮಾರಾಟ ಪ್ರಕಟಣೆ
ಆರ್‌ಸಿ ನಂ. 57/2024 ಒ.ಎ. ನಂ.526/2020

ಕರ್ನಾಟಕ ಬ್ಯಾಂಕ್ ಲಿ., ಸಾರಕ್ಕಿ ಲೇಔಟ್ ಶಾಖೆ, ಬೆಂಗಳೂರು ....ಸರ್ಟಿಫಿಕೇಟ್ ಹೋಲ್ಡರ್ ಬ್ಯಾಂಕ್
V/s.
ಶ್ರೀಮತಿ ಹೇಮಲತಾ ಬಿ., ಮತ್ತು ಇನ್ನೊಬ್ಬರು ....ಸರ್ಟಿಫಿಕೇಟ್ ಡೆಟರ್ಸ್
ಗೆ: **1.ಶ್ರೀಮತಿ ಹೇಮಲತಾ ಬಿ** W/o.. ಕೃಷ್ಣಪ್ಪ ಬಿ., ನಂ. 132, ಹಳೆ ನಂ. 51, 14ನೇ ಎ ಅಡ್ಡ ರಸ್ತೆ, ಕರಿಸಂದ್ರ, ಬನಶಂಕರಿ 2ನೇ ಹಂತ, ಬೆಂಗಳೂರು – 560 070, **2. ಶ್ರೀ ಕೃಷ್ಣಪ್ಪ ಬಿ.,** S/o. ಬಯ್ಯಪ್ಪ, ನಂ. 132, ಹಳೆ ನಂ. 51, 14ನೇ ಎ ಅಡ್ಡ ರಸ್ತೆ, ಕರಿಸಂದ್ರ, ಬನಶಂಕರಿ 2ನೇ ಹಂತ, ಬೆಂಗಳೂರು – 560 070, ...ಸರ್ಟಿಫಿಕೇಟ್ ಡೆಟರ್ಸ್

ಕೆಳಗೆ ಸೂಚಿಸಿರುವ ಆಸ್ತಿಯನ್ನು ವೆಬ್‌ಸೈಟ್ **karnataka@bankauctions.in** ಮುಖಾಂತರ ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್ ಮೂಲಕ ದಿನಾಂಕ **09.01.2026** ರಂದು ಬ್ಯಾಂಕಿಗೆ ಬರಬೇಕಾದ ಬಾಕಿ ಮೊತ್ತ ರೂ.6,95,61,912/- (ರೂಪಾಯಿ ಆರು ಕೋಟಿ ತೊಂಬತ್ತೈದು ಲಕ್ಷ ಅರವತ್ತೊಂದು ಸಾವಿರದ ಒಂಬೈನೂರ ಹನ್ನೆರಡು ಮಾತ್ರ) ಮತ್ತು ದಿನಾಂಕ 14.11.2025ರಂತೆ ಮತ್ತು ದಿನಾಂಕ 15.11.2025 ರಿಂದ ಖರ್ಚು ಮತ್ತು ಬಡ್ಡಿಯನ್ನು ಹೊರತುಪಡಿಸಿ ತಹಲ್‌ವರೆಗಿನ ಮೊತ್ತ ಹಾಗೂ ವೆಚ್ಚ ಇತ್ಯಾದಿಗಳನ್ನು ರಿಕವರಿ ಸರ್ಟಿಫಿಕೇಟ್ ಆರ್‌ಸಿ ನಂ. 57/2024 ಮತ್ತು ಒ.ಎ. ನಂ. 526/2020 ರಂತೆ ವಸೂಲಿಮಾಡಲು ಮಾರಾಟ ಮಾಡಲಾಗುವುದು.

ಹರಾಜು ಮಾರಾಟದ ದಿನಾಂಕ ಮತ್ತು ಸಮಯ	ದಿನಾಂಕ 09.01.2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ಘಂಟೆಯ ನಡುವೆ
ಮೀಸಲು ಬೆಲೆ	ಐಟಂ ನಂ. 1ರಲ್ಲಿನ ಆರ್‌ಸಿಯ 1ನೇ ಷೆಡ್ಯೂಲ್‌ಗೆ ರೂ.1,25,00,000/- ಐಟಂ ನಂ. 1ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.40,00,000/- ಐಟಂ ನಂ. 2ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.65,00,000/- ಐಟಂ ನಂ. 3ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.1,62,00,000/- ಐಟಂ ನಂ. 4ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.90,00,000/- ಐಟಂ ನಂ. 6ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.70,00,000/-
ಮುಂಗಡ ಠೇವಣಿ (ಇಎಂಡಿ)	ಐಟಂ ನಂ. 1ರಲ್ಲಿನ ಆರ್‌ಸಿಯ 1ನೇ ಷೆಡ್ಯೂಲ್‌ಗೆ ರೂ.12,50,000/- ಐಟಂ ನಂ. 1ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.4,00,000/- ಐಟಂ ನಂ. 2ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.6,50,000/- ಐಟಂ ನಂ. 3ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.16,20,000/- ಐಟಂ ನಂ. 4ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.9,00,000/- ಐಟಂ ನಂ. 6ರಲ್ಲಿನ ಆರ್‌ಸಿಯ 2ನೇ ಷೆಡ್ಯೂಲ್‌ಗೆ ರೂ.7,00,000/-
ಬಿಡ್ ಮೊತ್ತದ ಹೆಚ್ಚಿಸುವಿಕೆ	ರೂ.2,00,000/-(ರೂಪಾಯಿ ಎರಡು ಲಕ್ಷ ಮಾತ್ರ) ಪ್ರತಿಯೊಂದು ಆಸ್ತಿಗೆ
ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ 06.01.2026 ರಂದು ರಾತ್ರಿ 11.59 ಗಂಟೆ ಒಳಗೆ

ಆಸ್ತಿಯ ವಿವರ: ಮೇಲ್ಕಂಡ ಇ- ಹರಾಜಿನಲ್ಲಿ ಮಾರಾಟ ಮಾಡಲ್ಪಡುವ ಆಸ್ತಿಗಳ ವಿವರ:

ಐಟಂ ನಂ. 1: ಆರ್‌ಸಿ ಯಲ್ಲಿರುವ 1ನೇ ಷೆಡ್ಯೂಲ್ : ಕರ್ನಾಟಕ, ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಸೋಮನಹಳ್ಳಿ ಗ್ರಾಮ, ಇಲ್ಲಿ ಸರ್ವೆ ನಂ. 99/2ರಲ್ಲಿರುವ 0.22 ಗುಂಟೆ ಕೃಷಿ ಆಸ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಕಾಲುವೆ ಮತ್ತು ಶ್ರೀ ಪೂಜಾರಿ ಮಾರಪ್ಪನವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ : ಸರ್ವೆ ನಂ. 100/2 ರಲ್ಲಿರುವ ಶ್ರೀಮತಿ ಹೇಮಲತಾ ಬಿ ಇವರಿಗೆ ಸೇರಿದ ಜಮೀನು, ಉತ್ತರಕ್ಕೆ: ಶ್ರೀ ನಂಜುಂಡ ಶೆಟ್ಟಿಯವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ : ಶ್ರೀ ಗೋವಿಂದ ರಾವ್‌ರವರಿಗೆ ಸೇರಿದ ಜಮೀನು,

ಐಟಂ ನಂ. 1:ಆರ್‌ಸಿ ಯಲ್ಲಿರುವ 2ನೇ ಷೆಡ್ಯೂಲ್ : ಕರ್ನಾಟಕ, ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಸೋಮನಹಳ್ಳಿ ಗ್ರಾಮ, ಇಲ್ಲಿ ಸರ್ವೆ ನಂ. 98/2ರಲ್ಲಿರುವ 7 ಗುಂಟೆ ಕೃಷಿ ಆಸ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ರಘುನಾಥ್ ರಾವ್‌ರವರಿಗೆ ಸೇರಿದ ಸರ್ವೆ ನಂ. 98/3ರಲ್ಲಿರುವ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 98/1 ರಲ್ಲಿರುವ ಜಮೀನು, ಉತ್ತರಕ್ಕೆ: ಸರ್ವೆ ನಂ. 100/2 ರಲ್ಲಿರುವ ಜಮೀನು, ದಕ್ಷಿಣಕ್ಕೆ: ಶ್ರೀ ವಿ. ಸೀತಾರಾಮ್‌ರವರಿಗೆ ಸೇರಿದ ಜಮೀನು,

ಐಟಂ ನಂ. 2:ಆರ್‌ಸಿ ಯಲ್ಲಿರುವ 2ನೇ ಷೆಡ್ಯೂಲ್ : ಕರ್ನಾಟಕ, ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಸೋಮನಹಳ್ಳಿ ಗ್ರಾಮ, ಇಲ್ಲಿ ಸರ್ವೆ ನಂ. 98/5ರಲ್ಲಿರುವ 2.00 ಗುಂಟೆ ಖರಾಬ್ ಜಮೀನು ಹೊರತುಪಡಿಸಿ 11 ಗುಂಟೆ ಕೃಷಿ ಆಸ್ತಿಗೆ ಚಕ್ಕುಬಂದಿ : ಪೂರ್ವಕ್ಕೆ: ಶ್ರೀ ಪೂಜಾರಿ ಮಾರಪ್ಪನವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ: ರಘುನಾಥ್ ರಾವ್‌ರವರಿಗೆ ಸೇರಿದ ಜಮೀನು, ಉತ್ತರಕ್ಕೆ: ಶ್ರೀ ಸದಾಶಿವ ರಾವ್‌ರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 97/1 ರಲ್ಲಿರುವ ಜಮೀನು,

ಐಟಂ ನಂ. 3:ಆರ್‌ಸಿ ಯಲ್ಲಿರುವ 2ನೇ ಷೆಡ್ಯೂಲ್ : ಕರ್ನಾಟಕ, ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಸೋಮನಹಳ್ಳಿ ಗ್ರಾಮ, ಇಲ್ಲಿ ಸರ್ವೆ ನಂ. 95/2ಎರಲ್ಲಿರುವ 16.00 ಗುಂಟೆ ಮತ್ತು ಸರ್ವೆ ನಂ. 96/1ಎ ನಲ್ಲಿರುವ 13.08 ಗುಂಟೆ ಒಟ್ಟು 29.08 ಗುಂಟೆ ಕೃಷಿ ಆಸ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ರಾಜಾ ಕಾಲುವೆ, ಪಶ್ಚಿಮಕ್ಕೆ: ಎಸ್. ವಿ. ನಂಜುಂಡ ಶೆಟ್ಟಿಯವರಿಗೆ ಸೇರಿದ ಜಮೀನು, ಉತ್ತರಕ್ಕೆ: ಶ್ರೀ ವಿ .ಸೀತಾರಾಮು ರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ: ಎಸ್. ವಿ. ನಂಜುಂಡ ಶೆಟ್ಟಿಯವರಿಗೆ ಸೇರಿದ ಜಮೀನು,

ಐಟಂ ನಂ. 4:ಆರ್‌ಸಿ ಯಲ್ಲಿರುವ 2ನೇ ಷೆಡ್ಯೂಲ್ : ಕರ್ನಾಟಕ, ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಸೋಮನಹಳ್ಳಿ ಗ್ರಾಮ, ಇಲ್ಲಿ ಸರ್ವೆ ನಂ. 95/2 ರಲ್ಲಿರುವ 16.08ಗುಂಟೆ ಕೃಷಿ ಆಸ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ವೆಂಡಿಯವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ: ಅಚ್ಚುತ ರಾವ್‌ರವರಿಗೆ ಸೇರಿದ ಜಮೀನು, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ಎಸ್. ವಿ. ನಂಜುಂಡ ಶೆಟ್ಟಿಯವರಿಗೆ ಸೇರಿದ ಜಮೀನು.

ಐಟಂ ನಂ. 6:ಆರ್‌ಸಿ ಯಲ್ಲಿರುವ 2ನೇ ಷೆಡ್ಯೂಲ್ : ಕರ್ನಾಟಕ, ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಸೋಮನಹಳ್ಳಿ ಗ್ರಾಮ, ಇಲ್ಲಿ ಸರ್ವೆ ನಂ. 104/1 ರಲ್ಲಿರುವ 12.00 ಗುಂಟೆ ಕೃಷಿ ಆಸ್ತಿಗೆ ಚಕ್ಕುಬಂದಿ : ಪೂರ್ವಕ್ಕೆ: ಜೆ. ಕೃಷ್ಣ ಮೂರ್ತಿಯವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ: ಶ್ರಿ ಸಾದಪ್ಪನವರಿಗೆ ಸೇರಿದ ಜಮೀನು, ಉತ್ತರಕ್ಕೆ: ವೆಂಡರ್‌ರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ: ಶ್ರೀಮತಿ ನಂಜಮ್ಮನವರಿಗೆ ಸೇರಿದ ಜಮೀನು.

ಮಾರಾಟದ ನಿಯಮ ಮತ್ತು ನಿಬಂಧನೆಗಳಿಗಾಗಿ ಸೇವಾ ಪೂರೈಕೆದಾರರಾದ M/s. 4closure ಇವರ ವೆಬ್‌ಸೈಟ್ **karnataka@bankauctions.in** ಅನ್ನು ಸಂದರ್ಶಿಸಬಹುದು. ಹೆಚ್ಚಿನ ವಿವರಗಳಿಗೆ (ಸಂಪರ್ಕಿಸಿ : ಶ್ರೀ ಜಯಪ್ರಕಾಶ್ ರೆಡ್ಡಿ –8142000809/81420000064) e-mail Id : dinesh@bankauctions.in, info@bankauctions.in. ಹೆಚ್ಚಿನ ವಿವರಗಳಿಗೆ **ಶ್ರೀ ಇಂದ್ಲ ಕಿರಣ್ ಕುಮಾರ್, ಹಿರಿಯ ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ ಲಿ., ಸಾರಕ್ಕಿ ಲೇಔಟ್ ಶಾಖೆ, (ಸಂಪರ್ಕಿಸುವ ಸಂಖ್ಯೆ :9880865677 (ಬಿಎಂ), 8951970693 (ಎಬಿಎಂ) ಶಾಖೆಯ e-Mail ID : blr.sarakki @ktkbank.com)**

ನನ್ನ ಸಹಿಯೊಂದಿಗೆ ಮತ್ತು ನ್ಯಾಯಾಧಿಕರಣದ ಮೊಹರಿನೊಂದಿಗೆ ದಿನಾಂಕ 17.11.2025ರಂದು ನೀಡಲಾಗಿದೆ.

ಸಹಿ/-
ವಸೂಲಾತಿ ಅಧಿಕಾರಿ–1,
ಸಾಲವಸೂಲಾತಿ ನ್ಯಾಯಾಧಿಕರಣ– 2, ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಕೆಳಗೆ ತಿಳಿಸಲಾದ ಐಟಂ 1 ಮತ್ತು 2 ರ ಶೆಡ್ಯೂಲ್ ಆಸ್ತಿಗಳನ್ನು ಅದರ ಮಾಲೀಕರಾದ ಶ್ರೀಮತಿ ಭೀಮವರಪು ನಾಗರಾಜ ಕುಮಾರಿ ಅವರಿಂದ ಉತ್ತಮ ಬೆಲೆಗೆ ಖರೀದಿಸಲು ಮಾತುಕತೆ ನಡೆಸಿದ್ದಾರೆ. ಶ್ರೀಮತಿ ಭೀಮವರಪು ನಾಗರಾಜ ಕುಮಾರಿ, ಇವರ ವಯಸ್ಸು ಸುಮಾರು 64 ವರ್ಷ, ಇವರು ಶ್ರೀ ಬಸಿವಿ ರೆಡ್ಡಿ ಅವರ ಧರ್ಮ ಪತ್ನಿ, ಶ್ರೀ ಅವುತು ಕುಲಂದ ರೆಡ್ಡಿ ಅವರ ಪುತ್ರಿ ಆಗಿದ್ದು ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆ – 522202 ರಲ್ಲಿ ವಾಸವಿದ್ದಾರೆ.

ಶೆಡ್ಯೂಲ್ ಆಸ್ತಿ ಮತ್ತು ಅದರ ಮಾರಾಟದಲ್ಲಿ ಯಾವುದೇ ರೀತಿಯ ಹಕ್ಕು, ಶೀರ್ಷಿಕೆ, ಸ್ವಾಮ್ಯ ಅಥವಾ ಆಸಕ್ತಿ ಅಥವಾ ಆಕ್ಷೇಪಣೆಯನ್ನು ಹೊಂದಿರುವ ಅಥವಾ ಯಾವುದೇ ವ್ಯಕ್ತಿ/ಗಳು ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ಅಥವಾ ಯಾವುದೇ ಇತರ ಪ್ರಾಧಿಕಾರಗಳು ಈ ಜಾಹೀರಾತು ಪ್ರಕಟಿಸಿದ ಇಪ್ಪತ್ತೊಂದು ದಿನಗಳ ಒಳಗಾಗಿ ಈ ಕೆಳ ಸಹಿ ಮಾಡಿದವರಿಗೆ ದಾಖಲೆ ಪುರಾವೆಗಳ ಬೆಂಬಲದೊಂದಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಇಲ್ಲವಾದಲ್ಲಿ ಎಲ್ಲಾ ಹಕ್ಕು ಅಥವಾ ಕ್ಷೇಮಗಳು ಅಥವಾ ಕ್ಲೈಮ್‌ಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ಮನ್ನಾ ಮಾಡಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ನನ್ನ ಕಕ್ಷಿದಾರರು ಶೆಡ್ಯೂಲ್ ಆಸ್ತಿಯ ವಿರುದ್ಧ ಯಾವುದೇ ಮಾನ್ಯ ಕ್ಲೈಮ್‌ಗಳು ಅಸ್ತಿತ್ವದಲ್ಲಿಲ್ಲ ಎಂಬಂತೆ ಶೆಡ್ಯೂಲ್ ಆಸ್ತಿಯ ಖರೀದಿಯನ್ನು ಮುಂದುವರಿಸುತ್ತಾರೆ.

ವಿವರ ಪಟ್ಟಿಯ ಸ್ವತ್ತು

ಐಟಂ ಸಂಖ್ಯೆ 1 : ಈ ಸಮಗ್ರ ಸ್ಥಿರಾಸ್ತಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕು ಕಸಬಾ ಹೋಬಳಿ ದಂಡುಪಾಳ್ಯ ಗ್ರಾಮದ ಹೊಸ ಸರ್ವೆ ಸಂಖ್ಯೆ 201/5 (ಈ ಮೊದಲು ಸರ್ವೆ ಸಂಖ್ಯೆ 201/1 ರ ಭಾಗ) ಈ ಒಣ ಭೂಮಿಯ ವಿಸ್ತೀರ್ಣವು 26 ಗುಂಟೆಯಷ್ಟು ಅಳತೆ ಇದ್ದು ಇದಕ್ಕೆ ಚಕ್ಕು ಬಂದಿ
ಪೂರ್ವಕ್ಕೆ : ಸರ್ವೆ ಸಂಖ್ಯೆ 198ರ ಖಾಸಗಿ ಆಸ್ತಿ
ಪಶ್ಚಿಮಕ್ಕೆ : ರಸ್ತೆ
ಉತ್ತರಕ್ಕೆ : ಶ್ರೀಮತಿ ಭೀಮವಾರಪು ನಾಗರಾಜ ಕುಮಾರಿಯವರ ಸರ್ವೆ ಸಂಖ್ಯೆ 201/1 ರ ಜಮೀನು.
ದಕ್ಷಿಣಕ್ಕೆ : ಎ. ಕೆ. ಕಾಲೋನಿ

ಐಟಂ ಸಂಖ್ಯೆ 2 : ಈ ಸಮಗ್ರ ಸ್ಥಿರಾಸ್ತಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕು ಕಸಬಾ ಹೋಬಳಿಯ ದಂಡುಪಾಳ್ಯ ಗ್ರಾಮದ ಸರ್ವೆ ಸಂಖ್ಯೆ 201/1ರಲ್ಲಿನ 2 ಎಕರೆ 4 ಗುಂಟೆಗಳ ವಿಸ್ತೀರ್ಣದ ಒಣ ಭೂಮಿಗೆ ಚಕ್ಕುಬಂದಿ.
ಪೂರ್ವಕ್ಕೆ : ಸರ್ವೆ ಸಂಖ್ಯೆ 198ರ ಖಾಸಗಿ ಆಸ್ತಿ
ಪಶ್ಚಿಮಕ್ಕೆ : ರಸ್ತೆ
ಉತ್ತರಕ್ಕೆ : ರಸ್ತೆ
ದಕ್ಷಿಣಕ್ಕೆ : ಶ್ರೀಮತಿ ಭೀಮವರಪು ನಾಗರಾಜ ಕುಮಾರಿಯವರ ಜಮೀನು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಗಳು ಹೊರಡಿಸಿದ ಪರಿವರ್ತನಾ ಆದೇಶ ಸಂಖ್ಯೆ ALN (HK) SR.19/2016-17 ದಿನಾಂಕ 1.9.2016 ರಂತೆ ಮೇಲೆ ತಿಳಿಸಿದ ಎರಡು ಆಸ್ತಿಗಳನ್ನು ಕೃಷಿ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಪರಿವರ್ತಿಸಲಾಗಿದೆ.

ಎರಡು ಆಸ್ತಿಗಳ ಪರಿವರ್ತನೆಯ ನಂತರ ಇದರ ಗಡಿಗಳನ್ನು ಮೇಲಿನ ಪರಿವರ್ತನೆ ಕ್ರಮದಲ್ಲಿ ಈ ಕೆಳಗಿನಂತೆ ದಾಖಲಿಸಲಾಗಿದೆ. ಇದರಂತೆ 2 ಎಕರೆ 4 ಗುಂಟೆಗಳ ವಿಸ್ತೀರ್ಣದ ಸ್ಥಿರಾಸ್ತಿಯು ಸರ್ವೇ ಸಂಖ್ಯೆ 201/1ರಲ್ಲಿ ಹಾಗೂ 26 ಗುಂಟೆಗಳ ವಿಸ್ತೀರ್ಣ ಸರ್ವೆ ಸಂಖ್ಯೆ 201/5 ರಲ್ಲಿದ್ದು ಇದಕ್ಕೆ ಚಕ್ಕುಬಂದಿ. ಪೂರ್ವಕ್ಕೆ : ಸರ್ವೆ ಸಂಖ್ಯೆ 198 ರಲ್ಲಿನ ಜಮೀನು;
ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ರಸ್ತೆ,
ದಕ್ಷಿಣಕ್ಕೆ : ಸರ್ವೆ ಸಂಖ್ಯೆ 201/2 ರಲ್ಲಿನ ಜಮೀನು.

ಬೆಂಗಳೂರು, ದಿನಾಂಕ : 04 ನೇ ನವೆಂಬರ್ 2025

ಬಿ. ಎಂ. ರಾಜೇಂದರ್, ಬಿ.ಕಾಂ, ಎಲ್‌ಎಲ್‌ಬಿ, ವಕೀಲರು,
ಸಂಖ್ಯೆ 906, "ಕಮಲ ನಿವಾಸ", 9ನೇ "ಎ" ಮುಖ್ಯ ರಸ್ತೆ, 2ನೇ 'ಡಿ' ಅಡ್ಡ ರಸ್ತೆ,
ಎಚ್‌ಆರ್‌ಬಿಆರ್ ಲೇಔಟ್, 1ನೇ ಬ್ಲಾಕ್, ಕಲ್ಯಾಣನಗರ ಬೆಂಗಳೂರು – 560 043.
ಮೊಬೈಲ್: 98805 28287 / 91082 84297

ಸಂತೃಪ್ತಿಯು ಬಡವನನ್ನೂ ಶ್ರೀಮಂತನನ್ನಾಗಿಸುತ್ತದೆ; ಸಂತೃಪ್ತಿ ಇಲ್ಲದಿರುವಿಕೆಯು ಶ್ರೀಮಂತನನ್ನು ಬಡವನನ್ನಾಗಿಸುತ್ತದೆ
ಬೆಂಜಮಿನ್ ಫ್ರಾಂಕ್ಲಿನ್, ರಾಜನೀತಿಜ್ಞ ಹಾಗೂ ಹೂಡಿಕೆದಾರ

ದುಡ್ಡಿನಂಥಾ ಮಾತು

ಅರಿಯೋಣವೇ ಫ್ಯಾಕ್ಟರ್ ಹೂಡಿಕೆ?

• ಪೆಶೊತನ್ ದಸ್ತೂರ್

ಷೇರು ಮಾರುಕಟ್ಟೆಗಳ ಚಲನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಒಂದು ಸರಳ ಸತ್ಯವು ನಿಮ್ಮ ಗಮನಕ್ಕೆ ಬಂದಿರಬಹುದು. ಷೇರುಪೇಟೆಯಲ್ಲಿ ಹೆಚ್ಚು ಲಾಭ ತಂದುಕೊಡುವವರು ಪ್ರತಿ ವರ್ಷವೂ ಬದಲಾಗುತ್ತಿರುತ್ತಾರೆ. ಒಂದು ವರ್ಷ ದೊಡ್ಡ ಗಾತ್ರದ ಕಂಪನಿಗಳು ಮುಂಚೂಣಿಯಲ್ಲಿ ಇದ್ದರೆ, ಇನ್ನೊಂದು ವರ್ಷದಲ್ಲಿ ಸಣ್ಣ ಗಾತ್ರದ ಕಂಪನಿಗಳು ಅಥವಾ ಮಧ್ಯಮ ಗಾತ್ರದ ಕಂಪನಿಗಳು ಹೆಚ್ಚು ಲಾಭ ತಂದುಕೊಡಬಹುದು.

ಕೆಲವು ಸಂದರ್ಭಗಳಲ್ಲಿ ಸ್ಥಿರವಾದ ಬೆಳವಣಿಗೆ ಕಾಣುವ ಕಂಪನಿಗಳು ಹೆಚ್ಚು ಉತ್ತಮವಾಗಿ ಲಾಭ ತರಬಲ್ಲವು. ಇನ್ನು ಕೆಲವು ಸಂದರ್ಭಗಳಲ್ಲಿ ಹೆಚ್ಚು ವೇಗದ ಬೆಳವಣಿಗೆ ಕಾಣುವ ಷೇರುಗಳು ಹೆಚ್ಚಿನ ಲಾಭ ನೀಡುವ ಪಟ್ಟಿಯಲ್ಲಿ ಮೇಲಿನ ಸ್ಥಾನ ಪಡೆಯಬಲ್ಲವು. ಹೂಡಿಕೆಯ ಒಟ್ಟಾರೆ ದಿಕ್ಕು ಬದಲಾಗುತ್ತಲೇ ಇರುತ್ತದೆ. ಆದರೆ ಕಾಲನ ಪರೀಕ್ಷೆಯನ್ನು ಗೆದ್ದು ನಿಂತಿರುವ ಒಂದು ಪಾಠ ಇದೆ. ಅದೆಂದರೆ, ಯಾವುದೇ ಒಂದು ಹೂಡಿಕೆ ಶೈಲಿಯು ಎಲ್ಲ ಸಂದರ್ಭಗಳಲ್ಲಿಯೂ ಗೆಲ್ಲುವ ಕುದುರೆಯಾಗಿ ಇರುವುದಿಲ್ಲ!

ಈ ಬದಲಾವಣೆಯ ಮಾದರಿಯು 'ಹೀಗೇ ಸುಮ್ಮನೆ' ಎಂಬಂತೆ ಇರುವುದಿಲ್ಲ. ಇದನ್ನು ಅರ್ಥ ಮಾಡಿಕೊಂಡರೆ ನಿಮಗೆ ಹೆಚ್ಚು ಚೆನ್ನಾಗಿ ಇರುವ ಹಾಗೂ ಹೆಚ್ಚು ಸಮತೋಲನದ ಪೋರ್ಟ್‌ಫೋಲಿಯೊ ಒಂದನ್ನು ಮುಂದಿನ ವರ್ಷಗಳಲ್ಲಿ ರೂಪಿಸಲು ಸಾಧ್ಯವಾಗಬಹುದು.

ಫ್ಯಾಕ್ಟರ್ ಹೂಡಿಕೆ ಅಂದರೆ ಏನು?

ಪ್ರತಿಯೊಂದು ಷೇರಿಗೂ ಅದರದೇ ಆದ ಗುಣಲಕ್ಷಣಗಳಿರುತ್ತವೆ. ಅವು ಆ ಷೇರಿನಿಂದ ಸಿಗುವ ಲಾಭದ ಪ್ರಮಾಣ ಎಷ್ಟು ಎಂಬುದನ್ನು ನಿರ್ಧರಿಸುತ್ತವೆ. ಅವುಗಳನ್ನು ಆ ಷೇರು ನಿರ್ದಿಷ್ಟವಾಗಿ ವರ್ತಿಸುವಂತೆ ಮಾಡುವ 'ಘಟಕಾಂಶಗಳು' ಎಂದು ಅರ್ಥ ಮಾಡಿಕೊಳ್ಳಿ. ಜಾಗತಿಕ ಮಟ್ಟದಲ್ಲಿ ಹಾಗೂ ಭಾರತದಲ್ಲಿ ಹೂಡಿಕೆದಾರರು ಸಾಮಾನ್ಯವಾಗಿ ಇಂತಹ ನಾಲ್ಕು ಮುಖ್ಯ ಅಂಶಗಳನ್ನು ಗಮನಿಸುತ್ತಾರೆ:

ಹೂಡಿಕೆಯ ಜಗತ್ತಿನಲ್ಲಿ ಕಾಲನ ಅಗ್ನಿಪರೀಕ್ಷೆಯನ್ನು ಗೆದ್ದು ನಿಂತಿರುವ ಪಾಠವೊಂದು ಇದೆ. ಯಾವುದೇ ಒಂದು ಹೂಡಿಕೆ ಶೈಲಿಯು ಎಲ್ಲ ಸಂದರ್ಭಗಳಲ್ಲಿಯೂ ಗೆಲ್ಲುವ ಕುದುರೆಯಾಗಿ ಇರದು ಎಂಬುದು ಆ ಪಾಠ

- ಮೌಲ್ಯ– ತಮ್ಮ ನಿಜ ಮೌಲ್ಯಕ್ಕಿಂತ ಕಡಿಮೆ ಬೆಲೆಗೆ ಸಿಗುತ್ತಿರುವ ಷೇರುಗಳು
- ಮೊಮೆಂಟಮ್– ಬೆಲೆಯನ್ನು ವೇಗವಾಗಿ ಹೆಚ್ಚಿಸಿಕೊಳ್ಳುತ್ತಿರುವ ಹಾಗೂ ಕೆಲವು ಸಮಯದವರೆಗೆ ಬೆಲೆಯನ್ನು ಇನ್ನೂ ಹೆಚ್ಚಿಸಿಕೊಳ್ಳಲಿರುವ ಷೇರುಗಳು
- ಗುಣಮಟ್ಟ– ಒಳ್ಳೆಯ ಲಾಭದ ಪ್ರಮಾಣ, ಕಡಿಮೆ ಸಾಲ ಮತ್ತು ಉತ್ತಮ ಆಡಳಿತ ಮಂಡಳಿ ಇರುವ ಕಂಪನಿಗಳ ಷೇರುಗಳು
- ಕಡಿಮೆ ಅಸ್ಥಿರತೆ– ಮಾರುಕಟ್ಟೆಯಲ್ಲಿ ಚಂಚಲ ವಹಿವಾಟು ಹೆಚ್ಚಿದ್ದಾಗಲೂ ತಾವು ಕಡಿಮೆ ಪ್ರಮಾಣದಲ್ಲಿ ಏರಿಳಿತ ಕಾಣುವ, ಹೆಚ್ಚಿನ ಮಟ್ಟದ ಸ್ಥಿರತೆ ಒದಗಿಸುವ ಷೇರುಗಳು

ಬೇರೆ ಬೇರೆ ಬಗೆಯ ಹೂಡಿಕೆದಾರರು ಬೇರೆ ಬೇರೆ ಅಂಶಗಳತ್ತ ಆಕರ್ಷಿತರಾಗುತ್ತಾರೆ. ಕೆಲವರಿಗೆ ವೇಗವಾಗಿ ಮೌಲ್ಯ ಹೆಚ್ಚಿಸಿಕೊಳ್ಳುತ್ತಿರುವ ಷೇರುಗಳನ್ನು ಹೊಂದುವುದರಿಂದ ಸಿಗುವ ಥ್ರಿಲ್ ಬೇಕು. ಇನ್ನು ಕೆಲವರಿಗೆ ಕಡಿಮೆ ಅಸ್ಥಿರತೆಯಿಂದ ಸಿಗುವ ನೆಮ್ಮದಿ ಬೇಕು. ಇನ್ನು ಕೆಲವರಿಗೆ ಗುಣಮಟ್ಟದ ಷೇರು ಬೇಕು. ಆದರೆ ಯಾವುದೇ ಒಂದು ಅಂಶ ಎಲ್ಲ ಕಾಲದಲ್ಲಿಯೂ ಮುಂಚೂಣಿಯಲ್ಲಿ ಉಳಿಯುವುದಿಲ್ಲ ಎಂಬುದನ್ನು ಇತಿಹಾಸ ಹೇಳುತ್ತದೆ.

ಕಳೆದ ಎರಡು ದಶಕಗಳ ಅವಧಿಯಲ್ಲಿ ದೇಶದಲ್ಲಿ ಒಂದೊಂದು ಅವಧಿಯಲ್ಲಿ ಒಂದೊಂದು ಅಂಶವು – ಮೌಲ್ಯ, ಮೊಮೆಂಟಮ್, ಗುಣಮಟ್ಟ ಮತ್ತು ಕಡಿಮೆ ಅಸ್ಥಿರತೆ – ಆವರ್ತನದಲ್ಲಿ ಗಣನೀಯ ಮಹತ್ವ ಪಡೆದಿದೆ. ಈ ವರ್ಷ ಮುಂಚೂಣಿಯಲ್ಲಿ ಇದ್ದ ಅಂಶವು ಮುಂದಿನ ವರ್ಷದಲ್ಲಿ ಹಿಂದೆ ಸರಿದಿದೆ. ಈ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಅದಕ್ಕೆ ಹೊಂದಿಕೊಳ್ಳುವುದು ಫ್ಯಾಕ್ಟರ್ ಹೂಡಿಕೆ ವಿಧಾನದಲ್ಲಿ ಮಹತ್ವದ್ದು.

ಫ್ಯಾಕ್ಟರ್ ಹೂಡಿಕೆಯನ್ನು ಸಮತೋಲನದ ಊಟ ಸಿದ್ಧಪಡಿಸುವ ಬಗೆ ಎಂಬಂತೆ ಕಾಣಬಹುದು...

- ಉತ್ತಮ ಮೌಲ್ಯದ ಷೇರುಗಳು ಹೂಡಿಕೆದಾರರಿಗೆ ಪ್ರೊಟೀನ್ ಒದಗಿಸುತ್ತವೆ (ದೀರ್ಘಾವಧಿಯಲ್ಲಿ ಬಲ ತಂದುಕೊಡುತ್ತವೆ)
- ಮೊಮೆಂಟಮ್ ಎಂಬುದು ಒಂದಿಷ್ಟು ಮಸಾಲೆಯನ್ನು ನೀಡುತ್ತದೆ (ವೇಗದ ಮೌಲ್ಯವರ್ಧನೆ ಹಾಗೂ ಅದರಿಂದ ಸಿಗುವ ಚೇತೋಹಾರಿ ಅನುಭವ)
- ಗುಣಮಟ್ಟದ ಷೇರುಗಳು ನೀಡುವ ವಿಟಮಿನ್‌ಗಳು (ಸ್ಥಿರತೆ)
- ಕಡಿಮೆ ಅಸ್ಥಿರತೆಯ ಷೇರುಗಳು ನೀಡುವ ನಾರಿನಂಶ (ಕಷ್ಟದ ಕಾಲದಲ್ಲಿ ರಕ್ಷಣೆ)

ಒಂದು ಅಂಶವು ಒಂದು ಸಂದರ್ಭದಲ್ಲಿ ನೆರವಿಗೆ ಬರದೇ ಇದ್ದರೆ, ಇನ್ನೊಂದು ಅಂಶವು ನೆರವಾಗುತ್ತದೆ. ಒಟ್ಟಾರೆಯಾಗಿ ಹೂಡಿಕೆದಾರರಿಗೆ ಸಿಗುವ ಫಲಿತಾಂಶವು ಆರೋಗ್ಯಕರವಾಗಿರುತ್ತದೆ. ದೀರ್ಘಾವಧಿಯಲ್ಲಿ ಹೆಚ್ಚು ಸ್ಥಿರವಾಗಿ ಇರುತ್ತದೆ.

ಈಗ ಇದರ ಬಗ್ಗೆ ಏಕೆ ಗಮನ ನೀಡಬೇಕು?

ದೇಶದ ಮ್ಯೂಚುವಲ್ ಫಂಡ್ ಉದ್ಯಮವು ಈಗ ಹೊಸ ಘಟ್ಟವನ್ನು ಪ್ರವೇಶಿಸುತ್ತಿದೆ. ಈ ಹಂತದಲ್ಲಿ ಫ್ಯಾಕ್ಟರ್ ಆಧಾರಿತ ಹೂಡಿಕೆಯು ಸಕ್ರಿಯ ನಿರ್ವಹಣೆಯ ಕ್ವಾಂಟ್ ಫಂಡ್‌ಗಳ ಮೂಲಕ, ಬಹು–ಅಂಶಗಳ ಇಟಿಎಫ್‌ಗಳ ಮೂಲಕ ಹಾಗೂ ಇಂಡೆಕ್ಸ್ ಆಧಾರಿತ ಫಂಡ್‌ಗಳ ಮೂಲಕ ಹೆಚ್ಚು ಜನಪ್ರಿಯವಾಗುತ್ತಿದೆ.

ದತ್ತಾಂಶದ ಲಭ್ಯತೆ, ನಿಯಮಗಳ ವಿಚಾರದಲ್ಲಿನ ಸ್ಪಷ್ಟತೆ, ಹೂಡಿಕೆದಾರರಲ್ಲಿ ಮೂಡಿರುವ ಪ್ರಬುದ್ಧತೆಯು ಒಂದೆಡೆ ಸೇರಿರುವುದು ಫ್ಯಾಕ್ಟರ್ ಹೂಡಿಕೆ ತಂತ್ರವು ಮುಖ್ಯವಾಹಿನಿಗೆ ಬರಲು ಕಾರಣವಾಗಿವೆ.

ಏಕೆ ಹೀಗೆ?

ಮಾರುಕಟ್ಟೆಯ ಚಲನೆಗೆ ಒಂದು ಗತಿ ಇದೆ. ಅರ್ಥ ವ್ಯವಸ್ಥೆಯ ಸ್ಥಿತಿ ಬೇರೆ ಬೇರೆ ರೀತಿಯಲ್ಲಿ ಇದ್ದಾಗ ಹೂಡಿಕೆಯೂ ಬೇರೆ ಬೇರೆ ರೀತಿಯಲ್ಲಿ ಇರಬೇಕಾಗುತ್ತದೆ.

- **ಆರ್ಥಿಕ ಬೆಳವಣಿಗೆಯು ಚೆನ್ನಾಗಿ ಇದ್ದಾಗ, ಕಾರ್ಪೊರೇಟ್ ಕಂಪನಿಗಳ ಲಾಭದ ಪ್ರಮಾಣವು ಹೆಚ್ಚುತ್ತಿದ್ದಾಗ, ಉತ್ತಮ 'ಮೌಲ್ಯ'ದ ಹಾಗೂ 'ವೇಗವಾಗಿ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವ' ಮೊಮೆಂಟಮ್ ಷೇರುಗಳು ಹೆಚ್ಚಿನ ಲಾಭವನ್ನು ತಂದುಕೊಡುತ್ತವೆ.**
- **ಅನಿಶ್ಚಿತತೆ ಹೆಚ್ಚಿದ್ದಾಗ – 2008ರ ಬಿಕ್ಕಟ್ಟಿನ ಅವಧಿ, 2018ರಲ್ಲಿ ಎನ್‌ಬಿಎಫ್‌ಸಿ ವಲಯದಲ್ಲಿ ಸಮಸ್ಯೆ ಎದುರಾಗಿದ್ದ ಸಂದರ್ಭ, ಕೋವಿಡ್ ಸಾಂಕ್ರಾಮಿಕದ ಸಂದರ್ಭ – ಕಡಿಮೆ ಅಸ್ಥಿರತೆಯ ಹಾಗೂ ಹೆಚ್ಚಿನ ಗುಣಮಟ್ಟದ ಷೇರುಗಳು ಪ್ರಾಮುಖ್ಯ ಪಡೆಯುತ್ತವೆ.**
- **ವ್ಯವಸ್ಥೆಯಲ್ಲಿ ನಗದು ಹರಿವು ಜಾಸ್ತಿ ಇದ್ದಾಗ ಹಾಗೂ ಸಣ್ಣ ಹೂಡಿಕೆದಾರರು ಹೆಚ್ಚು ಸಕ್ರಿಯವಾಗಿ ಇರುವಾಗ 'ಮೌಲ್ಯವನ್ನು ವೇಗವಾಗಿ ಹೆಚ್ಚಿಸಿಕೊಳ್ಳುತ್ತಿರುವ' ಷೇರುಗಳಿಗೆ (ಮೊಮೆಂಟಮ್) ಹೊಸ ಬಲ ಸಿಗುತ್ತದೆ.**

2005ರಿಂದ 2008ರವರೆಗೆ ಭಾರತದ ಅರ್ಥ ವ್ಯವಸ್ಥೆಯಲ್ಲಿ ಕಂಡುಬಂದ ವೇಗದ ಬೆಳವಣಿಗೆ ಘಟ್ಟ, 2011ರಿಂದ 2013ರವರೆಗಿನ ಎಚ್ಚರಿಕೆಯ ಘಟ್ಟ, ಕೋವಿಡ್ ನಂತರದ ಚೇತರಿಕೆಯ ಘಟ್ಟ ಸೇರಿದಂತೆ ಪ್ರತಿ ಘಟ್ಟವೂ ಒಂದೊಂದು ಅಂಶಕ್ಕೆ ಹೆಚ್ಚಿನ ಲಾಭ ಮಾಡಿಕೊಟ್ಟಿದೆ. ಹೀಗಾಗಿಯೇ ಯಾವುದೇ ಒಂದು ಬಗೆಯ ಹೂಡಿಕೆ ತಂತ್ರವನ್ನು ನೆಚ್ಚಿಕೊಳ್ಳುವುದು ಸವಾಲು ಮೈಮೇಲೆ ಎಳೆದುಕೊಳ್ಳುವ ಕೆಲಸವಾಗುತ್ತದೆ.

ಹೂಡಿಕೆದಾರರು ಯಾವುದೋ ಒಂದು ಅಂಶವನ್ನು ನೆಚ್ಚಿಕೊಂಡು ಹೂಡಿಕೆ ಮಾಡಬೇಕಾಗಿಲ್ಲ. ಅವರು ಬಹು ಅಂಶಗಳನ್ನು ಆಧರಿಸಿದ ಪೋರ್ಟ್‌ಫೋಲಿಯೊ ಒಂದನ್ನು ಕಟ್ಟಬಹುದು. ಅದರಲ್ಲಿ ಮೌಲ್ಯಯುತ, ಹೆಚ್ಚಿನ ಗುಣಮಟ್ಟದ, ಮೌಲ್ಯವನ್ನು ಬಹಳ ವೇಗವಾಗಿ ವರ್ಧಿಸಿಕೊಳ್ಳುತ್ತ ಸಾಗುವ, ಕಡಿಮೆ ಅಸ್ಥಿರತೆಯ ಷೇರುಗಳೆಲ್ಲವೂ ಸರಿಯಾದ ಪ್ರಮಾಣದಲ್ಲಿ ಇರುವಂತೆ ನೋಡಿಕೊಳ್ಳಬಹುದು.

ನಾವೇ ಇಲ್ಲಿರುವ ಸವಾಲು

ಹೂಡಿಕೆಯಲ್ಲಿ ಅತ್ಯಂತ ಕಷ್ಟದ ಸಂಗತಿಯೆಂದರೆ ಮಾರುಕಟ್ಟೆಗಳನ್ನು ಅರ್ಥ ಮಾಡಿಕೊಳ್ಳುವುದು ಅಲ್ಲ. ನಮ್ಮ ಭಾವನೆಗಳನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳುವುದೇ ಇಲ್ಲಿ ಬಹಳ ದೊಡ್ಡ ಸವಾಲು. ಬಹುತೇಕ ಹೂಡಿಕೆದಾರರು ಈಚಿನ ಅವಧಿಯಲ್ಲಿ ಹೆಚ್ಚಿನ ಗಳಿಕೆ ತಂದುಕೊಟ್ಟ ಷೇರುಗಳ ಹಿಂದೆ ಓಡುತ್ತಾರೆ. ಉತ್ತಮ ಮೌಲ್ಯದ ಷೇರುಗಳು ಕಳೆದ ವರ್ಷದಲ್ಲಿ ಉತ್ತಮ ಸಾಧನೆ ತೋರಿದ್ದವು ಎಂದಾದರೆ ಎಲ್ಲರೂ ಆ ಬಗೆಯ ಷೇರುಗಳನ್ನೇ ಈ ವರ್ಷ ಖರೀದಿಸಲು ಬಯಸುತ್ತಾರೆ. ಆದರೆ ಎಲ್ಲರೂ ಈ ಬಗೆಯ ಷೇರುಗಳ ಹಿಂದೆ ಬರುವ ಹೊತ್ತಿಗೆ ಪರಿಸ್ಥಿತಿ ಬದಲಾಗಿರುತ್ತದೆ.

2010ರಲ್ಲಿ ಉತ್ತಮ ಮೌಲ್ಯದ ಷೇರುಗಳು ಒಳ್ಳೆಯ ಲಾಭ ತಂದುಕೊಟ್ಟವು. ಆ ಸಂದರ್ಭದಲ್ಲಿ ಹಲವಾರು ಹೂಡಿಕೆದಾರರು ಆ ಬಗೆಯ ಷೇರುಗಳನ್ನು ಖರೀದಿಸಲು ಮುಂದಾದರು. ಆದರೆ ನಂತರದ ವರ್ಷದಲ್ಲಿ ಆ ವರ್ಗದ ಷೇರುಗಳು ಅಷ್ಟೇನೂ ಉತ್ತಮ ಗಳಿಕೆ ತಂದುಕೊಡಲಿಲ್ಲ. ಬೇರೆ ಬೇರೆ ವರ್ಷಗಳಲ್ಲಿ 'ಮೊಮೆಂಟಮ್' ಹಾಗೂ 'ಉತ್ತಮ ಗುಣಮಟ್ಟದ' ಷೇರುಗಳ ವಿಚಾರದಲ್ಲಿಯೂ ಇದೇ ಆಯಿತು.

ಮಾರುಕಟ್ಟೆಯಲ್ಲಿ ಸರಿಯಾದ ಸಮಯಕ್ಕಾಗಿ ಕಾಯುತ್ತ ಕೂರುವ ಬದಲು, ಬೇರೆ ಬೇರೆ ಅಂಶಗಳಿಗೆ ಆದ್ಯತೆ ನೀಡಿ ಹೂಡಿಕೆಯನ್ನು ವ್ಯವಸ್ಥಿತವಾಗಿ ಮಾಡುತ್ತ ಸಾಗುವುದು ಮುಖ್ಯ. ಮಾರುಕಟ್ಟೆಯ ಸ್ಥಿತಿ ಹೇಗೇ ಇರಲಿ, ಎಸ್‌ಐಪಿ ಮೊತ್ತವನ್ನು ಪ್ರತಿ ತಿಂಗಳೂ ತೊಡಗಿಸುತ್ತ ಸಾಗುವ ಬಗೆಯಲ್ಲೇ ಇದೂ ಮುಖ್ಯ. ಇಲ್ಲಿರುವ ಸಂದೇಶ ಸರಳ: ಶಿಸ್ತಿನಿಂದ ಇರಿ, ವೈವಿಧ್ಯಮಯ ಹೂಡಿಕೆ ಇರಲಿ.

ಲೇಖಕ ಯುಟಿಐ ಆಸ್ತಿ ನಿರ್ವಹಣಾ ಕಂಪನಿಯ ಸಮೂಹ ಅಧ್ಯಕ್ಷ, ಮಾರಾಟ ವಿಭಾಗದ ಮುಖ್ಯಸ್ಥ

ಹೆಚ್ಚುತ್ತಿದೆ ಎನ್‌ಪಿಎಸ್, ಎಪಿವೈ ಚಂದಾದಾರರ ಸಂಖ್ಯೆ

• ಗಂಜಿ ಆದಿಶೇಷ

2004ರ ಜನವರಿ 1ರಂದು ಪ್ರಾರಂಭವಾದ ರಾಷ್ಟ್ರೀಯ ಪಿಂಚಣಿ ಯೋಜನೆಯು (ಎನ್‌ಪಿಎಸ್), ಕೇಂದ್ರ ಸರ್ಕಾರದ ದೀರ್ಘಾವಧಿ ನಿವೃತ್ತಿ ಉಳಿತಾಯ ಯೋಜನೆ. ಈ ಯೋಜನೆಯು ವ್ಯಕ್ತಿಗಳಿಗೆ ನಿವೃತ್ತಿ ನಂತರದ ಆರ್ಥಿಕ ಭದ್ರತೆ ಒದಗಿಸಲು ರೂಪುಗೊಂಡಿದೆ.

ಆರಂಭದಲ್ಲಿ ಸರ್ಕಾರಿ ನೌಕರರಿಗೆ ಮಾತ್ರ ಸೀಮಿತವಾಗಿದ್ದ ಈ ಯೋಜನೆ ಬಳಿಕ ಎಲ್ಲ ವರ್ಗದ ಜನರಿಗೂ ದೊರೆಯಿತು. 18ರಿಂದ 70ರ ವಯೋಮಾನದ ಎಲ್ಲರೂ ಇದಕ್ಕೆ ಅರ್ಹರು.

2013-14ರಲ್ಲಿ ಎನ್‌ಪಿಎಸ್‌ನಲ್ಲಿ 65,06,180 ಚಂದಾದಾರರು ಇದ್ದರು. ಇದು 2025–26ರ ಅಕ್ಟೋಬರ್ 31ರ ವೇಳೆಗೆ 2,09,46,910ಕ್ಕೆ ಏರಿಕೆಯಾಗಿದೆ. ಇವರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು, ಎನ್‌ಪಿಎಸ್ ವಾತ್ಸಲ್ಯ, ಎನ್‌ಪಿಎಸ್ ಸ್ವಾವಲಂಬನ್, ಕಾರ್ಪೊರೇಟ್ ವಲಯ, ಎಲ್ಲ ನಾಗರಿಕರು ಇದ್ದಾರೆ. ಈ ಹೂಡಿಕೆದಾರರು ತೊಡಗಿಸಿದ ಮೊತ್ತ ₹15.70 ಲಕ್ಷ ಕೋಟಿ ದಾಟಿದೆ.



2013–14ರಲ್ಲಿ ಕಾರ್ಪೊರೇಟ್ ವಲಯದ ಚಂದಾದಾರರ ಸಂಖ್ಯೆ 2,62,335 ಇತ್ತು. ಇದು ಪ್ರಸಕ್ತ ವರ್ಷದ ಅಕ್ಟೋಬರ್ ಅಂತ್ಯದ ವೇಳೆಗೆ 25,53,708ಕ್ಕೆ ಏರಿಕೆ ಆಗಿದೆ. ಇದೇ ಅವಧಿಯಲ್ಲಿ ಹೂಡಿಕೆ ಮೊತ್ತವು ₹2,627 ಕೋಟಿಯಿಂದ ₹2,58,079 ಕೋಟಿಗೆ ಹೆಚ್ಚಳವಾಗಿದೆ. ಈ ಅಂಕಿ–ಅಂಶಗಳು ಕಾರ್ಪೊರೇಟ್ ವಲಯದ ನೌಕರರು ಸಾಮಾಜಿಕ ಭದ್ರತಾ ಯೋಜನೆಗೆ ನೀಡುತ್ತಿರುವ ಪ್ರಾಮುಖ್ಯವನ್ನು ತೋರಿಸುತ್ತಿದೆ.

2024ರ ಸೆಪ್ಟೆಂಬರ್ 18ರಂದು ಎನ್‌ಪಿಎಸ್ ವಾತ್ಸಲ್ಯ ಯೋಜನೆಗೆ ಚಾಲನೆ ನೀಡಲಾಯಿತು. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಹೆಸರಿನಲ್ಲಿ ಪೋಷಕರು ಎನ್‌ಪಿಎಸ್–ವಾತ್ಸಲ್ಯ ಖಾತೆ ತೆರೆಯಬಹುದಾಗಿದೆ. ಮಕ್ಕಳಿಗೆ ಬಾಲ್ಯದಲ್ಲಿಯೇ ಆರ್ಥಿಕ ಭದ್ರತೆ ಒದಗಿಸಲು ಈ ಯೋಜನೆ ಸಹಕಾರಿಯಾಗಿದೆ.

2024–25ರಲ್ಲಿ ಈ ಯೋಜನೆಯಡಿ ಒಟ್ಟು 1,07,523 ಚಿಣ್ಣರು ಚಂದಾದಾರಿಕೆ ಪಡೆದಿದ್ದಾರೆ. ಇವರ ಹೂಡಿಕೆ ಮೊತ್ತ ₹92 ಕೋಟಿ. ಪ್ರಸಕ್ತ ಆರ್ಥಿಕ ವರ್ಷದ ಅಕ್ಟೋಬರ್ ಅಂತ್ಯದ ವೇಳೆಗೆ ಹೂಡಿಕೆದಾರರು 1,47,287 ಆಗಿದ್ದು, ಮೊತ್ತವು ₹202 ಕೋಟಿಗೆ ಹೆಚ್ಚಳವಾಗಿದೆ.

ಅಟಲ್ ಪಿಂಚಣಿ ಯೋಜನೆಯಲ್ಲಿ 8.34 ಕೋಟಿ ಚಂದಾದಾರರು



ದೇಶದ ಎಲ್ಲ ನಾಗರಿಕರಿಗೆ, ವಿಶೇಷವಾಗಿ ಬಡವರು, ಸೌಲಭ್ಯ ವಂಚಿತರು ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಒದಗಿಸುವ ಗುರಿಯೊಂದಿಗೆ ಅಟಲ್ ಪಿಂಚಣಿ ಯೋಜನೆ (ಎಪಿವೈ) ಅನ್ನು 2015ರಲ್ಲಿ ಕೇಂದ್ರ ಸರ್ಕಾರ ಪ್ರಾರಂಭಿಸಿತು. ಬ್ಯಾಂಕ್ ಅಥವಾ ಅಂಚೆ ಕಚೇರಿಯಲ್ಲಿ ಉಳಿತಾಯ ಖಾತೆ ಹೊಂದಿರುವ 18ರಿಂದ 40 ವರ್ಷ ವಯಸ್ಸಿನ ಎಲ್ಲಾ ನಾಗರಿಕರು ಈ ಯೋಜನೆಗೆ ಅರ್ಹರು.

ಈ ಯೋಜನೆಯ ಅಡಿ ನೋಂದಾಯಿಸಿಕೊಂಡವರು ಕಟ್ಟುವ ಮೊತ್ತಕ್ಕೆ ಅನುಗುಣವಾಗಿ ಮಾಸಿಕ ₹1 ಸಾವಿರದಿಂದ ₹5 ಸಾವಿರವರೆಗೆ ಪಿಂಚಣಿ ಸಿಗುತ್ತದೆ. ಆದಾಯ ತೆರಿಗೆ ಪಾವತಿಸುವವರಿಗೆ ಈ ಯೋಜನೆ ಅನ್ವಯಿಸುವುದಿಲ್ಲ. ಪಿಂಚಣಿ ಮೊತ್ತವು 60 ವರ್ಷ ವಯಸ್ಸಾದ ನಂತರ ಸಿಗುತ್ತದೆ.

ಅಕ್ಟೋಬರ್ ಅಂತ್ಯದ ವೇಳೆಗೆ ಈ ಯೋಜನೆಯಲ್ಲಿ ಒಟ್ಟು 8,34,13,738 ಜನರು ನೋಂದಣಿ ಆಗಿದ್ದಾರೆ. ಈ ಪೈಕಿ ಮಹಿಳೆಯರ ಪ್ರಮಾಣ 4,04,41,135. ಇದು ಒಟ್ಟು ನೋಂದಣಿ ಪೈಕಿ ಶೇ 48ರಷ್ಟು.

(ಎನ್‌ಪಿಎಸ್ ವೆಬ್‌ಸೈಟ್, ಸಂಸತ್ತಿಗೆ ಕೇಂದ್ರ ಹಣಕಾಸು ಸಚಿವಾಲಯ ನೀಡಿರುವ ಮಾಹಿತಿ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಇಂಗ್ಲಿಷ್

Prose The Concert

Read the lesson carefully and represent the events/incidents in the flow chart. You may have as many boxes in between as you think appropriate.

Smita reads the newspaper
↓
↓
↓
↓
↓
↓
↓
Pandit Ravi Shankar and Ustad Allah Rakha performed for the boy

Ans:-

Smita reads the newspaper
▼
The boy said that they mustn't miss the chance.
▼
Mother console her son and said to lie down
▼
Smita stood at the window, looking at the traffic.
▼
Smita was walking in the park
▼
Smita was sitting beside her father in the gallery.
▼
A large moustachioed man made boring speech.
▼
Smitha was standing before PRS and UAR
▼
Pandit Ravishankar and Ustad Allah Rakha performed for the boy

****

Poem -5 Jazz Poem Two

1. Read the first stanza and see how closely the description of the Jazz – the player is made and filled in the columns in the table

Ans:

1. Face :- Wrinkled old face, full of worries, rough unshaven face
2. Eyes :- Closed Eyes, Still down eyes
3. Ears:- Still closed ears
4. Shirt:- a faded-blue old shirt, turn dark with sweat.
5. Collar:- Frayed Collar
6. Jacket:- Worn out, old Jacket
7. Shoes run:-down shoes had paper in them

2) Why do you think the Jazz player keeps his head down? [Line 1-6]
Ans: Jazz player was very old and he had no interest in life. He was alone and had pain in his heart. So he kept his head down.

3) The word 'old' has been repeated several times in the first two stanzas. What does this suggest?
Ans: The word old suggests belonging to the past. Jazz player was aged and the things are worn out or outdated.

4) What description do the lines from 13 to 18 suggest about the jazz, player?
Ans: Jazz player had lost his interest in the Jazz player had lost his interest in life. He didn't care to wear the tom dress. He had more pain that could be seen in each wrinkle of his face. He was alone.

5) a) Read the lines from 19 to 25 carefully. Is there any change in the stature of the Jazz player?
b) Now read the lines from 31 to 35. Can you guess what he is meditating on?
Ans:(a) Yes, we found some changes in Jazz player. He put his still down and eyes still closed but ears brighter up. He was started to play some religious musical notes in a low voice.
b) He was meditating that he wanted to tell that he was a Black Man to all the world..

6) How has he held his instrument?
Ans: His instrument saxophone was hung from his neck by a wire coat hanger.

7) Read the lines from 29 to 41. It gives a picture. Can you imagine that? Try to get that picture in your mind. If you can, draw the picture.
Ans: Lines 29-41 create the picture of the man playing his instrument. The minute he puts his musical instrument to his mouth, he undergoes a transformation. As he preaches his Black Gospel of Jazz through his music, he changes from being a black man to a bird, soaring high in the sky. This transformation is symbolic of the liberating spirit of music. It also shows that music has no divisive boundaries.

8) 'Preaching it with words' (line 35). What does 'it' stand for here?
Ans: 'it' stands for the Black Gospel of Jazz.

9) 'He is no longer a man', says the poet (line 37). Who else is he supposed to be if he is no longer man?
Ans: The poet said that if he is no longer a man, he became a bird.

10) Read the last ten words of the poem. You may observe a change in the tone. What is that about?
Ans: The tone in the last ten words is of despondence (loss of hope). The speaker says that the Jazz player, who transformed himself into a bird with the power of music, may once again *(Contd….)*

Biology

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PRINCIPLES OF INHERITANCE AND VARIATION

20. The given figure of a human hand shows a pedigree analysis. Answer the following questions based on the figure.
a) In the pedigree which character is represented?
b) What is represented by circles and squares?
c) Which one is heterozygous, male or female? Give reason.
d) Give reasons, whether the above character is sex linked or not.
e) What is the probability of the disorder occurring in fifth child?



Ans:- a) Polydactyly, an autosomal dominant trait.
b) Circles represent females.
Squares represent males.
c) The trait is present in male (father) because the square symbol is darkened. It is heterozygous.
In homozygous state all the children would have polydactyly. It is not so.
d) It is not sex-linked because sex-linked trait can be transferred by father to daughter only.
e) The chance of fifth child becoming polydactylous is 50% as father is heterozygous.

21. Study the given pedigree chart and answer the questions that follow:



a) Is the trait recessive or dominant?
b) Is the trait sex-linked or autosomal?
c) Give the genotypes of the parents shown in generation I and their third child shown in generation II and first grand child shown in generation III.
Ans:- (a) Dominant
(b) Autosomal
(c) (i) aa (mother), Aa (father) (ii) Aa (iii) Aa

24. Study the given pedigree chart and answer the questions that follow:



a) Is the trait recessive or dominant?
b) Is the trait sex-linked or autosomal?
c) Give the genotype of the parents in generation I and their and fourth child in generation II.
Ans:- a) Recessive b) Autosomal
c) Aa, Aa, aa, Aa

****

MOLECULAR BASIS OF INHERITANCE

1. Who proposed the Double helix model of DNA?
Ans:- James D. Watson & F.H.C. Crick proposed the Double helix model of DNA in 1953.

2. What is a gene?
Ans:- A gene is a segment of DNA that has complete information to synthesise a polypeptide or even a specific DNA.

3. What is the function of a regulat or gene?
Ans:- The function of a regulator gene is to code for a protein that controls the expression of other genes usually at the level of transcription.

4. What is the chemical composition of DNA?
Ans:- DNA is made up of deoxyribose sugars, phosphoric acid molecules and nitrogenous bases which are purines and pyramidines.

5. Who found out the presence of the phosphoric acid and deoxyribose sugar in DNA?
Ans:- Levene found out the presence of the phosphoric acid and deoxyribose sugar in DNA.

6. Mention the purine bases present in DNA?
Ans:- The purine bases present in DNA are - adenine (A) and guanine (G).

7. Mention the pyramidine bases present in DNA?
Ans:-The pyramidine bases present in DNA arecytosine (C) and thymine (T).

8. Who noticed that purines are always equal to the pyramidines?
Ans:- Erwin Chargaff measured the quantity of the bases in DNA and noticed that A = T, and so concluded that purines are always equal to the pyramidines

‘ಗುಲಾಮಗಿರಿ ಕಿತ್ತೆಸೆಯಬೇಕಿದೆ’

ನಾರಾಯಣ ಗುರು- ಮಹಾತ್ಮ ಗಾಂಧಿ ಐತಿಹಾಸಿಕ ಸಂವಾದದ ಶತಮಾನೋತ್ಸವ

ಪ್ರಮುಖ ಅಂಶಗಳು
- ಮೈದಾನಕ್ಕೆ ಗುರು-ಗಾಂಧಿ ಹೆಸರು ನಾಮಕರಣ
- ಉದ್ಯಾನ, ಕ್ರೀಡಾಂಗಣ ಅಭಿವೃದ್ಧಿ: ಖಾದರ್
- ಸಮಾರಂಭದಲ್ಲಿ ಗಾಂಧಿ ಸಂವಾದದ ಮೆಲುಕು

ಪ್ರಜಾವಾಣಿ ವಾರ್ತೆ

ಶತಮಾನೋತ್ಸವ ಸಮಾರಂಭದಲ್ಲಿ ಅಧ್ಯಯನ ಪೀಠದ ಕಟ್ಟಡ ವಿಸ್ತರಣೆ ಕಾಮಗಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು —ಪ್ರಜಾವಾಣಿ ಚಿತ್ರ

ಮಂಗಳೂರು: ‘ಆರ್ಥಿಕ- ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಗದೇ, ಅಸಮಾನತೆ- ಗುಲಾಮಗಿರಿ ವ್ಯವಸ್ಥೆ ಕಿತ್ತೆಸೆಯದೇ ಸ್ವಾತಂತ್ರ್ಯ ಯಶಸ್ವಿಯಾಗಲು ಸಾಧ್ಯವಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೇರಳದ ವರ್ಕಲ ಶಿವಗಿರಿ ಮಠ, ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಆಶ್ರಯದಲ್ಲಿ ಇಲ್ಲಿ ಬುಧವಾರ ನಡೆದ ಶತಮಾನದ ಮಹಾ ಪ್ರಸ್ಥಾನ ಬ್ರಹ್ಮಶ್ರೀ ನಾರಾಯಣ ಗುರು- ಮಹಾತ್ಮ ಗಾಂಧಿ ಐತಿಹಾಸಿಕ ಸಂವಾದದ ಶತಮಾನೋತ್ಸವ, ಗುರುವಿನ ಮಹಾ ಸಮಾಧಿ ಶತಾಬ್ದಿ, ಸರ್ವ ಮತ ಸಮ್ಮೇಳನದ ಶತಮಾನೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಪ್ರಬಲ ಸಮುದಾಯದ ವ್ಯಕ್ತಿ ಎದುರಾದಾಗ ಸ್ವಾಮಿ ಎನ್ನುವ, ದಲಿತ ಸಮುದಾಯದ ವ್ಯಕ್ತಿ ಎಷ್ಟೇ ಶ್ರೀಮಂತ ಆದರೂ ಏಕವಚನದಲ್ಲಿ ಮಾತನಾಡಿಸುವ ವ್ಯವಸ್ಥೆ ಇದೆ. ಇದೇ ಗುಲಾಮಗಿರಿ ಸಂಕೇತ’ ಎಂದರು.

‘1925ರಲ್ಲಿ ನಡೆದ ಗಾಂಧೀಜಿ- ನಾರಾಯಣಗುರುಗಳ ನಡುವಿನ ಸಂವಾದ, 1931ರಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ನಡುವಿನ ಸಂವಾದಗಳಿಗೆ ಐತಿಹಾಸಿಕ ಮಹತ್ವವಿದೆ’ ಎಂದರು.

ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್, ‘ಈ ಐತಿಹಾಸಿಕ ಕಾರ್ಯಕ್ರಮದ ನೆನಪಿಗೆ ಈ ಮೈದಾನಕ್ಕೆ ಗುರು-ಗಾಂಧಿ ಮೈದಾನ ಎಂದು ನಾಮಕರಣ ಮಾಡಿ, ಉದ್ಯಾನ, ಕ್ರೀಡಾಂಗಣ ಅಭಿವೃದ್ಧಿ ಪಡಿಸಲಿದ್ದೇವೆ’ ಎಂದರು.

ಐದು ಎಕರೆ ಜಾಗ

‘ಕೇರಳದ ವರ್ಕಲ ಶಿವಗಿರಿ ಮಠದವರು ರಾಜ್ಯದಲ್ಲಿ ಶಾಖಾ ಮಠವನ್ನು ಆರಂಭಿಸಲು 5 ಎಕರೆ ಜಮೀನು ಕೇಳಿದ್ದಾರೆ. ದಕ್ಷಿಣ ಕನ್ನಡ ಅಥವಾ ಉಡುಪಿ ಜಿಲ್ಲೆಯಲ್ಲಿ ಜಾಗ ಗುರುತಿಸಲು ಸೂಚಿಸಿದ್ದೇನೆ’ ಎಂದು ಸಿದ್ದರಾಮಯ್ಯ ಹೇಳಿದರು.

ಸಂವಿಧಾನದ ಮೌಲ್ಯಗಳು ಬೆದರಿಕೆ ಎದುರಿಸುತ್ತಿವೆ. ನಾರಾಯಣಗುರು- ಗಾಂಧೀಜಿ ಅವರ ತತ್ವಗಳ ಅನುಷ್ಠಾನಕ್ಕೆ ಪ್ರಯತ್ನಿಸಬೇಕು
ಕೆ.ಸಿ.ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ, ಕಾಂಗ್ರೆಸ್

ಇಂದಿನ ಗೊಂದಲಮಯ ಸಂದರ್ಭದಲ್ಲಿ ನಾರಾಯಣ ಗುರುಗಳ ಸಂದೇಶವನ್ನು ಅರ್ಥೈಸುವುದು ಬಲು ಮುಖ್ಯ
ಬಿ.ಕೆ.ಹರಿಪ್ರಸಾದ್, ಆಯೋಜನಾ ಸಮಿತಿ ಅಧ್ಯಕ್ಷ

ಅಪಘಾತ: 4 ಸಾವು

ಜಮಖಂಡಿ (ಬಾಗಲಕೋಟೆ): ತಾಲ್ಲೂಕಿನ ಸಿದ್ದಾಪುರ ಬಳಿ ಪ್ರಭು ಲಿಂಗೇಶ್ವರ ಸಕ್ಕರೆ ಕಾರ್ಖಾನೆ ಬಳಿ ಮಂಗಳವಾರ ರಾತ್ರಿ ಕಬ್ಬು ತುಂಬಿದ್ದ ಟ್ರ್ಯಾಕ್ಟರ್‌ಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದು ನಾಲ್ವರು ಮೃತಪಟ್ಟಿದ್ದಾರೆ.

‘ಸಿದ್ದಾಪುರ ಗ್ರಾಮದ ಪ್ರವೀಣ ಶೇಡಬಾಳ (22), ವಿಶ್ವನಾಥ ಕಂಬಾರ(17), ಗಣೇಶ ಅಳ್ಳಿಮಟ್ಟಿ(20) ಮತ್ತು ಪ್ರಜ್ವಲ್ ಶೇಡಬಾಳ (17) ಮೃತರು. ಮುಧೋಳ ತಾಲ್ಲೂಕಿನ ಶಿರೋಳ ಗ್ರಾಮದ ಕಾಡಸಿದ್ಧೇಶ್ವರ ದೇವಸ್ಥಾನದ ಜಾತ್ರೆ ನೋಡಲು ನಾಲ್ವರೂ ಕಾರಿನಲ್ಲಿ ಹೋಗುತ್ತಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಸುಗ್ಗಿ ಸಂಭ್ರಮಕ್ಕೆ ಅಣಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಡಿ. 4ರಂದು ಪುತ್ತರಿ (ಹುತ್ತರಿ) ಸಂಭ್ರಮ ಗರಿಗೆದರಲಿದೆ. ಕಕ್ಕಬ್ಬೆಯ ಪಾಡಿ ಶ್ರೀಇಗ್ಗುತ್ತಪ್ಪ ದೇವಸ್ಥಾನದಲ್ಲಿ 4ರಂದು ರಾತ್ರಿ 8.10ಕ್ಕೆ ನೆರೆ ಕಟ್ಟುವುದು, 9.10ಕ್ಕೆ ಕದಿರು ತೆಗೆಯುವುದು, 10.10ಕ್ಕೆ ತೀರ್ಥಪ್ರಸಾದ ವಿತರಣೆ ನಡೆಯಲಿದೆ.

ವನ್ಯಜೀವಿ ಮಾನವ ಸಂಘರ್ಷ ತಡೆಗೆ ಕಮಾಂಡ್ ಸೆಂಟರ್ ಆರಂಭ

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ‘ಮಾನವ ಹಾಗೂ ವನ್ಯಜೀವಿ ಸಂಘರ್ಷ ತಡೆಯಲು ನಾಗರಹೊಳೆ, ಮಲೆಮಹದೇಶ್ವರ ಬೆಟ್ಟ, ಕಾಳಿ, ಮಡಿಕೇರಿ ವನ್ಯಧಾಮಗಳಲ್ಲಿ ಕಮಾಂಡ್ ಕೇಂದ್ರ ತೆರೆಯಲಾಗಿದೆ’ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಹೇಳಿದರು.

ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಅರಣ್ಯ ಇಲಾಖೆಯ ಕಚೇರಿ ಆವರಣದಲ್ಲಿ ಸಮಗ್ರ ಕಮಾಂಡ್ ಸೆಂಟರ್ ಉದ್ಘಾಟಿಸಿದ ಅವರು, ‘ಅರಣ್ಯದೊಳಗೆ ಗಸ್ತು ಹೆಚ್ಚಿಸಲು ಇದು ಸಹಕಾರಿ. ಚಿಕ್ಕಮಗಳೂರು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಮೈಸೂರು ವಿಭಾಗ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಹಾಸನ ವಲಯದಲ್ಲೂ ಸೆಂಟರ್ ತೆರೆಯಲಾಗುವುದು. ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಕೇಂದ್ರವನ್ನು ಅಧಿವೇಶನದ ನಂತರ ಉದ್ಘಾಟಿಸಲಾಗುವುದು’ ಎಂದರು.

ಸಿಬ್ಬಂದಿ ಕಾಡಿನಲ್ಲಿ ಎಷ್ಟು ಹೊತ್ತು ಗಸ್ತು ತಿರುಗುತ್ತಾರೆ ಎಂದು ಗಮನಿಸಲು ಇ-ಗಸ್ತು ತಂತ್ರಾಂಶ ರೂಪಿಸಿದ್ದು, ಎಂ.ಸ್ಟ್ರೈಪ್ ಜೊತೆಗೆ ಜಾರಿಗೆ ಸೂಚಿಸಲಾಗಿದೆ
ಈಶ್ವರ ಖಂಡ್ರೆ, ಸಚಿವ

‘ಈ ಕೇಂದ್ರದಲ್ಲಿ ಕೃತಕ ಬುದ್ಧಿಮತ್ತೆ ಕ್ಯಾಮೆರಾ, ಥರ್ಮಲ್ ಡ್ರೋನ್ ಕ್ಯಾಮೆರಾ, ಆಧುನಿಕ ತಂತ್ರಜ್ಞಾನ ಆಧಾರಿತ ಪರಿಕರಗಳು ಇರಲಿದ್ದು, ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇರಿಸಲಾಗುವುದು. ಯಾವ ಗ್ರಾಮಗಳ ವನ್ಯಜೀವಿ ಬಳಿ ಬಂದಿವೆ ಎಂಬ ಅರಿತು ಕ್ರಮ ವಹಿಸಿ ಜೀವಹಾನಿ ತಡೆಯಬಹುದು’ ಎಂದರು.

ನಾಳೆಯಿಂದ ಗೇಟ್ ಕವಚ ತೆರವು ಆರಂಭ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದ ಎಲ್ಲಾ 33 ಕ್ರೆಸ್ಟ್ ಗೇಟ್‌ಗಳನ್ನು ಬದಲಿಸಿ ಹೊಸ ಗೇಟ್‌ಗಳನ್ನು ಅಳವಡಿಸುವ ಕೆಲಸಕ್ಕೆ ಶುಕ್ರವಾರದಿಂದ (ಡಿ.5) ಚಾಲನೆ ಸಿಗುವ ಸಾಧ್ಯತೆ ಇದೆ.

‘ಜಲಾಶಯದಲ್ಲಿ ಸದ್ಯ 68 ಟಿಎಂಸಿ ಅಡಿ ನೀರಿದೆ. ಅದು 40 ಟಿಎಂಸಿ ಅಡಿಗೆ ಇಳಿದ ಬಳಿಕ, ಬಹುತೇಕ ಡಿಸೆಂಬರ್ 3ನೇ ವಾರ ಹೊಸ ಗೇಟ್ ಅಳವಡಿಕೆ ಕೆಲಸ ಅರಂಭವಾಗಲಿದೆ. ಗೇಟ್‌ಗಳ ಕವಚಗಳ ತೆರವು ಕಾರ್ಯ ಶುಕ್ರವಾರದಿಂದ ಆರಂಭವಾಗಲಿದೆ’ ಎಂದು ಸೆಕ್ಷನ್ ಎಂಜಿನಿಯರ್ ಕಿರಣ್ ತಿಳಿಸಿದರು.

‘ಹೊಸಪೇಟೆ ಮತ್ತು ಗದಗನಲ್ಲಿ ತಲಾ 7ರಂತೆ 14 ಗೇಟ್‌ಗಳು ಸಿದ್ಧವಾಗಿವೆ. ಒಂದು ಗೇಟ್ ಈಗಾಗಲೇ ಸಿದ್ಧವಿದ್ದು, 15 ಗೇಟ್ ಲಭ್ಯವಿವೆ. ಒಂದು ಹಳೆ ಗೇಟ್ ತೆಗೆದು ಹೊಸ ಗೇಟ್ ಅಳವಡಿಕೆಗೆ 14 ದಿನ ಬೇಕು. ಮುಂದಿನ ಜೂನ್ ಒಳಗೆ ಎಲ್ಲ 33 ಗೇಟ್ ಅಳವಡಿಸುವ ಗುರಿಯಿದೆ’ ಎಂದರು.

ಸಂವಿಧಾನದ ಹೆಜ್ಜೆಯ ಜಾಡು..

ಸಂವಿಧಾನವೇ ಬೆಳಕು

• ಚಂದ್ರಹಾಸ ಹಿರೇಮಳಲಿ

ದಶಕದಿಂದೀಚೆಗೆ ಸಂವಿಧಾನ ಕುರಿತು ದೊಡ್ಡಮಟ್ಟದ ಚರ್ಚೆಗಳು ನಡೆಯುತ್ತಿವೆ. ರಾಜಕೀಯ ನಾಯಕರು, ಪಂಥೀಯ ವಾದಿಗಳು, ವಿದ್ಯಾರ್ಥಿಗಳೂ ಸೇರಿದಂತೆ ಸಾರ್ವಜನಿಕರು ಎಲ್ಲರೂ ಒಂದಲ್ಲ ಒಂದು ಸಂದರ್ಭಗಳಲ್ಲಿ ‘ಸಂವಿಧಾನ’ ಪದ ಪ್ರಯೋಗ ಮಾಡುತ್ತಲೇ ಇರುತ್ತಾರೆ. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಹೆಸರೂ ಬಳಕೆಯಾಗುತ್ತಿರುತ್ತದೆ. ಹೌದು.. ಹಾಗಾದರೆ ಸಂವಿಧಾನ ಎಂದರೆ ಏನು? ಸಂವಿಧಾನಕ್ಕೆ ಏಕಿಷ್ಟು ಮಹತ್ವ ನೀಡಲಾಗುತ್ತಿದೆ. ನಮಗೆ ಸಂವಿಧಾನ ಎಷ್ಟು ಅನಿವಾರ್ಯ, ಸಂವಿಧಾನಕ್ಕೂ, ಅಂಬೇಡ್ಕರ್ ಅವರಿಗೂ ಏನು ಸಂಬಂಧ? ಅಂಬೇಡ್ಕರ್ ಅವರನ್ನು ನಾವು ಸಂವಿಧಾನಶಿಲ್ಪಿ ಎಂದು ಏಕೆ ಕರೆಯುತ್ತೇವೆ? ಭಾರತದ ಸಂವಿಧಾನ ರೂಪುಗೊಂಡ ರಚನಾತ್ಮಕ ನೆಲಗಟ್ಟಿನ ಬಗ್ಗೆ ಒಂದು ಹುಡುಕಾಟ ಇಲ್ಲಿದೆ.

ಭಾರತ ಎನ್ನುವುದು ಇತಿಹಾಸದ ಪುಟಗಳಲ್ಲಿ ಎಂದಿಗೂ ಒಂದು ನಿರ್ದಿಷ್ಟ ಭೂಪ್ರದೇಶ ಒಳಗೊಂಡ ದೇಶವಾಗಿರಲಿಲ್ಲ. ಮೌರ್ಯರು, ಗುಪ್ತರು, ಮೊಘಲರು ಸೇರಿದಂತೆ ಆಯಾ ಕಾಲಘಟ್ಟದಲ್ಲಿ ರಾಜರ ಆಳ್ವಿಕೆಗೆ ಒಳಪಟ್ಟ ಆಯಾ ಪ್ರದೇಶಗಳು ಒಂದು ಸಂಸ್ಥಾನ, ಸಾಮ್ರಾಜ್ಯಗಳಾಗಿದ್ದವು. ಯುದ್ಧ, ಅದರ ಬೆನ್ನಲ್ಲೇ ನಡೆವ ಸಂಧಾನಗಳ ಆಧಾರದಲ್ಲಿ ಭೂಪಟವೂ ಬದಲಾಗುತ್ತಾ ಸಾಗುತ್ತಿತ್ತು. ಬ್ರಿಟಿಷರೂ ನೇರವಾಗಿ ಇಡೀ ಭಾರತವನ್ನು ಆಳ್ವಿಕೆ ಮಾಡಲಿಲ್ಲ. ಹಲವು ಸಂಸ್ಥಾನಗಳು ಇದ್ದವು. 1885ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ನಂತರ ಜನಜಾಗೃತಿ ಮೂಡಿ, ಸಂಘಟಿತರಾಗಿ ಸ್ವಾತಂತ್ರ್ಯಕ್ಕಾಗಿ ಜನಪರ ಚಳವಳಿಗಳು ಮೊದಲಾದವು. ಶತಮಾನಗಳಿಂದ ರಾಜರ ಆಳ್ವಿಕೆಗೆ ಒಳಪಟ್ಟ ಜನರಿಗೆ ತಮ್ಮನ್ನು ತಾವು ಆಳ್ವಿಕೆ ಮಾಡಿಕೊಳ್ಳಲು, ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರವಾದ ಹೊಸ ಮಾದರಿಯ ಆಡಳಿತ ವ್ಯವಸ್ಥೆಯೊಂದನ್ನು ಕಟ್ಟಿಕೊಳ್ಳಲು ಒಂದು ಉತ್ತಮ ಸಂವಿಧಾನದ ಅಗತ್ಯವಿತ್ತು. ಸ್ವಾತಂತ್ರ್ಯ ಚಳವಳಿಯ ಜತೆಜತೆಗೆ ಇಂತಹದೊಂದು ಕನಸು ಹೆಣೆಯುವ ನಡೆಗೂ ವಿಭಜಿತ ಭಾರತ ತಯಾರಾಗುತ್ತಲೇ ಇತ್ತು.

ಅದು 1939ನೇ ಇಸವಿ. ದ್ವಿತೀಯ ಮಹಾಯುದ್ಧಕ್ಕೆ ಆಗಲೇ ಜರ್ಮನಿ, ಜಪಾನ್ ಮತ್ತು ಇಟಲಿ ದೇಶಗಳು ಮುನ್ನುಡಿ ಬರೆದಿದ್ದವು. 1945ರವರೆಗೆ ನಡೆದ ಮಹಾಯುದ್ಧ ಹಲವು ದೇಶಗಳ ಸ್ಥಿತಿಗತಿಗಳನ್ನೇ ಬದಲಾಯಿಸಿತು. ಈ ಸನ್ನಿವೇಶದಲ್ಲಿ ಭಾರತವನ್ನೂ ಆಳುತ್ತಿದ್ದ ‘ಸೂರ್ಯಮುಳುಗದ ಸಾಮ್ರಾಜ್ಯ’ ಎಂಬ ಸ್ವಘೋಷಿತ ಬ್ರಿಟನ್ ಸಂಕಷ್ಟಕ್ಕೆ ಸಿಲುಕಿತ್ತು. ಯುದ್ಧಕ್ಕೆ ಭಾರತೀಯರ ನೆರವಿನ ಅಗತ್ಯ ಮನಗಂಡ ಬ್ರಿಟಿಷರು ಯುದ್ಧದ ನಂತರ ಸ್ವಾತಂತ್ರ್ಯ ನೀಡುವ ಕುರಿತು ಚರ್ಚಿಸುವ ಭರವಸೆ ನೀಡಿ, ಭಾರತೀಯ ನಾಯಕರ ಸಹಕಾರ ಪಡೆಯುವಲ್ಲಿ ಯಶಸ್ವಿಯಾದರು.

ಯುದ್ಧಕ್ಕೂ ಮೊದಲು ಬ್ರಿಟಿಷರು 1935ರ ಭಾರತ ಸರ್ಕಾರ ಕಾಯ್ದೆ ಜಾರಿಗೆ ತಂದಿದ್ದರು. ಈ ಕಾಯ್ದೆ ಭಾರತದ ರಾಜಕೀಯ ಸುಧಾರಣೆ ಗಳಲ್ಲಿ ಒಂದು ಹೊಸ ಯುಗವನ್ನೇ ಆರಂಭಿಸಿತು. ಈ ಕಾಯ್ದೆಗೆ ಅನುಗುಣವಾಗಿ ಪ್ರಾಂತ್ಯಗಳ ಸ್ವಾಯತ್ತತೆಯನ್ನು ಜಾರಿಗೊಳಿಸಲು 1937ರಲ್ಲಿ ಪ್ರಾಂತ್ಯಗಳ ಶಾಸಕಾಂಗಗಳಿಗೆ ಚುನಾವಣೆ ನಡೆದವು. 11 ಪ್ರಾಂತ್ಯಗಳ ಪೈಕಿ ಎಂಟರಲ್ಲಿ ಕಾಂಗ್ರೆಸ್, ಮೂರರಲ್ಲಿ ಕಾಂಗ್ರೆಸೇತರ ಸರ್ಕಾರಗಳು ಅಧಿಕಾರ ಹಿಡಿದವು. ನಂತರ ಆರಂಭವಾದ ದ್ವಿತೀಯ ಮಹಾಯುದ್ಧ ಭಾರತದ ಮೇಲೂ ಪ್ರಭಾವ ಬೀರಿ, ಬ್ರಿಟಿಷ್ ಸರ್ಕಾರ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಮಧ್ಯೆ ಭಿನ್ನಭಿಪ್ರಾಯ ಸೃಷ್ಟಿಯಾದವು. ಭಾರತೀಯರ ವಿಶ್ವಾಸಗಳಿಸಲು, ಭಾರತದ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಬ್ರಿಟನ್ 1942ರಲ್ಲಿ ಭಾರತಕ್ಕೆ ಕ್ರಿಪ್ಸ್ ಮಿಷನ್ ಕಳುಹಿಸಿತು. ಈ ಮಿಷನ್ ನೇತೃತ್ವ ವಹಿಸಿದ್ದ ಸ್ಟಾಫರ್ಡ್ ಕ್ರಿಪ್ಸ್ ನೀಡಿದ ಹಲವು ಸಲಹೆಗಳಲ್ಲಿ ದ್ವಿತೀಯ ಮಹಾಯುದ್ಧ ಮುಗಿದ ನಂತರ ಭಾರತಕ್ಕೆ ಪ್ರತ್ಯೇಕವಾದ ಹೊಸ ಸಂವಿಧಾನ ರಚಿಸಲು ಕ್ರಮ ಕೈಗೊಳ್ಳುವುದು ಪ್ರಮುಖ ಅಂಶವಾಗಿತ್ತು.

1946ರಲ್ಲಿ ಭಾರತಕ್ಕೆ ಬಂದ ಲಾರೆನ್ಸ್, ಕ್ರಿಪ್ಸ್ ಮತ್ತು ವಿ.ವಿ. ಅಲೆಕ್ಸಾಂಡರ್ ಅವರನ್ನು ಒಳಗೊಂಡ ತ್ರಿಸದಸ್ಯ ಕ್ಯಾಬಿನೆಟ್ ನಿಯೋಗ ಹಲವು ರಾಜಕೀಯ ನಾಯಕರ ಜತೆ ಚರ್ಚೆ ನಡೆಸಿ, ತಕ್ಷಣ ಸಂವಿಧಾನ ರಚನಾ ಸಭೆಯನ್ನು ರಚಿಸಲು ಶಿಫಾರಸು ಮಾಡಿತು. ಬ್ರಿಟಿಷ್ ಇಂಡಿಯಾ ಪ್ರದೇಶದಲ್ಲಿ ಚುನಾವಣೆ ನಡೆದು, ದೇಶಿ ಸಂಸ್ಥಾನಗಳಿಂದ ನಾಮಕರಣಗೊಂಡ 389 ಸದಸ್ಯರನ್ನು ಒಳಗೊಂಡ ಸಂವಿಧಾನ ರಚನಾ ಸಭೆ ಅಸ್ತಿತ್ವಕ್ಕೆ ಬಂದಿತು. ಸಭೆ 1946 ಡಿಸೆಂಬರ್ 11ರಂದು ಮೊದಲ ಸಭೆ ಸೇರಿತು. ಡಾ.ಬಾಬು ರಾಜೇಂದ್ರ ಪ್ರಸಾದ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಭಾರತ ವಿಭಜನೆಯಾದ ಪರಿಣಾಮ ಸಂವಿಧಾನ ರಚನಾ ಸಭೆಯ ಸದಸ್ಯರ ಸಂಖ್ಯೆ 299ಕ್ಕೆ ಇಳಿಯಿತು. ಅಂಬೇಡ್ಕರ್ ಅವರು ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ನೇಮಕವಾದರು. ಅವರ ನೇತೃತ್ವದಲ್ಲಿ 2 ವರ್ಷ 11 ತಿಂಗಳು 17 ದಿನಗಳು ಕಾರ್ಯ ನಿರ್ವಹಿಸಿದ ಸಭೆ, ಬ್ರಿಟಿಷರು ಭಾರತದಲ್ಲಿ ಜಾರಿಗೆ ತಂದ ಕಾಯ್ದೆಗಳು, ಬ್ರಿಟಿಷ್ ಸಂವಿಧಾನ ಸೇರಿದಂತೆ ವಿವಿಧ ದೇಶಗಳ ಸಂವಿಧಾನಗಳ ಅಧ್ಯಯನ ನಡೆಸಿ, ಎಲ್ಲ ಸಂವಿಧಾನಗಳ ಉತ್ತಮ ಅಂಶಗಳನ್ನು ಕಲೆಹಾಕಿ, 11 ಅಧಿವೇಶನಗಳಲ್ಲಿ ಚರ್ಚೆ ನಡೆಸಿ, ಭಾರತಕ್ಕೆ ಹೊಂದುವಂತಹ 395 ವಿಧಿಗಳು, 8 ಅನುಸೂಚಿಗಳನ್ನು ಒಳಗೊಂಡ ಸಂವಿಧಾನವನ್ನು ರಚಿಸಿತು (ಪ್ರಸ್ತುತ 24 ಭಾಗಗಳು, 12 ಅನುಸೂಚಿಗಳಿವೆ).

1949 ನವೆಂಬರ್ 26ರಂದು ಸಂವಿಧಾನವನ್ನು ಅಂಗೀಕರಿಸಲಾಯಿತು. ಲಾಹೋರ್ ಅಧಿವೇಶನದಲ್ಲಿ ಘೋಷಿಸಿದ್ದ ಪೂರ್ಣ ಸ್ವರಾಜ್ (1929 ಜನವರಿ 26) ನೆನಪಿಗಾಗಿ 1950 ಜನವರಿ 26ರಿಂದ ಅಧಿಕೃತವಾಗಿ ಜಾರಿಗೊಳಿಸಲಾಯಿತು. ಆ ದಿನವನ್ನು ಗಣರಾಜ್ಯ ದಿನವಾಗಿ ಪ್ರತಿ ವರ್ಷ ಆಚರಿಸಲಾಗುತ್ತಿದೆ. ಚುನಾಯಿತ ಪ್ರತಿನಿಧಿ ರಾಷ್ಟ್ರದ ಮುಖ್ಯಸ್ಥರಾಗಿದ್ದರೆ ಅಂತಹ ವ್ಯವಸ್ಥೆಯನ್ನು ಗಣರಾಜ್ಯ ಎನ್ನುತ್ತೇವೆ. ಭಾರತದ ರಾಷ್ಟ್ರಪತಿ ದೇಶದ ಮುಖ್ಯಸ್ಥರಾಗಿ, ಪ್ರಧಾನಮಂತ್ರಿ ಸರ್ಕಾರದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಾರೆ. ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದ್ ಮೊದಲ ರಾಷ್ಟ್ರಪತಿ, ಜವಾಹರಲಾಲ್ ನೆಹರು ಮೊದಲ ಪ್ರಧಾನಿಯಾದರು.

ಸಂಗ್ರಹಿಸಿದ ಎಲ್ಲ ಮಾಹಿತಿಯನ್ನು ಪರಿಷ್ಕರಿಸಿ, ವಿಗಂಡಣೆ ಮಾಡಿ, ಅರ್ಥ ವಿವರಣೆ ನೀಡಿ, ಸರ್ವ ಜನಾಂಗವೂ ಒಪ್ಪುವಂತಹ ಶ್ರೇಷ್ಠ ಸಂವಿಧಾನವನ್ನು ರೂಪಿಸುವಲ್ಲಿ ಶ್ರಮಿಸಿದ ಸಂವಿಧಾನ ರಚನಾ ಸಭೆಯ ಕರಡು ಸಮಿತಿ ಅಧ್ಯಕ್ಷರಾಗಿದ್ದ ಅಂಬೇಡ್ಕರ್ ಅವರನ್ನು ಭಾರತದ ‘ಸಂವಿಧಾನ ಶಿಲ್ಪಿ’ ಎಂದೇ ಕರೆಯಲಾಗುತ್ತಿದೆ.

ಸಂವಿಧಾನ ಎಂದರೇನು?

ಕಾನೂನು ರೂಪಿಸುವ (ಶಾಸಕಾಂಗ), ಜಾರಿಗೆ ತರುವ (ಕಾರ್ಯಾಂಗ) ಮತ್ತು ಕಾನೂನು ಪಾಲಿಸದ, ವಿರುದ್ಧ ನಡೆದುಕೊಳ್ಳುವವರಿಗೆ ಶಿಕ್ಷೆ ವಿಧಿಸುವ (ನ್ಯಾಯಾಂಗ) ವ್ಯವಸ್ಥೆಯನ್ನು ಸರ್ಕಾರ ಎನ್ನುತ್ತೇವೆ.

ಇಂತಹ ಕಾನೂನುಗಳನ್ನು ಕೆಲ ಮೂಲಭೂತ ನಿಯಮಗಳಿಗೆ ಅನುಗುಣವಾಗಿ ರೂಪಿಸಬೇಕು. ಸರ್ಕಾರದ ರಚನೆಯಾಗಬೇಕು. ಆಡಳಿತದ ಕರ್ತವ್ಯ ನಿರ್ವಹಿಸಬೇಕು. ನ್ಯಾಯ ತೀರ್ಪು ನೀಡುವಾಗ ಅನುಸರಿಸಬೇಕು. ಪ್ರಜೆಗಳೂ ಸಹ ತಮ್ಮ ಹಕ್ಕುಗಳನ್ನು ಅನುಭವಿಸಿ, ಕರ್ತವ್ಯಗಳನ್ನು ಪಾಲಿಸಬೇಕು. ಅಂತಹ ಮೂಲಭೂತ ನಿಯಮಗಳ ಸಂಕಲನವೇ ಸಂವಿಧಾನ.

ಸಂವಿಧಾನ ಎಂಬ ಪದ ಕಾನ್‌ಸ್ಟಿಟ್ಯೂಷನ್ ಎಂಬ ಇಂಗ್ಲಿಷ್ ಪದದ ಕನ್ನಡ ರೂಪಾಂತರ. ಕಾನ್‌ಸ್ಟಿಟ್ಯೂಷನ್ ಎಂದರೆ ಸಂಯೋಜಿಸು, ನಿಯೋಜಿಸು ಅಥವಾ ವಿಧಿವತ್ತಾಗಿ ಪಾಲಿಸುವುದು ಎಂದು ಅರ್ಥ. ಸಂವಿಧಾನವು ರಾಷ್ಟ್ರದ ಸರ್ವಶ್ರೇಷ್ಠ ಸಂಹಿತೆಯಾಗಿದ್ದು, ರಾಷ್ಟ್ರವನ್ನು ಮುನ್ನಡೆಸುವ ಸರ್ಕಾರ ಮತ್ತು ಪ್ರಜೆಗಳು ಸಂವಿಧಾನದ ಚೌಕಟ್ಟಿನಲ್ಲೇ ಸಾಗಬೇಕು.

An Initiative by:
SOCIAL WELFARE DEPARTMENT
For the Educational, Social & Economic Upliftment of Scheduled Castes
In Association with:

ಮಾಲೆ ವಿಸರ್ಜನೆ: ಅಂಜನಾದ್ರಿ ಬೆಟ್ಟದಲ್ಲಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಕೊಪ್ಪಳದ ಅಂಜನಾದ್ರಿಯಲ್ಲಿ ಹನುಮ ಮಾಲಾಧಾರಿಗಳು ಜಮಾಯಿಸಿದ್ದರು –ಚಿತ್ರ: ಭರತ್ ಕಂದಕೂರ (ಎಡಚಿತ್ರ). ಚಿಕ್ಕಮಗಳೂರಿನಲ್ಲಿ ಶೋಭಾಯಾತ್ರೆ ವೇಳೆ ಸೇರಿದ್ದ ಜನಸ್ತೋಮ –ಚಿತ್ರ: ಎ.ಎನ್‌ಮೂರ್ತಿ

ಗಂಗಾವತಿ (ಕೊಪ್ಪಳ ಜಿಲ್ಲೆ): ಹನುಮ ವ್ರತದ ಅಂಗವಾಗಿ ಮಾಲೆ ಧರಿಸಿದ್ದ ನಾಡಿನ ವಿವಿಧೆಡೆಯ ಲಕ್ಷಾಂತರ ಹನುಮ ಭಕ್ತರು ತಾಲ್ಲೂಕಿನ ಅಂಜನಾದ್ರಿ ಬೆಟ್ಟದ, ಆಂಜನೇಯನ ಸನ್ನಿಧಿಯಲ್ಲಿ ಬುಧವಾರ ಮಾಲೆ ವಿಸರ್ಜನೆ ಮಾಡಿದರು. ಈ ಸಂಭ್ರಮದಲ್ಲಿ ವಿದೇಶಿ ಪ್ರಜೆಗಳೂ ಭಾಗಿಯಾದರು.

ಭಕ್ತರು ಸಂಕಲ್ಪಕ್ಕೆ ತಕ್ಕಂತೆ ಕೇಸರಿ ಬಟ್ಟೆ ಹಾಗೂ ಕೊರಳಲ್ಲಿ ತುಳಸಿಯ ಮಾಲೆ ಧರಿಸಿ ಪ್ರತಿವರ್ಷವೂ ಅಂಜನಾದ್ರಿಯಲ್ಲಿಯೇ ವಿಸರ್ಜನೆ ಮಾಡುವುದು ವಾಡಿಕೆ. 2008ರಲ್ಲಿ ಇಲ್ಲಿ ಮಾಲೆ ವಿಸರ್ಜಿಸುವ ಸಂಪ್ರದಾಯ ಆರಂಭವಾಗಿದ್ದು ಹಿಂದಿನ ಎಲ್ಲ ವರ್ಷಗಳಿಗಿಂತಲೂ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬಂದಿದ್ದರು.

ಬೆಳಗಿನ ಜಾವ 3 ಗಂಟೆ ಸುಮಾರಿಗೆ ಬಂದ ಲಕ್ಷಾಂತರ ಭಕ್ತರು 575 ಮೆಟ್ಟಿಲುಗಳುಳ್ಳ ಬೆಟ್ಟವೇರಲು ಸರತಿಗಾಗಿ ಮುಗಿಬಿದ್ದಾಗ ನೂಕಾಟ ನಡೆಯಿತು. ಪೊಲೀಸರು ತಿರುಪತಿ ಮಾದರಿಯಲ್ಲಿ ಒಂದಷ್ಟು ಮಾಲಾಧಾರಿಗಳ ತಂಡವನ್ನು ಮಾಡಿ ಹಂತಹಂತವಾಗಿ ಬೆಟ್ಟಕ್ಕೆ ಕಳುಹಿಸಿ ದರ್ಶನ ಸರಾಗವಾಗುವಂತೆ ಮಾಡಿದರು. ಅಂಜನಾದ್ರಿ ಸಂಪೂರ್ಣ ಕೇಸರಿಮಯವಾಗಿತ್ತು. ಮಂಗಳವಾರ ರಾತ್ರಿಯಿಂದಲೇ ಮಾಲೆ ವಿಸರ್ಜನೆ ಆರಂಭವಾಗಿತ್ತು.

ಕೊಪ್ಪಳ, ಕಲಬುರಗಿ, ಬೀದರ್, ಬೆಳಗಾವಿ, ಧಾರವಾಡ, ಗದಗ, ಬಳ್ಳಾರಿ, ಬಾಗಲಕೋಟೆ, ವಿಜಯಪುರ, ವಿಜಯನಗರ ಹಾಗೂ ಹಾವೇರಿ ಜಿಲ್ಲೆಗಳು ಸೇರಿದಂತೆ ವಿವಿಧೆಡೆಯಿಂದ ನೆರೆಯ ಜಿಲ್ಲೆಗಳಿಂದ ಅನೇಕರು ಭಕ್ತರು ವಾಹನಗಳು ಹಾಗೂ ಪಾದಯಾತ್ರೆ ಮೂಲಕ ಬಂದು ಬೆಟ್ಟವೇರಿ ಭಕ್ತಿ ಸಮರ್ಪಿಸಿದರು. ಮಾರ್ಗದುದ್ದಕ್ಕೂ ಆಂಜನೇಯ ಹಾಗೂ ರಾಮನ ಸ್ಮರಣೆಯ ಹಾಡುಗಳು ಮೊಳಗಿದವು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ದತ್ತ ಜಯಂತಿ: ವಿಜೃಂಭಣೆಯ ಶೋಭಾಯಾತ್ರೆ

ಚಿಕ್ಕಮಗಳೂರು: ದತ್ತ ಜಯಂತಿ ನಿಮಿತ್ತ ವಿಶ್ವ ಹಿಂದೂ ಪರಿಷತ್, ಬಜರಂಗದಳ ಮತ್ತು ಶ್ರೀರಾಮ ಸೇನೆ ನೇತೃತ್ವದಲ್ಲಿ ಶೋಭಾಯಾತ್ರೆ ನಗರದಲ್ಲಿ ಬುಧವಾರ ವಿಜೃಂಭಣೆಯಿಂದ ನಡೆಯಿತು.

ಕಾಮಧೇನು ಮಹಾಶಕ್ತಿ ಗಣಪತಿ ದೇವಾಲಯ ಆವರಣದಿಂದ ಸಂಜೆ ಮೆರವಣಿಗೆ ಹೊರಟಿತು. ಅಲಂಕೃತ ವಾಹನದಲ್ಲಿ ಗುರುದತ್ತಾತ್ರೇಯರ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ಶೋಭಾಯಾತ್ರೆಗೆ ಚಾಲನೆ ನೀಡಲಾಯಿತು.

ಶ್ರೀರಾಮ ಸೇರಿ ಹಲವು ಸ್ತಬ್ಧಚಿತ್ರಗಳು ಗಮನಸೆಳೆದವು. ಪಟಾಕಿ ಸದ್ದು, ಸಾಂಸ್ಕೃತಿಕ ಕಲಾ ತಂಡಗಳ ಮೆರಗಿನಲ್ಲಿ ಶೋಭಾಯಾತ್ರೆ ಸಾಗಿತು. ಮೆರವಣಿಗೆಯುದ್ದಕ್ಕೂ ಭಗವಾಧ್ವಜಗಳ ಹಾರಾಟ ಜೋರಾಗಿತ್ತು. ಡಿ.ಜೆ ಅಬ್ಬರ, ಹಾಡು, ಸಂಗೀತಕ್ಕೆ ಯುವಕ -ಯುವತಿಯುರು ಕುಣಿದು ಕುಪ್ಪಳಿಸಿದರು.

ಮಾರ್ಗದುದ್ದಕ್ಕೂ ರಸ್ತೆಯ ಇಕ್ಕೆಲ, ಕಟ್ಟಡಗಳ ಮಹಡಿಗಳಲ್ಲಿ ನಿಂತಿದ್ದ ಜನ ಶೋಭಾಯಾತ್ರೆ ವೀಕ್ಷಿಸಿದರು. ಪೊಲೀಸರು ಬಿಗಿ ಭದ್ರತೆ ಒದಗಿಸಿದ್ದರು.

ಆಂಜನೇಯ ಮೂರ್ತಿಗೆ ಆವರಿಸಿದ ಬೆಂಕಿ

ಪ್ರಜಾವಾಣಿ ವಾರ್ತೆ

ಕೂಡಿಗೆ ಹನುಮ ಸೇನಾ ಸಮಿತಿಯ ಉತ್ಸವ ಮಂಟಪದ ಪ್ರದರ್ಶನದ ಹನುಮನ ಪ್ರತಿಮೆಗೆ ಬೆಂಕಿ ಹೊತ್ತಿಕೊಂಡಿತ್ತು

ಕುಶಾಲನಗರ (ಕೊಡಗು): ಹನುಮ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಏರ್ಪಡಿಸಿದ್ದ ವಿವಿಧ ಉತ್ಸವಗಳ ಮಂಟಪಗಳ ಶೋಭಾಯಾತ್ರೆ ವೇಳೆ ಬುಧವಾರ ನಸುಕಿನ 3 ಗಂಟೆಯಲ್ಲಿ ಬೆಂಕಿ ಅವಘಡ ಸಂಭವಿಸಿದೆ.

ಕೂಡುಮಂಗಳೂರು, ಕೂಡಿಗೆ ಹನುಮ ಸೇನಾ ಸಮಿತಿಯ ಉತ್ಸವ ಮಂಟಪದ ಪ್ರದರ್ಶನದ ವೇಳೆ ಸಿಡಿಸಿದ ಪಟಾಕಿಯಿಂದ ಹಾರಿದ ಕಿಡಿ ಉತ್ಸವದ ಮೂರ್ತಿಯೊಂದರ ಕೈಯೊಳಗೆ ಬಿದ್ದು, ಬೆಂಕಿ ಹೊತ್ತಿಕೊಂಡಿತು.

ಸಭಿಕರು, ಸಮಿತಿ ಕಾರ್ಯಕರ್ತರು ಸ್ಥಳದಿಂದ ಚದುರಿದರು. ಕೆಲವರು ಮೊಬೈಲ್ ಫೋನ್‌ನಿಂದ ಮಂಟಪದ ವಿಡಿಯೊ, ಫೋಟೊ ತೆಗೆದಿದ್ದಾರೆ. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು.

ಶ್ರೀರಂಗಪಟ್ಟಣ: ಸಂಕೀರ್ತನಾ ಯಾತ್ರೆ

ಶ್ರೀರಂಗಪಟ್ಟಣ: ಹಿಂದೂ ಜಾಗರಣ ವೇದಿಕೆ ಬುಧವಾರ ಆಯೋಜಿಸಿದ್ದ ಮೂಡಲ ಬಾಗಿಲು ಹನುಮಾನ್ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆಯಿಂದ ಶ್ರೀರಂಗಪಟ್ಟಣ ಕೇಸರಿಮಯವಾಗಿತ್ತು. ಜೈಶ್ರೀರಾಮ್, ಜೈ ಹನುಮಾನ್ ಘೋಷಣೆಗಳು ಮೊಳಗಿದವು.

ಜ್ಯೋತಿಷಿ ವಿ. ಭಾನುಪ್ರಕಾಶ್ ಶರ್ಮಾ ಯಾತ್ರೆಗೆ ಚಾಲನೆ ನೀಡಿದರು. ಯಾತ್ರೆ ಪ್ರಮುಖ ರಸ್ತೆಗಳಲ್ಲಿ ಸಾಗಿ ಶ್ರೀರಂಗನಾಥಸ್ವಾಮಿ ದೇವಾಲಯ ತಲುಪಿತು.

ಯಾತ್ರೆಯು ಜಾಮಿಯಾ ಮಸೀದಿ ಬಳಿ ಬರುತ್ತಿದ್ದಂತೆಯೇ ಮಾಲಾಧಾರಿಗಳು, ‘ಮಂದಿರವಲ್ಲೇ ಕಟ್ಟುವೆವು...’ ಎಂದು ಘೋಷಣೆ ಕೂಗಿದರು. ಆಗ ಪೊಲೀಸರು ಮತ್ತು ಮಾಲಾಧಾರಿಗಳ ನಡುವೆ ತಳ್ಳಾಟವೂ ನಡೆಯಿತು.

ಮಾಲಾಧಾರಿಗಳ ಸಭೆಯಲ್ಲಿ ಮಾತನಾಡಿದ ವೇದಿಕೆಯ ವಿಭಾಗೀಯ ಸಂಚಾಲಕ ಲೋಹಿತರಾಜ್ ಅರಸ್, ‘ಜಾಮಿಯಾ ಮಸೀದಿಯ ಜಾಗದಲ್ಲಿ ಹನುಮನ ಮಂದಿರ ಇದ್ದದ್ದು ನಿಜ. ಮತ್ತೆ ಮಂದಿರ ನಿರ್ಮಿಸಿ ಹನುಮನನ್ನು ಪ್ರತಿಷ್ಠಾಪಿಸುತ್ತೇವೆ’ ಎಂದರು. ಬಿಗಿ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಕರ್ನಾಟಕದಲ್ಲಿ ಶೇ 63ರಷ್ಟು ಭ್ರಷ್ಟಾಚಾರ: ನ್ಯಾ. ವೀರಪ್ಪ

ಒಂದನೇ ಪುಟದಿಂದ...

‘ನಾನು ಹೋದ ಕಡೆಯಲ್ಲೆಲ್ಲಾ ಆಸ್ಪತ್ರೆ, ಶಾಲೆ ಹಾಸ್ಟೆಲ್‌ಗಳಲ್ಲಿ ಭ್ರಷ್ಟಾಚಾರ ನಿರ್ಮೂಲನೆಗೆ ಶಪಥ ಕೈಗೊಳ್ಳುವಂತೆ ಅಲ್ಲಿನ ಸಿಬ್ಬಂದಿಗೆ ಪ್ರೇರೇಪಿಸುತ್ತಿದ್ದೇನೆ. ಈ ಯಜ್ಞದಲ್ಲಿ ವಕೀಲರೂ ಪಾಲ್ಗೊಂಡು ಸಮಾಜ ಸುಧಾರಣೆಗೆ ಮತ್ತು ದುಷ್ಟರ ಸಂಹಾರಕ್ಕೆ ಪ್ರಯತ್ನಿಸಬೇಕು’ ಎಂದರು.

‘ಇಂದು ಮಹಿಳೆಯರು ಅತ್ಯಂತ ಶಕ್ತಿಶಾಲಿ ಎನ್ನುತ್ತಿದ್ದೇವೆ. ಆದರೆ, ಭ್ರಷ್ಟಾಚಾರದಲ್ಲೂ ಅವರು ಶಕ್ತಿಶಾಲಿ ಆಗಿದ್ದಾರೆ. ಹಾಗಾಗಿ, ಭ್ರಷ್ಟಾಚಾರವನ್ನು ಹೇಗೆ ಮತ್ತು ಎಲ್ಲಿಂದ ತಡೆಯಬಹುದು ಎಂಬುದನ್ನು ವಕೀಲ ಸಮೂಹವೊಂದೇ ಸಮರ್ಥವಾಗಿ ನಿರ್ಧರಿಸಬಲ್ಲದು’ ಎಂದರು.

ಹಿರಿಯ ನ್ಯಾಯಮೂರ್ತಿ ಅನು ಶಿವರಾಮನ್, ‘ವಕೀಲರು ತಮ್ಮೊಳಗಿನ ಪ್ರತಿಭೆಯನ್ನು ಹೊರಚೆಲ್ಲಲು ಉದ್ಯುಕ್ತರಾಗಬೇಕು’ ಎಂದರು.

ಹಿರಿಯ ವಕೀಲ ಎಂ.ಟಿ.ನಾಣಯ್ಯ ಮಾತನಾಡಿ, ‘ಇಂದು ಎಲ್ಲ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವಾಡುತ್ತಿದ್ದು ಪ್ರತಿಯೊಂದು ಇಲಾಖೆಗೂ ಪ್ರತ್ಯೇಕ ಲೋಕಾಯುಕ್ತ ಕಚೇರಿ ತೆರೆಯುವಂತಹ ದುಃಸ್ಥಿತಿ ಇದೆ’ ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ತುಳವನೂರು ಶಂಕರಪ್ಪ, ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಪಾಲ್ಗೊಂಡಿದ್ದರು.

‘ಜೆಡಿಎಸ್‌ನ ಜಿಲ್ಲಾ ಅಧ್ಯಕ್ಷರು ಬದಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೆಡಿಎಸ್‌ನಲ್ಲಿ ನಿಷ್ಕ್ರಿಯವಾಗಿರುವ ಜಿಲ್ಲಾ ಘಟಕಗಳ ಅಧ್ಯಕ್ಷರನ್ನು ಬದಲಾವಣೆ ಮಾಡಲು ನಿರ್ಧರಿಸಲಾಗಿದೆ’ ಎಂದು ಪಕ್ಷದ ಪ್ರಮುಖರ ಸಮಿತಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ ಹೇಳಿದರು.

ಬುಧವಾರ ನಡೆದ ಸಮಿತಿ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ರಾಜ್ಯದ ಎಲ್ಲ ಜಿಲ್ಲೆ, ತಾಲ್ಲೂಕುಗಳಲ್ಲೂ ಜೆಡಿಎಸ್ ಪಕ್ಷವನ್ನು ಸದೃಢಗೊಳಿಸುವ ಕುರಿತು ಸುದೀರ್ಘ ಚರ್ಚೆ ನಡೆಸಲಾಗಿದೆ. ಸಮಿತಿಯ ಹಿಂದಿನ ಅಧ್ಯಕ್ಷರಾಗಿದ್ದ ಜಿ.ಟಿ. ದೇವೇಗೌಡ ಅವರ ನೇತೃತ್ವದಲ್ಲಿ ಕಲಬುರಗಿ, ವಿಜಯಪುರ, ಕೊಪ್ಪಳ, ಬೆಳಗಾವಿ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಾಗಿತ್ತು. ಈಗ ಉಳಿದ ಜಿಲ್ಲೆಗಳಲ್ಲಿ ಪ್ರವಾಸ ಹಮ್ಮಿಕೊಳ್ಳಲಾಗುವುದು ಎಂದರು.

22ಕ್ಕೆ ಜಿಲ್ಲಾ ಅಧ್ಯಕ್ಷರ ಸಭೆ: ಪಕ್ಷದ ರಾಜ್ಯ ಕಚೇರಿಯಲ್ಲಿ ಡಿ.22ರಂದು ರಾಜ್ಯದ ಎಲ್ಲಾ ಜಿಲ್ಲೆಗಳ ಪಕ್ಷದ ಅಧ್ಯಕ್ಷರ ಸಭೆ ಕರೆಯಲಾಗಿದೆ. ಸಂಕ್ರಾಂತಿ ಬಳಿಕ ವಾರಕ್ಕೆ ಕನಿಷ್ಠ ಮೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡಲು ನಿರ್ಧರಿಸಲಾಗಿದೆ. ಪರಿಣಾಮಕಾರಿಯಾಗಿ ಪಕ್ಷ ಸಂಘಟಿಸುವ, ನಾಯಕತ್ವಕ್ಕೆ ನಿಷ್ಠರಾಗಿರುವ ಹಾಗೂ ಪಕ್ಷ ಸಂಘಟನೆಗೆ ಸಮಯ ಕೊಡುವವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗುವುದು ಎಂದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳ ಚುನಾವಣೆಗೆ ಈಗಾಗಲೇ ಉಸ್ತುವಾರಿಗಳನ್ನು ನೇಮಿಸಲಾಗಿದೆ. ಬೆಳಗಾವಿ ಅಧಿವೇಶನದ ಬಳಿಕ ಈ ಉಸ್ತುವಾರಿಗಳ ಸಭೆ ಕರೆದು, ಚರ್ಚಿಸಲಾಗುವುದು. ಐದು ಪಾಲಿಕೆಗಳ 369 ವಾರ್ಡ್‌ಗಳಲ್ಲಿ ಪಕ್ಷ ಸಂಘಟನೆ, ಬಿಜೆಪಿಯೊಂದಿಗೆ ಸೀಟು ಹಂಚಿಕೆ ಕುರಿತು ಮಾತುಕತೆ ನಡೆಸಲಾಗುವುದು ಎಂದರು.

ಸಭೆಯಲ್ಲಿ ಸಮಿತಿ ಸದಸ್ಯರಾದ ಎ.ಮಂಜು, ಎಚ್.ಕೆ.ಕುಮಾರಸ್ವಾಮಿ, ನೇಮಿರಾಜ್ ನಾಯ್ಕ, ಕರೆಮ್ಮ ನಾಯಕ್, ದೊಡ್ಡಗೌಡ ಪಾಟೀಲ, ಕೆ.ಬಿ.ಪ್ರಸನ್ನಕುಮಾರ್, ಎಚ್.ಎಸ್. ಶಿವಶಂಕರ್, ಸಿ.ವಿ.ಚಂದ್ರಶೇಖರ್, ರಾಜ ವೆಂಕಟಪ್ಪ ನಾಯಕ ಮತ್ತಿತರರು ಭಾಗವಹಿಸಿದ್ದರು.

ಉಪಾಹಾರ ಇಲಾಖೆ ಸಕ್ರಿಯ: ನಿಖಿಲ್

‘ರಾಜ್ಯದ ಜನರು ಸಂಕಷ್ಟದಲ್ಲಿ ಇರುವಾಗ ಇವರು ಉಪಾಹಾರ, ಔತಣಕೂಟಗಳಲ್ಲೇ ಸಮಯ ವ್ಯರ್ಥ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಉಪಾಹಾರ ಇಲಾಖೆ ಮಾತ್ರ ಸಕ್ರಿಯವಾಗಿದೆ’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು.

‘ರಾಜ್ಯದಲ್ಲಿ ರಸ್ತೆ ಗುಂಡಿಗಳಿಂದ ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಬೆಂಗಳೂರಿನಲ್ಲಿ ರಸ್ತೆ ಯಾವುದು? ಗುಂಡಿಗಳು ಯಾವುದು ಎಂದು ಗೊತ್ತಿಲ್ಲ. ಇದು ಸರ್ಕಾರದ ಪರಿಸ್ಥಿತಿ. ಇದರ ಹೊಣೆಯನ್ನು ಸರ್ಕಾರವೇ ಹೊರಬೇಕು’ ಎಂದು ಹೇಳಿದರು.

ಜೋಸ್ ಆಲುಕ್ಕಾಸ್‌ನಿಂದ ‘ಶುಭ ಮಾಂಗಲ್ಯ ಮದುವೆ ಸಂಗ್ರಹ ಅನಾವರಣ’

ಬೆಂಗಳೂರು : ಭಾರತದ ಅತ್ಯಂತ ವಿಶ್ವಾಸಾರ್ಹ, ಗುಣಮಟ್ಟದ ಮತ್ತು ನವೀನ ಆಭರಣ ಮಳಿಗೆಗಳಲ್ಲಿ ಪ್ರಮುಖ ಸ್ಥಾನ ಪಡೆದಿರುವ ಜೋಸ್ ಆಲುಕ್ಕಾಸ್ ಮದುವೆಗಳ ಸೊಬಗು, ಮಹತ್ವ ಹೆಚ್ಚಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುವುದು ಮಾತ್ರವಲ್ಲದೇ, ವಧುವಿಗೆ ವಿಶೇಷ ಸಾಂಪ್ರದಾಯಿಕ ಮೆರುಗನ್ನು ನೀಡುವ ‘ಶುಭ ಮಾಂಗಲ್ಯ ಮದುವೆ ಸಂಗ್ರಹ’ವನ್ನು ಪರಿಚಯಿಸುತ್ತಿದೆ. ಹೌದು, ಮದುವೆಯ ಕೇಂದ್ರಬಿಂದುವಾಗಿರುವ ಮಾಂಗಲ್ಯ ಸೇರಿದಂತೆ ವಧುವಿನ ಆಭರಣಗಳಿಗೆಂದು ಮಹತ್ವ ನೀಡಿರುವ ಜೋಸ್ ಆಲುಕ್ಕಾಸ್, ಭಾರತೀಯ ಪರಂಪರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ವಿನೂತನ ಶೈಲಿಯಲ್ಲಿ ಅತ್ಯಾಕರ್ಷಕ ಆಭರಣಗಳನ್ನು ತನ್ನ ಗ್ರಾಹಕರಿಗೆ ಕೊಡುಗೆಯಾಗಿ ನೀಡುತ್ತಿದೆ.

ವಿಶೇಷವಾಗಿ, ‘ಶುಭ ಮಾಂಗಲ್ಯ ಮದುವೆ ಸಂಗ್ರಹ’ದಲ್ಲಿನ ಆಭರಣಗಳನ್ನು ಅನಾವರಣಗೊಳಿಸಿದ ದಕ್ಷಿಣ ಭಾರತದ ಖ್ಯಾತ ನಟಿ, ಜಾಸ್ ಆಲುಕ್ಕಾಸ್‌ನ ರಾಯಭಾರಿ ಕೀರ್ತಿ ಸುರೇಶ್ ಮಾತನಾಡಿ, ಸಂಪೂರ್ಣ ದಕ್ಷಿಣ ಭಾರತದ ದೇವಸ್ಥಾನಗಳ ಕಲಾತ್ಮಕತೆಯಿಂದ ಸ್ಫೂರ್ತಿ ಪಡೆಯಲಾಗಿದ್ದು, ಪ್ರತಿಯೊಂದು ವಿನ್ಯಾಸವನ್ನು ಅತ್ಯಂತ ಜಾಗರೂಕತೆಯಿಂದ ಪರಂಪರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ ಎಂದರು.

ಜೋಸ್ ಆಲುಕ್ಕಾಸ್‌ನ ಎಂಡಿ ಶ್ರೀಪಾಲ್ ಆಲುಕ್ಕಾಸ್ ಮಾತನಾಡಿ, ‘ಭಾರತೀಯ ಸಾಂಪ್ರದಾಯದಲ್ಲಿ ಮದುವೆಗಳು ವಿಶೇಷ ಮಹತ್ವ ಹೊಂದಿದ್ದು, ಪಾರಂಪರಿಕ ಸಾಂಪ್ರದಾಯ, ಕುಟುಂಬಗಳ ನಡುವಿನ ಭಾವನಾತ್ಮಕ ಬೆಸುಗೆಯ ಮಿಶ್ರಣವಾಗಿದೆ. ಈ ಪರಂಪರೆಯ ಮೌಲ್ಯಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಜೋಸ್ ಆಲುಕ್ಕಾಸ್ ಆಭರಣಗಳ ವಿನ್ಯಾಸಗಳನ್ನು ತಯಾರಿಸುತ್ತಿದ್ದು, ವಿಶೇಷವಾಗಿ ‘ಶುಭ ಮಾಂಗಲ್ಯ’ ಈ ಹಾದಿಯಲ್ಲಿ ಪ್ರತ್ಯೇಕ ಸ್ಥಾನ ಪಡೆದುಕೊಳ್ಳಲಿದೆ. ದಕ್ಷಿಣ ಭಾರತದ ದೇವಸ್ಥಾನಗಳಿಂದ ಸ್ಫೂರ್ತಿ ಪಡೆದ ಈ ಆಭರಣಗಳನ್ನು ನಮ್ಮ ನುರಿತ ವಿನ್ಯಾಸಕಾರರು, ಕುಶಲಕರ್ಮಿಗಳು ದೇಶದ ಶ್ರೀಮಂತ ಐತಿಹ್ಯದೊಂದಿಗೆ ಶಾಸ್ತ್ರೀಯ ಪರಂಪರೆ, ಸಾಂಸ್ಕೃತಿಕ ಕಲಾತ್ಮಕತೆಯನ್ನು ಒಳಗೊಂಡು ರೂಪಿಸಿದ್ದಾರೆ. ಮದುವೆಯ ಸಂಭ್ರಮವನ್ನು ಜೋಸ್ ಆಲುಕ್ಕಾಸ್‌ನೊಂದಿಗೆ ಆಚರಿಸಲು ನಮ್ಮೆಲ್ಲಾ ಗ್ರಾಹಕರನ್ನು ಸ್ವಾಗತಿಸುತ್ತಿದ್ದೇವೆ ಎಂದರು.

ವಿವಿಧ ವಿನ್ಯಾಸಗಳಿಗೆ ಆದ್ಯತೆ : ಶುಭ ಮಾಂಗಲ್ಯ ಮದುವೆ ಆಭರಣ ಸಂಗ್ರಹವು ವಿಶೇಷವಾಗಿ ಭಾರತೀಯ ವಧುಗಳ ಮೆರುಗು ಹೆಚ್ಚಿಸಲೆಂದು ರೂಪಿಸಲಾಗಿದ್ದು, ವಿಶೇಷ ಕರಕುಶಲತೆಯೊಂದಿಗೆ ದೈವೀಕ ಭಾವನೆ ಮೂಡುವ ಆಕರ್ಷಕ ವಿನ್ಯಾಸದೊಂದಿಗೆ ರೂಪಿಸಲಾಗಿದೆ. ಆಕರ್ಷಕ ವಿನ್ಯಾಸ ಹೊಂದಿದ ಮಾಂಗಲ್ಯ, ಡಾಬು, ಸರಗಳು, ಚೋಕರ್‌ಗಳು, ನೆಕ್ಲೇಸ್‌ಗಳೊಂದಿಗೆ ಪಾರಂಪರಿಕ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುವ ಬಳೆಗಳನ್ನು ಒಳಗೊಂಡಿದೆ. ಜತೆಗೆ, ಇಲ್ಲಿನ ಆಭರಣಗಳು ಹಾಲ್‌ಮಾರ್ಕ್ ಪ್ರಮಾಣೀಕರಣವನ್ನು ಹೊಂದಿದ್ದು, ಜೋಸ್ ಆಲುಕ್ಕಾಸ್‌ನ ದೃಢತೆ, ಶ್ರೇಷ್ಠತೆಗೆ ಹಿಡಿದ ಕನ್ನಡಿಯಾಗಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಕುತೂಹಲ ಕೆರಳಿಸಿದ ಗೋಪ್ಯ ಚರ್ಚೆ

ಸಿದ್ದರಾಮಯ್ಯ– ಕೆ.ಸಿ.ವೇಣುಗೋಪಾಲ್ ರಹಸ್ಯ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ಮಂಗಳೂರು /ಬೆಂಗಳೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕುರಿತ ಚರ್ಚೆಗಳು ದಿನಕ್ಕೊಂದು ಆಯಾಮ ಪಡೆಯುತ್ತಿರುವ ಬೆನ್ನಲ್ಲೇ, ಇಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸುಮಾರು 15 ನಿಮಿಷ ಗೋಪ್ಯವಾಗಿ ಪರಸ್ಪರ ಚರ್ಚಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಬುಧವಾರ ಇಲ್ಲಿ ನಡೆದ ಬ್ರಹ್ಮಶ್ರೀ ನಾರಾಯಣ ಗುರು- ಮಹಾತ್ಮ ಗಾಂಧಿ ಐತಿಹಾಸಿಕ ಸಂವಾದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಲ್ಲಿಗೆ ಬಂದಿದ್ದ ಈ ನಾಯಕರು, ವಿಶ್ವವಿದ್ಯಾನಿಲಯದ ಕಾವೇರಿ ಅತಿಥಿ ಗೃಹದಲ್ಲಿ ಇಬ್ಬರೇ ಕುಳಿತು ರಹಸ್ಯ ಮಾತುಕತೆ ನಡೆಸಿದರು. ಈ ವೇಳೆ ಆ ಕೊಠಡಿಯಲ್ಲಿದ್ದವರನ್ನು ಹೊರಗೆ ಕಳುಹಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಲು ಸಿದ್ದರಾಮಯ್ಯ ಜೊತೆಯಲ್ಲೇ ಬಂದಿದ್ದ ಸಚಿವರಾದ ಜಿ.ಪರಮೇಶ್ವರ, ಸತೀಶ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಖಾನ್, ಲಕ್ಷ್ಮೀ ಹೆಬ್ಬಾಳಕರ ಅವರೂ ಅತಿಥಿಗೃಹದಲ್ಲೇ ಇದ್ದರು.

ವೇಣುಗೋಪಾಲ್, ರಾಹುಲ್, ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಭೇಟಿ ಮಾಡುವುದರಲ್ಲಿ ತಪ್ಪೇನಿದೆ? ಪಕ್ಷದ ವಿಚಾರವಾಗಿ ಅವರು ಮಾತನಾಡುತ್ತಾರೆ

ಡಿ.ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿ

ರಾಜಕೀಯ ಚರ್ಚಿಸಿಲ್ಲ: ಈ ಭೇಟಿ ಕುರಿತ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ವೇಣುಗೋಪಾಲ್ ಅವರ ಜೊತೆ ಯಾವುದೇ ರಾಜಕೀಯ ಚರ್ಚೆ ನಡೆಸಿಲ್ಲ' ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನವದೆಹಲಿಗೆ ತೆರಳುವುದರ ಕುರಿತು ಪ್ರತಿಕ್ರಿಯಿಸಿದ ಅವರು, 'ಅವರು ಹೋದರೆ ಹೋಗಲಿ ಪಾಪ. ಬೇಡ ಅಂದವರು ಯಾರು? ನಾನು ದೆಹಲಿಗೆ ಹೋಗುವುದಿಲ್ಲ. ನಾನು ಕರೆದರೆ ಮಾತ್ರ ಹೋಗುವುದು. ಆದರೆ, ಈ ವರೆಗೆ ನನ್ನನ್ನು ಕರೆದಿಲ್ಲ' ಎಂದು ತಿಳಿಸಿದರು.

ಸಮಾರಂಭದ ವೇದಿಕೆಯಲ್ಲಿ ಅಕ್ಕಪಕ್ಕ ಕುಳಿತಿದ್ದ ಸಿದ್ದರಾಮಯ್ಯ ಮತ್ತು ವೇಣುಗೋಪಾಲ್, ಅಲ್ಲಿಯೂ ಪರಸ್ಪರ ಚರ್ಚೆಯಲ್ಲಿ ತೊಡಗಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆ. ಸಿ. ವೇಣುಗೋಪಾಲ್ ಕೊಣಾಜೆಯ ಕಾವೇರಿ ಅತಿಥಿಗೃಹದಲ್ಲಿ ಪರಸ್ಪರ ಸಮಾಲೋಚನೆ ನಡೆಸಿದರು

ವೇಣುಗೋಪಾಲ್ ಹೈಕಮಾಂಡ್ ಏಜೆಂಟ್: ಅಶೋಕ ಟೀಕೆ

ಬೆಂಗಳೂರು: 'ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಕಾಂಗ್ರೆಸ್ ಹೈಕಮಾಂಡ್ ನಾಯಕರ ಏಜೆಂಟ್' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ಹಾಕಿರುವ ಅವರು, 'ಕಾಂಗ್ರೆಸ್ ಪಕ್ಷ ಸೇರಿ 20 ವರ್ಷಗಳ ನಂತರ ಇದೇ ಮೊದಲ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನೆಗೆ 'ಹೋಂ ಟೂರ್' ಮಾಡಿದ್ದಾರೆ. ನಾಟಿಕೋಳಿ ಸವಿದಿದ್ದಾರೆ. ಮುಂದಿನ ಉಪಾಹಾರ ಸಭೆ ಎಲ್ಲಿ, ಯಾರ ಜತೆ ಎನ್ನುವ ಸೂಚನೆಯನ್ನು ವೇಣುಗೋಪಾಲ್ ನೀಡುವ ಮೊದಲು ಸರ್ಕಾರಿ ಶಾಲೆ ಕಡೆ ಪ್ರವಾಸ ಮಾಡಿ ಬನ್ನಿ' ಎಂದು ಹೇಳಿದ್ದಾರೆ.

'ಇಂತಹ ಲಜ್ಜೆಗೆಟ್ಟ ಸರ್ಕಾರವನ್ನು ಇಡೀ ಪ್ರಪಂಚದ ಇತಿಹಾಸದಲ್ಲೇ ಕಾಣಲು ಸಾಧ್ಯವಿಲ್ಲ. ಶೌಚಾಲಯಗಳೇ ಇಲ್ಲದ ಶಾಲೆಗಳು, ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳು, ಬಿದ್ದು ಹೋಗುತ್ತಿರುವ ಗೋಡೆಗಳು, ಶಿಕ್ಷಕರಿಲ್ಲದ ತರಗತಿಗಳನ್ನು ಒಮ್ಮೆ ಕಣ್ತುಂಬಿಕೊಂಡು ಬನ್ನಿ' ಎಂದು ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದಾರೆ.

'ಜೈಕಾರ, ಧಿಕ್ಕಾರ ಸಹಜ–ಡಿಕೆಶಿ

'ಜನ ಕಳೆದ ಹತ್ತು ವರ್ಷಗಳಿಂದ ಡಿಕೆ, ಡಿಕೆ... ಎಂದು ಕೂಗುತ್ತಿದ್ದಾರೆ. ಅಭಿಮಾನಿಗಳು ಈ ರೀತಿ ಕೂಗುವುದು ಸಹಜ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ನಾಯಕರ ಪರ ಮಂಗಳೂರಿನಲ್ಲಿ ಘೋಷಣೆ ಕೂಗಿದ ಕುರಿತು ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಅವರು, 'ಬಿಜೆಪಿ ಕಾರ್ಯಕರ್ತರು ಮೋದಿ, ಮೋದಿ.. ಎಂದು ಕೂಗುವುದಿಲ್ಲವೇ? ಕಾಂಗ್ರೆಸ್ ಕಾರ್ಯಕರ್ತರು ರಾಹುಲ್.., ರಾಹುಲ್.. ಎಂದು ಕೂಗುತ್ತಾರೆ. ಸಿದ್ದರಾಮಯ್ಯ ಅಭಿಮಾನಿಗಳು ಸಿದ್ದು, ಸಿದ್ದು... ಎಂದು ಕೂಗುತ್ತಾರೆ. ರಾಜಕಾರಣದಲ್ಲಿ ಜೈಕಾರ, ಧಿಕ್ಕಾರ, ಅಭಿಮಾನದ ಮಾತುಗಳು ಸಹಜ' ಎಂದರು.

30 ತಿಂಗಳ ಮೊದಲೇ ಅಧಿಕಾರ ಬಿಡಬಹುದು: ಜಾರಕಿಹೊಳಿ

'ಮುಖ್ಯಮಂತ್ರಿ ಮಾನಸಿಕವಾಗಿ ಸಿದ್ಧರಾಗಿದ್ದಾರೆ ಎಂದಲ್ಲ. ಆದರೆ, ಮೂವತ್ತು ತಿಂಗಳ ನಂತರವಾದರೂ ಬಿಡಬಹುದು, ಅದಕ್ಕೂ ಮೊದಲೇ ಬಿಡಬಹುದು. ಬಿಡುವುದಂತೂ ಪಕ್ಕಾ. ಯಾವಾಗಲಾದರೂ ಬಿಡಲೇಬೇಕು' ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

'ರಾಜಕೀಯ ಶಾಶ್ವತವಲ್ಲ' ಎಂಬ ಸಿದ್ದರಾಮಯ್ಯನವರ ಮಾತಿನ ಕುರಿತು ಪ್ರತಿಕ್ರಿಯಿಸಿದ ಅವರು, 'ಅಧಿಕಾರ ಶಾಶ್ವತ ಅಲ್ಲ. ಯಾವತ್ತಿದ್ದರೂ ಅಧಿಕಾರ ಬಿಡಬೇಕು. 10 ವರ್ಷದ ನಂತರವಾದರೂ ಬಿಡಬೇಕು. ಅದನ್ನು ಯಾವಾಗ ಬಿಟ್ಟುಕೊಡಬೇಕು ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ' ಎಂದರು.

ದಲಿತ ಮುಖ್ಯಮಂತ್ರಿ ವಿಚಾರ ತಳ್ಳಿಹಾಕಿದ ಸಚಿವರು, 'ಈ ಅವಧಿಯಲ್ಲಿ ದಲಿತ ಮುಖ್ಯಮಂತ್ರಿ ಬಗ್ಗೆ ಯಾವುದೇ ಚರ್ಚೆ ಇಲ್ಲ. ಮುಖ್ಯಮಂತ್ರಿ ಬಗ್ಗೆ ಎಲ್ಲ ಮುಗಿದಿದೆ. ಈಗ ಮತ್ತೆ ಶುರು ಮಾಡುವುದು ಬೇಡ' ಎಂದು ಹೇಳಿದರು.

'2028ರವರೆಗೆ ಸಿದ್ದರಾಮಯ್ಯ ಸಿ.ಎಂ'

'ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ, ಸಿದ್ದರಾಮಯ್ಯ ಅವರೇ 2028ರವರೆಗೆ ಮುಖ್ಯಮಂತ್ರಿ ಆಗಿ ಮುಂದುವರಿಯುವುದು ಖಚಿತ' ಎಂದು ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದರು.

'ಮುಖ್ಯಮಂತ್ರಿ ಬದಲಾವಣೆ ಊಹಾಪೋಹಗಳಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಉಪಾಹಾರ ಕೂಟದ ಮೂಲಕ ತೆರೆ ಎಳೆದಿದ್ದಾರೆ' ಎಂದರು.

'ರಾಜಕೀಯ ಶಾಶ್ವತವಲ್ಲ ಎಂಬುದು ನಿಜ. ಮುಖ್ಯಮಂತ್ರಿ ಹೇಳಿದ್ದು ನಿಜ. ಮನುಷ್ಯರೂ ಶಾಶ್ವತವಲ್ಲ' ಎಂದರು.

ಜೈಕಾರ–ಬಣಗಳ ಶಕ್ತಿ ಪ್ರದರ್ಶನ

ಕೆ.ಸಿ.ವೇಣುಗೋಪಾಲ್ ಬಜಪೆಯ ವಿಮಾನನಿಲ್ದಾಣದಿಂದ ಹೊರಬರುತ್ತಿದ್ದಂತೆಯೇ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ ನೇತೃತ್ವದ ಗುಂಪು ಡಿ.ಕೆ.ಶಿವಕುಮಾರ್ ಅವರಿಗೆ ಜೈಕಾರ ಹಾಕಿ, 'ಡಿಕೆಶಿ ಮುಖ್ಯಮಂತ್ರಿಯಾಗಲಿ' ಎಂದು ಘೋಷಣೆ ಕೂಗಿತು.

ವೇಣುಗೋಪಾಲ್ ನಿರ್ಗಮಿಸಿದ ಕೆಲ ಹೊತ್ತಿನ ಬಳಿಕ ಬಂದ ಸಿದ್ದರಾಮಯ್ಯ ಅವರು, ವಿಮಾನದಲ್ಲಿ ನಿಲ್ದಾಣದಿಂದ ಹೊರುತ್ತಿದ್ದಂತೆ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ನೇತೃತ್ವದ ಬಣದವರು ಸಿದ್ದರಾಮಯ್ಯಗೆ ಜೈಕಾರ ಹಾಕಿ, 'ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿ' ಎಂದು ಘೋಷಣೆ ಕೂಗಿದರು.

ಘೋಷಣೆ ರಾಜಕೀಯ ಬಗ್ಗೆ ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ, 'ಈ ರೀತಿ ಜೈಕಾರ ಹಾಕುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ' ಎಂದರು.

'ಕ್ರಾಂತಿ ವಿಚಾರ ಸಂಕ್ರಾಂತಿ ಬಳಿಕ'

ಮಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆ.ಸಿ.ವೇಣುಗೋಪಾಲ್ ನಡುವೆ ಇಂದು ರಾಜಕಾರಣದ ಕುರಿತು ಯಾವುದೇ ಚರ್ಚೆ ನಡೆದಿಲ್ಲ. ಕ್ರಾಂತಿ, ಕ್ರಾಂತಿ ಎಂದು ಮಾಧ್ಯಮದವರೇ ಹೇಳಿದ್ದು. ಸಂಕ್ರಾಂತಿಯೂ ಆಗಲಿ. ಆಮೇಲೆ ಈ ಬಗ್ಗೆ ಮಾತನಾಡೋಣ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ಸಿ.ಎಂ ಬದಲಾವಣೆ ಬಗ್ಗೆ ನಿಮಗೆ ಯಾರು ಹೇಳಿದ್ದು? ಅದೇನಾದರೂ ಇದ್ದರೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆಯವರು ನಿರ್ಧಾರ ಮಾಡುತ್ತಾರೆ. ಅದೀಗ ಹಳೆಯ ವಿಚಾರ. ಹೊಸ ವಿಚಾರ ಏನಾದರೂ ಇದ್ದಲ್ಲಿ ಕೇಳಿ' ಎಂದರು.

'ನಮ್ಮವರು ಗಿಣಿ ಶಾಸ್ತ್ರ, ಕವಡೆ ಶಾಸ್ತ್ರ ಸಾವಿರ ಹೇಳ್ತಾರೆ. ಸಂವಿಧಾನದ ಚೌಕಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ವರಿಷ್ಠರು ಈ ಬಗ್ಗೆ ತೀರ್ಮಾನ ಮಾಡುತ್ತಾರೆ. ಊಹಾಪೋಹಗಳು ಎಲ್ಲಿಂದ ಹುಟ್ಟುತ್ತವೆ ಎಂದು ಗೊತ್ತು. ಯಾವ ಶಾಸಕರೂ ಈ ಬಗ್ಗೆ ಬಹಿರಂಗವಾಗಿ ಮಾತನಾಡಿಲ್ಲ' ಎಂದರು.

ಕಾಂಗ್ರೆಸ್ ನಾಯಕರ ಬಗ್ಗೆ ಕಾರ್ಯಕರ್ತರು ಘೋಷಣೆ ಕೂಗಿದ ಬಗ್ಗೆ ಪ್ರತಿಕ್ರಿಯಿಸಿ, 'ಇದರಲ್ಲಿ ವ್ಯಕ್ತಿ ಪೂಜೆ ಇಲ್ಲ. ಅವರವರ ನಾಯಕರು ಬಂದಾಗ ಸ್ವಾಗತಿಸುತ್ತಾರೆ. ಇದರಲ್ಲಿ ತಪ್ಪೇನಿಲ್ಲ' ಎಂದು ಹೇಳಿದರು.

'140 ಶಾಸಕರು ಗೆದ್ದಿದ್ದು ಕಾಂಗ್ರೆಸ್ ಪಕ್ಷದ ಹೆಸರಿನಲ್ಲಿ. ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹೆಸರಿನಲ್ಲಿ ಜನರು ಮತನೀಡಿದ್ದಾರೆಯೇ, ಹೊರತು ವೈಯಕ್ತಿಕವಾಗಿ ಯಾರಿಗೂ ಕೊಟ್ಟಿಲ್ಲ' ಎಂದರು.

ಸುದ್ದಿ 2 ನಿಮಿಷ

ದರ್ಶನ್ ಬಳಿ ಜಪ್ತಿ : ₹82 ಲಕ್ಷ ಐ.ಟಿಗೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಗಳಿಂದ ಜಪ್ತಿ ಮಾಡಿದ್ದ ₹82 ಲಕ್ಷ ಹಣವನ್ನು ಆದಾಯ ತೆರಿಗೆ (ಐ.ಟಿ) ಇಲಾಖೆಗೆ ಹಸ್ತಾಂತರಿಸುವಂತೆ ನ್ಯಾಯಾಲಯವು ಆದೇಶಿಸಿದೆ.

ಕೊಲೆ ಪ್ರಕರಣದ ತನಿಖೆ ವೇಳೆ ಆರೋಪಿ ದರ್ಶನ್ ಮನೆ ಹಾಗೂ ಇತರೆ ಸ್ಥಳಗಳಲ್ಲಿ ಈ ಹಣವನ್ನು ಪೊಲೀಸರು ಜಪ್ತಿ ಮಾಡಿದ್ದರು.

ಆರೋಪಿಗಳು ಹಣದ ಮೂಲದ ಬಗ್ಗೆ ಸರಿಯಾದ ಮಾಹಿತಿ ನೀಡದ ಕಾರಣಕ್ಕೆ ಐ.ಟಿ ಇಲಾಖೆಗೆ ನೀಡುವಂತೆ ನ್ಯಾಯಾಲಯವು ಆದೇಶಿಸಿದೆ. ಹಣದ ಮೂಲವನ್ನು ಐ.ಟಿ ಅಧಿಕಾರಿಗಳು ಪತ್ತೆಹಚ್ಚಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಿದ್ದಾರೆ.

ಈ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ದರ್ಶನ್, ಪವಿತ್ರಾಗೌಡ ಸೇರಿದಂತೆ ಇತರೆ ಐವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಬುಧವಾರ ಹಾಜರಾದರು. ದರ್ಶನ್ ಅವರು ಬ್ಯಾರಕ್‌ನಲ್ಲಿ ಟಿ.ವಿ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದರು.

ತಮ್ಮನ್ನು ಬೇರೆ ಜೈಲಿಗೆ ಸ್ಥಳಾಂತರ ಮಾಡುವಂತೆ ಆರೋಪಿಗಳಾದ ಜಗದೀಶ್ ಹಾಗೂ ಅನುಕುಮಾರ್ ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯವು ವಜಾ ಮಾಡಿದೆ.

ರೇಣುಕಸ್ವಾಮಿ ಅವರ ಪೋಷಕರಿಗೆ ವಿಚಾರಣೆ ಸಂಬಂಧ ಸಮನ್ಸ್ ಜಾರಿ ಮಾಡುವ ಆದೇಶವನ್ನು ನ್ಯಾಯಾಲಯವು ಕಾಯ್ದಿರಿಸಿದೆ. ಮುಂದಿನ ವಿಚಾರಣೆಯನ್ನು ನ್ಯಾಯಾಲಯವು ಡಿ.17ಕ್ಕೆ ಮುಂದೂಡಿದೆ.

ಅಂಗನವಾಡಿ ನೌಕರರಿಂದ ಮನವಿ

ನವದೆಹಲಿ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಪ್ರಮುಖರು ಕೇಂದ್ರದ ಮೂವರು ಸಚಿವರಿಗೆ ಬುಧವಾರ ಮನವಿ ಸಲ್ಲಿಸಿದರು.

ಸಂಘಟನೆಯ ಪ್ರಮುಖರ ಜತೆಗೆ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ನವದೆಹಲಿಯ ತಮ್ಮ ಗೃಹ ಕಚೇರಿಯಲ್ಲಿ ಬುಧವಾರ ಮಾತುಕತೆ ನಡೆಸಿದರು.

ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮಂಡ್ಯ ಸೇರಿ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಪ್ರಮುಖರನ್ನು ಬುಧವಾರ ನವದೆಹಲಿಗೆ ಕರೆಸಿ ಕೊಂಡು ಸಚಿವರು ಚರ್ಚಿಸಿದರು. ನಂತರ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಭೇಟಿಗೆ ಸಮಯ ನಿಗದಿಗೊಳಿಸಿದರು. ಬಳಿಕ ಪ್ರಮುಖರು ಶಿಕ್ಷಣ ಸಚಿವರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಅನ್ನಪೂರ್ಣ ದೇವಿ ಅವರಿಗೆ ಸಂಘದ ಪ್ರಮುಖರು ಮನವಿ ನೀಡಿದರು. ಅಂಗನವಾಡಿ ನೌಕರರ ಸಂಘದ ಎಸ್. ವರಲಕ್ಷ್ಮಿ, ಕೋಲಾರ ಸಂಸದ ಎಂ.ಮಲ್ಲೇಶಬಾಬು ಮತ್ತಿತರರು ಹಾಜರಿದ್ದರು.

ಚಿಟಿಕೆ ಸುದ್ದಿ

'ರಾಜ ಭವನ' ಅಲ್ಲ 'ಲೋಕ ಭವನ'

ಬೆಂಗಳೂರು: ಕೇಂದ್ರ ಗೃಹ ಸಚಿವಾಲಯದ ತೀರ್ಮಾನದಂತೆ ದೇಶದಾದ್ಯಂತ ಇರುವ 'ರಾಜ ಭವನ'ಗಳ ಹೆಸರನ್ನು 'ಲೋಕ ಭವನ' ಎಂದು ಮರುನಾಮಕರಣ ಮಾಡಲಾಗಿದ್ದು, 'ರಾಜ ಭವನ, ಕರ್ನಾಟಕ' ಎನ್ನುವುದನ್ನು 'ಲೋಕ ಭವನ, ಕರ್ನಾಟಕ' ಎಂದು ಹೆಸರಿಸಲಾಗಿದೆ.

ಈ ಬಗ್ಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಬುಧವಾರ ಪತ್ರ ಬರೆದಿರುವ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್, 'ಹೆಸರು ಬದಲಾವಣೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅನುಮೋದನೆ ನೀಡಿದ್ದಾರೆ. ಈ ಆದೇಶವು ತಕ್ಷಣದಿಂದ ಜಾರಿಗೆ ಬರಲಿದೆ' ಎಂದು ತಿಳಿಸಿದ್ದಾರೆ.

'ಮುಂದಿನ ದಿನಗಳಲ್ಲಿ ಸರ್ಕಾರದ ಎಲ್ಲ ಇಲಾಖೆಗಳು, ಸರ್ಕಾರಿ ಆದೇಶಗಳು, ಅಧಿಕೃತ ಪತ್ರ ವ್ಯವಹಾರಗಳು, ವೆಬ್‌ಸೈಟ್ ಹಾಗೂ ಫಲಕಗಳಲ್ಲಿ 'ರಾಜ ಭವನ ಕರ್ನಾಟಕ' ಬದಲು 'ಲೋಕ ಭವನ ಕರ್ನಾಟಕ' ಎಂದು ಬಳಸಬೇಕು' ಎಂದೂ ಪತ್ರದಲ್ಲಿ ಅವರು ತಿಳಿಸಿದ್ದಾರೆ.

ಸ್ನಾತಕೋತ್ತರ ವೈದ್ಯಕೀಯ: ಪ್ರವೇಶ ವಿಸ್ತರಣೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟವಾಗಿದ್ದು, ಪ್ರವೇಶ ಪ್ರಕ್ರಿಯೆ ಅವಧಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿಸ್ತರಿಸಿದೆ.

ಚಾಯ್ಸ್ ದಾಖಲಿಸಲು ಡಿ.4ರಂದು ಸಂಜೆ 4ರವರೆಗೆ ಅವಕಾಶ ನೀಡಲಾಗಿದೆ. ಚಾಯ್ಸ್-1 ಮತ್ತು 2 ದಾಖಲಿಸಿದವರು ಡಿ.5ರೊಳಗೆ ಶುಲ್ಕ ಪಾವತಿಸಬೇಕು. ಚಾಯ್ಸ್-1 ಆಯ್ಕೆ ಮಾಡಿದ ಅಭ್ಯರ್ಥಿಗಳು ಡಿ.6ರವರೆಗೆ ಕೆಇಎ ಕಚೇರಿಯಲ್ಲಿ ಮೂಲ ದಾಖಲೆ ಸಲ್ಲಿಸಬೇಕು. ಮೂಲ ದಾಖಲೆ ಸಲ್ಲಿಸಿದ ನಂತರ ಡಿ.7ರೊಳಗೆ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು ಎಂದು ಪ್ರಾಧಿಕಾರದ ಇ.ಡಿ.ಪ್ರಸನ್ನ ಹೇಳಿದ್ದಾರೆ.

3,187 ಕಿ.ಮೀ. ಹೆದ್ದಾರಿಗೆ ಮಂಜೂರು

ನವದೆಹಲಿ: ಕಳೆದ ಐದು ಹಣಕಾಸು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಎಕ್ಸ್‌ಪ್ರೆಸ್‌ವೇಗಳು ಮತ್ತು ಆರ್ಥಿಕ ಕಾರಿಡಾರ್‌ಗಳು ಸೇರಿದಂತೆ 3,187 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯಾ ಪ್ರಶ್ನೋತ್ತರ ಅವಧಿಯಲ್ಲಿ ಬುಧವಾರ ಕೇಳಿದ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದರು.

ಮತ್ತೆ ದುಬಾರಿ ವಾಚ್ ಸದ್ದು

ಒಂದನೇ ಪುಟದಿಂದ...

ಶಿವಕುಮಾರ್ ಅವರ ನಿವಾಸದಲ್ಲಿ ಮಂಗಳವಾರ (ಡಿ. 2) ನಡೆದ ಉಪಾಹಾರ ಕೂಟದ ಬಳಿಕ, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಮಾಧ್ಯಮದವರ ಜತೆ ಮಾತನಾಡಿದ್ದರು. ಈ ವೇಳೆ, ಅವರ ಕೈಗಳಲ್ಲಿದ್ದ ವಾಚ್ ಮಾಧ್ಯಮದವರ ಕಣ್ಣಿಗೆ ಬಿದ್ದಿತ್ತು. ಒಗ್ಗಟ್ಟು ಪ್ರದರ್ಶಿಸಲು ಒಂದೇ ರೀತಿ ಹಾಗೂ ಒಂದೇ ಬ್ರ್ಯಾಂಡ್‌ನ ವಾಚ್ ಕಟ್ಟಿದ್ದರು ಎನ್ನುವ ಮಾತು ಕೇಳಿಬರುತ್ತಿವೆ.

ಹ್ಯುಬ್ಲೊ ವಾಚ್: ಸಿದ್ದರಾಮಯ್ಯ ಅವರು ಹಿಂದಿನ ಅವಧಿ ಮುಖ್ಯಮಂತ್ರಿಯಾಗಿದ್ದ ವೇಳೆ, ಈಗ ವಿಧಾನಪರಿಷತ್ತಿನ ಬಿಜೆಪಿ ಸದಸ್ಯರಾಗಿರುವ ಎಚ್.ವಿಶ್ವನಾಥ್ ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಭೇಟಿಗೆ ಹೋಗಿದ್ದಾಗ, ಸಿದ್ದರಾಮಯ್ಯ ಅವರು ಕಟ್ಟಿದ್ದ ಸುಮಾರು ₹70 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ವಾಚ್ ಅನ್ನು ಅನಾಮಧೇಯರು ವಿಡಿಯೊ ಮಾಡಿದ್ದರು.

ಆಗ ವಿರೋಧ ಪಕ್ಷದ ನಾಯಕರಾಗಿದ್ದ ಎಚ್.ಡಿ. ಕುಮಾರಸ್ವಾಮಿ ಅವರು, ಹ್ಯುಬ್ಲೊ ವಾಚ್‌ನ ವಿಡಿಯೊ ಹಾಗೂ ಚಿತ್ರಗಳನ್ನು ಬಿಡುಗಡೆ ಮಾಡಿದ್ದಲ್ಲದೇ, ಆ ವಾಚ್‌ನ ಮೂಲ ಎಲ್ಲಿಯದು ಎಂದು ಪ್ರಶ್ನಿಸಿದ್ದರು. ಅದೇ ಆಸುಪಾಸಿನಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಅಂದೂ ಪ್ರತಿಪಕ್ಷಗಳಾಗಿದ್ದ ಬಿಜೆಪಿ, ಜೆಡಿಎಸ್ ನಾಯಕರು ಈ ವಿಷಯವನ್ನು ಪ್ರಸ್ತಾಪಿಸಿ ಗದ್ದಲ ಎಬ್ಬಿಸಿದ್ದರು.

ಗದ್ದಲ, ಧರಣಿಗಳಿಂದಾಗಿ ಕಲಾಪ ನಡೆದಿರಲಿಲ್ಲ. ಆಗ ಮಧ್ಯ ಪ್ರವೇಶಿಸಿದ್ದ ಸಿದ್ದರಾಮಯ್ಯ ಸದನದಲ್ಲಿಯೇ ತಮ್ಮ ಬಳಿ ಇದ್ದ ವಾಚ್ ಅನ್ನು, ಅಂದು ಸಭಾಧ್ಯಕ್ಷರಾಗಿದ್ದ ಕಾಗೋಡು ತಿಮ್ಮಪ್ಪ ಅವರಿಗೆ ಹಸ್ತಾಂತರಿಸಿದ್ದರು. ಅದನ್ನು ವಿಧಾನಸೌಧದ ಸಚಿವ ಸಂಪುಟ ಸಭಾಂಗಣದಲ್ಲಿರುವ ಬೆಲೆ ಬಾಳುವ ವಸ್ತುಗಳ ಜತೆಯಲ್ಲಿಯೇ ಇಡುವಂತೆ ಮನವಿ ಮಾಡಿದ್ದರು. ಆ ಪ್ರಕರಣ ಅಲ್ಲಿಗೆ ಕೊನೆಯಾಗಿತ್ತು.

₹24 ಲಕ್ಷ ಮೌಲ್ಯದ ವಾಚ್: ಡಿಕೆಶಿ

'ನನ್ನ ವಾಚ್ ಏಳು ವರ್ಷಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ನನ್ನ ಕ್ರೆಡಿಟ್ ಕಾರ್ಡ್ ಮೂಲಕ ₹ 24 ಲಕ್ಷ ಕೊಟ್ಟು ಖರೀದಿ ಮಾಡಿದ್ದೇನೆ. ಬೇಕಿದ್ದರೆ ನನ್ನ ಕ್ರೆಡಿಟ್ ಕಾರ್ಡ್ ಪರಿಶೀಲಿಸಿ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ದುಬಾರಿ ವಾಚ್ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಇದನ್ನು ನನ್ನ ಚುನಾವಣಾ ಅಫಿಡವಿಟ್‌ನಲ್ಲೂ ಘೋಷಿಸಿಕೊಂಡಿದ್ದೇನೆ' ಎಂದೂ ಹೇಳಿದರು.

'ಸಿದ್ದರಾಮಯ್ಯ ಅವರ ಕುರಿತ ಟೀಕೆ ಬಗ್ಗೆ ನನಗೆ ಗೊತ್ತಿಲ್ಲ. ಇಷ್ಟವಾದ ವಾಚ್ ಧರಿಸುವ ಹಕ್ಕು ಇಬ್ಬರಿಗೂ ಇದೆ. ಅವರಿಗೆ ಅವರ ಮಗ ವಾಚ್ ಕೊಡಿಸಿರಬಹುದು ಅಥವಾ ಅವರೇ ಅದನ್ನು ಖರೀದಿ ಮಾಡಿರಬಹುದು. ನಮ್ಮ ತಂದೆಗೆ ವಾಚ್‌ಗಳೆಂದರೆ ಬಹಳ ಇಷ್ಟ. ಅವರ ಬಳಿ ಏಳು ವಾಚ್‌ಗಳಿದ್ದವು. ಅವರು ಸತ್ತ ನಂತರ ಅದನ್ನು ಯಾರು ಧರಿಸಬೇಕು? ನಾನು ಧರಿಸಬೇಕು, ಇಲ್ಲವೇ ನನ್ನ ತಮ್ಮ ಧರಿಸಬೇಕು' ಎಂದರು.

'ಸರಳ ಸಮಾಜವಾದಿ' ಕೈಯಲ್ಲಿ ಕಾರ್ಟಿಯರ್'

'ಸಿದ್ದರಾಮಯ್ಯನವರೇ ಸಮಾಜವಾದದ ನಿಮ್ಮ ವ್ಯಾಖ್ಯಾನಕ್ಕೆ ಹೆಚ್ಚಿನ ಬೆಲೆ ಬಂದಂತೆ ಕಾಣುತ್ತಿದೆ. ಕರ್ನಾಟಕದ ಜನರು ಬರ ಮತ್ತು ಮೂಲಸೌಕರ್ಯ ಸಮಸ್ಯೆಯಿಂದಾಗಿ ಪರದಾಡುತ್ತಿದ್ದಾರೆ. ಆದರೆ, ನಮ್ಮ 'ಸರಳ ಸಮಾಜವಾದಿ' ಮುಖ್ಯಮಂತ್ರಿ ಸ್ಯಾಂಟೋಸ್ ಡಿ ಕಾರ್ಟಿಯರ್ ವಾಚ್ ಧರಿಸಿ ಅದನ್ನು ಪ್ರದರ್ಶಿಸುತ್ತಿದ್ದಾರೆ' ಎಂದು ಬಿಜೆಪಿ 'ಎಕ್ಸ್' ಮಾಡಿದೆ.

ಅಸಲಿಗೆ ದೊಡ್ಡ ಮಜಾವಾದಿ– ಜೆಡಿಎಸ್

'ಹೇಳಿಕೊಳ್ಳುವುದು ನಾನೊಬ್ಬ ಸಮಾಜವಾದಿ. ಅಸಲಿಗೆ ದೊಡ್ಡ ಮಜಾವಾದಿ. ಅಂದು ₹70 ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ 'ಹ್ಯೂಬ್ಲೊ ವಾಚ್' ಕಟ್ಟಿ ಟೀಕೆಗೆ ಗುರಿಯಾಗಿದ್ದರು. ಇಂದು ಅವರ ಕೈಯಲ್ಲಿ ಚಿನ್ನದಿಂದ ತಯಾರಿಸಿದ ಕಾರ್ಟಿಯರ್ ಬ್ರ್ಯಾಂಡ್‌ನ ₹ 43 ಲಕ್ಷ ಬೆಲೆ ಬಾಳುವ ಐಷಾರಾಮಿ ವಾಚ್. ಸಿದ್ದರಾಮಯ್ಯ ಅವರೇ, ಸಮಾಜವಾದದ ಬಗ್ಗೆ ಬೊಗಳೆ ಭಾಷಣ ಮಾಡಲು ನಿಮಗೆ ಯಾವ ನೈತಿಕತೆ ಇದೆ' ಎಂದು ಜೆಡಿಎಸ್ 'ಎಕ್ಸ್' ಮಾಡಿ ಟೀಕಿಸಿದೆ.

'ಪ್ರತಿಭಟನೆ:ಜಿಲ್ಲೆಯಿಂದ 300 ಜನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತಕಳವು ವಿರುದ್ಧ ಇದೇ 14ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆಯಲಿರುವ ಸಮಾವೇಶದಲ್ಲಿ ರಾಜ್ಯದ ಪ್ರತಿ ಜಿಲ್ಲೆಯಿಂದ 300 ಜನರನ್ನು ಕರೆದುಕೊಂಡು ಹೋಗಬೇಕಿದೆ. ಈ ಬಗ್ಗೆ ಸಚಿವರಿಗೆ ಹಾಗೂ ಶಾಸಕರಿಗೆ ಸೂಚನೆ ನೀಡಿದ್ದೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬುಧವಾರ ಬೆಳಿಗ್ಗೆ ದೆಹಲಿಗೆ ಹೊರಡುವ ಮೊದಲು ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪಕ್ಷದ ಕಾರ್ಯಕರ್ತರಿಗೆ ವಾಸ್ತವ್ಯ ಕಲ್ಪಿಸಲು ಕೆಲವರಿಗೆ ಜವಾಬ್ದಾರಿ ವಹಿಸಬೇಕಾಗಿದೆ. ಈ ಕಾರಣಕ್ಕೆ ದೆಹಲಿಗೆ ಹೋಗುತ್ತಿದ್ದೇನೆ. ಇದರ ಹೊರತಾಗಿ ಈ ಪ್ರವಾಸಕ್ಕೆ ರಾಜಕೀಯ ಮಹತ್ವವೇನೂ ಇಲ್ಲ' ಎಂದರು.

'ಮತಕಳವು ವಿರುದ್ಧದ ಹೋರಾಟದಲ್ಲಿ ಪ್ರತಿ ತಾಲ್ಲೂಕಿನಿಂದ ಕನಿಷ್ಠ 30 ಜನರನ್ನು, ಬೆಂಗಳೂರಿನಿಂದ ಹೆಚ್ಚು ಜನರನ್ನು ಕರೆದೊಯ್ಯಬೇಕು. ವ್ಯವಸ್ಥೆ ಮಾಡಿಕೊಡುವಂತೆ ರೈಲ್ವೆ ಸಚಿವರಿಗೆ ಮನವಿ ಮಾಡಿದ್ದೇನೆ' ಎಂದರು.

ಸರ್ವಪಕ್ಷ ಸಭೆ ಮುಂದೂಡಿಕೆ: 'ದೆಹಲಿಯಲ್ಲಿ ಇದೇ 8ರಂದು ನಡೆಸಲು ಉದ್ದೇಶಿಸಿದ್ದ ಸರ್ವಪಕ್ಷ ಸಭೆಯನ್ನು ಕೆಲವು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ. ಈ ಸಭೆಗೆ ವಿರೋಧ ಪಕ್ಷಗಳ ನಾಯಕರನ್ನು ಕರೆದುಕೊಂಡು ಹೋಗಲು ತೀರ್ಮಾನಿಸಿದ್ದೆವು. ಆದರೆ, ಅವರು ಭಿನ್ನರಾಗ ಎಳೆಯುತ್ತಿದ್ದಾರೆ. ವಿರೋಧ ಪಕ್ಷದವರಿಗೆ ಸರಿಹೊಂದುವ ದಿನವನ್ನು ನಾನು ಮತ್ತು ಮುಖ್ಯಮಂತ್ರಿ ಚರ್ಚಿಸಿ ತೀರ್ಮಾನಿಸುತ್ತೇವೆ' ಎಂದರು.

'ಹೈಕಮಾಂಡ್ ನಾಯಕರ ಭೇಟಿ ಇಲ್ಲ'

ಡಿ.ಕೆ. ಶಿವಕುಮಾರ್

ನವದೆಹಲಿ: 'ಈಗ ನಮ್ಮ ನಾಯಕರು ಸಂಸತ್ ಅಧಿವೇಶನದಲ್ಲಿ ಬ್ಯುಸಿ ಇದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ತೊಂದರೆ ಕೊಡಲು ಹಾಗೂ ಮುಜುಗರ ಉಂಟು ಮಾಡಲು ಬಯಸುವುದಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮದುವೆ ಸಮಾರಂಭದಲ್ಲಿ ಭಾಗವಹಿಸಲು ನವದೆಹಲಿಗೆ ಬಂದಿರುವ ಅವರು ಬುಧವಾರ ರಾತ್ರಿ ಸುದ್ದಿಗಾರರ ಜತೆಗೆ ಮಾತನಾಡಿ, 'ಯಾವುದೇ ನಾಯಕರನ್ನು ಭೇಟಿ ಮಾಡುವುದಿಲ್ಲ. ಗುರುವಾರ ಬೆಳಿಗ್ಗೆ 8ಕ್ಕೆ ಬೆಂಗಳೂರಿಗೆ ಮರಳುತ್ತೇನೆ' ಎಂದರು. ಮತಕಳವು ವಿರುದ್ಧ ಇದೇ 14ರಂದು ನಡೆಯಲಿರುವ ಪ್ರತಿಭಟನಾ ಸಮಾವೇಶಕ್ಕೆ ಪೂರ್ವ ತಯಾರಿ ನೋಡಿಕೊಳ್ಳುವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೇನೆ' ಎಂದರು.

ಇದೇ 8ರಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ಇರುವ ಬಗ್ಗೆ ಮಾಹಿತಿ ಲಭಿಸಿದೆ. ಮೇಕೆದಾಟು ಯೋಜನೆಯ ಕುರಿತು ಎಲ್ಲ ದಾಖಲೆಗಳನ್ನು ಸಿದ್ಧ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಾವು ನಮ್ಮ ವಿಚಾರ ಪ್ರತಿಪಾದಿಸಬೇಕು. ಇಲ್ಲದಿದ್ದರೆ ಸಭೆ ಮುಂದೂಡಿಕೆಯಾಗುತ್ತಾ ಹೋಗುತ್ತದೆ. ಯೋಜನೆಯ ವಿವರಗಳನ್ನು ಅವರಿಗೆ ನಾವು ನೀಡಬೇಕು. ಇದಕ್ಕೆ 6 ತಿಂಗಳ ಕಾಲಾವಕಾಶ ಇದೆ' ಎಂದು ತಿಳಿಸಿದರು.

ಮುಂದಿನ ವಾರ ನೇಮಕಾತಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ಇಲಾಖೆಯಲ್ಲಿನ 2,975 ಹುದ್ದೆಗಳ ಭರ್ತಿ ಪ್ರಕ್ರಿಯೆ ಪೂರ್ಣಗೊಳ್ಳುವ ಹಂತದಲ್ಲಿದೆ. ಕೆಪಿಟಿಸಿಎಲ್‌ನ 491 ಹುದ್ದೆಗಳಿಗೆ ಆಯ್ಕೆಯಾದವರ ಅಂತಿಮ ಪಟ್ಟಿಯನ್ನು ಈಗಾಗಲೇ ಪ್ರಕಟಿಸಿದ್ದು, ಇದೇ 10, 11ರಂದು ನೇಮಕಾತಿ ಆದೇಶ ನೀಡಲಾಗುತ್ತದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ (ಕೆಪಿಟಿಸಿಎಲ್) 410 ಕಿರಿಯ ಸ್ಟೇಷನ್ ಪರಿಚಾರಕರು ಹಾಗೂ 81 ಕಿರಿಯ ಪವರ್ ಮ್ಯಾನ್‌ಗಳ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಅವರಿಗೆ ನೇಮಕಾತಿ ಆದೇಶ ನೀಡುವುದರ ಜೊತೆಗೆ, ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗುತ್ತದೆ ಎಂದು ಕೆಪಿಟಿಸಿಎಲ್‌ನ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

433 ಕಿರಿಯ ಸ್ಟೇಷನ್ ಪರಿಚಾರಕರು ಹಾಗೂ 90 ಕಿರಿಯ ಪವರ್ ಮ್ಯಾನ್‌ಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ, ಕೆಲವೊಂದು ಮೀಸಲಾತಿ ಪ್ರವರ್ಗದಡಿ ಅರ್ಹ ಅಭ್ಯರ್ಥಿಗಳು ಲಭ್ಯವಾಗಿಲ್ಲ. ಇದರಿಂದಾಗಿ 32 ಹುದ್ದೆಗಳನ್ನು ತುಂಬಲು ಸಾಧ್ಯವಾಗಿಲ್ಲ. ಅವುಗಳನ್ನು ಬ್ಯಾಕ್‌ಲಾಗ್ ಹುದ್ದೆಗಳು ಎಂದು ಪರಿಗಣಿಸಿ, ಮುಂದೆ ನಡೆಯುವ ನೇಮಕಾತಿ ವೇಳೆ ಭರ್ತಿ ಮಾಡಲಾಗುತ್ತದೆ.

ಹುದ್ದೆಗಳ ಭರ್ತಿ ಸಂಬಂಧ 2024ರ ಅಕ್ಟೋಬರ್‌ನಲ್ಲಿ ಕೆಪಿಟಿಸಿಎಲ್ ಹಾಗೂ ಐದು ವಿದ್ಯುತ್ ಸರಬರಾಜು ಕಂಪನಿಗಳು ಅಧಿಸೂಚನೆ ಹೊರಡಿಸಿದ್ದವು. ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ (ಚೆಸ್ಕಾಂ) ಕಿರಿಯ ಪವರ್ ಮ್ಯಾನ್‌ಗಳ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಈಗಾಗಲೇ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಜೆಸ್ಕಾಂ ಮತ್ತು ಚೆಸ್ಕಾಂನಲ್ಲಿ ಅಂತಿಮ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರಗಳ ಪರಿಶೀಲನೆ ಕಾರ್ಯ ನಡೆಯುತ್ತಿದೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ (ಮೆಸ್ಕಾಂ) ಮತ್ತು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ (ಹೆಸ್ಕಾಂ) ಅಂಗವಿಕಲ ಕೋಟಾದಡಿ ನೇಮಕಾತಿ ಬಯಸಿರುವ ಶ್ರವಣದೋಷವುಳ್ಳ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ ನಡೆಸಲು ವೇಳಾಪಟ್ಟಿ ಸಿದ್ಧಪಡಿಸಲಾಗಿದೆ. ಅದಕ್ಕೆ ಅನುಗುಣವಾಗಿ ಪ್ರಕ್ರಿಯೆ ನಡೆಯುತ್ತಿದೆ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಪ್ರಕರಣಗಳ ತ್ವರಿತ ಇತ್ಯರ್ಥ: ಸಿ.ಎಸ್‌ಗೆ ಪತ್ರ

ಬೆಂಗಳೂರು: ಕರ್ನಾಟಕ ಹೈಕೋರ್ಟ್ ಮುಂದೆ ಬಾಕಿ ಇರುವ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಕ್ರಮವಹಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದಿದ್ದಾರೆ.

ಬೆಂಗಳೂರು ಹೈಕೋರ್ಟ್, ಕಲಬುರಗಿ ಹಾಗೂ ಧಾರವಾಡ ವಿಭಾಗೀಯ ಪೀಠಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿ, ಬಡ್ತಿ ಹಾಗೂ ವಿವಿಧ ಸೇವಾ ವಿಷಯಗಳಿಗೆ ಸಂಬಂಧಿಸಿದ ಪ್ರಕರಣಗಳು ಬಾಕಿ ಇವೆ. ಎಲ್ಲ ಪ್ರಕರಣಗಳನ್ನೂ ಇತ್ಯರ್ಥಪಡಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಎಲ್ಲಾ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡಬೇಕು ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರ ಕಾರ್ಮಿಕ ವಿರೋಧಿ, ಕೋಟ್ಯಧಿಪತಿಗಳ ಪರವಾಗಿದೆ: ಖರ್ಗೆ

ಕಾರ್ಮಿಕ ಸಂಹಿತೆ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: 'ಕಾರ್ಮಿಕ ವಿರೋಧಿ' ಸಂಹಿತೆ ವಿರೋಧಿಸಿ ವಿರೋಧ ಪಕ್ಷಗಳು ಸಂಸತ್ತಿನ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದವು. ಆದರೆ ಕಲಾಪಕ್ಕೆ ಯಾವುದೇ ಅಡ್ಡಿ ಮಾಡಲಿಲ್ಲ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಟಿ.ಆರ್.ಬಾಲು, ಕನಿಮೊಳಿ, ಕೆ.ರಾಧಾಕೃಷ್ಣನ್ ಮತ್ತು ಜಾನ್ ಬ್ರಿಟ್ಟಾಸ್, ಪಿ.ಸಂತೋಷ್ ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. 'ಕಾರ್ಪೊರೇಟ್ ಜಂಗಲ್ ರಾಜ್ ಬೇಡ, ಕಾರ್ಮಿಕರಿಗೆ ನ್ಯಾಯ ಬೇಕು' ಎಂದು ಬರೆದಿದ್ದ ಬ್ಯಾನರ್ ಹಿಡಿದು ಘೋಷಣೆಗಳನ್ನು ಕೂಗಿದರು.

ಖರ್ಗೆ ಅವರ ಕಚೇರಿಯಲ್ಲಿ ನಡೆದ ವಿರೋಧ ಪಕ್ಷಗಳ ಸಂಸದರ ಸಭೆಯಲ್ಲಿ ಟಿಎಂಸಿ ಸದಸ್ಯರು ಭಾಗಿಯಾಗಿರಲಿಲ್ಲ. ಆದರೆ ಟಿಎಂಸಿ ಸಂಸದೆ ಡೋಲಾ ಸೇನ್ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಈ ಮಧ್ಯೆ ಪಶ್ಚಿಮ ಬಂಗಾಳಕ್ಕೆ ಬಾಕಿ ಇರುವ ನರೇಗಾ ಅನುದಾನವನ್ನು ನೀಡುವಂತೆ ಆಗ್ರಹಿಸಿ ಟಿಎಂಸಿ ಸದಸ್ಯರು ಗಾಂಧಿ ಪ್ರತಿಮೆಯಿಂದ ಮಕರ ದ್ವಾರದವರೆಗೆ ಮೆರವಣಿಗೆ ನಡೆಸಿದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ (ಎಸ್‌ಐಆರ್) ಕುರಿತ ಚರ್ಚೆಗೆ ದಿನ ನಿಗದಿ ಮಾಡಿದ ಬೆನ್ನಲ್ಲೇ, ಕಲಾಪದ ಕಾರ್ಯತಂತ್ರದ ಕುರಿತು ಕಾಂಗ್ರೆಸ್, ಡಿಎಂಕೆ, ಆರ್‌ಜೆಡಿ, ಎಸ್‌ಪಿ, ಜೆಎಂಎಂ, ಸಿಪಿಎಂ, ಸಿಪಿಐ, ಮುಸ್ಲಿಂ ಲೀಗ್, ಎನ್‌ಸಿಪಿ–ಎಸ್‌ಪಿ ಮತ್ತು ಶಿವಸೇನೆ (ಉದ್ಧವ್ ಬಣ) ಸಂಸದರು ಚರ್ಚಿಸಿದರು.

ಬಳಿಕ ಖರ್ಗೆ ಅವರು 'ಎಕ್ಸ್'ನಲ್ಲಿ, 'ಮೋದಿ ಸರ್ಕಾರವು ಕಾರ್ಮಿಕ ವಿರೋಧಿ, ಕೋಟ್ಯಧಿಪತಿಗಳ ಪರವಾಗಿದೆ. ನೂತನ ಕಾರ್ಮಿಕ ಸಂಹಿತೆ ಬಳಿಕ ಕಂಪನಿಗಳು ಕಡಿಮೆ ಅವಧಿಯ ಗುತ್ತಿಗೆಗೆ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವ ಅಪಾಯವಿದೆ' ಎಂದು ಹೇಳಿದ್ದಾರೆ.

ಪ್ರಿಯಾಂಕಾ ಗಾಂಧಿ ಅವರು, 'ಈ ಹಿಂದೆ ಕಾರ್ಮಿಕರಿಗೆ ನೀಡಿದ್ದ ಸುರಕ್ಷತೆಯನ್ನು ಹಿಂಪಡೆಯಲಾಗಿದೆ. ಅವರ ಶೋಷಣೆಗೆ ಹೊಸ ಮಾರ್ಗಗಳನ್ನು ತೆರೆದಂತಾಗಿದೆ. ಈ ಕಾನೂನುಗಳ ಮೂಲಕ ಪ್ರಧಾನಿ ಮೋದಿ ಅವರು ತಾವು ಕೋಟ್ಯಧಿಪತಿಗಳ ಪರ ಎಂದು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ದೇಶವು ಈ ಕಾನೂನುಗಳನ್ನು ಸ್ವೀಕರಿಸುವುದಿಲ್ಲ' ಎಂದು ಹೇಳಿದ್ದಾರೆ.

ಕಾರ್ಮಿಕ ಸಂಹಿತೆ ಏಪ್ರಿಲ್ 1ರಿಂದ ಜಾರಿ?

ಕಾರ್ಮಿಕ ಸಂಹಿತೆ ವಿರೋಧಿಸಿ ವಿರೋಧ ಪಕ್ಷಗಳು ಸಂಸತ್ತಿನ ಆವರಣದಲ್ಲಿ ಪ್ರತಿಭಟನೆ ನಡೆಸಿದವು ಪಿಟಿಐ ಚಿತ್ರ

ದೇಶದಲ್ಲಿ ಇನ್ನೊಂದು ಸುತ್ತಿನ ಸುಧಾರಣೆಗಳನ್ನು ತರುವ ಉದ್ದೇಶದ 4 ಕಾರ್ಮಿಕ ಸಂಹಿತೆಗಳು 2026ರ ಏ.1ರಿಂದ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬರುವ ನಿರೀಕ್ಷೆ ಇದೆ.

ಸಂಹಿತೆಗಳಿಗೆ ಅಗತ್ಯವಿರುವ ನಿಯಮಗಳನ್ನು ಜಾರಿಗೆ ತರಲು ಬೇಕಿರುವ ಪ್ರಕ್ರಿಯೆಗಳನ್ನು ಕೇಂದ್ರ ಕಾರ್ಮಿಕ ಸಚಿವಾಲಯವು ಆರಂಭಿಸಿದೆ. ಸಂಹಿತೆಗಳನ್ನು ನವೆಂಬರ್ 21ರಂದು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ.

ಸಂಹಿತೆಗಳನ್ನು ಜಾರಿಗೆ ತರುವುದಕ್ಕೆ ಸರ್ಕಾರವು ಅವುಗಳ ಅಡಿಯಲ್ಲಿ ನಿಯಮಗಳನ್ನು ರೂಪಿಸಿ, ಅವುಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಬೇಕಿದೆ. ಆದರೆ, ಅದಕ್ಕೂ ಮೊದಲು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕರಡು ನಿಯಮಗಳನ್ನು ಪ್ರಕಟಿಸಿ ಸಾರ್ವಜನಿಕರಿಂದ ಆಕ್ಷೇಪ–ಸಲಹೆಗಳನ್ನು ಆಹ್ವಾನಿಸಬೇಕಿದೆ.

'ಸಿಐಐ ಇಂಡಿಯಾಎಜ್ 2025' ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಕಾರ್ಮಿಕ ಸಚಿವ ಮನಸುಖ್ ಮಾಂಡವೀಯ, ಕರಡು ನಿಯಮಗಳನ್ನು ಶೀಘ್ರವೇ ಪ್ರಕಟಿಸಲಾಗುತ್ತದೆ ಎಂದು ಬುಧವಾರ ಹೇಳಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕರಡು ನಿಯಮಗಳನ್ನು ಈ ಹಿಂದೆ ಪ್ರಕಟಿಸಿದ್ದವು. ಆದರೆ ಅದು ಪ್ರಕಟವಾಗಿ ಬಹಳ ಕಾಲ ಸಂದಿದೆ. ಈಗ ಇಂದಿನ ಸಂದರ್ಭಕ್ಕೆ ಅನುಗುಣವಾಗಿ ಕರಡು ನಿಯಮಗಳನ್ನು ಪ್ರಕಟಿಸುವ ಅಗತ್ಯ ಇದೆ ಎಂದು ಮಾಂಡವೀಯ ಹೇಳಿದ್ದಾರೆ.

ಕರಡು ನಿಯಮಗಳನ್ನು ಪ್ರಕಟಿಸಿದ ನಂತರ ಸರ್ಕಾರವು ಸಾರ್ವಜನಿಕರಿಗೆ ಆಕ್ಷೇಪ, ಪ್ರತಿಕ್ರಿಯೆಗಳನ್ನು ಸಲ್ಲಿಸಲು 45 ದಿನಗಳ ಸಮಯಾವಕಾಶ ಕಲ್ಪಿಸಲಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ವಿವರಿಸಿದ್ದಾರೆ. ಕಾರ್ಮಿಕರಿಗೆ ಸಂಬಂಧಿಸಿದ ವಿಚಾರಗಳು ಸಮವರ್ತಿ ಪಟ್ಟಿಯಲ್ಲಿ ಇರುವ ಕಾರಣದಿಂದಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಬೇಕಾಗಿದೆ. ಆಗ ಮಾತ್ರ ಕಾರ್ಮಿಕ ಸಂಹಿತೆಗಳು ಜಾರಿಗೆ ಬರುತ್ತವೆ.

ಮಣಿಪುರದಲ್ಲಿ ಚುನಾವಣೆಗೆ ಒತ್ತಾಯ

ಮಣಿಪುರದಲ್ಲಿ ಚುನಾವಣೆ ನಡೆಸಲು ವಿರೋಧ ಪಕ್ಷಗಳ ಸಂಸದರು ಬುಧವಾರ ಒತ್ತಾಯಿಸಿದರು. ಜಲ (ಮಾಲಿನ್ಯ ತಡೆ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ 2024ಯನ್ನು ಮಣಿಪುರಕ್ಕೂ ವಿಸ್ತರಿಸುವ ಕುರಿತು ರಾಜ್ಯಸಭೆಯಲ್ಲಿ ನಿರ್ಣಯ ಮಂಡಿಸಿದ ಬೆನ್ನಲ್ಲೇ ಸಂಸದರು ಹೀಗೆ ಒತ್ತಾಯಿಸಿದರು.

'ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಇರುವುದರಿಂದ ಎರಡೂ ಸದನಗಳು ಈ ನಿರ್ಣಯವನ್ನು ಅಂಗೀಕರಿಸಬೇಕಿದೆ' ಎಂದು ಪರಿಸರ ಮತ್ತು ಅರಣ್ಯ ಸಚಿವ ಭೂಪೇಂದರ್ ಯಾದವ್ ಹೇಳಿದರು. ಈ ಕುರಿತ ಚರ್ಚೆಯಲ್ಲಿ ಪಾಲ್ಗೊಂಡ ಟಿಎಂಸಿ ಸಂಸದೆ ಸುಶ್ಮಿತಾ ದೇವ್, ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿರುವ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ದತ್ತಾತ್ರೇಯ: ಜ್ಞಾನ ಭಕ್ತಿಗಳ ಸಂಗಮ

• ಎಸ್.ಸೂರ್ಯಪ್ರಕಾಶ ಪಂಡಿತ್

ಇಂದು ದತ್ತ ಜಯಂತಿ

ನಮ್ಮ ಸಂಸ್ಕೃತಿಯಲ್ಲಿ ಅವತಾರದ ಕಲ್ಪನೆ ತುಂಬ ವಿಶಿಷ್ಟವಾದದ್ದು. ಧರ್ಮಕ್ಕೆ ತೊಂದರೆ ಎದುರಾದಾಗ ದೇವರೇ ಸ್ವತಃ ಅದರ ರಕ್ಷಣೆಗೆ ಧಾವಿಸಿ ಬರುತ್ತಾನೆ ಎಂಬ ಕಲ್ಪನೆಯೇ ಅವತಾರಕಲ್ಪನೆಯ ಅಡಿಪಾಯ. ದೇವರೇ 'ಮೇಲಿಂದ' ಇಳಿದು ಬರುವುದೇ ಅವತಾರ. ಹೀಗೆ ಕೇಳಿಕೊಂಡ ಅವತಾರಗಳಲ್ಲಿ ದತ್ತಾತ್ರೇಯ ಕೂಡ ಒಬ್ಬ. ಆದರೆ ಈ ಅವತಾರದಲ್ಲಿ ಒಂದು ಸ್ವಾರಸ್ಯವೂ ಸೇರಿಕೊಂಡಿದೆ. ದತ್ತಾತ್ರೇಯ ಕೇವಲ ಒಬ್ಬ ದೇವರ ಅವತಾರ ಅಲ್ಲ; ಅವನು ತ್ರಿಮೂರ್ತಿಸ್ವರೂಪ. ಎಂದರೆ ಮೂವರು ದೇವತೆಗಳ ಸ್ವರೂಪ. ಇನ್ನೂ ಒಂದು ಸ್ವಾರಸ್ಯ ಎಂದರೆ: ದತ್ತಾತ್ರೇಯ ಗುರುರೂಪದಲ್ಲಿ ಒದಗಿರುವನು; ಅದೂ ಅವಧೂತರೂಪದಲ್ಲಿ.

ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ – ಈ ಮೂವರು ದೇವತಾಶಕ್ತಿಗಳ ಸಂಗಮಸ್ಥಾನವೇ ದತ್ತಾತ್ರೇಯ. ಈ ಮೂವರು ದೇವತೆಗಳಿಗೂ ನಿರ್ದಿಷ್ಟವಾದ 'ಕರ್ತವ್ಯ'ಗಳಿರುವುದು; ಬ್ರಹ್ಮನು ಸೃಷ್ಟಿಗೂ, ವಿಷ್ಣುವು ಸ್ಥಿತಿಗೂ, ಮಹೇಶ್ವರನು ಪ್ರಳಯಕ್ಕೂ ಮೂಲಕಾರಣರು. ಈ ಮೂವರ ಅಂಶವಾಗಿರುವ ದತ್ತಾತ್ರೇಯ ಮಹಾಗುರು ಈ ಮೂರೂ ಶಕ್ತಿಗಳ ಮೂರ್ತರೂಪವೇ ಆಗಿದ್ದಾನೆ. ಗುರುವಾದವನು ನಮ್ಮ ಜೀವನವನ್ನು ಈ ಮೂರು 'ರೂಪ'ಗಳಲ್ಲಿ ರೂಪಿಸಬಲ್ಲವನು ಎಂಬುದನ್ನು ಗಮನದಲ್ಲಿಟ್ಟುಕೊಂಡರೆ, ಆಗ ಗುರು ದತ್ತಾತ್ರೇಯನ ಕಾಣ್ಕೆಯ ಹಿರಿಮೆಯು ಹೃದಯಕ್ಕೆ ಸ್ಪಷ್ಟವಾಗುತ್ತದೆ.

'ಅವಧೂತ' ಎಂದರೆ ಯಾವುದರ ಬಗ್ಗೆಯೂ ಮೋಹವನ್ನಾಗಲೀ ಅಹಂಕಾರವನ್ನಾಗಲೀ ಹೊಂದಿರದ ಜ್ಞಾನಿ; ಎಲ್ಲ ರೀತಿಯ ರಾಗ-ದ್ವೇಷಗಳಿಂದ ದೂರವಾಗಿರುವ, ಸದಾ ಆನಂದದಲ್ಲಿಯೇ ನೆಲೆಯನ್ನು ಕಂಡುಕೊಂಡಿರುವ ಲೋಕಗುರು. ದಿಟವಾದ ಶಿಕ್ಷಣ ನಮ್ಮಲ್ಲಿ ಸ್ಥಿರವಾಗಬೇಕಾದ ಮೌಲ್ಯವೇ ರಾಗ-ದ್ವೇಷಗಳ ನಿರಾಕರಣ. ಇಂಥದೊಂದು ಮನಸ್ಥಿತಿಯಿದ್ದವನಿಗೆ ಎಲ್ಲೆಲ್ಲೂ ಆನಂದವೇ ಅನುಭವಕ್ಕೆ ಬರುತ್ತಿರುತ್ತದೆ. ಈ ಉಪದೇಶ ದತ್ತಾತ್ರೇಯನ ಕಲ್ಪನೆಯಲ್ಲಿ ಸ್ಪಷ್ಟವಾಗಿ ಹರಳುಗಟ್ಟಿದೆ. ಅವಧೂತನಾದವನಿಗೆ ಯಾವುದರ ಬಗ್ಗೆ ದ್ವೇಷವೂ ಇರದು, ಪ್ರೀತಿಯೂ ಇರದು. ಇದು ಜ್ಞಾನಿಯ ನಮ್ಮ ನಮ್ಮ ಜೀವನಕ್ಕೂ ದಿವ್ಯದೀಪದಂತೆ ಬೆಳಕನ್ನು ಕಾಣಿಸಬಲ್ಲದು.

ಅವಧೂತ ದತ್ತಾತ್ರೇಯ ಎತ್ತಿಹಿಡಿಯುವ ಜ್ಞಾನದ ಸ್ವರೂಪವೂ ವಿಶಿಷ್ಟವಾದುದು; ಈ ಜ್ಞಾನಕ್ಕೆ ಯಾವುದೇ ಜಾತಿ, ದೇಶ, ಕಾಲ, ಆಶ್ರಮ, ಕುಲಗಳ ಹಂಗು ಇರದು. ಇದನ್ನು 'ಅವಧೂತಗೀತೆ'ಯಲ್ಲಿ ಸೊಗಸಾಗಿ ವರ್ಣಿಸಲಾಗಿದೆ. ಇಂಥ ಜ್ಞಾನವೇ ಬ್ರಹ್ಮಜ್ಞಾನ; ಇದೇ ಅಖಂಡವಾದ ಆನಂದಸ್ವರೂಪ. ಈ ಆನಂದವೇ ದತ್ತಾತ್ರೇಯನ ಶಾಶ್ವತಶ್ರೀ.

ಭಾರತೀಯ ದರ್ಶನ ಪರಂಪರೆಯಲ್ಲಿ ಹತ್ತುಹಲವು ಧಾರೆಗಳಿವೆ; ಪರತತ್ತ್ವವನ್ನು ಒಪ್ಪದ, ಕೇವಲ ಪ್ರತ್ಯಕ್ಷ ಪ್ರಪಂಚವನ್ನಷ್ಟೆ ಒಪ್ಪುವ ಚಾರ್ವಾಕ ದರ್ಶನದಿಂದ ಮೊದಲಾಗಿ, ಪ್ರತ್ಯಕ್ಷವಾಗಿ ಕಾಣುವ ಜಗತ್ತನ್ನೇ 'ತೋರಿಕೆ' ಎಂದು ಸಾರುವ ವೇದಾಂತ ದರ್ಶನದ ತನಕ ಭಾರತೀಯ ತತ್ತ್ವಚಿಂತನೆ ಅರಳಿದೆ. ಈ ಎಲ್ಲ ಧಾರೆಗಳ ನಡುವೆ ಕಾಣಿಸಿಕೊಂಡಿರುವ ಅವಧೂತತತ್ತ್ವಕ್ಕೆ ಹತ್ತುಹಲವು ವಿಶೇಷತೆಗಳಿವೆ. ಭಕ್ತಿಯನ್ನೂ ಜ್ಞಾನವನ್ನೂ ಎತ್ತಿಹಿಡಿಯುವ ಈ ತತ್ತ್ವ ಕತೆಯ ಅನುಸಂಧಾನ ಸುಲಭ ಎಂದರೆ ಸುಲಭ, ಕಠಿಣ ಎಂದರೆ ಕಠಿಣ! ಭಜನೆ, ಜಪ, ಧ್ಯಾನಗಳಿಗೂ ಈ ಮಾರ್ಗದಲ್ಲಿ ಅವಕಾಶಗಳುಂಟು; ಕೇವಲ ಜ್ಞಾನಮಾರ್ಗದಲ್ಲಿಯೂ ಮುಂದುವರೆಯಬಹುದು. ಸಗುಣೋಪಾಸನೆ ಮತ್ತು ನಿರ್ಗುಣೋಪಾಸನೆ – ಎರಡರ ಸಮನ್ವಯವನ್ನು ಅವಧೂತಪರಂಪರೆಯಲ್ಲಿ ಕಾಣಬಹುದು.

ಜಿಲ್ಲೆ ರಚನೆಗೆ ಆಗ್ರಹ: ಗೋಕಾಕ ಬಂದ್ ಯಶಸ್ವಿ

ಬೆಳಗಾವಿ: 'ಬೆಳಗಾವಿ ಜಿಲ್ಲೆ ವಿಭಜಿಸಿ ಗೋಕಾಕ ಅನ್ನು ಕೇಂದ್ರವಾಗಿಸಿ ಹೊಸ ಜಿಲ್ಲೆ ರಚಿಸಬೇಕು. ಚಳಿಗಾಲದ ಅಧಿವೇಶನದಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಬುಧವಾರ ಕರೆ ನೀಡಿದ್ದ ಗೋಕಾಕ ಬಂದ್ ಯಶಸ್ವಿಯಾಯಿತು.

ಗೋಕಾಕ ಜಿಲ್ಲಾ ಹೋರಾಟ ಚಾಲನಾ ಸಮಿತಿ ಹಾಗೂ ವಕೀಲರ ಸಂಘದ ನೇತೃತ್ವದಲ್ಲಿ ಮೆರವಣಿಗೆ ನಡೆಸಿ, ಧರಣಿ ಮಾಡಲಾಯಿತು. ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರೂ ಬಂದ್‌ಗೆ ಬೆಂಬಲ ನೀಡಿದರು.

ಮಾರುಕಟ್ಟೆ ಹಾಗೂ ಮುಖ್ಯರಸ್ತೆಗಳಲ್ಲಿ ಅಂಗಡಿಗಳು, ಬಸ್, ಖಾಸಗಿ ವಾಹನಗಳ ಸಂಚಾರ ಬಂದ್ ಆಗಿತ್ತು. ಶಾಲೆ, ಬ್ಯಾಂಕ್, ಔಷಧ ಮಳಿಗೆ, ಆಸ್ಪತ್ರೆಗಳು ಕಾರ್ಯನಿರ್ವಹಿಸಿದವು. ಶೂನ್ಯ ಸಂಪಾದನಾ ಮಠದ ಪೀಠಾಧಿಪತಿ ಮುರುಘರಾಜೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ಹಲವು ಮುಖಂಡರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಜೆಇ ಮನೆಯಲ್ಲಿ ₹46.11 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಸುರಪುರ (ಯಾದಗಿರಿ ಜಿಲ್ಲೆ): ಇಲ್ಲಿನ ನಗರಸಭೆಯ ಕಿರಿಯ ಎಂಜಿನಿಯರ್ (ಜೆಇ) ಮಹೇಶ ಶಿವಾನಂದ ಅವರ ಮನೆ ಅಲ್ಮೇರಾದಲ್ಲಿ ಇರಿಸಿದ್ದ ₹40 ಸಾವಿರ ನಗದು, ₹46.11 ಲಕ್ಷ ಮೌಲ್ಯದ ಚಿನ್ನಾಭರಣ ಕಳವಾಗಿದೆ.

ಮಹೇಶ ತನ್ನ ಸಹೋದರನ ಜೊತೆಗೂಡಿ ಸತ್ಯಂಪೇಟೆ ರಸ್ತೆ ಸಮೀಪ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ. 'ಮಂಗಳವಾರ ರಾತ್ರಿ ನಗರ ದಿವಳಗುಡ್ಡದ ಮರಗಮ್ಮ ದೇವಿಯ ಜಾತ್ರೆಗಾಗಿ ಕುಟುಂಬದ ಸದಸ್ಯರು ತೆರಳಿದ್ದರು.

'ಬಾಗಿಲಿನ ಕೀಲಿ ಕೊಂಡಿ ಮುರಿದು ಕೃತ್ಯ ಎಸಗಿದ್ದು ₹40 ಸಾವಿರ ನಗದು, 642 ಗ್ರಾಂ ತೂಕದ ಚಿನ್ನದ ಆಭರಣ, 1,295 ಗ್ರಾಂ ಬೆಳ್ಳಿ ಆಭರಣ ಕಳವಾಗಿದೆ' ಎಂದು ಸುರಪುರ ಠಾಣೆಗೆ ದೂರು ನೀಡಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್: 080–22215602

ಸಂಖ್ಯೆ:ಡಿವೈಇಎಸ್/ಎಸ್.ಸಿ.ಎಸ್.ಪಿ–ಟಿ.ಎಸ್.ಪಿ/36/2025–26 ದಿನಾಂಕ: 03–12–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕೆಲಸಕ್ಕಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲಾ ಕ್ರೀಡಾ ವಸತಿ ನಿಲಯಗಳಿಗೆ Competition Cycles ಗಳನ್ನು ಸರಬರಾಜು ಮಾಡುವುದು.	1,41,08,316.00	2,11,625.00

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **17–12–2025 ರಂದು ಸಮಯ: 16.00 ಗಂಟೆವರೆಗೆ.** 2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **18–12–2025 ರಂದು ಸಮಯ: 16.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ವಾಸಾಸಂಇ/ವಾ.ಪ್ರ/4167/ಅಡ್ವರ್ಟೋಕ್/2025–26

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ–ಮೇಲ್: sitodirector@gmail.com

No. SGITO/e-Tender/Autoclave(10)/CUSA/Spine(11)/2025-26 ದಿನಾಂಕ:03–12–2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.

(1) FLASH AUTOCLAVE MACHINE
(2) SUPPLY OF CUSA (CAVITRON ULTRASONIC SURGICAL ASPIRATOR) AND ENDOSPINE INSTRUMENTS

(1) ಟೆಂಡರ್ ದಾಖಲೆಗಳನ್ನು **https://kppp.karnataka.gov.in** ನಿಂದ ದಿನಾಂಕ **04–12–2025**ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ದಿನಾಂಕ **18–12–2025**ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (2) ಟೆಂಡರನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಸಹಿ/–
ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ

ಡಿಐಪಿಆರ್/ಎಸ್ಐ/4171/2025–26

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– ೦೪, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ ಃ+ ಗ್ರೇಡ್ – 2021) PM-USHA (MERU)
ಪ್ರಧಾನ ಮಂತ್ರಿ ಉಚ್ಚತರ ಶಿಕ್ಷಾ ಅಭಿಯಾನ
E-mail: registrar@rcub.ac.in ಕುಲಸಚಿವರ ಕಾರ್ಯಾಲಯ Phone No : 0831-2565242

ಕ್ರ.ಸಂ.:ರಾಚವಿ/ಬೆಳಗಾವಿ/ಕುಸಕಾ/2025-26/4708 ದಿನಾಂಕ:03.12.2025

–: ಅಲ್ಪಾವಧಿ ಟೆಂಡರ್ ಅಧಿಸೂಚನೆ (ಕೆ.ಪಿ.ಪಿ ಪೋರ್ಟಲ್‌ನಲ್ಲಿ):–

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವಿವಿಧ ಸೇವೆಗಳಿಗೆ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಅಡಿಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮೂಲಕ ಈ ಕೆಳಗಿನ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No	Tender Name	EMD	Last Date
1.	Procurement of Housekeeping services at Rani Channamma University, Belagavi for a period of Two Years [RCUB/2025-26/SE0031]	Rs. 1,50,000/-	17.12.2025, 05.00 P.M
2.	Procurement of security services at Rani Channamma University, Belagavi for a period of Two Years [RCUB/2025-26/SE0030]	Rs. 1,50,000/-	17.12.2025, 05.00 P.M
3.	Supply of Single Column Mechanical Machine to Rani Channamma University, Belagavi under VGST KST ePS-GREPROJECT(RCUB/2025-26/IND0025).	Rs. 24,000/-	18.12.2025, 05.00 P.M

ಆಸಕ್ತರು https://kppp.karnataka.gov.in ಮೂಲಕ ಟೆಂಡರ್‌ಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಟೆಂಡರ್‌ನ ಅವಧಿ ವಿಸ್ತರಣೆ, ತಿದ್ದುಪಡಿ ಮತ್ತು ಇನ್ನಿತರೆ ಹೆಚ್ಚುವರಿ ಮಾಹಿತಿಗಳನ್ನು ಸದರಿ ಪೋರ್ಟಲ್‌ನಲ್ಲಿ ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್ www.rcub.ac.in ನಲ್ಲಿ ಬಿಡುಗಡೆ ಮಾಡಲಾಗುವುದು.

ಸಹಿ/–
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

Rajiv Gandhi University of Health Sciences, Karnataka

4th T Block, Jayanagar, Bengaluru 560041
registrar@rguhs.ac.in Tel : +91-80-29601928

Ref: RGUHS/HELINET/2025-26/2 Dated: 22-11-2025

REQUEST FOR PROPOSALS

The HELINET, RGUHS invites proposals directly from the Publishers of e-resources (from India and abroad) for Licensing/subscription/one- time- purchase, based on the types of the materials like

e-books, teaching-learning multimedia course materials, e-learning materials, Interactive anatomy learning materials, point-of-care resources and other academic content related health sciences field for Under-graduates, Post-graduate, faculty and researcher. The proposals should include all the details to understand the products, services and access. The proposal from agents, channel partners or distributors are not accepted. The proposal should include price for HELINET consortium. The proposal should be submitted through email to Registrar, RGUHS, Bengaluru shall be sent on or before December 20, 2025, with a subject line "RFP for HELINET, RGUHS, 2025-26" Format of the proposal may be downloaded from www.rguhs.ac.in

Sd/-
Registrar, RGUHS, Bengaluru

DIPR/CP/4180/AKAR/2025-26

ಗಣಿ ಮತ್ತು ಭೂವಿಜ್ಞಾನ ಇಲಾಖೆ

ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.
ಇ–ಮೇಲ್ : dir-mines@karnataka.gov.in

No. DMG/MLS/Auction/2nd Phase/2025-26 Dated: 03.12.2025

ಟೆಂಡರ್ ಆಹ್ವಾನ ಪ್ರಕಟಣೆ

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಎಂಎಸ್‌ಟಿಸಿ ಪೋರ್ಟಲ್ ಮೂಲಕ ವಿವಿಧ ಪ್ರಕಟಣೆಗಳ ಅಡಿಯಲ್ಲಿ ರದ್ದುಗೊಂಡ ಸ್ಟಾಕ್ ಯಾರ್ಡ್ ಗಳಲ್ಲಿರುವ ಹಳೆಯ ಕಬ್ಬಿಣದ ಅದಿರಿನ ರಾಶಿಗಳ ಹಾಗೂ ಸ್ಪಾಂಜ್ ಐರನ್ ಕಾರ್ಖಾನೆಗಳಲ್ಲಿರುವ ಜನಿತವಾದ ಕಬ್ಬಿಣದ ಅದಿರಿನ ಪುಡಿಗಳ ಹರಾಜಿಗೆ ಟೆಂಡರ್ ಆಹ್ವಾನಿಸಿದೆ.

ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಲು ಅರ್ಹತಾ ಮಾನದಂಡ, ನಿಯಮ ಹಾಗೂ ನಿಬಂಧನೆಗಳು, ದಿನಾಂಕ ಮತ್ತು ಸಮಯಗಳನ್ನು ಟೆಂಡರ್ ದಾಖಲಾತಿಯಲ್ಲಿ ಒದಗಿಸಲಾಗಿದೆ. ಪ್ರತ್ಯೇಕ ಲಾಟ್ ಪ್ರಕಾರವಾಗಿ ಹರಾಜು ಪ್ರಕಟಣೆಗಳನ್ನು ಎಂಎಸ್‌ಟಿಸಿ ಪೋರ್ಟಲ್ ನಲ್ಲಿ ಪ್ರಕಟಿಸಲಾಗಿದೆ. ಇ–ಹರಾಜು ಪ್ರಕ್ರಿಯೆಯ ಪ್ರತ್ಯೇಕ ಲಾಟ್‌ಗಳ ಬಗ್ಗೆ ಟೆಂಡರ್ ದಾಖಲಾತಿಗಳು, ಪ್ರಕಟಣೆಗಳು, ಅಪ್ಡೇಟ್ ಗಳು ಹಾಗೂ ಇತರೆ ವಿವರಗಳು ಎಂಎಸ್‌ಟಿಸಿ ಲಿಮಿಟೆಡ್ ವೆಬ್‌ಸೈಟ್‌ನಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಿರುವುದು. https://www.mstcecommerce.com/auctionhome/aucsearch/search.jsp

ಹಳೆಯ ಸಂಗ್ರಹಣೆಯ ಕಬ್ಬಿಣದ ಅದಿರಿನ ಪ್ರತಿ ಲಾಟ್‌ನ ಹರಾಜು "ಎಲ್ಲಿದಿಯೋ ಅಲ್ಲಿ, ಹೇಗಿದೆಯೋ ಹಾಗೆ ಮತ್ತು ದೂರು ರಹಿತ ಆಧಾರದಲ್ಲಿ" ಇರುತ್ತದೆ. ಆಸಕ್ತಿಯುಳ್ಳ ಬಿಡ್‌ದಾರರು ಭಾಗವಹಿಸುವ ಮುನ್ನ ಕಬ್ಬಿಣ/ಮ್ಯಾಂಗನೀಸ್ ಅದಿರಿನ ಪ್ರಮಾಣ ಮತ್ತು ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಬೇಕು. ಬಿಡ್ ದೃಢೀಕರಿಸಿದ ನಂತರ ಉದ್ಭವಿಸುವ ಯಾವುದೇ ವಿವಾದಕ್ಕೆ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.

ಆಸಕ್ತಿಯುಳ್ಳ ಬಿಡ್ ದಾರರು ಎಂಎಸ್‌ಟಿಸಿ ವೆಬ್‌ಸೈಟ್‌ಗೆ ಭೇಟಿ ನೀಡುವುದು.

ಸಹಿ/–
ನಿರ್ದೇಶಕರು
ಗಣಿ ಮತ್ತು ಭೂವಿಜ್ಞಾನ ಇಲಾಖೆ

ವಾ.ಸಾ.ಸಂ.ಇ/ವಾಪ್ರ/4191/ಆಕಾರ್/2025–26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಳಿಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ಉತ್ತರ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ(ರೂ.ಗಳಲ್ಲಿ) / ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2614/2025–26 ದಿನಾಂಕ: 02.12.2025	ರೂ. 43,75,533/– / ರೂ. 87,550/–	11.12.2025 ಸಂಜೆ 05:00 ಗಂಟೆಯವರೆಗೆ	12.12.2025ರ ಸಂಜೆ 05:30 ಗಂಟೆಯ ನಂತರ
2		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2616/2025–26 ದಿನಾಂಕ: 02.12.2025 (ಪ.ಜಾತಿ ಪ್ರವರ್ಗಕ್ಕೆ ಮೀಸಲಿರಿಸಿದೆ)	ರೂ. 50,89,579/– / ರೂ. 50,900/–		
3		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2618/2025–26 ದಿನಾಂಕ: 02.12.2025	ರೂ. 31,58,488/– / ರೂ. 63,200/–		
4		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2620/2025–26 ದಿನಾಂಕ: 02.12.2025	ರೂ. 28,04,934/– / ರೂ. 56,100/–		
5		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2622/2025–26 ದಿನಾಂಕ: 02.12.2025	ರೂ. 44,37,375/– / ರೂ. 88,750/–		
6		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2624/2025–26 ದಿನಾಂಕ: 02.12.2025	ರೂ. 14,83,872/– / ರೂ. 37,100/–	11.12.2025 ಸಂಜೆ 05:00 ಗಂಟೆಯವರೆಗೆ	12.12.2025ರ ಸಂಜೆ 05:01 ಗಂಟೆಯ ನಂತರ
7		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/ 2626/2025–26 ದಿನಾಂಕ: 02.12.2025 (CAT-IIA ಪ್ರವರ್ಗಕ್ಕೆ ಮೀಸಲಿರಿಸಿದೆ)	ರೂ. 14,41,709/– / ರೂ. 18,050/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಕೇಂದ್ರ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜಿಎ/4187/2025–26

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ–563 103.
E-mail: bnuregistrar@karnataka.gov.in, Website: www.bnu.karnataka.gov.in
ದಿನಾಂಕ: 01.12.2025

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ ಇಲ್ಲಿಗೆ ಈ ಕೆಳಕಂಡಂತೆ ವಿವಿಧ ಪ್ರಕ್ರಿಯೆಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದೆ.

(1) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಲ್ಲಿನ UPS, Water Filters, Solar Water heaters, CCTV, Air Conditioner, High mast Steert Lights ಮತ್ತು Digital Interactive Panel Boards ಗಳನ್ನು ಸಮಗ್ರ ವಾರ್ಷಿಕ ನಿರ್ವಹಣೆಗಾಗಿ (Comprehensive Annual Maintenance) ಒಪ್ಪಂದ ಮಾಡಿಕೊಳ್ಳುವ ಬಗ್ಗೆ. ಟೆಂಡರ್ ನಂ: BNU/2025-26/IND0056. (2) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ, ಸ್ನಾತಕೋತ್ತರ ಕೇಂದ್ರ ಮಂಗಸಂದ್ರ ಮತ್ತು ವಿಶ್ವವಿದ್ಯಾಲಯದ ಶಿಕ್ಷಣ ಕಾಲೇಜು ಚಿಕ್ಕಬಳ್ಳಾಪುರಕ್ಕೆ ರಾಸಾಯನಿಕಗಳು, ಗಾಜಿನ ವಸ್ತುಗಳು ಮತ್ತು ಪ್ರಯೋಗಾಲಯ ಉಪಕರಣಗಳ ಸರಬರಾಜು ಮಾಡುವ ಬಗ್ಗೆ. ಟೆಂಡರ್ ನಂ: BNU/2025-26/IND0057.

ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ–ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಅಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ದಾಖಲೆಗಳನ್ನು ದಿನಾಂಕ 29.11.2025 ರಿಂದ **http://kppp.karnataka.gov.in** ವೆಬ್ ಸೈಟ್ ನಲ್ಲಿ ಡೌನ್ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಆಡಳಿತ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/– ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ

ವಾ.ಸಾ.ಸಂ.ಇ./ ಕೋಲಾರ/ ಆರ್.ಓ. ಸಂಖ್ಯೆ 382/ ಕೆಎಸ್‌ಎಂಸಿಎ/ 2025–26

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102
Phone /Fax-08532-238488/89
www.rims-raichur.karnataka.gov.in info@rims-raichur.com

ರಿಮ್ಸ್/ಸಿಬ್ಬಂದಿ(1)/ನೇಮಕಾತಿ/2025–26 ದಿನಾಂಕ : 01.12.2025

ತಿದ್ದುಪಡಿ ನೇಮಕಾತಿ ಅಧಿಸೂಚನೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಅದರ ಅಧೀನದಲ್ಲಿರುವ ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇಲ್ಲಿ ಖಾಲಿ ಇರುವ ವಿವಿಧ ವೃಂದದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಹೊರಡಿಸಲಾದ ಅಧಿಸೂಚನೆ ದಿನಾಂಕ:24.10.2025 ಕ್ಕೆ ಕೆಲ ಆಕ್ಷೇಪಣೆ ಸ್ವೀಕೃತವಾಗಿರುವ ಹಿನ್ನೆಲೆಯಲ್ಲಿ , ಮೀಸಲಾತಿ ಬಿಂದುಗಳನ್ನು ಪರಿಶೀಲಿಸುವ ಕುರಿತು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮಾರ್ಗದರ್ಶನ ಕೋರಿಲಾಗಿತ್ತು. ಮುಂದುವರೆದು ಈಗಾಗಲೇ ಹೊರಡಿಸಲಾದ ನೇಮಕಾತಿ ಅಧಿಸೂಚನೆಗೆ ನಿಗದಿಪಡಿಸಲಾದ ಮೀಸಲಾತಿ ಬಿಂದುಗಳನ್ನು ದಿನಾಂಕ : 04.11.2025 ರ ಅಧಿಸೂಚನೆಯಲ್ಲಿ ರದ್ದುಪಡಿಸಲಾಗಿರುತ್ತದೆ.

ಮಾನ್ಯ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಮೀಸಲಾತಿ ಬಿಂದುಗಳನ್ನು ನಿಗದಿಪಡಿಸಿ, ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬಹುದು ಎಂದು ನೀಡಿರುವ ವರದಿಯ ಹಿನ್ನೆಲೆಯಲ್ಲಿ ಈ ಕೆಳಕಂಡ ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ನೇಮಕಾತಿ ಪ್ರಕ್ರಿಯೆಯು ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಹಾಗೂ ಈ ಸಂಬಂಧ ಅಭ್ಯರ್ಥಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲ.

ಈ ಹಿಂದೆ ಸಲ್ಲಿಸಿರುವ ಅರ್ಜಿಗಳನ್ನು ಮತ್ತು ಡಿಡಿ ಗಳನ್ನು ಸಂಬಂಧಪಟ್ಟ ಅಭ್ಯರ್ಥಿಗಳ ವಿಳಾಸಕ್ಕೆ ಹಿಂದಿರುಗಿಸಲಾಗುವುದು.

ಕ್ರ.ಸಂ	ಹುದ್ದೆಗಳ ವಿವರ	ಒಟ್ಟು ಹುದ್ದೆಗಳ ಸಂಖ್ಯೆ
1	ಪ್ರಾಧ್ಯಾಪಕರು (ರಾ.ಗಾ.ಸೂ.ಸ್ಪೆ.ಆಸ್ಪತ್ರೆ)	03
2	ಸಹಾಯಕ ಪ್ರಾಧ್ಯಾಪಕರು (ರಿಮ್ಸ್ ಮತ್ತು ರಾ.ಗಾ.ಸೂ.ಸ್ಪೆ.ಆಸ್ಪತ್ರೆ)	21
	ಒಟ್ಟು ಹುದ್ದೆಗಳು	24

ಅರ್ಹತೆ, ವಯಸ್ಸು , ವಿದ್ಯಾರ್ಹತೆಗಳು, ಸೇವಾ ಅನುಭವ ಮತ್ತು ಮೀಸಲಾತಿ ವಿವರಗಳು ಹಾಗೂ ಇತರೆ ವಿವರಗಳನ್ನು ಸಂಸ್ಥೆಯ ಅಂತರ್ಜಾಲ ವಿಳಾಸ www.rimsraichur.karnataka.gov.in ನಲ್ಲಿ ಪಡೆಯಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

DIP/RCR/576/KSMC&A/578/2025-26

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/4367/2025–26 ದಿನಾಂಕ : 29–11–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಅರ್ಹ ಗುತ್ತಿಗ್ತೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿ)ರ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತಿಗೆದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತಿಗೆದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **https://kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಅಥವಾ ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹೀರಾತು ಹೊರಡಿಸಲಾಗುವುದಿಲ್ಲ.

ಕ್ರ ಸಂ	ಕಾಮಗಾರಿಯ ವಿವರ	ಕಾಮಗಾರಿ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
	ಲೆಕ್ಕ ಶೀರ್ಷಿಕೆ : 3054–(ಯೋಜನೇತರ)–ರಾಜ್ಯ ಹೆದ್ದಾರಿಗಳ ನಿರ್ವಹಣೆ :	
1)	PWD/2025-26/RD/WORK_INDENT28997	100.00
2)	PWD/2025-26/RD/WORK_INDENT28996	100.00
	ಲೆಕ್ಕ ಶೀರ್ಷಿಕೆ : 3054–(ಯೋಜನೇತರ)–ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ :	
3)	PWD/2025-26/RD/WORK_INDENT28807	300.00
4)	PWD/2025-26/RD/WORK_INDENT28835	200.00
5)	PWD/2025-26/RD/WORK_INDENT28808	200.00
	ಲೆಕ್ಕ ಶೀರ್ಷಿಕೆ : 5054–(ಯೋಜನೆ)–ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ :	
6)	PWD/2025-26/RD/WORK_INDENT29521	500.00
7)	PWD/2025-26/RD/WORK_INDENT29415	100.00
	ಲೆಕ್ಕ ಶೀರ್ಷಿಕೆ : 5054–(ಯೋಜನೆ)–ರಾಜ್ಯ ಹೆದ್ದಾರಿಗಳ ನವೀಕರಣ :	
8)	PWD/2025-26/RD/WORK_INDENT28771	500.00
9)	PWD/2025-26/RD/WORK_INDENT28772	500.00

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)	ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ	08–12–2025 ರಂದು 12.00 ಗಂಟೆಯ ವರೆಗೆ.
ಆ)	ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	10–12–2025 ರಂದು 16.00 ಗಂಟೆಯ ವರೆಗೆ.
ಇ)	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.	11–12–2025ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01,
ದೂರವಾಣಿ: 080–22133370, ವೆಬ್‌ಸೈಟ್: www.kpwd.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 39/2025–26
ದಿನಾಂಕ: 02.12.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ದೇವನಹಳ್ಳಿ, ಹೊಸಕೋಟೆ, ಆನೇಕಲ್ & ನಂ.02 ಉತ್ತರ ಉಪವಿಭಾಗಗಳಿಗೆ** ಸಂಬಂಧಿಸಿದಂತೆ **09 ಸಂಖ್ಯೆಯ (ರೂ. 6.00 ರಿಂದ 110.00 ಲಕ್ಷಗಳು)** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೊಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

ಕ್ರ.ಸಂ. 01 ರಿಂದ 07ಕ್ಕೆ:
1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **10.12.2025 ಸಂಜೆ 4.00 ಗಂಟೆಯವರೆಗೆ.**
2. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ **11.12.2025 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಕ್ರ.ಸಂ. 08 ರಿಂದ 09ಕ್ಕೆ:
1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **18.12.2025 ಸಂಜೆ 4.00 ಗಂಟೆಯವರೆಗೆ.**
2. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ **19.12.2025 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ–ಸಿ.ಪಿ/4170/ಕೆಎಸ್‌ಎಂಸಿಎ/2025–26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪರು–4 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ,
ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052. ಇ–ಮೇಲ್: Email:dgm4bswml25@gmail.com

ಸಂಖ್ಯೆ: ಡಿಜಿಎಂ–4/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/03/2025–26/2ನೇ ಕರೆ ದಿನಾಂಕ: 03–12–2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)2ನೇ ಕರೆ (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1) ಉಪ ಪ್ರಧಾನ ವ್ಯವಸ್ಥಾಪಕರು–4, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಅರ್ಹ ಬಿಡ್‌ದಾರರಿಂದ ಹೊಸ ಪ್ರಸ್ತಾವನೆಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ಇವರ ಪರವಾಗಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ (ಎಂದರೆ https://kppp.karnataka.gov.in) ಸಲ್ಲಿಸಬಹುದು. ಬಿಡ್‌ದಾರರು ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಬಿಡ್‌ದಾರರಿಗೆ ಸೂಚನೆಗಳ ಕಲಂ 3 ರಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಅರ್ಹತಾ ಅಗತ್ಯಗಳನ್ನು ಗಮನಿಸಲು ಕೋರಿದೆ.

2) ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ **08.12.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

3) ಇತರೆ ವಿವರಗಳನ್ನು ಟೆಂಡರ್ ದಸ್ತಾವೇಜುಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟಿರುವ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) ಜಿಎಸ್‌ಟಿ ಹೊರತುಪಡಿಸಿ	ಇಎಂಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ದಸ್ತಾವೇಜು ಬೆಲೆ	ಗುತ್ತಿಗೆ ಪೂರ್ಣಗೊಳಿಸಲು ಅವಧಿ
1	ಸ್ವಚ್ಛ ಭಾರತ ಮಿಷನ್ 2.0 ಅಡಿಯಲ್ಲಿ ಜಿಬಿಎ ವ್ಯಾಪ್ತಿಯಲ್ಲಿ ಸಾರ್ವಜನಿಕ ಮತ್ತು ಸಮುದಾಯ ಶೌಚಾಲಯಗಳ ನಿರ್ಮಾಣ	1350.00	ರೂ.13,50,000/–	ಕೆಪಿಪಿಪಿ ಪೋರ್ಟಲ್ ಅನುಸಾರ	6 ತಿಂಗಳು

ವೇಳಾಪಟ್ಟಿ 1. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ 24.12.2025 ರಂದು ಸಂಜೆ 4.00 ಗಂಟೆಯವರೆಗೆ. 2.** ಕೆಪಿಪಿ ಪೋರ್ಟಲ್‌ನಲ್ಲಿ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ 12.12.2025 ರಂದು ಸಂಜೆ 4.00 ಗಂಟೆಯವರೆಗೆ. 3.** ಮುಖ್ಯ ಎಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ತಂತ್ರಜ್ಞಾನ), ಬಿಎಸ್‌ಡಬ್ಲ್ಯೂಎಂಎಲ್ ಅವರ ಅಧ್ಯಕ್ಷತೆಯಲ್ಲಿ **ದಿನಾಂಕ: 15.12.2025 ರಂದು ಸಂಜೆ 3.00 ಗಂಟೆಗೆ** ಸಭೆ ಸಭಾಂಗಣ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 52 ರಲ್ಲಿ ಪೂರ್ವ–ಬಿಡ್ ಸಭೆ ನಡೆಯಲಿದೆ. **4.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 29.12.2025 ರಂದು ಸಂಜೆ 4.00 ಗಂಟೆಯೊಳಗೆ** ಅಥವಾ ಮುಂದಿನ ಕೆಲಸದ ದಿನದಂದು. **5.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಬಗ್ಗೆ ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.

ಷರತ್ತು ಮತ್ತು ನಿಯಮಗಳು: 1) ಉದ್ಯೋಗದಾತನು ತನ್ನ ನಿಯಂತ್ರಣ ಮೀರಿದ ವ್ಯವಸ್ಥೆಯ ವೈಫಲ್ಯದಿಂದಾಗಿ ಉಂಟಾಗುವ ಯಾವುದೇ ವಿಳಂಬಗಳಿಗೆ ಹೊಣೆಗಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳ ಬಗ್ಗೆ ವ್ಯವಸ್ಥೆಯು ಟೆಂಡರ್‌ದಾರರಿಗೆ ತಿಳಿಸಲು ಪ್ರಯತ್ನಿಸಿದರೂ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ–ಮೇಲ್ ವಿಳಾಸ **hphelpdesk.blr@intarvo.com** ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080–22371090 / 22373788. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಟೆಂಡರ್ದಾರರು ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. **2.** ಇಂಟರ್‌ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್ ಪ್ರವೇಶಿಸಲಾಗದಿದ್ದರೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. **3.** ಯಾವುದೇ ತಿದ್ದುಪಡಿ/ಅನುಬಂಧವನ್ನು ಕೆ ಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–4, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/4172/ಎಎ/2025–26

ಸುಭಾಷಿತ

ಸಂತೃಪ್ತಿಗೆ ಸಮನಾದ ಸಂಪತ್ತಿಲ್ಲ. ಸಹನೆಗೆ ಸಮನಾದ ಸದ್ಗುಣವಿಲ್ಲ.

-ಶಾರದಾದೇವಿ

ಸಂಪಾದಕೀಯ

ಕಣ್ಗಾವಲು ಆ್ಯಪ್ ಕಡ್ಡಾಯ ರದ್ದು ಇಣುಕುವ ಚಾಳಿ ಕೊನೆಗೊಳ್ಳಲಿ

ಭಾರತದಲ್ಲಿ ಮಾರಾಟವಾಗುವ ಮೊಬೈಲ್ ಫೋನ್‌ಗಳಲ್ಲಿ ತಯಾರಿಕೆ ಹಂತದಲ್ಲಿಯೇ ‘ಸಂಚಾರ ಸಾಥಿ’ ಆ್ಯಪ್ ಅಳವಡಿಸುವ ನಿರ್ದೇಶನವನ್ನು ಹಿಂದಕ್ಕೆ ತೆಗೆದುಕೊಂಡಿರುವುದು ಕೇಂದ್ರ ಸರ್ಕಾರದ ಅನಿವಾರ್ಯವಾದ ಕ್ರಮವಾಗಿತ್ತು. ‘ಸಂಚಾರ ಸಾಥಿ’ ಆ್ಯಪ್ ಅಳವಡಿಕೆ ಸರ್ವಾಧಿಕಾರಕ್ಕೆ ಸಮಾನವಾದ ನಡೆಯಾಗಿದ್ದು, ಜನದನಿಯನ್ನು ಹತ್ತಿಕ್ಕಲು ಸರ್ಕಾರ ನಡೆಸಿರುವ ಪ್ರಯತ್ನವಾಗಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು. ವಿಶ್ವದ ಪ್ರಮುಖ ಮೊಬೈಲ್ ಫೋನ್ ತಯಾರಿಕಾ ಕಂಪನಿಯಾದ ‘ಆ್ಯಪಲ್’, ತಾನು ತಯಾರಿಸುವ ಫೋನ್‌ಗಳಲ್ಲಿ ಆ್ಯಪ್ ಅಳವಡಿಸುವುದನ್ನು ನಿರಾಕರಿಸಿತ್ತು. ಉತ್ತಮ ಉದ್ದೇಶ ಹೊಂದಿರುವ ಹಾಗೂ ಕಾನೂನುಬದ್ಧವಾದ ನಡೆ ಎಂದು ತನ್ನ ನಿಲುವನ್ನು ಸರ್ಕಾರ ಸಮರ್ಥಿಸಿಕೊಂಡರೂ, ಅಂತಿಮವಾಗಿ ಸಾರ್ವಜನಿಕ ಪ್ರತಿರೋಧಕ್ಕೆ ಮಣಿದಿದೆ. ಗ್ರಾಹಕರ ಸುರಕ್ಷತೆಯನ್ನು ಉತ್ತಮಗೊಳಿಸುವುದು, ಡಿಜಿಟಲ್ ವಿಶ್ವಾಸಾರ್ಹತೆಯನ್ನು ಬಲಗೊಳಿಸುವುದು ಹಾಗೂ ಸೈಬರ್ ಅಪರಾಧಗಳನ್ನು ತಡೆಗಟ್ಟುವ ದಿಸೆಯಲ್ಲಿ ಆ್ಯಪ್ ಅಳವಡಿಕೆ ಅಗತ್ಯವಾಗಿದ್ದ ಕ್ರಮ ಎಂದು ಸರ್ಕಾರ ಹೇಳಿತ್ತು. ಆದರೆ, ಸರ್ಕಾರದ ಪ್ರಯತ್ನಗಳು ಅನುಮಾನಕ್ಕೆ ಎಡೆಯಿಲ್ಲದ ಜನರ ಖಾಸಗಿತನಕ್ಕೆ ಧಕ್ಕೆ ಉಂಟಾಗುವ ಅನುಮಾನ ಇದ್ದೇ ಇತ್ತು. ಬಹು ಮುಖ್ಯವಾಗಿ, ಗೋಪ್ಯತೆಯ ಹಕ್ಕುಗಳ ಉಲ್ಲಂಘನೆಯಾಗಿ, ನಾಗರಿಕರ ಮೇಲೆ ಸರ್ಕಾರದ ಕಣ್ಗಾವಲಿಗೆ ಅವಕಾಶ ದೊರೆಯುತ್ತದೆ ಎಂದು ಶಂಕಿಸಲಾಗಿತ್ತು. ನಾಗರಿಕರ ಹಕ್ಕುಗಳೊಂದಿಗೆ ಸರ್ಕಾರ ಈ ಹಿಂದೆ ವ್ಯವಹರಿಸಿರುವ ನಿದರ್ಶನಗಳ ಹಿನ್ನೆಲೆಯಲ್ಲಿ ಈ ಶಂಕೆ ನಿರಾಧಾರ ಆದುದೇನೂ ಅಲ್ಲ. ಡಿಜಿಟಲ್ ವಿಶ್ವಾಸಾರ್ಹತೆ ಬಲಗೊಳ್ಳುತ್ತದೆ ಎಂದು ಸರ್ಕಾರ ಹೇಳುವುದನ್ನು ನಂಬಲು ಬಲವಾದ ಸಾಕ್ಷ್ಯಗಳು ಇಲ್ಲ. ವಾಟ್ಸ್‌ಆ್ಯಪ್ ಮತ್ತು ಟೆಲಿಗ್ರಾಮ್ ಆ್ಯಪ್‌ಗಳಿಗೆ ಸಿಮ್ ಕಾರ್ಡ್‌ಗಳ ನಿರಂತರ ಸಂಪರ್ಕ ಹೊಂದಿರಬೇಕು ಎನ್ನುವ ಪ್ರಸ್ತಾಪ, ಆ ಸೇವೆಗಳ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪದ ಪ್ರಯತ್ನವಾಗಿದೆ.

‘ಸಂಚಾರ ಸಾಥಿ’ ಆ್ಯಪ್ ಅಳವಡಿಕೆ ಕಡ್ಡಾಯಗೊಳಿಸುವ ನಿರ್ಧಾರವನ್ನು ಸರ್ಕಾರ ಕೈಬಿಟ್ಟಿರುವುದು, ಖಾಸಗಿತನದ ಹಕ್ಕನ್ನು ಗೌರವಿಸುವ ದೃಷ್ಟಿಯಿಂದ ಅಗತ್ಯವಾಗಿತ್ತು.

‘ಸಂಚಾರ ಸಾಥಿ’ ಆ್ಯಪ್‌ಗೆ ಸಂಬಂಧಿಸಿದ ಸರ್ಕಾರದ ನಡೆ ಸಂದೇಹಗಳಿಗೆ ಆಸ್ಪದ ಕಲ್ಪಿಸುವಂತಿದೆ ಹಾಗೂ ಗೊಂದಲಗಳಿಂದ ಕೂಡಿದೆ. ಫೋನ್‌ಗಳಲ್ಲಿ ತಯಾರಿಕೆ ಹಂತದಲ್ಲಿಯೇ ಆ್ಯಪ್ ಅಳವಡಿಸಬೇಕು ಎನ್ನುವ ನಿರ್ದೇಶನ ಈಗಾಗಲೇ ಬಳಕೆಯಲ್ಲಿರುವ ಫೋನ್‌ಗಳಲ್ಲೂ ಆ್ಯಪ್ ಅಳವಡಿಸಲು ಒತ್ತಡ ಹೇರುವಂತಿತ್ತು. ತಯಾರಿಕೆ ಸಂದರ್ಭದಲ್ಲಿ ಅಳವಡಿಸಲಾದ ಆ್ಯಪ್ ಅನ್ನು ಬಳಕೆದಾರರು ಅಳಿಸಲು ಸಾಧ್ಯವಾಗದಂತೆ ಇರಬೇಕು ಎಂದು ಅಧಿಸೂಚನೆಯಲ್ಲಿ ಹೇಳಲಾಗಿತ್ತು. ವಿರೋಧ ಎದುರಾದ ನಂತರ, ‘ಸಂಚಾರ ಸಾಥಿ ಅಪ್ಲಿಕೇಷನ್ ಅನ್‌ಇನ್‌ಸ್ಟಾಲ್ ಅಥವಾ ಅಳಿಸಲು ಬಳಕೆದಾರರು ಸ್ವತಂತ್ರರು’ ಎಂದು ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸ್ಪಷ್ಟನೆ ನೀಡಿದ್ದರು. ಆದರೆ, ಸಚಿವರ ಸ್ಪಷ್ಟನೆ ಎಲ್ಲ ಗೊಂದಲಗಳಿಗೆ ಉತ್ತರ ಒದಗಿಸಿರಲಿಲ್ಲ ಹಾಗೂ ಅವರು ನೀಡಿದ ಭರವಸೆಗಳು ಎಲ್ಲ ಆತಂಕಗಳನ್ನು ದೂರ ಮಾಡುವಂತಿರಲಿಲ್ಲ. ಬಹುತೇಕ ಬಳಕೆದಾರರು ತಮ್ಮ ಫೋನ್‌ಗಳಲ್ಲಿನ ತಂತ್ರಜ್ಞಾನದ ಕುರಿತು ಅರಿವು ಹೊಂದಿಲ್ಲದಿರುವ ಕಾರಣ ಆ್ಯಪ್ ಅಳಿಸುವುದು ಕಷ್ಟಸಾಧ್ಯ. ಕಳವಾದ ಅಥವಾ ಕಾಣೆಯಾದ ಫೋನ್‌ಗಳ ಪತ್ತೆಗೆ ನೆರವಾಗುವುದರ ಜೊತೆಗೆ ಸೈಬರ್ ವಂಚನೆಗಳನ್ನು ಪತ್ತೆಹಚ್ಚಲು ‘ಸಂಚಾರ ಸಾಥಿ’ ಸಹಕಾರಿ ಎನ್ನುವುದು ಸರ್ಕಾರದ ಸಮರ್ಥನೆ. ಹಾಗಿದ್ದ ಪಕ್ಷದಲ್ಲಿ, ಆ್ಯಪ್ ಅನ್ನು ಬಳಕೆದಾರರ ಆಯ್ಕೆಗೆ ಬಿಡುವುದು ಸರಿಯಾದ ಕ್ರಮವಾಗಿರುತ್ತಿತ್ತು.

ಬಳಕೆದಾರರ ಸಮ್ಮತಿ ಇಲ್ಲದೆಯೇ ಆ್ಯಪ್ ಅಳವಡಿಸುವುದು ಖಾಸಗಿತನದ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ. ಕ್ಯಾಮೆರಾ, ಎಸ್‌ಎಂಎಸ್, ಮುಂತಾದವುಗಳ ಪ್ರವೇಶ ಆ್ಯಪ್‌ಗೆ ಲಭ್ಯವಾಗುವುದರಿಂದ ದೊಡ್ಡ ಪ್ರಮಾಣದ ಕಣ್ಗಾವಲಿಗೆ ಹಾಗೂ ಮಾಹಿತಿಯ ದುರುಪಯೋಗಕ್ಕೆ ಕಾರಣವಾಗಬಹುದು. ರಾಜಕಾರಣಿಗಳು ಹಾಗೂ ಪ್ರಭಾವಿ ವ್ಯಕ್ತಿಗಳ ಕಣ್ಗಾವಲಿಗೆ ಸರ್ಕಾರ ಪೆಗಾಸಸ್ ಕುತಂತ್ರಾಂಶ ಬಳಸಿದ ಆರೋಪವನ್ನು ಎದುರಿಸುತ್ತಿದ್ದು, ಈಗ, ಜನಸಾಮಾನ್ಯರ ಮೇಲೆ ನಿಗಾ ವಹಿಸಲು ಸಂಚಾರ ಸಾಥಿ ಆ್ಯಪ್ ಬಳಸಿಕೊಳ್ಳುತ್ತಿದೆ ಎನ್ನುವ ಆರೋಪಕ್ಕೆ ಗುರಿಯಾಗಿದೆ. ಆ್ಯಪ್ ಅಳಿಸುವ ಸ್ವಾತಂತ್ರ್ಯವಿದೆ ಎನ್ನುವುದು, ಸಮ್ಮತಿಯಿಲ್ಲದೆ ಫೋನ್‌ನಲ್ಲಿ ಆ್ಯಪ್ ಅಳವಡಿಸುವುದಕ್ಕೆ ನೀಡಿದ ಸಮರ್ಥನೆ ಎನ್ನಿಸುವಂತಿದೆ. ನಾಗರಿಕರ ಖಾಸಗಿ ಜೀವನದೊಳಗೆ ಇಣುಕಲು ಹಿಂಬಾಗಿಲಿನ ಪ್ರವೇಶವನ್ನು ಆ್ಯಪ್ ಒದಗಿಸಬಹುದು. ಕಳ್ಳತನ ಮತ್ತು ದರೋಡೆ ತಡೆಗಟ್ಟುವ ಉದ್ದೇಶದಿಂದ ಪ್ರತಿ ಮನೆಯಲ್ಲಿ ಪೊಲೀಸರ ನಿಯಂತ್ರಣದ ಅಥವಾ ಕ್ಯಾಮೆರಾ ಅಳವಡಿಸಿದಷ್ಟೇ ಅಸಂಗತವಾದ ಪ್ರಯತ್ನ ಇದಾಗಿದೆ. ಈ ಪ್ರಯತ್ನಕ್ಕೆ ಎದುರಾದ ವಿರೋಧದ ಹಿನ್ನೆಲೆಯಲ್ಲಿ, ತಯಾರಿಕಾ ಹಂತದಲ್ಲಿಯೇ ಫೋನ್‌ಗಳಲ್ಲಿ ಸಂಚಾರ ಸಾಥಿ ಆ್ಯಪ್ ಅಳವಡಿಕೆ ಕಡ್ಡಾಯಗೊಳಿಸುವ ನಿರ್ಧಾರವನ್ನು ಸರ್ಕಾರ ಕೈಬಿಟ್ಟಿರುವುದು ಹಾಗೂ ಆ್ಯಪ್ ಬಳಕೆಯನ್ನು ಸಾರ್ವಜನಿಕರ ವಿವೇಚನೆಗೆ ಬಿಟ್ಟಿರುವುದು ಪ್ರಜಾಪ್ರಭುತ್ವಕ್ಕೆ ಸಂದಿರುವ ಮನ್ನಣೆಯಾಗಿದೆ. ನಾಗರಿಕರ ಖಾಸಗಿ ಜೀವನದಲ್ಲಿ ಇಣುಕುವ ಪ್ರಯತ್ನವನ್ನು ಸರ್ಕಾರ ಮಾಡದೇ ಇರಲು ಪ್ರಸಕ್ತ ಪ್ರಕರಣ ಪಾಠ ಆಗಲಿ.

ಚಾಟಿ

ಅಡುಗೆಮನೆಯಲ್ಲೇನು ಕೆಲಸ?

ಹಸಿವಿನ ಸೂಚ್ಯಂಕದಲ್ಲಿ 102ನೇ ಸ್ಥಾನದಲ್ಲಿರುವ ದೇಶದ ಸರ್ಕಾರವು, ಜಯಂತಿ ಅಥವಾ ಹಬ್ಬಗಳ ನೆಪದಲ್ಲಿ ‘ಮಾಂಸಾಹಾರ’ ನಿಷೇಧಿಸುವುದು ಅರ್ಥಹೀನ. ಸರ್ಕಾರಗಳಿಗೆ ನಮ್ಮ ಅಡುಗೆಮನೆಯಲ್ಲೇನು ಕೆಲಸ?

ಶಿವಕುಮಾರ ಮಾವಲಿ, ಕಥೆಗಾರ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಕಾಂಗ್ರೆಸ್ ಪಕ್ಷ ಬಿಗ್ ಬಾಸ್ ಮನೆಯಂತೆ ಕಚ್ಚಾಡುತ್ತಿದೆ. ರಾಜ್ಯದ ಸಿ.ಎಂ ಯಾರು ಅಂತಲೇ ಜನರಿಗೆ ಗೊತ್ತಾಗುತ್ತಿಲ್ಲ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 4-12-2000

• ಗುಂಡಿನ ಕಾಳಗ ನಿಂತರೆ ಪಾಕ್ ಜತೆ ಮಾತುಕತೆ

ಬೆಂಗಳೂರು, ಡಿ. 3– ಪಾಕಿಸ್ತಾನ ಉಗ್ರಗಾಮಿಗಳನ್ನು ಭಾರತದೊಳಕ್ಕೆ ನುಗ್ಗಿಸುವುದನ್ನು ಹಾಗೂ ನಿಜವಾದ ಅರ್ಥದಲ್ಲಿ ಗಡಿಭಾಗದಲ್ಲಿ ಗುಂಡಿನ ದಾಳಿ ನಡೆಸುವುದನ್ನು ನಿಲ್ಲಿಸಿದರೆ ಮಾತ್ರ ಭಾರತ ಆ ದೇಶದೊಂದಿಗೆ ಮಾತುಕತೆಯನ್ನು ಪುನರಾರಂಭಿಸುತ್ತದೆ ಎಂಬ ಇಂಗಿತವನ್ನು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ವ್ಯಕ್ತಪಡಿಸಿದರು.

ಪಾಕಿಸ್ತಾನದ ವಾಸ್ತವಿಕ ಗಡಿ ನಿಯಂತ್ರಣ ರೇಖೆಯಲ್ಲಿ ಅತ್ಯಂತ ಸಂಯಮದಿಂದ ಇರುವಂತೆ ಸೇನೆಗೆ ಆದೇಶ ನೀಡಿದೆ ಎಂದು ವರದಿಯಾಗಿರುವುದರ ಬಗ್ಗೆ ರಕ್ಷಣಾ ಸಚಿವರು ಪ್ರತಿಕ್ರಿಯೆ ವ್ಯಕ್ತಪಡಿಸಿ, ಸೂಕ್ತವಾದ ಕಾಲದಲ್ಲಿ ಪಾಕಿಸ್ತಾನ ಈ ಕ್ರಮ ತೆಗೆದುಕೊಂಡಿದೆ ಎಂದರು.

• ಅಂಗವಿಕಲರಿಗೆ ಬಸ್‌ಗಳಲ್ಲಿ ರಿಯಾಯಿತಿ ಶೀಘ್ರ

ಬೆಂಗಳೂರು, ಡಿ. 3– ಅಂಗವಿಕಲರಿಗೆ ರಾಜ್ಯ ಸಾರಿಗೆ ಬಸ್‌ಗಳಲ್ಲಿ ರಿಯಾಯಿತಿ ನೀಡುವ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮೋಟಮ್ಮ ಇಂದು ಇಲ್ಲಿ ಹೇಳಿದರು.

ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ಅಂಗವಿಕಲರ ಕಲ್ಯಾಣ ಇಲಾಖೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಏರ್ಪಡಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

75 ವರ್ಷಗಳ ಹಿಂದೆ

ಸೋಮವಾರ, 4-12-1950

• ‘ವಾಷಿಂಗ್ಟನ್ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ’

ದೆಹಲಿ, ಡಿ. 3– ವಾಷಿಂಗ್ಟನ್ ಮಾತುಕತೆಗಳಲ್ಲಿ ಭಾಗವಹಿಸಲು ಭಾರತದ ಪ್ರಧಾನಿ ಪಂಡಿತ್ ನೆಹರೂ ಅವರು ಹೋಗಬಹುದೆಂದು, ಅಥವಾ ಈ ಬಗ್ಗೆ ಅವರನ್ನು ಆಹ್ವಾನಿಸಲಾಗಿದೆಯೆಂದೂ ಪತ್ರಿಕೆಗಳಲ್ಲಿ ಬಂದಿರುವ ವರದಿಗಳು ತೀರಾ ನಿರಾಧಾರ ಆದವುಗಳೆಂಬುದಾಗಿ ಇಂದು ಭಾರತದ ಪ್ರಧಾನಿ ತಿಳಿಸಿದರು.

ಇಂದು ವಿಶ್ವವನ್ನಾವರಿಸಿರುವ ಕಠಿಣ ಪರಿಸ್ಥಿತಿಯ ವಿಚಾರವನ್ನು ಪ್ರಸ್ತಾಪಿಸಿ ಇನ್ನೊಂದು ವಿಶ್ವ ಸಂಗ್ರಾಮಕ್ಕೆ ಎಡೆಮಾಡುವಂತಹ ವಿನಾಶಕರ ಸನ್ನಿವೇಶವನ್ನು ತಡೆಯಲು ರಾಷ್ಟ್ರವೊಂದು ನೀಡಬಹುದಾದ ಸಲಹೆಗಳಿಗಿಂತಲೂ ಪರಿಹಾರ ಸಾಧನೆಯ ಬಗ್ಗೆ ತಳೆಯುವ ಧೋರಣೆಯು ಅತಿಮುಖ್ಯವೆಂದು ನೆಹರೂ ನುಡಿದರು.

ದ್ವೇಷವಾದಿಗಳ ಬ್ರಹ್ಮಚರ್ಯಾಸ್ತ್ರ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

> ಗಾಂಧೀಜಿ ಅವರ ಬ್ರಹ್ಮಚರ್ಯ ಪ್ರಯೋಗಗಳನ್ನು ವಿಕೃತಿಯ ರೂಪದಲ್ಲಿ ಬಿಂಬಿಸಲಾಗುತ್ತಿದೆ. ಬ್ರಹ್ಮಚರ್ಯದ ಪ್ರಯೋಗಗಳನ್ನು ವೈಚಾರಿಕವಾಗಿ ಹಾಗೂ ಮಹಾತ್ಮನ ಒಟ್ಟು ಬದುಕಿನ ತಾತ್ತ್ವಿಕತೆಯ ಹಿನ್ನೆಲೆಯಲ್ಲಿ ನೋಡದೆ, ರೋಚಕವಾಗಿ ನೋಡುವ ಪ್ರಯತ್ನ ಅನೈತಿಕವಾದುದು.

ಒಬ್ಬ ನಿಜವಾದ ನಾಯಕ ಸಂದರ್ಭಕ್ಕೆ ಅಗತ್ಯವಾದ ನಿರ್ಧಾರಗಳನ್ನೇ ತೆಗೆದುಕೊಳ್ಳುತ್ತಾನೆ. ಎಷ್ಟೋ ಕಾಲದ ನಂತರ ಆ ನಿರ್ಧಾರ ಸರಿಯಾಗಿಲ್ಲ ಎನಿಸಬಹುದು. ಆದರೆ, ಆ ಸಂದರ್ಭದಲ್ಲಿ ಸರಿಯೇ ಆಗಿರುತ್ತದೆ. ಮಹಾತ್ಮ ಗಾಂಧಿಯವರು ತೆಗೆದುಕೊಂಡ ಅನೇಕ ನಿರ್ಧಾರಗಳನ್ನು ಆ ಕಾಲಮಾನದ ಅಗತ್ಯವನ್ನು ಪರಿಗಣಿಸದೆ ‘ತಪ್ಪು ನಿರ್ಧಾರಗಳು’ ಎಂದು ಪ್ರಚಾರ ಮಾಡುವ ದುಷ್ಟಶಕ್ತಿಗಳು ಬಹು ಹಿಂದಿನಿಂದಲೂ ಇದ್ದವು. ಈ ಶಕ್ತಿಗಳು ತಮ್ಮದೇ ಗುಂಪಿನಲ್ಲಿ ಏನು ಬೇಕಾದರೂ ಹೇಳಬಹುದು. ಆದರೆ, ಸಾರ್ವಜನಿಕವಾಗಿ ಮುಕ್ತ ಚರ್ಚೆಯಲ್ಲಿ ಹಾಗೆ ಹೇಳಲು ಹೊರಟಾಗ, ಒಂದು ವಿಷಯಕ್ಕೆ ಇರುವ ಬಹು ಆಯಾಮಗಳು ಚರ್ಚೆಗೆ ಬರುತ್ತವೆ. ಗಾಂಧೀಜಿಯ ನಿರ್ಧಾರಗಳ ಚಾರಿತ್ರಿಕ ಔಚಿತ್ಯಗಳು ಅನಾವರಣಗೊಳ್ಳುತ್ತಾ ಹೋದಹಾಗೆ ದುಷ್ಟಶಕ್ತಿಗಳಿಗೆ ಗಾಂಧೀಜಿಯನ್ನು ಕೆಟ್ಟವರಾಗಿ ತೋರಿಸಲು ಯಾವ ಅಸ್ತ್ರವೂ ಉಳಿದಿಲ್ಲದ ಪರಿಸ್ಥಿತಿ ಬಂದಿದೆ. ಆಗ ಹೊರಬಂದಿರುವುದೇ ಬ್ರಹ್ಮಚರ್ಯಾಸ್ತ್ರ.

ಬ್ರಹ್ಮಚರ್ಯದ ಪ್ರಯೋಗವನ್ನು ಸಾಕಷ್ಟು ಸಂತರು ಮಾಡಿದ್ದರು. ಆದರೆ, ಅದನ್ನು ಹೇಳಿಕೊಂಡಿಲ್ಲ. ಗಾಂಧಿಯವರು ಯಾವುದನ್ನೂ ಮುಚ್ಚಿಟ್ಟವರಲ್ಲ. ತಮ್ಮ ಪ್ರಯೋಗದ ಬಗ್ಗೆ ತಾವೇ ಹೇಳಿದರು. ಲೌಕಿಕ ವ್ಯಾಪ್ತಿಯಲ್ಲಿ ಈ ಬ್ರಹ್ಮಚರ್ಯದ ಪ್ರಯೋಗದ ಕುರಿತಾಗಿ ಒಂದು ದೃಷ್ಟಿಕೋನವನ್ನು ತಾಳುವುದು ಕಷ್ಟ. ಏಕೆಂದರೆ, ಬ್ರಹ್ಮಚರ್ಯದ ಪ್ರಯೋಗವು ಅಧ್ಯಾತ್ಮ ಸಾಧನೆಯ ಭಾಗವಾಗಿ ಬರುತ್ತದೆ. ಅಧ್ಯಾತ್ಮವು ಸಾರ್ವತ್ರಿಕ ಅನುಭವವಲ್ಲ; ಒಬ್ಬ ವ್ಯಕ್ತಿಗೆ ಮಾತ್ರ ಆಗಬಹುದಾದ ಅನುಭವ. ಅದನ್ನು ಸಾರ್ವತ್ರೀಕರಣಗೊಳಿಸಿ ಅರ್ಥೈಸುವುದು ಕಷ್ಟವಾಗುತ್ತದೆ.

ಗಾಂಧೀಜಿಯವರು ಅಧ್ಯಾತ್ಮದ ಸಾಧಕರೂ ಆಗಿದ್ದರು. ತಮ್ಮ ಆತ್ಮಕಥೆಯಲ್ಲಿ ಅವರು, ‘ಸತ್ಯಾನ್ವೇಷಣೆಯೇ ನನ್ನ ಜೀವನದ ಗುರಿ’ ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಬರುವ ‘ಸತ್ಯ’ ಪರಿಕಲ್ಪನೆಯು ಲೌಕಿಕ ವ್ಯಾಪ್ತಿಯ, ‘ನಿಜ’ ಎನ್ನುವ ಅರ್ಥದ್ದಲ್ಲ. ‘ಸತ್’ ಎನ್ನುವುದೇ ‘ಸತ್ಯ’. ಆಕಾರಾತೀತ, ಗುಣಾತೀತ, ಲಿಂಗಾತೀತವಾದ ಶಕ್ತಿಯನ್ನು ಉಪನಿಷತ್ತುಗಳಲ್ಲಿ, ಸತ್, ಬ್ರಹ್ಮನ್, ಪುರುಷ, ಈಶ ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಈ ‘ಸತ್’ನ ಸಾಧನೆಯಲ್ಲಿ ಬ್ರಹ್ಮಚರ್ಯವೂ ಒಂದು ವಿಧಾನವಾಗಿದೆ.

ಬ್ರಹ್ಮಚರ್ಯದ ನಿಯಮಗಳ ಪ್ರಕಾರ ಲೈಂಗಿಕತೆಯನ್ನು ತ್ಯಜಿಸಬೇಕು. ಅಹಿಂಸೆ, ಸರಳ ಜೀವನ, ಶುದ್ಧ ಆಹಾರ, ಧ್ಯಾನವನ್ನು ಆಚರಿಸಬೇಕು. ಎಲ್ಲ ಬಗೆಯ ಶಕ್ತಿಯನ್ನು ಸಂರಕ್ಷಿಸುವ ಮೂಲಕ ಅಧ್ಯಾತ್ಮದ ಅಭಿವೃದ್ಧಿಯನ್ನು ಉತ್ತೇಜಿಸುವುದು ಬ್ರಹ್ಮಚರ್ಯದ ಉದ್ದೇಶವಾಗಿದೆ. ಬ್ರಹ್ಮಚರ್ಯದಲ್ಲಿ ದೇಹ, ಮನಸ್ಸು ಮತ್ತು ಮಾತನ್ನು ಒಗ್ಗೂಡಿಸಬೇಕು. ಅಂದರೆ, ಲೈಂಗಿಕ ಸಂಬಂಧದ ತ್ಯಾಗವೊಂದೇ ಬ್ರಹ್ಮಚರ್ಯದ ಲಕ್ಷಣವಲ್ಲ. ವೀಕ್ಷಣೆ, ಶ್ರವಣ, ಸ್ಪರ್ಶ ಮೂರರಿಂದ ದೊರೆಯುವ ಸುಖವನ್ನೂ ಮೀರಿ ನಿಲ್ಲಬೇಕು. ಲೈಂಗಿಕ ಕ್ರಿಯೆಗೆ ಸಂಬಂಧಿಸಿದಂತೆ ‘ಬ್ರಹ್ಮಚರ್ಯ’ಕ್ಕೆ ಭಿನ್ನ ದೃಷ್ಟಿಕೋನಗಳೂ ಇವೆ. ಶಾಂಡಿಲ್ಯ ಉಪನಿಷತ್ತಿನ ಒಂದನೇ ಅಧ್ಯಾಯವು ಲೈಂಗಿಕ ಸಂಬಂಧವನ್ನೇ ನಿರಾಕರಿಸುತ್ತದೆ. ಆದರೆ ‘ಲಿಂಗ ಪುರಾಣ’ದ ಅಧ್ಯಾಯ 1.8 ಪತ್ನಿಯ ಹೊರತು ಬೇರೆ ಯಾರೊಂದಿಗೂ ಲೈಂಗಿಕ ಸಂಬಂಧವನ್ನು ಹೊಂದದೇ ಇರುವುದು ಬ್ರಹ್ಮಚರ್ಯ ಎಂದು ಹೇಳುತ್ತದೆ.

ಬ್ರಹ್ಮಚರ್ಯದ ಪರಿಕಲ್ಪನೆಯನ್ನು ಲೌಕಿಕ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಳ್ಳಬೇಕಾದರೆ, ಕ್ರಿಯೆಯಲ್ಲಿದ್ದೂ ಕ್ರಿಯೆಯಿಂದ ಮಾನಸಿಕವಾಗಿ ದೂರ ಇರುವ ಸ್ಥಿತಿಯ ಬಗ್ಗೆ ಹಿಂದೂ ಧಾರ್ಮಿಕ ರಚನೆಗಳಲ್ಲಿ ಕಾಣಿಸುವ ಸಂಗತಿಗಳನ್ನು ತಿಳಿದುಕೊಳ್ಳಬೇಕು. ಭಗವದ್ಗೀತೆಯಲ್ಲಿ ಕೃಷ್ಣ ಅರ್ಜುನನಿಗೆ, ‘ಲಿಪ್ಯತೇನಸ ಪಾಪೇನ ಪದ್ಮಪತ್ರ ಮಿವಾಂಭಸಾ’– ಅಂದರೆ, ಪಾಪದಿಂದ ಮುಕ್ತನಾಗಲಿಕ್ಕಾಗಿ ತಾವರೆ ಎಲೆಯ ಮೇಲೆ ನೀರಿನ ಹನಿ ಇರುವಂತೆ ಇರು ಎನ್ನುತ್ತಾನೆ. ಶ್ರೀಮದ್ಭಾಗವತದಲ್ಲಿ ಬಬ್ರುವಾಹನನು ಕೊಂದ ಅರ್ಜುನನ ತಲೆ ಕಾಣೆಯಾದಾಗ ಕೃಷ್ಣ, ‘ಅನಾದಿ ಬ್ರಹ್ಮಚರ್ಯವನ್ನು ನಾನು ಪಾಲಿಸಿದ್ದೇ ಆಗಿದ್ದಲ್ಲಿ ಅರ್ಜುನನ ತಲೆ ಎಲ್ಲಿದ್ದರೂ ಬರಲಿ’ ಎನ್ನುವ ಮಾತು ಬರುತ್ತದೆ. ಮಹಾಸತಿ ಅನಸೂಯಾಳ ಕಥೆಯಲ್ಲಿ ತ್ರಿಮೂರ್ತಿಗಳು, ಅನಸೂಯಾ ನಗ್ನಳಾಗಿ ತಮಗೆ ಊಟ ಬಡಿಸಬೇಕೆಂದು ಕೇಳಿದಾಗ ತ್ರಿಮೂರ್ತಿಗಳೇ ಶಿಶುಗಳಾದರು ಎಂಬ ರೂಪಕ ಬರುತ್ತದೆ. ಅಂದರೆ ಶಿಶುವಿನ ಮನಃಸ್ಥಿತಿ ಇದ್ದಾಗ ನಗ್ನತೆಗೆ ಅಶ್ಲೀಲತೆಯ ಸೋಂಕು ತಗಲುವುದಿಲ್ಲ. ಮತ್ತು ಇದನ್ನು ಅನಸೂಯಾಳ ಪತಿ ಅತ್ರಿ ಮುನಿ ಆಕ್ಷೇಪಿಸಿಯೂ ಇಲ್ಲ. ಇವೆಲ್ಲ ಕಥೆಗಳೇ. ಆದರೆ, ಕಥೆಯ ಹಿಂದೆ ಕ್ರಿಯೆಯಲ್ಲಿದ್ದೂ ಕ್ರಿಯೆಯನ್ನು ಅನುಭವಿಸದೆ ನಿರ್ಲಿಪ್ತವಾಗಿರುವ ಮನಃಸ್ಥಿತಿಯ ಪರಿಕಲ್ಪನೆ ಇದೆ. ಗಾಂಧೀಜಿಯ ಬ್ರಹ್ಮಚರ್ಯ ಪ್ರಯೋಗದಲ್ಲಿ ಪಾಲ್ಗೊಂಡ ಮಹಿಳೆ ಕೂಡ ತಾನು ಗಾಂಧಿಯನ್ನು ತಾಯಿಯಂತೆ ಸ್ವೀಕರಿಸುತ್ತೇನೆ ಎಂದಿದ್ದರು. ಇದೊಂದು ಮಾನಸಿಕ ಸ್ಥಿತಿ. ಸಾರ್ವತ್ರೀಕರಣ ಸಾಧ್ಯವಾಗಲಾರದು.

ಇಲ್ಲಿ ಇರುವ ಪ್ರಶ್ನೆ ಗಾಂಧೀಜಿಯ ಬ್ರಹ್ಮಚರ್ಯದ ಪ್ರಯೋಗದ ಕುರಿತ ವೈಚಾರಿಕ ಚರ್ಚೆಗೆ ಸಂಬಂಧಿಸಿದ್ದಲ್ಲ. ವೈಚಾರಿಕ ಚರ್ಚೆಯೇ ಉದ್ದೇಶ ಆಗಿರುವವರು ಬ್ರಹ್ಮಚರ್ಯದ ವಿಷಯದಲ್ಲಿ ಲೈಂಗಿಕ ಸಂಯಮದ ಪ್ರಯೋಗವನ್ನು ಮಾತ್ರವೇ ಪ್ರಸ್ತಾಪಿಸಲು ಸಾಧ್ಯವಿಲ್ಲ. ಅಹಿಂಸೆಯ ಪಾಲನೆ, ಸರಳ ಜೀವನ, ಶುದ್ಧ ಆಹಾರ ಮುಂತಾಗಿ ಬ್ರಹ್ಮಚರ್ಯದ ಮಾನದಂಡಗಳಾದ ಎಲ್ಲ ವಿಷಯಗಳನ್ನೂ ಗಾಂಧೀಜಿ ಹೇಗೆ ನಿರ್ವಹಿಸಿದರು ಎಂಬುದನ್ನು ಪರಿಗಣಿಸಬೇಕಾಗುತ್ತದೆ. ಆ ಬಗ್ಗೆ ಒಂದೇ ಒಂದು ಮಾತೂ ಇಲ್ಲದೆ ಲೈಂಗಿಕತೆಗೆ ಸಂಬಂಧಿಸಿದ ಭಾಗವನ್ನು ಮಾತ್ರ ಪರಿಗಣಿಸಿದಾಗ, ಚರ್ಚೆಗಿರುವುದು ವೈಚಾರಿಕ ಉದ್ದೇಶ ಅಲ್ಲ ಎಂದು ಭಾವಿಸಬೇಕಾಗುತ್ತದೆ. ಗಾಂಧಿಯವರ ಮೇಲೆ ಬ್ರಹ್ಮಚರ್ಯಾಸ್ತ್ರವನ್ನು ಪ್ರಯೋಗಿಸುತ್ತಿರುವವರು ಎಲ್ಲ ವಿಷಯಗಳಲ್ಲೂ ಗಾಂಧಿಯವರನ್ನು ದ್ವೇಷಿಸುವವರು ಮತ್ತು ‘ಗಾಂಧಿ ಜಯಂತಿ’ಯನ್ನೂ ಗಾಂಧಿ ನಿಂದನೆಯ ಮೂಲಕವೇ ಆಚರಿಸುವವರು. ಅಂದಮೇಲೆ, ಅವರ ಚರ್ಚೆಯಲ್ಲಿ ವೈಚಾರಿಕ ಉದ್ದೇಶ ಕಾಣಲು ಸಾಧ್ಯವಿಲ್ಲ. ಲೈಂಗಿಕತೆಯ ವಿಷಯ ರೋಚಕವಾಗಿರುತ್ತದೆ, ಸುಲಭವಾಗಿ ಅನೈತಿಕತೆಯ ಅನುಮಾನವನ್ನು ಹುಟ್ಟು ಹಾಕಲು ಸಾಧ್ಯವಾಗುತ್ತದೆ ಎನ್ನುವ ಲೆಕ್ಕಾಚಾರಗಳೇ ಇಲ್ಲಿ ಕಾಣಿಸುತ್ತಿವೆ.

ಸತ್ಯ ನಿರಾಕರಿಸಲು ತರ್ಕವನ್ನು ಬಳಸುವುದು ಈ ತಂಡದ ಜಾಯಮಾನ. ಉದಾಹರಣೆಗೆ, ಎಡಪಂಥೀಯರು ಏನೇ ಮಾಡಿದರೂ ಟೂಲ್ ಕಿಟ್, ಹಿಂದೂ ಧರ್ಮಕ್ಕೆ ಅಪಾಯ ಎನ್ನುವುದು ಇವರ ಪ್ರತಿಪಾದನೆ. ಆದರೆ, ಎಡಪಂಥೀಯರೇ ಆದ ಭಗತ್ ಸಿಂಗ್ ಬಗ್ಗೆ ಬಹಳ ಪ್ರೀತಿ. ಭಗತ್ ಸಿಂಗ್ ಅವರು ಬದುಕಿದ್ದರೆ ಆಗ ಅವರನ್ನೂ ಇವರು ಹಿಂದೂ ವಿರೋಧಿ ಎಂದೇ ಕರೆಯುತ್ತಿದ್ದರು. ಗಾಂಧಿಯವರನ್ನು ಕೆಟ್ಟವರನ್ನಾಗಿ ಕಾಣಿಸಲು ಭಗತ್ ಸಿಂಗ್ ವಿಚಾರವನ್ನು ಪ್ರಸ್ತಾಪಿಸುತ್ತಾರೆ. ಆದರೆ, ಭಗತ್ ಸಿಂಗ್ ಮತ್ತವರ ಗೆಳೆಯರಿಗೆ ಮರಣದಂಡನೆ ನೀಡಬಾರದೆಂದು ಗಾಂಧಿ ಪತ್ರ ಬರೆದ ವಿಷಯವನ್ನು ಮಾತ್ರ ಅಡಗಿಸಿಡುತ್ತಾರೆ. ಗಾಂಧಿ ಹೇಳಿದ ಕೂಡಲೇ ಬ್ರಿಟಿಷರು ಭಗತ್ ಸಿಂಗ್ ಅವರನ್ನು ಬಿಟ್ಟು ಬಿಡುತ್ತಿದ್ದರು ಎಂದಾದರೆ, ‘ನೀವಿನ್ನು ಹೋಗಿ’ ಎಂದು ಗಾಂಧಿ ಹೇಳಿದ್ದರೆ ಸಾಕಾಗಿತ್ತಲ್ಲವೇ? ಸ್ವಾತಂತ್ರ್ಯ ಕೊಟ್ಟು ಹೋಗಬೇಕಿತ್ತಲ್ಲ? ಗಾಂಧಿ ಸ್ವಾತಂತ್ರ್ಯ ಹೋರಾಟ ಮಾಡಬೇಕಾದ ಅಗತ್ಯ ಏನಿತ್ತು? ತಾನು ಬ್ರಹ್ಮಚರ್ಯದ ಪ್ರಯೋಗ ಮಾಡಿದ್ದೆ ಎಂದು ಗಾಂಧಿ ಹೇಳಿದ ಮಾತನ್ನು ನಂಬುತ್ತಾರೆ. ಆದರೆ, ಸಂಯಮವನ್ನು ಕಾಪಾಡಿಕೊಂಡಿದ್ದೆ ಎನ್ನುವುದನ್ನು ಮಾತ್ರ ನಂಬುವುದಿಲ್ಲ!

ಹಿಂಸೆಯನ್ನು ಸಂಪೂರ್ಣ ತ್ಯಜಿಸುವುದು ಗಾಂಧಿ ತತ್ತ್ವ. ಕ್ಷಾತ್ರ ತೇಜಸ್ಸಿನಿಂದ ಹೋರಾಟ ಮಾಡಿ ಕಡೆಗೆ ಬಂದು ಸೇರುವುದು ಗಾಂಧಿ ತತ್ತ್ವಕ್ಕೇ ಎಂದಾದರೆ ಆ ಕ್ಷಾತ್ರ ತೇಜಸ್ಸೇ ಪ್ರಶ್ನಾರ್ಹ ಅಲ್ಲವೆ. ಸಾವರ್ಕರ್ ಅವರು ಹೊರಬಂದು ದೇಶಸೇವೆ ಮಾಡಲು ಹೂಡಿದ ತಂತ್ರಗಾರಿಕೆ ಇದು ಎಂದು ಸಮರ್ಥಿಸಿಕೊಳ್ಳುತ್ತಾರೆ. ಆದರೆ, ಹೊರಗೆ ಬಂದ ಮೇಲೆ ಅವರೆಲ್ಲಿ ಸ್ವಾತಂತ್ರ್ಯ ಹೋರಾಟ ಮಾಡಿದ್ದರು ಎಂದು ಹೇಳುವುದಿಲ್ಲ. ಈ ದೇಶದಲ್ಲಿ ತಮ್ಮ ಕಡೆಯವರು ಮಾಡಿದ್ದು ಮಾತ್ರ ತಂತ್ರಗಾರಿಕೆ, ಉಳಿದವರೆಲ್ಲ ದುರುದ್ದೇಶಪೂರಿತರು ಎನ್ನುವುದು ಅವರ ನಿಲುವು.

ವಾಸ್ತವದಲ್ಲಿ ಇದೆಲ್ಲ ಅರ್ಥ ಆಗಿಲ್ಲ ಎಂದೇನೂ ಅಲ್ಲ. ಹೇಗಾದರೂ ಮಾಡಿ ಗಾಂಧಿಯವರನ್ನು ಕೆಟ್ಟವರೆಂದು ಜನಮಾನಸದಲ್ಲಿ ಬಿತ್ತಬೇಕು ಮತ್ತು ಅದರ ಬೆಳೆಯನ್ನು ತಾವು ಕುಯ್ಯಬೇಕು ಎನ್ನುವುದಷ್ಟೇ ಉದ್ದೇಶ ಎಂದು ಮೇಲ್ನೋಟಕ್ಕೇನೆ ಅರ್ಥ ಆಗುತ್ತದೆ. ಆದರೆ, ನೆಹರೂ ಅವರನ್ನು ಹಿಂದೂ ವಿರೋಧಿ ಎಂದು ಬಿಂಬಿಸಿದಷ್ಟು ಸುಲಭದಲ್ಲಿ ಗಾಂಧಿಯವರನ್ನು ಬಿಂಬಿಸಲು ಆಗುವುದಿಲ್ಲ. ಗಾಂಧಿ ಹಿಂದೂಧರ್ಮಕ್ಕೆ ನಿಷ್ಠರಾಗಿದ್ದವರು. ಗಾಂಧಿ–ನಾರಾಯಣ ಗುರು ಸಂವಾದವು ಹಿಂದೂಧರ್ಮದ ಬಗ್ಗೆ ಗಾಂಧೀಜಿ ಅವರಿಗಿದ್ದ ಆಳವಾದ ನಂಬಿಕೆಗಳನ್ನು ತೆರೆದಿಡುತ್ತದೆ. ಆದರೆ, ಎಲ್ಲರನ್ನೂ ಒಳಗೊಳ್ಳುವ ಗಾಂಧಿಯವರ ರಾಷ್ಟ್ರೀಯತೆಯ ಪರಿಕಲ್ಪನೆ ಇವರಿಗೆ ಆಗಿಬರುವುದಿಲ್ಲ. ಆದ್ದರಿಂದ, ಗಾಂಧಿಯವರನ್ನು ಹೇಗಾದರೂ ಮಾಡಿ ಹಣಿಯಲೇಬೇಕೆಂಬ ನಿರ್ಧಾರದಿಂದ ಯಾರಾದರೊಬ್ಬ ಗಾಂಧಿಯವರನ್ನು ಅವರ ಪಾಡಿಗೆ, ‘ಮಹಾತ್ಮ’ ಎಂದು ಕರೆದರೆ ಅದಕ್ಕೂ ಭಾಷಾ ಗೂಂಡಾಗಿರಿಯ ಈ ಒಂದು ತಂಡದ ಗದರಿಸುವಿಕೆ ಇದ್ದೇ ಇರುತ್ತದೆ.

ತನ್ನ ಎಲ್ಲ ಮಿತಿಗಳನ್ನು ವಿಶ್ವದ ಮುಂದೆ ತೆರೆದಿಟ್ಟ ಗಾಂಧಿಯ ಹಾಗೆ ತನ್ನ ದುರ್ನಡತೆಗಳನ್ನು– ಸಣ್ಣ ತಪ್ಪನ್ನಾದರೂ– ಒಪ್ಪಿಕೊಳ್ಳಬಲ್ಲ ಒಬ್ಬ ನಾಯಕನೂ ಇವರ ಬಳಿ ಇಲ್ಲ. ಎಲ್ಲವನ್ನೂ ಮುಕ್ತವಾಗಿಯೇ ಇರಿಸಿದ ಗಾಂಧಿಯವರದ್ದು ಅಲ್ಲಮರ ಜಾಡಿನಲ್ಲಿ ಸಾಗುವ ವ್ಯಕ್ತಿತ್ವ. ಅಲ್ಲಮರಿಗೆ ಸೊನ್ನಲಿಗೆ ಸಿದ್ಧರಾಮ ಎಷ್ಟು ಕಲ್ಲು ಎಸೆದರೂ ಗಾಳಿಗೆ ಎಸೆದಂತಾಗುತ್ತದೆಯೇ ಹೊರತು ತಾಗುವುದಿಲ್ಲ. ಗಾಂಧಿಯೂ ಹಾಗೆಯೇ.

ವಾಚಕರ ವಾಣಿ

ಬಾಲ ಅಮ್ಮಂದಿರ ಅಳು–ಅಳಲಿನ ಕಥನ

ರಾಜ್ಯದಲ್ಲಿ ಬಾಲಗರ್ಭಿಣಿಯರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದಕ್ಕೆ ಶಿಕ್ಷಣ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ಆಡಳಿತಗಳ ದಿವ್ಯ ನಿರ್ಲಕ್ಷ್ಯವೇ ಕಾರಣವೆಂದು ಬಿಡಿಸಿಹೇಳಬೇಕಿಲ್ಲ. ಕೌಟುಂಬಿಕ ವ್ಯವಸ್ಥೆಯ ಬೇರುಗಳು ಸಡಿಲಗೊಂಡಿರುವುದೂ ಇದಕ್ಕೆ ಮತ್ತೊಂದು ಕಾರಣ. ಶಾಲೆ ಬಿಟ್ಟ ಬಾಲಕಿಯರನ್ನು ಗುರುತಿಸಿ, ಮರಳಿ ಶಾಲೆಗೆ ಕರೆತರುವುದು ಶಿಕ್ಷಣ ಇಲಾಖೆ ಮತ್ತು ಗ್ರಾ.ಪಂ. ಆಡಳಿತಗಳ ಜವಾಬ್ದಾರಿ. ಇದರ ನಿರ್ವಹಣೆಯಲ್ಲಿ ಎಡವಿರುವುದು ಸ್ಪಷ್ಟ. ಗ್ರಾಮ ಪಂಚಾಯಿತಿ ಮಟ್ಟದ ಮಕ್ಕಳ ಹಕ್ಕುಗಳ ಸಮಿತಿ ನೆಪಕ್ಕಷ್ಟೇ ಇದೆ. ಈಗಾಗಲೇ, ಬಾಲತಾಯಂದಿರ ಸಮಸ್ಯೆ ಸರ್ಕಾರಕ್ಕೆ ಸವಾಲಾಗಿದೆ. ಈ ಸಮಸ್ಯೆ ಮತ್ತಷ್ಟು ವ್ರಣವಾಗುವ ಮೊದಲು ಎಚ್ಚೆತ್ತುಕೊಳ್ಳಬೇಕಿದೆ.

ಎಚ್. ನಾಗಮ್ಮ ಭಂಡಾರ್, ಬೆಂಗಳೂರು

ಡಿಜಿಟಲ್ ಪ್ರವಾಹದಲ್ಲಿ ರೇಡಿಯೊ ನಿಶ್ಚಲ

ಇಂದಿನ ತಂತ್ರಜ್ಞಾನಯುಗದಲ್ಲಿ ರೇಡಿಯೊ ಮಾಧ್ಯಮದ ಪ್ರಭಾವ ಕಡಿಮೆ ಆಗುತ್ತಿದೆ. ಸ್ಮಾರ್ಟ್‌ಫೋನ್, ಇಂಟರ್ನೆಟ್, ಒಟಿಟಿ, ಯೂಟ್ಯೂಬ್, ಪಾಡ್‌ಕಾಸ್ಟ್‌ಗಳಂತಹ ಡಿಜಿಟಲ್ ಮಾಧ್ಯಮಗಳ ಬೆಳವಣಿಗೆಯೇ ಇದಕ್ಕೆ ಕಾರಣ. ಯುವಜನರು ದೃಶ್ಯ ಮನರಂಜನೆಯತ್ತ ಹೆಚ್ಚು ಆಕರ್ಷಿತರಾಗಿದ್ದಾರೆ. ಈ ಕಾರಣಕ್ಕೆ ರೇಡಿಯೊ ಕೇಳುಗರು ಹಾಗೂ ಜಾಹೀರಾತು ಆದಾಯ ಎರಡೂ ಕುಸಿಯುತ್ತಿದೆ.

ಪ್ರತಿಕೂಲ ಸನ್ನಿವೇಶದ ನಡುವೆಯೂ ರೇಡಿಯೊ ಮಾಧ್ಯಮ ಸಂಪೂರ್ಣವಾಗಿ ನಶಿಸಿಲ್ಲ. ತುರ್ತು ಪರಿಸ್ಥಿತಿಗಳು, ಗ್ರಾಮೀಣ ಪ್ರದೇಶಗಳು ಮತ್ತು ಕಡಿಮೆ ವೆಚ್ಚದ ಮಾಹಿತಿ ತಲಪಿಸುವ ಸಾಮರ್ಥ್ಯದಿಂದ ಇನ್ನೂ ತನ್ನದೇ ಸ್ಥಾನ ಹೊಂದಿದೆ. ಭವಿಷ್ಯದಲ್ಲಿ ಇಂಟರ್ನೆಟ್ ರೇಡಿಯೊ, ಆನ್‌ಲೈನ್ ಸ್ಟ್ರೀಮಿಂಗ್‌ನಂತಹ ಡಿಜಿಟಲ್ ರೂಪಾಂತರಗೊಂಡರೆ ಹೊಸಹುಟ್ಟು ಪಡೆಯಬಹುದು.

ತೇಜಸ್, ತುಮಕೂರು

ವಿಐಎಸ್‌ಎಲ್ ಗತವೈಭವ ಮರಳಲಿ

ಭದ್ರಾವತಿಯ ವಿಶ್ವೇಶ್ವರಾಯ ಉಕ್ಕಿನ ಕಾರ್ಖಾನೆಗೆ ಮರುಜೀವ ನೀಡಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿರುವುದು ಒಳ್ಳೆಯ ನಿರ್ಧಾರ. 1923ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಫಲವಾಗಿ ಸ್ಥಾಪನೆಯಾದ ಕಾರ್ಖಾನೆ ಇದಾಗಿದೆ. ಒಂದು ಕಾಲದಲ್ಲಿ ದೇಶದಲ್ಲೇ ಅತಿದೊಡ್ಡ ಉಕ್ಕು ತಯಾರಿಕಾ ಘಟಕವಾಗಿತ್ತು. ಕಾರ್ಖಾನೆಗೆ ನಿರೀಕ್ಷಿತ ಪ್ರಮಾಣದಲ್ಲಿ ಅದಿರು ಪೂರೈಕೆಯಾದರೆ ವರ್ಷಕ್ಕೆ 2.5 ಮಿಲಿಯನ್ ಟನ್ ಕಬ್ಬಿಣ ಉತ್ಪಾದಿಸಬಹುದು. ಜೊತೆಗೆ, ಸಾವಿರಾರು ಉದ್ಯೋಗಗಳು ಸೃಷ್ಟಿಯಾಗಲಿದ್ದು, ಯುವಜನರಿಗೆ ಅನುಕೂಲವಾಗಲಿದೆ.

ನಿರಂಜನ್ ಎಚ್.ಬಿ., ಶಿವಮೊಗ್ಗ

ನಕಲಿ ದಾಖಲೆ: ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ

ಸರ್ಕಾರಿ ಕಚೇರಿಗಳಲ್ಲಿ ಕೆಲವು ಅಧಿಕಾರಿಗಳು ಲಂಚದ ಆಸೆಗಾಗಿ ನಕಲಿ ದಾಖಲೆ ಸೃಷ್ಟಿಸುವ ದಂಧೆಯಲ್ಲಿ ತೊಡಗಿದ್ದಾರೆ. ಅದರಲ್ಲೂ ಗ್ರಾಮ ಪಂಚಾಯಿತಿಗಳಲ್ಲಿ ಈ ದಂಧೆ ಅವ್ಯಾಹತವಾಗಿದೆ. ಸ್ಥಳೀಯ ಪ್ರಭಾವಿ ವ್ಯಕ್ತಿಗಳು, ಜನಪ್ರತಿನಿಧಿಗಳು ಈ ಕೃತ್ಯಕ್ಕೆ ಕುಮ್ಮಕ್ಕು ನೀಡುತ್ತಾರೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ಇಂತಹ ದುಷ್ಕೃತ್ಯಗಳಿಗೆ ಕಡಿವಾಣ ಹಾಕಬೇಕಿದೆ.

ಷಣ್ಮುಖ ಎಸ್.ಎಚ್., ಹಳೇಬಾತಿ

ತುರ್ತು ದುರಸ್ತಿಗೆ ನಿಧಿ ಎಲ್ಲಿಂದ ಬರುತ್ತದೆ?

ರಾಜ್ಯದಲ್ಲಿನ ಹೆದ್ದಾರಿಗಳಿಂದ ಹಿಡಿದು ಬಹುತೇಕ ಎಲ್ಲಾ ರಸ್ತೆಗಳು ಸುಗಮ ಸಂಚಾರಕ್ಕೆ ಸಾಧ್ಯವಾಗದ ಸ್ಥಿತಿಯಲ್ಲಿ ಹದಗೆಟ್ಟಿವೆ. ಹಾಳಾಗಿರುವ ರಸ್ತೆಗಳನ್ನು ಸರಿಪಡಿಸಿಕೊಡಿ ಎಂದು ಜಿಲ್ಲಾಡಳಿತ, ಜನಪ್ರತಿನಿಧಿಗಳಿಗೆ ಜನರು ಹಲವು ಸಾರಿ ಮನವಿ ಮಾಡಿದರೂ ಪರಿಹಾರ ಸಿಗುತ್ತಿಲ್ಲ. ಅನುದಾನ ಇಲ್ಲ ಎಂಬ ಸಿದ್ಧ ಉತ್ತರ ನೀಡುತ್ತಾರೆ. ಆದರೆ, ರಾಜ್ಯಕ್ಕೆ ಪ್ರಧಾನಿ, ಕೇಂದ್ರ ಗೃಹ ಸಚಿವರು ವಿವಿಧ ಕಾರ್ಯಕ್ರಮಕ್ಕೆ ಆಗಮಿಸುವಾಗ ಆಯಾ ಜಿಲ್ಲೆ, ತಾಲ್ಲೂಕಿನ ರಸ್ತೆಗಳು ಶರವೇಗದಲ್ಲಿ ದುರಸ್ತಿ ಕಾಣುತ್ತವೆ. ಹಾಗಾದರೆ ಇದಕ್ಕೆ ನಿಧಿ ಎಲ್ಲಿಂದ ಬರುತ್ತದೆ? ಇಷ್ಟು ಸಾಮರ್ಥ್ಯ ಇರುವ ಜಿಲ್ಲಾಡಳಿತ, ಹೆದ್ದಾರಿ ಪ್ರಾಧಿಕಾರಕ್ಕೆ ಬೇರೆ ಸಮಯಗಳಲ್ಲಿ ಇಂತಹ ಕಾರ್ಯಸಾಮರ್ಥ್ಯ ಯಾಕಿರುವುದಿಲ್ಲ?

ಸುರೇಂದ್ರ ಪೈ, ಭಟ್ಕಳ

ನಿವೃತ್ತರನ್ನು ಅಲೆಸುತ್ತಿರುವ ‘ಎಜಿ ಕಚೇರಿ’

ಮಹಾಲೇಖಪಾಲರ (ಎಜಿ) ಕಚೇರಿಯು ಸಿಬ್ಬಂದಿ ಕೊರತೆಯಿಂದ ಬಳಲುತ್ತಿದೆ. ಇದರಿಂದ ಸಕಾಲದಲ್ಲಿ ಕೆಲಸಗಳು ಆಗುತ್ತಿಲ್ಲ. ಸಾವಿರಾರು ನಿವೃತ್ತ ನೌಕರರು ಜೀವನದ ಸಂಧ್ಯಾಕಾಲದಲ್ಲಿ ತಮ್ಮದಲ್ಲದ ತಪ್ಪಿಗೆ ಪಶ್ಚಾತ್ತಾಪ ಪಡುವಂತಾಗಿದೆ. ಸೇವಾ ಪುಸ್ತಕದಲ್ಲಿ ಏನಾದರೂ ತಪ್ಪು ನಮೂದಾದರೆ ಅದಕ್ಕೆ ಸಂಬಂಧಪಟ್ಟ ನೌಕರರೇ ಹೊಣೆಗಾರರಾಗುತ್ತಾರೆ. ಆದರೆ, ಅಂತಹ ತಪ್ಪು ಸರಿಪಡಿಸಲು ಎಜಿ ಕಚೇರಿಗೆ ಅಲೆದಾಡಬೇಕಿದೆ. ತರಬೇತಿ ಕೊರತೆಯಿಂದಾಗಿ ಹಲವಾರು ಕಚೇರಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಥಮದರ್ಜೆ ಮತ್ತು ದ್ವಿತೀಯದರ್ಜೆ ಸಹಾಯಕರಿಗೆ ಸೇವಾ ಪುಸ್ತಕದ ನಿರ್ವಹಣೆ ಗೊತ್ತಿಲ್ಲ. ನಿವೃತ್ತಿಯಾದ ನಂತರ ಈ ಸೇವಾ ಪುಸ್ತಕವನ್ನು ಎಜಿ ಕಚೇರಿಗೆ ಕಳಿಸಲಾಗುತ್ತದೆ. ನಿವೃತ್ತಿ ವೇತನಕ್ಕೆ ಸಂಬಂಧಿಸಿದಂತೆ ಆಗಬೇಕಾದ ಕೆಲಸಗಳನ್ನು ನಿಭಾಯಿಸುವ ಜವಾಬ್ದಾರಿ ಈ ಕಚೇರಿಗೆ ಇದೆ.

ಇಡೀ ರಾಜ್ಯದ ನಿವೃತ್ತ ನೌಕರರ ಪಿಂಚಣಿ ಪ್ರಕ್ರಿಯೆಯ ಕಾರ್ಯಭಾರವನ್ನು ಈ ಏಕಮಾತ್ರ ಸಂಸ್ಥೆಯೇ ನಿಭಾಯಿಸುತ್ತದೆ. ಆ ಪ್ರಕ್ರಿಯೆಯಲ್ಲಿ ಏರುಪೇರಾದರೆ ನಿವೃತ್ತರು ಕಂಗಾಲಾಗುತ್ತಾರೆ. ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳುವಲ್ಲಿ ಕಚೇರಿಯು ಸಂಪೂರ್ಣವಾಗಿದೆ ಎಡವಿದೆ. ಇಂದಿಗೂ ತನ್ನದೇ ಆದ ವೆಬ್‌ಸೈಟ್ ಹೊಂದಿಲ್ಲ. ಹಾಗಾಗಿ, ನಿವೃತ್ತರಿಗೆ ಕಾಲಕಾಲಕ್ಕೆ ಮಾಹಿತಿ ಲಭಿಸುತ್ತಿಲ್ಲ. ಸರ್ಕಾರವು ಈ ಬಗ್ಗೆ ಗಮನಹರಿಸಬೇಕಿದೆ.

ಎಸ್.ಆರ್. ಬಿರಾದಾರ, ಇಂಡಿ

ಚುರುಮುರಿ

ಉಪ್ಪು–ಹುಳಿ–ಖಾರ

• ಗುರು ಪಿ.ಎಸ್.

‘ಈ ಬ್ರೇಕ್‌ಫಾಸ್ಟ್ ಮೀಟಿಂಗ್ ಬಗ್ಗೆ ಚರ್ಚೆಯಾಗಿದ್ರಲ್ಲಿ 50 ಪರ್ಸೆಂಟ್ ಜನರ ಕಷ್ಟಗಳ ಬಗ್ಗೆ ಚರ್ಚೆಯಾಗಿದ್ರೆ ನಮ್ ರಾಜ್ಯ ಎಷ್ಟೋ ಡೆವಲಪ್ ಆಗಿರ್ತಿತ್ತು’ ಪೇಪರ್ ಓದುತ್ತಾ ವಟಗುಡತೊಡಗಿದಳು ಹೆಂಡತಿ.

‘ಅದೇ ರೈತರು, ಯುವಕರ ಸಮಸ್ಯೆ ಬಗ್ಗೆ ಬರೆದಿದ್ರೆ ನೀನೇ ಪೇಜ್ ತಿರುಗಿಸಿ ಮುಂದೆ ಹೋಗಿರ್ತಿದ್ದೆ’ ಬ್ರೇಕ್‌ಫಾಸ್ಟ್ ಮೀಟಿಂಗ್ ಸಮರ್ಥಿಸಿಕೊಳ್ಳುವಂತೆ ಹೇಳಿದೆ.

‘ಇಂತಹ ಉಪಾಹಾರ ಸಭೆಯಿಂದ ಯಾರಿಗೇನು ಸಂದೇಶ ಕೊಡೋಕೆ ಹೊರಟಿದಾರೆ ಇವರು?’

‘ಸಂದೇಶ ಸಿಗುತ್ತಿದೆ. ನಿನಗೆ ಗೊತ್ತಾಗ್ತಿಲ್ಲ ಅಷ್ಟೇ’.

‘ಏನ್ ಸಂದೇಶ ರೀ...’

‘ಉಪ್ಪಿಟ್ಟಲ್ಲಿ ಖಾರ ಹೆಚ್ಚಾಗಿದ್ದರೆ ಒಂದು ಸಂದೇಶ, ಉಪ್ಪು ಕಡಿಮೆ ಇದ್ದರೆ ಮತ್ತೊಂದು ಸಂದೇಶ, ಇಡ್ಲಿ ಬೆಂದಿರಲಿಲ್ಲ ಅಂದ್ರೆ ಒಂದು ಮೆಸೇಜ್, ನಾಟಿಕೋಳಿ ಸಾರಲ್ಲಿ ಪೀಸ್‌ಗಳಿರಲಿಲ್ಲ ಅಂದ್ರೆ ಇನ್ನೊಂದು ಮೆಸೇಜ್’.

‘ಓಹ್, ಹೀಗೆಲ್ಲ ಇದೆಯಾ? ಫಸ್ಟ್ ಬ್ರೇಕ್‌ಫಾಸ್ಟ್ ಮೀಟಿಂಗ್‌ನಲ್ಲಿ ಉಪ್ಪಿಟ್ಟಿಗೆ ಉಪ್ಪು ಕಡಿಮೆ ಇತ್ತಂತೆ. ಅಂದ್ರೆ ಏನರ್ಥ?’

‘ಇನ್ನೊಂದು ಬಜೆಟ್ ಮಂಡಿಸಿದ ನಂತರ ಉಪ್ಪಿಟ್ಟಿಗೆ ಉಪ್ಪು ಹಾಕಲಾಗುವುದು ಎಂದರ್ಥ’.

‘ಎರಡನೇ ಮೀಟಿಂಗ್‌ನಲ್ಲಿ ನಾಟಿಕೋಳಿ ಸಾರು ಖಾರ ಆಗಿತ್ತಂತೆ. ಇದರರ್ಥ ಏನಿರಬಹುದು?’

‘ಅಧಿಕಾರ ಬಿಟ್ಟು ಕೊಡದಿದ್ದರೆ ಮುಂದೆ ಎಲ್ಲ ಖಾರ ಖಾರವಾಗಿರುತ್ತೆ ಅಂತಿರಬಹುದು’.

‘ಉಪಾಹಾರ ಆದ ನಂತರ ಲೆಮನ್ ಟೀ ಕೊಟ್ಟಿದ್ರಂತೆ. ಆದರೆ, ಅದರಲ್ಲಿ ಹುಳಿಯೇ ಇರಲಿಲ್ವಂತೆ ರೀ’.

‘ಅಂದ್ರೆ, ಇಬ್ಬರ ನಡುವೆ ಹುಳಿ ಹಿಂಡೋರು ತುಂಬಾ ಜನ ಇದ್ದಾರೆ. ಮತ್ತೇಕೆ ಎಕ್ಸ್‌ಟ್ರಾ ಹುಳಿ ಅಂತ ಹಾಕಿಲ್ಲದೇ ಇರಬಹುದು’ ಎಂದು ನಕ್ಕೆ.

‘ರಾಜ್ಯಭಾರ ಮಾಡೋದಂದ್ರೆ ಕುಕರಿ ಶೋ ಅಂದ್ಕೊಂ-ಡಿದಾರೇನ್ರೀ ಇವರು... ರೈತರು ರೋಸ್ಟ್ ಆಗ್ತಿದ್ದಾರೆ. ಎಲ್ಲದರ ಬೆಲೆ, ಟ್ಯಾಕ್ಸ್ ಜಾಸ್ತಿ ಆಗಿ ಜನ ಸೀದುಹೋಗ್ತಿ-ದ್ದಾರೆ. ಇಂಥದ್ದರಲ್ಲಿ ವಿರೋಧಪಕ್ಷದವರೂ ಹೋರಾಟ ಮಾಡ್ತಿಲ್ವಲ್ರೀ’.

‘ಹನುಮ ಜಯಂತಿ ದಿನ ಕೋಳಿ ಸಾರು ಮಾಡಿದ್ದಾರೆ ಅಂತ ಹೋರಾಡ್ತಿಲ್ವ, ಇನ್ನೂ ಅವರು ಎಂತಹ ಹೋರಾಟ ಮಾಡಬೇಕು ನಿಂಗೆ’ ಎಂದೆ. ಹಣೆ ಚಚ್ಚಿಕೊಂಡು ಒಳಹೋದಳು.

ಸಂಗತ

ಶಕ್ತಿ ಯೋಜನೆ: ತಪ್ಪಬೇಕಿದೆ ಜಟಾಪಟಿ

ಸರ್ಕಾರಿ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರು ಹಾಗೂ ಕಂಡಕ್ಟರ್ ನಡುವೆ ಜಗಳ ಹೆಚ್ಚುತ್ತಿವೆ. ಇದಕ್ಕೆ ಅರಿವಿನ ಕೊರತೆ, ನಿಯಮಗಳಲ್ಲಿನ ಗೊಂದಲಗಳೇ ಕಾರಣ.

• ಸಿದ್ದಯ್ಯ ಹಿರೇಮಠ

ಮೈಸೂರಿನಿಂದ ತುಮಕೂರಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ, ‘ಶಕ್ತಿ’ ಯೋಜನೆಯಡಿ ಉಚಿತ ಟಿಕೆಟ್ ಪಡೆದು ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರು ಶ್ರೀರಂಗಪಟ್ಟಣದಲ್ಲಿ ಇಳಿದಿದ್ದಕ್ಕೆ ತೀವ್ರ ಜಟಾಪಟಿ ನಡೆದ ಘಟನೆ ಇತ್ತೀಚೆಗೆ ವರದಿಯಾಗಿದೆ. ತುಮಕೂರಿಗೆ ಟಿಕೆಟ್ ಪಡೆದು, ಮಾರ್ಗಮಧ್ಯೆ ಇಳಿದುಹೋಗುತ್ತಿರುವುದನ್ನು ಗಮನಿಸಿ ಪ್ರಶ್ನಿಸಿದ್ದಕ್ಕೆ ಕೋಪಗೊಂಡ ಮಹಿಳೆ, ಕಂಡಕ್ಟರ್ ಶರ್ಟ್ ಕಾಲರ್ ಹಿಡಿದು ವಾಗ್ವಾದ ನಡೆಸಿದ್ದರು. ಈ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಬಸ್ ಹತ್ತಿ ನಿಗದಿತ ನಿಲುಗಡೆಗೆ ಉಚಿತ ಟಿಕೆಟ್ ಪಡೆಯುವ ಮಹಿಳೆಯರು ಅದೇ ನಿಲುಗಡೆ ಪ್ರದೇಶದಲ್ಲೇ ಬಸ್ಸಿನಿಂದ ಇಳಿಯಬೇಕು. ಮಧ್ಯದಲ್ಲಿ ಇಳಿಯುವಂತೆ ಇಲ್ಲ. ಮಹಿಳಾ ಪ್ರಯಾಣಿಕರು ತಾವು ಟಿಕೆಟ್ ಪಡೆದ ಊರಿಗೆ ಬದಲಾಗಿ ಮುಂಚಿತವಾಗಿಯೇ ಬಸ್‌ನಿಂದ ಇಳಿದುಹೋಗಿದ್ದರೆ, ಮುಂದಿನ ಊರಿನಲ್ಲಿ ಟಿಕೆಟ್ ತಪಾಸಣಾ ಸಿಬ್ಬಂದಿ ಬಂದಾಗ ಸಮಸ್ಯೆಯಾಗುತ್ತದೆ. ವಿತರಣೆ ಆದ ಟಿಕೆಟ್‌ಗಳ ಲೆಕ್ಕ ಹಾಕಿ ನೋಡಿದಾಗ ಆ ಪ್ರಯಾಣಿಕರು ಇಲ್ಲದಿರುವುದು ಕಂಡುಬಂದರೆ, ಅದಕ್ಕೆ ಕಂಡಕ್ಟರ್ ನೇರ ಹೊಣೆ. ಈ ಕಾರಣಕ್ಕೆ ಅನೇಕ ಕಂಡಕ್ಟರ್‌ಗಳನ್ನು ಅಮಾನತು ಮಾಡಿದ ಉದಾಹರಣೆಗಳಿವೆ. ಕೆಲವು ಕಂಡಕ್ಟರ್‌ಗಳಿಗೆ ನೋಟಿಸ್ ನೀಡಲಾಗಿದೆ.

‘ಯಾವುದೋ ಊರಿಗೆ ಟಿಕೆಟ್ ಪಡೆಯುವ ಮಹಿಳೆಯರು ಮಧ್ಯದಲ್ಲಿ ಇನ್ಯಾವುದೋ ಊರಲ್ಲಿ ಬಸ್ ಇಳಿದುಹೋಗದಂತೆ ನಾವೀಗ ಕಾವಲು ಕಾಯಬೇಕಿದೆ. ಬಸ್ ಖಾಲಿ ಇರಲಿ, ಕಿಕ್ಕಿರಿದು ತುಂಬಿರಲಿ, ಮಹಿಳೆಯರು ಯಾವ ಊರಿಗೆ ಟಿಕೆಟ್ ಪಡೆದಿರುತ್ತಾರೋ ಅಲ್ಲಿಯೇ ಇಳಿಯುವಂತೆ ನೋಡಿಕೊಳ್ಳಬೇಕಿದೆ. ನಮ್ಮ ಕಣ್ತಪ್ಪಿಸಿ ಯಾರಾದರೂ ಇಳಿದುಹೋಗಿದ್ದರೆ, ಮುಂದೆ ಟಿ.ಸಿ ಬಂದು ತಪಾಸಣೆ ನಡೆಸಿದಾಗ ಮಾಡದ ತಪ್ಪಿಗೆ ನಮ್ಮ ಕೆಲಸಕ್ಕೆ ಕುತ್ತುಬರುತ್ತದೆ’ ಎಂಬುದು ಕಂಡಕ್ಟರ್‌ಗಳ ಅಳಲು.

ಶ್ರೀರಂಗಪಟ್ಟಣದಲ್ಲಿ ನಡೆದಂಥ ಘಟನೆಯೂ, ಜಟಾಪಟಿಯೂ ಹೊಸದೇನಲ್ಲ. ಇಂಥವು ‘ಶಕ್ತಿ’ ಯೋಜನೆ ಆರಂಭವಾದಾಗಿನಿಂದ ಅಲ್ಲಲ್ಲಿ ನಡೆಯುತ್ತಲೇ ಇವೆ.

ಇದೀಗ ಬಹುತೇಕರ ಕೈಯಲ್ಲಿ ಮೊಬೈಲ್ ಫೋನ್ ಇರುವುದು ಸಾಮಾನ್ಯ. ಕೆಲಸದ ನಿಮಿತ್ತ ಯಾರನ್ನೋ ಭೇಟಿಯಾಗಲು, ಯಾವುದೋ ಊರಿಗೆ ಹೊರಟ ಮಹಿಳೆಗೆ ಮಾರ್ಗಮಧ್ಯದಲ್ಲೇ ಕರೆಯೊಂದು ಬಂದು, ಅವರು ಭೇಟಿ ಮಾಡಬೇಕಿರುವ ವ್ಯಕ್ತಿ ಅನಿವಾರ್ಯ ಕಾರಣಗಳಿಂದ ಲಭ್ಯವಿರುವುದಿಲ್ಲ ಎಂಬ ಸಂದೇಶ ಬಂದಾಗ, ಆ ಊರಿಗೆ ಹೋಗುವುದು ಬೇಡ ಅನ್ನಿಸಿ, ಮಾರ್ಗಮಧ್ಯದಲ್ಲೇ ಇಳಿದು ವಾಪಸ್ ಹೋಗುವ ಸಾಧ್ಯತೆಯಿದೆ. ಅಥವಾ ಮಾರ್ಗಮಧ್ಯದ ಊರಲ್ಲಿ ಪ್ರೀತಿಪಾತ್ರರ ಅಥವಾ ಆಪ್ತಸ್ನೇಹಿತರ ಮನೆ ಇದ್ದಲ್ಲಿ, ಅವರನ್ನು ಭೇಟಿ ಮಾಡಿ, ಉಭಯ ಕುಶಲೋಪರಿ ವಿಚಾರಿಸಿ, ಮತ್ತೆ ತಮ್ಮೂರಿನತ್ತ ಪ್ರಯಾಣ ಮುಂದುವರಿಸುವ ದಿಢೀರ್ ನಿರ್ಧಾರ ಮಾಡುವವರೂ ಇರುತ್ತಾರೆ. ಕೆಲವೊಮ್ಮೆ ಯಾವುದೋ ಕೆಲಸಕ್ಕೆ ಹೊರಟವರಿಗೆ ಮಾರ್ಗಮಧ್ಯದಲ್ಲೇ ಅವರ ಕೆಲಸ ಆಗಿರುವ ಸಂದೇಶ ಬರುತ್ತದೆ. ಆಗ ಅರ್ಧದಾರಿಗೇ ಪ್ರಯಾಣ ಮೊಟಕುಗೊಳಿಸಿ ವಾಪಸ್ ಹೋಗುವಂಥ ಸ್ಥಿತಿಯೂ ಎದುರಾಗುತ್ತದೆ. ಅಂಥವರು ‘ಶಕ್ತಿ’ ಯೋಜನೆ ನಿಯಮದ ಪ್ರಕಾರ ಬಸ್ ಇಳಿಯುವಂತೆಯೇ ಇಲ್ಲ. ಇಳಿಯಲು ಕಂಡಕ್ಟರ್ ಬಿಡುವಂತಿಲ್ಲ.

ಹತ್ತೋ ಹದಿನೈದೋ ಕಿಲೋಮೀಟರ್ ದೂರದ ಮಾರ್ಗವಾದರೆ ಕೆಲವರು ಅಲ್ಲಿಯವರೆಗೂ ಹೋಗಿ ಮರಳುವುದುಂಟು. ಆದರೆ, ನೂರಾರು ಕಿಲೋಮೀಟರ್ ದೂರ ಹೊರಟವರು ಮೇಲೆ ತಿಳಿಸಿದ ಕಾರಣಕ್ಕೆ ಬಸ್ ಇಳಿಯುವ ಅನಿವಾರ್ಯತೆ ಎದುರಾದರೆ ಅಮೂಲ್ಯವಾದ ಸಮಯದ ಬಗ್ಗೆ ಆಲೋಚಿಸಿ ಇಳಿಯುವುದಕ್ಕೆ ಮನಸು ಮಾಡುವುದರಲ್ಲಿ ತಪ್ಪಿರುವುದಿಲ್ಲ. ಆದರೆ, ಅದಕ್ಕೆ ನಿಯಮ ಅಡ್ಡಿಯಾಗುತ್ತಿದೆ.

‘ಶಕ್ತಿ’ ಯೋಜನೆ ಅಡಿ ನೀಡಲಾಗುವ ಪ್ರತಿ ಟಿಕೆಟ್ ಲೆಕ್ಕ ಹಾಕಿ ಆಯಾ ಸಾರಿಗೆ ನಿಗಮಗಳಿಗೆ ಹಣ ಪಾವತಿಸುವುದರಿಂದ ಖೊಟ್ಟಿ ಟಿಕೆಟ್ ಕೊಡುವುದರ ಮೇಲೆ ಸರ್ಕಾರ ನಿಗಾ ಇರಿಸುತ್ತಿದೆ. ಪ್ರಯಾಣಕ್ಕೆ ಮಹಿಳೆಯರೇ ಬಾರದಿದ್ದರೂ ಕಂಡಕ್ಟರ್‌ಗಳು ಸುಖಾಸುಮ್ಮನೇ ಟಿಕೆಟ್ ನೀಡಿದಂತೆ ಮಾಡಿ ನಿಗಮಕ್ಕೆ ಲಾಭ ತಂದು ಸರ್ಕಾರಕ್ಕೆ ನಷ್ಟ ಮಾಡಬಾರದು ಎಂಬ ಉದ್ದೇಶದಿಂದ ಈ ನಿಯಮ ಜಾರಿಗೊಳಿಸಲಾಗಿದೆ. ಯೋಜನೆಯ ಫಲಾನುಭವಿಗಳು ಮಾರ್ಗಮಧ್ಯೆ ಇಳಿದು ಹೋಗಿದ್ದರೆ ಕಂಡಕ್ಟರ್ ಮೇಲೆ ವಂಚನೆಯ ಗುಮಾನಿ ಮೂಡುತ್ತದೆ. ಹೀಗೆ ಮಾಡುವುದರಿಂದ ಕಂಡಕ್ಟರ್‌ಗಳಿಗೆ ಲಾಭವೇನೂ ಇಲ್ಲ. ಆದರೆ, ‘ಇಂತಿಷ್ಟು ಮೊತ್ತ ಸಂಗ್ರಹಕ್ಕೆ ಇಂತಿಷ್ಟು ಎಂಬಂತೆ ಇನ್ಸೆಂಟಿವ್ ಪಡೆಯುವ ಆಸೆಗೆ ಕಂಡಕ್ಟರ್‌ಗಳು ವಂಚಿಸದಿರಲಿ’ ಎಂಬುದೂ ನಿಯಮ ಜಾರಿಗೆ ಕಾರಣ.

‘ಶಕ್ತಿ’ ಯೋಜನೆಯ ಫಲಾನುಭವಿಗಳು ಮಾರ್ಗಮಧ್ಯೆ ಬಸ್ ಇಳಿಯಲು ಅವಕಾಶ ನೀಡುವ ನಿಟ್ಟಿನಲ್ಲಿ ನಿಯಮಕ್ಕೆ ತಿದ್ದುಪಡಿ ತರುವತ್ತ ಸರ್ಕಾರ ಆಲೋಚಿಸಬೇಕಿದೆ.

ಬಸ್ ಹತ್ತುವ ಮಹಿಳೆಯರ ಆಧಾರ್ ಕಾರ್ಡ್ ಪರಿಶೀಲಿಸಿಯೇ ಟಿಕೆಟ್ ನೀಡಬೇಕೆಂಬ ನಿಯಮವೂ ಇದೆ. ಆಧಾರ್ ತೋರಿಸಲು ಹೇಳಿದರೆ, ‘ನಾವು ಹೆಣ್ಣುಮಕ್ಕಳು ಅಲ್ಲವೇನಪ್ಪಾ?’ ಎಂದು ಕೆಲವರು ಪ್ರಶ್ನಿಸುವುದುಂಟು. ಈ ಯೋಜನೆ ಕರ್ನಾಟಕದ ಮಹಿಳೆಯರಿಗೆ ಮಾತ್ರ ಇರುವಂಥದ್ದು. ಬೇರೆ ರಾಜ್ಯದ ಮಹಿಳೆಯರು ಟಿಕೆಟ್ ಕೇಳಿದಾಗ ವಿಳಾಸ ಪರಿಶೀಲಿಸಲೆಂದೇ ಈ ನಿಯಮ ಇದೆ. ಇದು ಅನೇಕರಿಗೆ ಗೊತ್ತಿಲ್ಲ. ಹಾಗಾಗಿ, ಜಗಳಗಳು ಆಗುತ್ತವೆ. ಅರಿವು ಮೂಡಿಸುವ ಕೆಲಸ ಆಗಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತವನ್ನೂ ಒಳಗೊಂಡಂತೆ ಜಗತ್ತಿನಲ್ಲಿ ದೊಡ್ಡ ಸಂಖ್ಯೆಯ ಮಕ್ಕಳು ಬಡತನವನ್ನು ಎದುರಿಸುತ್ತಿದ್ದಾರೆ ಎಂದು ಯುನಿಸೆಫ್ ಜಾಗತಿಕ ಮಕ್ಕಳ ಸ್ಥಿತಿಗತಿ– 2025 ವರದಿ ತಿಳಿಸಿದೆ. ದಶಕದ ಹಿಂದಿನ ಅಂಕಿ ಅಂಶಗಳಿಗೆ ಹೋಲಿಸಿದರೆ ಜಾಗತಿಕ ಮಟ್ಟದಲ್ಲಿ ಕಡುಬಡ ಮಕ್ಕಳ ಸಂಖ್ಯೆಯಲ್ಲಿ ಇಳಿಮುಖವಾಗಿದೆ. ಆದರೆ, ಭಾರತದಲ್ಲಿ ಮಕ್ಕಳ ಬಹುಆಯಾಮದ ಬಡತನ ಪ್ರಮಾಣ ಈಗಲೂ ಗಣನೀಯವಾಗಿಯೇ ಇದೆ. ಇದು ಅವರ ಆರೋಗ್ಯ ಮತ್ತು ಬೆಳವಣಿಗೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಜಗತ್ತಿನಲ್ಲಿ 41.2 ಕೋಟಿ ಮಕ್ಕಳು ಕಡುಬಡತನಕ್ಕೆ ಗುರಿಯಾಗಿದ್ದು, ದಿನನಿತ್ಯದ ನೈರ್ಮಲ್ಯ ಮತ್ತು ಪೌಷ್ಟಿಕತೆಯಿಂದ ವಂಚಿತರಾಗಿದ್ದಾರೆ ಎಂದು ವರದಿ ಹೇಳಿದೆ

ಯುನಿಸೆಫ್ ಜಾಗತಿಕ ಮಕ್ಕಳ ಸ್ಥಿತಿಗತಿ ವರದಿ–2025ರಲ್ಲಿ ಉಲ್ಲೇಖ

ಬಡತನದ ಸುಳಿಯಲ್ಲಿ ಭಾರತದ ಮಕ್ಕಳು

ಪ್ರಜಾವಾಣಿ ವಾರ್ತೆ

ಕಡಿಮೆ ಮತ್ತು ಕೆಳ–ಮಧ್ಯಮ ಆದಾಯದ ದೇಶಗಳ ಮಕ್ಕಳು ಬಡತನದಿಂದ ನರಳುತ್ತಿದ್ದಾರೆ ಎಂದು ವಿಶ್ವಸಂಸ್ಥೆಯ ಮಕ್ಕಳ ನಿಧಿಯ (ಯುನಿಸೆಫ್) ಇತ್ತೀಚಿನ ವರದಿ ತಿಳಿಸಿದೆ. ಜಗತ್ತಿನಲ್ಲಿ 41.2 ಕೋಟಿ ಮಕ್ಕಳು ಕಡುಬಡತನವನ್ನು ಎದುರಿಸುತ್ತಿದ್ದಾರೆ. ಭಾರತದಲ್ಲಿಯೂ ಬಡ ಮಕ್ಕಳ ಸಂಖ್ಯೆ ಹೆಚ್ಚೇ ಇದೆ ಎಂದು ವರದಿ ತಿಳಿಸಿದೆ.

ವರದಿಯು 130 ಕೆಳ ಮತ್ತು ಮಧ್ಯಮ ಆದಾಯದ ರಾಷ್ಟ್ರಗಳ ಬಹುಆಯಾಮದ ದತ್ತಾಂಶವನ್ನು ವಿಶ್ಲೇಷಿಸಿದ್ದು, ಆರು ರೀತಿಯ ಸೌಲಭ್ಯಗಳ ಕೊರತೆಯನ್ನು ಪಟ್ಟಿ ಮಾಡಿದೆ. ಶಿಕ್ಷಣ, ಆರೋಗ್ಯ, ವಸತಿ, ಪೌಷ್ಟಿಕತೆ, ನೈರ್ಮಲ್ಯ ಮತ್ತು ಶುದ್ಧ ನೀರು. ಇವುಗಳ ಪೈಕಿ 41.7 ಕೋಟಿ ಮಕ್ಕಳು ಎರಡು ಮತ್ತು ಅದಕ್ಕಿಂತ ಹೆಚ್ಚಿನ ಕೊರತೆಗಳನ್ನು ಎದುರಿಸುತ್ತಿದ್ದಾರೆ.

ಜಾಗತಿಕವಾಗಿ ಇಂದಿಗೂ ಅನೇಕ ಮಕ್ಕಳು ಮೂಲಭೂತ ಅಗತ್ಯಗಳಿಂದ ವಂಚಿತರಾಗಿದ್ದಾರೆ. ಇವು ಅಸಮಾನತೆಯನ್ನು ಹೆಚ್ಚಿಸುತ್ತಿದ್ದು, ಬೆಳವಣಿಗೆಯನ್ನು ಕುಂಠಿತಗೊಳಿಸಿವೆ. ಇದು ಸಾಮಾಜಿಕ ವ್ಯವಸ್ಥೆಯನ್ನೂ ದುರ್ಬಲಗೊಳಿಸುತ್ತಿದ್ದು, ತಲೆಮಾರುಗಳ ಕಾಲ ಅದರ ಪರಿಣಾಮ ಇರುತ್ತದೆ ಎಂದು ವಿಶ್ಲೇಷಿಸಿದೆ. ಚಿಕ್ಕ ಮಕ್ಕಳು, ಅಂಗವಿಕಲರು ಮತ್ತು ಬಿಕ್ಕಟ್ಟುಗಳಲ್ಲಿ ಬದುಕುತ್ತಿರುವ ಮಕ್ಕಳು ಹೆಚ್ಚು ಸಮಸ್ಯೆ ಎದುರಿಸುತ್ತಿದ್ದಾರೆ. ಹವಾಮಾನ ವೈಪರೀತ್ಯಗಳು, ರಾಜಕೀಯ ಬಿಕ್ಕಟ್ಟುಗಳು ಮತ್ತು ರಾಷ್ಟ್ರದ ಸಾಲವು ಕುಟುಂಬಗಳನ್ನು ಸಂಕಷ್ಟಕ್ಕೆ ದೂಡುತ್ತಿದ್ದು, ಕುಟುಂಬದ ದುಡಿಮೆಯನ್ನು ಮಕ್ಕಳಿಗೆ ಬಳಸುವುದಕ್ಕೆ ಆಸ್ಪದ ನೀಡುತ್ತಿಲ್ಲ.

ಭಾರತದಲ್ಲಿ ಬಡಮಕ್ಕಳು: ಕಡುಬಡತನವು ಜಾಗತಿಕ ಮಟ್ಟದಲ್ಲಿ ಇಳಿಮುಖವಾಗುತ್ತಿದೆ. ಆದರೆ, ಭಾರತದಲ್ಲಿ ಬಹುಆಯಾಮದ ಬಡತನದಿಂದ ನರಳುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಿದೆ. ದೇಶದ 20.6 ಕೋಟಿ ಮಕ್ಕಳು ಆರು ಸವಲತ್ತುಗಳ ಪೈಕಿ ಕನಿಷ್ಠ ಒಂದರ ಕೊರತೆ ಎದುರಿಸುತ್ತಿದ್ದಾರೆ. ಈ ಪೈಕಿ ಮೂರನೇ ಒಂದರಷ್ಟು ಮಕ್ಕಳಿಗೆ ಎರಡು ಮತ್ತು ಅದಕ್ಕಿಂತ ಹೆಚ್ಚು ಕೊರತೆಗಳಿವೆ. ಜತೆಗೆ, ಪೌಷ್ಟಿಕತೆ, ಶಿಕ್ಷಣ, ಆರೋಗ್ಯ, ವಸತಿ ಮತ್ತು ನೈರ್ಮಲ್ಯ ಈ ಎಲ್ಲ ವಲಯಗಳಲ್ಲಿಯೂ ಉತ್ತಮಿಕೆಯ ಅಗತ್ಯವಿದೆ ಎಂದು ವರದಿ ಎಚ್ಚರಿಸಿದೆ.

ಭಾರತದಲ್ಲಿ 2013-2014 ಮತ್ತು 2022-2023ರ ನಡುವೆ ಬಹುಆಯಾಮದ ಬಡತನ ಪ್ರಮಾಣವು ಶೇ 29.2ರಿಂದ ಶೇ 11.3ಕ್ಕೆ ಇಳಿದಿದ್ದು, 24.8 ಕೋಟಿ ಮಂದಿಯನ್ನು ಬಡತನದಿಂದ ಮುಕ್ತಗೊಳಿಸಲಾಗಿದೆ ಎಂದು ನೀತಿ ಆಯೋಗದ ವರದಿ ಹೇಳಿತ್ತು. ಆದರೆ, ಬಡತನದ ಹೆಚ್ಚಿನ ಪರಿಣಾಮಗಳಿಗೆ ಮಕ್ಕಳು ಗುರಿಯಾಗುತ್ತಲೇ ಇದ್ದಾರೆ.

ಭಾರತವು ಜಗತ್ತಿನಲ್ಲೇ ಅತಿ ಹೆಚ್ಚು ಜನಸಂಖ್ಯೆಯ ದೇಶವಾಗಿದೆ. ಆದರೆ, ಬಡ ಮಕ್ಕಳು ಹೆಚ್ಚಾಗಿರುವುದರಿಂದ ಜನಸಂಖ್ಯೆ ಹೆಚ್ಚಳದ ಪ್ರಯೋಜನಗಳನ್ನು ಪಡೆಯುವುದು ಕಷ್ಟಕರವಾಗಿ ಪರಿಣಮಿಸಿದೆ. ದೇಶದಲ್ಲಿ ಕುಂಠಿತ ಬೆಳವಣಿಗೆಯ ಮತ್ತು ಕಡಿಮೆ ತೂಕದ ಮಕ್ಕಳು ಹೆಚ್ಚಾಗಿದ್ದಾರೆ. ಹಸಿವು ಮುಕ್ತವಾಗಿರುವುದು, ಶಿಕ್ಷಣ, ಆರೋಗ್ಯ ಪಡೆಯುವುದು ದೇಶದ ಪ್ರತಿಯೊಬ್ಬ ಮಗುವಿನ ಹಕ್ಕಾಗಿದೆ. ಮಕ್ಕಳಿಗೆ ಮೂಲಭೂತ ಅಗತ್ಯಗಳನ್ನು ಪೂರೈಸುವುದು ಸರ್ಕಾರಗಳ ಕರ್ತವ್ಯವಾಗಿದೆ. ಇದಕ್ಕಾಗಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಆದರೆ, ಸಮಸ್ಯೆಯ ತೀವ್ರತೆ ಹೆಚ್ಚಾಗಿದೆ, ಅವು ಸಾಲದಾಗಿವೆ.

ಕುಸಿಯುತ್ತಿರುವ ಅನುದಾನ: 2025–26ರ ಕೇಂದ್ರ ಬಜೆಟ್‌ನಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ₹26,890 ಕೋಟಿ ಮೀಸಲಿಡಲಾಗಿದೆ. ಮಕ್ಕಳ ಕಾರ್ಯಕ್ರಮಗಳೂ ಇದರ ವ್ಯಾಪ್ತಿಯಲ್ಲಿಯೇ ಬರುತ್ತವೆ. ಆದರೆ, 2015-2016ರಲ್ಲಿ ಕೇಂದ್ರದ ವೆಚ್ಚದಲ್ಲಿ ಸಚಿವಾಲಯದ ಪಾಲು ಶೇ 0.96ರಷ್ಟಿತ್ತು. 2025-2026ರಲ್ಲಿ ಅದು ಶೇ 0.5ರಷ್ಟು ಕುಸಿದಿದೆ. ಅಂದರೆ, 10 ವರ್ಷದಲ್ಲಿ ಮಕ್ಕಳ ಅಭಿವೃದ್ಧಿಗಾಗಿ ಮೀಸಲಿಡುವ ಹಣವು ಕುಸಿಯುತ್ತಲೇ ಸಾಗಿದೆ.

ಒಟ್ಟಾರೆ ಬಡತನ ಮತ್ತು ಮಕ್ಕಳ ಬಡತನ ಎರಡೂ ಭಿನ್ನ. ಎರಡಕ್ಕೂ ಪ್ರತ್ಯೇಕ ಯೋಜನೆಗಳನ್ನು ರೂಪಿಸಬೇಕು. ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿ, ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಮಕ್ಕಳ ಕಲ್ಯಾಣಕ್ಕಾಗಿ ಯುನಿಸೆಫ್ ಐದು ಅಂಶಗಳ ಕಾರ್ಯಕ್ರಮವನ್ನು ರೂಪಿಸಿದೆ ಮತ್ತು ಆರೋಗ್ಯ, ಕಲಿಕೆ, ರಕ್ಷಣೆ ಮತ್ತು ಸ್ವಚ್ಛ ವಾತಾವರಣದ ಬದುಕನ್ನು ಮಕ್ಕಳಿಗೆ ಖಾತರಿ ಪಡಿಸಬೇಕು ಎಂದು ಆಗ್ರಹಿಸಿದೆ.





• ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ಕಡು ಬಡತನ ಎದುರಿಸುತ್ತಿದ್ದ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳವಾಗಿತ್ತು

ಕಡು ಬಡತನ ಎಂದರೆ, ಕಡಿಮೆ ಆದಾಯದ ರಾಷ್ಟ್ರಗಳಲ್ಲಿ ವ್ಯಕ್ತಿಯೊಬ್ಬರಿಗೆ ಬದುಕಲು ದಿನಕ್ಕೆ ಗರಿಷ್ಠ 3 ಡಾಲರ್‌ನಷ್ಟು (₹270) ವೆಚ್ಚ ಮಾಡುವ ಸಾಮರ್ಥ್ಯ ಇರುತ್ತದೆ

ವರದಿಯ ಪ್ರಮುಖ ಅಂಶಗಳು

- ಜಗತ್ತಿನಲ್ಲಿ ಐದು ಮಕ್ಕಳಲ್ಲಿ ಒಂದು ಮಗು ಕಡು ಬಡತನದ ಸ್ಥಿತಿಯನ್ನು ಎದುರಿಸುತ್ತಿದೆ
- ಹವಾಮಾನ ಬದಲಾವಣೆ ಮತ್ತು ಸಂಘರ್ಷಗಳು ಹೆಚ್ಚು ಕುಟುಂಬಗಳನ್ನು ಬಡತನದತ್ತ ದೂಡುತ್ತಿವೆ
- ಪ್ರತಿ ವರ್ಷ ಐವರು ಮಕ್ಕಳಲ್ಲಿ ನಾಲ್ವರು ಒಂದಲ್ಲ ಒಂದು ರೀತಿಯ ಹವಾಮಾನ ವಿಕೋಪದ ಪರಿಣಾಮವನ್ನು ಎದುರಿಸುತ್ತಿದ್ದಾರೆ
- 2024ರಲ್ಲಿ ಐವರು ಮಕ್ಕಳಲ್ಲಿ ಒಂದು ಮಗು ಸಂಘರ್ಷಪೀಡಿತ ಪ್ರದೇಶದಲ್ಲಿ ವಾಸಿಸುತ್ತಿತ್ತು
- ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಆರ್ಥಿಕ ಪ್ರಗತಿ ಕುಂಠಿತವಾಗುತ್ತಿದೆ. ಇದರಿಂದ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಅಭಿವೃದ್ಧಿಗಾಗಿ ನೀಡುತ್ತಿರುವ ನೆರವಿನಲ್ಲಿ ಕಡಿತವಾಗುತ್ತಿದೆ. ಇದರಿಂದಾಗಿ 2030ರ ಹೊತ್ತಿಗೆ ಪ್ರಪಂಚದಲ್ಲಿ ಐದು ವರ್ಷದೊಳಗಿನ 45 ಲಕ್ಷ ಮಕ್ಕಳ ಜೀವಕ್ಕೆ ಕುತ್ತು ಉಂಟಾಗಲಿದೆ. ಕಲಿಕೆಯ ಮೇಲೂ ಇದು ಪರಿಣಾಮ ಬೀರಲಿದ್ದು, 2026ರ ಹೊತ್ತಿಗೆ ಜಾಗತಿಕವಾಗಿ 60 ಲಕ್ಷ ಮಕ್ಕಳು ಶಾಲೆಯಿಂದ ಹೊರಗುಳಿಯಲಿದ್ದಾರೆ
- ಬಡ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಸಾಲದ ಸುಳಿಗೆ ಸಿಲುಕಿವೆ. 45 ಪ್ರಗತಿಶೀಲ ರಾಷ್ಟ್ರಗಳು ಆರೋಗ್ಯ ಕ್ಷೇತ್ರಕ್ಕೆ ಮಾಡುತ್ತಿರುವ ವೆಚ್ಚಕ್ಕಿಂತಲೂ ಹೆಚ್ಚು ಮೊತ್ತವನ್ನು ಸಾಲದ ಬಡ್ಡಿಗೆ ಪಾವತಿಸುತ್ತಿವೆ. 22 ದೇಶಗಳು ಶಿಕ್ಷಣಕ್ಕೆ ಮೀಸಲಿಡುತ್ತಿರುವುದಕ್ಕಿಂತಲೂ ಹೆಚ್ಚಿನ ಹಣವನ್ನು ಸಾಲದ ಬಡ್ಡಿಯಾಗಿ ಪಾವತಿಸುತ್ತಿವೆ. ಮಕ್ಕಳ ಅಭಿವೃದ್ಧಿಗೆ ಹೆಚ್ಚಿನ ಹೂಡಿಕೆ ಮಾಡುವ ರಾಷ್ಟ್ರಗಳ ಸಾಮರ್ಥ್ಯವನ್ನು ಇದು ಕುಗ್ಗಿಸುತ್ತಿದೆ

ಪರಿಹಾರವೇನು?

ಮಕ್ಕಳು ಎದುರಿಸುತ್ತಿರುವ ಬಡತನವನ್ನು ನಿವಾರಿಸುವುದಕ್ಕಾಗಿ ಕೈಗೊಳ್ಳಬೇಕಾದ ಪರಿಹಾರೋಪಾಯಗಳನ್ನೂ ಯುನಿಸೆಫ್ ತನ್ನ ವರದಿಯಲ್ಲಿ ಪಟ್ಟಿ ಮಾಡಿದೆ. ಮಕ್ಕಳ ಸ್ಥಿತಿಗತಿ ಸುಧಾರಣೆ ಕಂಡ ರಾಷ್ಟ್ರಗಳಲ್ಲಿ ಅಲ್ಲಿನ ಆಡಳಿತಗಳು ಅನುಸರಿಸಿರುವ ನೀತಿಗಳನ್ನು ಸಾಕ್ಷ್ಯಗಳನ್ನಾಗಿ ಇಟ್ಟುಕೊಂಡು ಪ್ರಮುಖವಾಗಿ ಐದು ಶಿಫಾರಸುಗಳನ್ನು ಯುನಿಸೆಫ್ ಮಾಡಿದೆ. ಅವುಗಳನ್ನು ಆಧಾರ ಸ್ತಂಭಗಳು (ಪಿಲ್ಲರ್) ಎಂದು ಅದು ಕರೆದಿದೆ.

1. ಮಕ್ಕಳ ಬಡತನವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದನ್ನು ರಾಷ್ಟ್ರೀಯ ಆದ್ಯತೆಯ ವಿಷಯವನ್ನಾಗಿ ಪರಿಗಣಿಸಬೇಕು
2. ವಿತ್ತೀಯ ಅವಕಾಶಗಳನ್ನು ಸೃಷ್ಟಿಸಬೇಕು ಮತ್ತು ಆರ್ಥಿಕ ಪರಿಸ್ಥಿತಿಗೆ ಪೂರಕವಾಗಿರುವ ನೀತಿಗಳನ್ನು ರೂಪಿಸಬೇಕು. ಸಾಲದ ಮೇಲಿನ ಬಡ್ಡಿದರದಲ್ಲಿ ಆಗುವ ಬದಲಾವಣೆಯು ಕುಟುಂಬಗಳ ಮೇಲೆ ಯಾವ ರೀತಿಯ ಪರಿಣಾಮ ಬೀರಲಿದೆ ಎಂಬುದನ್ನು ಕೇಂದ್ರೀಯ ಬ್ಯಾಂಕುಗಳು ಮೌಲ್ಯಮಾಪನ ಮಾಡಬೇಕು. ಮಕ್ಕಳಿಗೆ ಸಂಬಂಧಿಸಿದಂತೆ ಮಾಡುವ ವೆಚ್ಚಗಳನ್ನು ರಕ್ಷಿಸುವಂತಹ ಕಾನೂನಿನ ಚೌಕಟ್ಟುಗಳನ್ನು ರೂಪಿಸಬೇಕು. ಮಕ್ಕಳಿಗೆ ಪೂರಕವಾದ ಬಜೆಟ್ ಮತ್ತು ಉತ್ತರದಾಯಿತ್ವವನ್ನು ಬೆಂಬಲಿಸುವ ಪಾರದರ್ಶಕ ವ್ಯವಸ್ಥೆಯ ಅಗತ್ಯವಿದೆ
3. ಎಲ್ಲರನ್ನೂ ಒಳಗೊಳ್ಳುವ ಸಾಮಾಜಿಕ ರಕ್ಷಣಾ ಯೋಜನೆಗಳನ್ನು ಇನ್ನಷ್ಟು ವಿಸ್ತರಿಸಬೇಕು. ಸಾರ್ವತ್ರಿಕ, ಕುಟುಂಬ ಗುರಿ ಆಧಾರಿತ ಹಾಗೂ ಮಕ್ಕಳಿಗೆ ಅನುಕೂಲ ಕಲ್ಪಿಸುವ ಯೋಜನೆಗಳು ಮಕ್ಕಳ ಪೌಷ್ಟಿಕತೆ, ಆರೋಗ್ಯ ಮತ್ತು ಶಾಲಾ ಹಾಜರಾತಿಯನ್ನು ಹೆಚ್ಚಿಸುವ ಮೂಲಕ ಮಕ್ಕಳ ಬಡತನ ಪ್ರಮಾಣವನ್ನು ಕಡಿಮೆ ಮಾಡಿದ ಉದಾಹರಣೆಗಳು ಜಗತ್ತಿನಲ್ಲಿ ಸಾಕಷ್ಟಿವೆ. ಇಂತಹ ಕಾರ್ಯಕ್ರಮಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು
4. ಶಿಕ್ಷಣ, ಆರೋಗ್ಯ, ಶುದ್ಧ ನೀರು, ನೈರ್ಮಲ್ಯ, ಪೌಷ್ಟಿಕತೆ, ಮಾಹಿತಿ, ವಸತಿ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಸಾರ್ವಜನಿಕ ಸೇವೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು
5. ಮಕ್ಕಳ ಪೋಷಕರು ಆರ್ಥಿಕವಾಗಿ ಸುಭದ್ರರಾಗಿರುವಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ಪೋಷಕರಿಗೆ ಉದ್ಯೋಗ ನೀಡಬೇಕು. ಅವರಿಗೆ ಕನಿಷ್ಠ ವೇತನ, ಪ್ರೋತ್ಸಾಹ ಧನ ನೀಡುವ ವ್ಯವಸ್ಥೆ, ಅಸಂಘಟಿತ ವಲಯದವರಿಗೂ ಸಾಮಾಜಿಕ ಭದ್ರತಾ ಯೋಜನೆಗಳನ್ನು ವಿಸ್ತರಿಸುವುದು ಮುಂತಾದ ಶಾಸನಬದ್ಧವಾದ ನೀತಿಗಳನ್ನು ಜಾರಿಗೊಳಿಸಬೇಕು

ಕಡಿಮೆ ಆದಾಯ ಹಾಗೂ ಕೆಳ– ಮಧ್ಯಮ ಆದಾಯ ಹೊಂದಿರುವ ರಾಷ್ಟ್ರಗಳಲ್ಲಿ ಮಕ್ಕಳು ಎದುರಿಸುತ್ತಿರುವ ಸೌಲಭ್ಯಗಳ ತೀವ್ರ ಕೊರತೆಯ ಸರಾಸರಿ ಪ್ರಮಾಣ (%ಗಳಲ್ಲಿ)



ಭಾರತವು ಕೆಳ ಮಧ್ಯಮ ಆದಾಯ ಹೊಂದಿರುವ ರಾಷ್ಟ್ರಗಳ ಸಾಲಿಗೆ ಸೇರುತ್ತದೆ

4.20 ಡಾಲರ್ (₹379) ಕೆಳ ಮಧ್ಯಮ ಆದಾಯದ ರಾಷ್ಟ್ರಗಳಲ್ಲಿ ವ್ಯಕ್ತಿಯೊಬ್ಬರು ಬದುಕಲು ಮಾಡುವ ದಿನದ ವೆಚ್ಚ

ಕಡಿಮೆ ಮತ್ತು ಕೆಳ ಮಧ್ಯಮ ಆದಾಯದ ರಾಷ್ಟ್ರಗಳ ಸೌಲಭ್ಯ ವಂಚಿತ ಮಕ್ಕಳು

41.7 ಕೋಟಿ ಎರಡು ಅಥವಾ ಅದಕ್ಕಿಂತ ಹೆಚ್ಚು ಸೌಲಭ್ಯಗಳಿಂದ ವಂಚಿತರಾದವರು

11.8 ಕೋಟಿ ಮೂರು ಅಥವಾ ಅದಕ್ಕಿಂತ ಹೆಚ್ಚು ಸವಲತ್ತುಗಳ ಕೊರತೆ ಎದುರಿಸುತ್ತಿರುವವರು

1.7 ಕೋಟಿ ನಾಲ್ಕು ಮತ್ತು ಅದಕ್ಕಿಂತ ಹೆಚ್ಚು ಸೌಲಭ್ಯಗಳಿಂದ ವಂಚಿತರಾದವರು

ಭಾರತದಲ್ಲಿ...

20.6 ಕೋಟಿ ಕನಿಷ್ಠ ಒಂದು ಸೌಲಭ್ಯದಿಂದ ವಂಚಿತರಾದವರು

6.2 ಕೋಟಿ, ಎರಡು ಅಥವಾ ಹೆಚ್ಚು ಸವಲತ್ತುಗಳ ಕೊರತೆ ಎದುರಿಸುತ್ತಿರುವವರು

ರಾಷ್ಟ್ರೀಯ

7 ವರ್ಷದ ನಂತರ ಜೈಲಿನಿಂದ ಹೊರಬಂದ ವಿಜ್ಞಾನಿ

ನಾಗ್ಪುರ (ಪಿಟಿಐ): ಬ್ರಹ್ಮೋಸ್ ಕ್ಷಿಪಣಿ ಕೇಂದ್ರದಲ್ಲಿ ಸೇವೆ ಸಲ್ಲಿಸಿದ್ದ, ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ನಿಶಾಂತ್ ಅಗರ್ವಾಲ್ ಅವರು ಮಂಗಳವಾರ ರಾತ್ರಿ ಮಹಾರಾಷ್ಟ್ರದ ನಾಗ್ಪುರ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಆಗಿದ್ದಾರೆ.

ಪಾಕಿಸ್ತಾನದ ಪರ ಗೂಢಚಾರಿಕೆ ಮಾಡಿದ ಆರೋಪದ ಮೇಲೆ ಏಳು ವರ್ಷಗಳಿಂದ ಜೈಲಿನಲ್ಲಿದ್ದ ಅವರನ್ನು ಬಾಂಬೆ ಹೈಕೋರ್ಟ್ ದೋಷಮುಕ್ತಗೊಳಿಸಿದೆ.

ವಿದೇಶದಲ್ಲಿ ಕೆಲಸ ಮಾಡುತ್ತಿದ್ದಾಗ ಕರ್ತವ್ಯಲೋಪ ಎಸಗಿದ ಕಾರಣಕ್ಕೆ ಅವರು ಸಂಕಷ್ಟಕ್ಕೆ ಸಿಲುಕಿದ್ದರು. 2018ರಲ್ಲಿ ಅಧಿಕಾರಿಗಳ ಗೋಪ್ಯತೆ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿಯಲ್ಲಿ ಅವರನ್ನು ಬಂಧಿಸಲಾಗಿತ್ತು. ವಿಚಾರಣಾ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿತ್ತು. ಅದನ್ನು ಅಗರ್ವಾಲ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಪಾಕಿಸ್ತಾನದಿಂದ ಕಾರ್ಯಾಚರಣೆ ಆಗುತ್ತಿದ್ದ ಸಾಮಾಜಿಕ ಜಾಲತಾಣದ ಖಾತೆ ಹೊಂದಿದ್ದ ವ್ಯಕ್ತಿಯೊಬ್ಬರೊಂದಿಗೆ, ಅದರ ಅರಿವಿಲ್ಲದೇ ಡಿಜಿಟಲ್ ವೇದಿಕೆ ಲಿಂಕ್ಡ್‌ಇನ್‌ನಲ್ಲಿ ಅಗರ್ವಾಲ್ ತಮ್ಮ ವ್ಯಕ್ತಿ ಪರಿಚಯ (ಬಯೋಡೇಟಾ) ಹಂಚಿಕೊಂಡಿದ್ದರು. ಉತ್ತರ ಪ್ರದೇಶದ ಭಯೋತ್ಪಾದಕ ನಿಗ್ರಹ ಪಡೆ ಪೊಲೀಸರ ತನಿಖೆ ವೇಳೆ ಈ ಮಾಹಿತಿ ಪತ್ತೆಯಾಗಿತ್ತು.

ಇವರ ಮೇಲಿನ ಪಾಕ್ ಗೂಢಚಾರಿಕೆ ಆರೋಪವನ್ನು ತನಿಖಾ ಸಂಸ್ಥೆ ಸಾಬೀತು ಮಾಡುವಲ್ಲಿ ವಿಫಲವಾದ ಕಾರಣ ಹೈಕೋರ್ಟ್ ದೋಷಮುಕ್ತಗೊಳಿಸಿದೆ.

ಕಲಾಪಕ್ಕೆ ಅಡ್ಡಿ: ವಕೀಲೆಯ ಹೊರಗಟ್ಟಿದ ಮಾರ್ಷಲ್‌ಗಳು

ನವದೆಹಲಿ (ಪಿಟಿಐ): ಕಲಾಪಕ್ಕೆ ಅಡ್ಡಿಪಡಿಸಿದ ವಕೀಲೆಯೊಬ್ಬರನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಕೊಠಡಿಯಿಂದ ಬುಧವಾರ ಹೊರಗೆ ಕಳುಹಿಸಲಾಯಿತು.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ಎನ್‌. ಕೆ. ಸಿಂಗ್ ಅವರಿದ್ದ ಪೀಠದ ಮುಂದೆ ಪಟ್ಟಿಯಿಂದ ಹೊರಗಿರುವ ವಿಷಯದ ಬಗ್ಗೆ ವಕೀಲೆಯು ನಿರಂತರವಾಗಿ ಪ್ರಸ್ತಾಪಿಸಿದ ವೇಳೆ ಈ ಘಟನೆ ನಡೆದಿದೆ.

‘ಮುಂಬೈನಲ್ಲಿದ್ದಾಗ ದೆಹಲಿ ಅತಿಥಿ ಗೃಹವೊಂದರಲ್ಲಿ ನನ್ನ ಆಪ್ತ ಸ್ನೇಹಿತೆಯನ್ನು ಕೊಲೆ ಮಾಡಲಾಗಿದೆ. ಆರಂಭದಲ್ಲಿ ಎಫ್‌ಐಆರ್ ದಾಖಲಿಸಲು ನಿರಾಕರಿಸಿದ ಪೊಲೀಸ್ ಅಧಿಕಾರಿಯನ್ನು ಈಗ ಪ್ರಕರಣದಲ್ಲಿ ತನಿಖಾಧಿಕಾರಿಯಾಗಿ ನೇಮಿಸಲಾಗಿದೆ’ ಎಂದು ವಕೀಲೆಯು ಆರೋಪಿಸಿದ್ದರು.

ಸೂಕ್ತ ಪ್ರಕ್ರಿಯೆ ಅನುಸರಿಸಿ ಸರಿಯಾದ ಅರ್ಜಿ ಸಲ್ಲಿಸುವಂತೆ ಮುಖ್ಯ ನ್ಯಾಯಮೂರ್ತಿ ಸಲಹೆ ನೀಡಿದರು. ಆಗ, ವಕೀಲೆಯು, ‘ನಾನು ಖಿನ್ನತೆಯಿಂದ ಬಳಲುತ್ತಿದ್ದೇನೆ. ಮುಂದೆ ಹಾಗೆಯೇ ಮಾಡುತ್ತೇನೆ’ ಎಂದು ಹೇಳಿಯೂ ಅಲ್ಲಿಯೇ ನಿಂತಿದ್ದರು.

ಪ್ರಕರಣ ದಾಖಲಿಸಲು ಸಹಾಯ ಮಾಡುವಂತೆ ಅಲ್ಲಿ ಹಾಜರಿದ್ದ ವಕೀಲರನ್ನು ಪೀಠ ಕೇಳಿಕೊಂಡಿತು. ಆದರೆ, ಮುಂದಿನ ಪ್ರಕರಣದ ವಿಚಾರಣೆ ನಡೆದಾಗಲೂ ವಕೀಲೆಯು ತಮ್ಮ ವಾದವನ್ನು ಮುಂದುವರಿಸಿದರು. ಅವರನ್ನು ಹೊರಗೆ ಕಳುಹಿಸಲು ಕೋರ್ಟ್‌ನ ಮಹಿಳಾ ಮಾರ್ಷಲ್‌ಗಳು ಮುಂದಾದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ವಕೀಲೆಯು, ‘ಅನುಚಿತವಾಗಿ ವರ್ತಿಸಬೇಡಿ, ನನ್ನನ್ನು ಮುಟ್ಟಬೇಡಿ’ ಎಂದು ಕೂಗಾಡಿದರು.

ಸಭ್ಯತೆ ಕಾಯ್ದುಕೊಳ್ಳುವಂತೆ ನ್ಯಾಯಮೂರ್ತಿ ಭುಯಾನ್, ಸಹ ವಕೀಲರು ಸಲಹೆ ನೀಡಿದರೂ ವಕೀಲೆಯು ತಮ್ಮ ಸುರಕ್ಷತೆ ಬಗ್ಗೆ ಈ ನ್ಯಾಯಾಲಯದ ಗಮನಕ್ಕೆ ತರಲು ಬಯಸುವುದಾಗಿ ಹೇಳಿದರು.

ಶಿಕ್ಷಕರ ನೇಮಕ ರದ್ದು ಆದೇಶ ವಜಾ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ 32,000 ಪ್ರಾಥಮಿಕ ಶಾಲಾ ಶಿಕ್ಷಕ ನೇಮಕಾತಿಯನ್ನು ರದ್ದು ಮಾಡಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಕಲ್ಕತ್ತಾ ಹೈಕೋರ್ಟ್ ವಿಭಾಗೀಯ ಪೀಠ ಬುಧವಾರ ವಜಾಗೊಳಿಸಿದೆ.

2014ರಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಮೂಲಕ ಈ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು.

ನ್ಯಾಯಮೂರ್ತಿ ತಪಬ್ರತಾ ಚಕ್ರವರ್ತಿ ಅವರು, ‘ಎಲ್ಲಾ ನೇಮಕಾತಿಯಲ್ಲಿ ಅವ್ಯವಹಾರ ನಡೆದಿರುವುದಕ್ಕೆ ಪುರಾವೆಗಳಿಲ್ಲ. ಹೀಗಾಗಿ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ವಜಾಗೊಳಿಸಲಾಗುತ್ತಿದೆ’ ಎಂದು ಹೇಳಿದರು.

ಒಂಬತ್ತು ವರ್ಷಗಳ ನಂತರ ಶಿಕ್ಷರನ್ನು ಕೆಲಸದಿಂದ ತೆಗೆದುಹಾಕುವುದು ಪ್ರಾಥಮಿಕ ಶಿಕ್ಷಕರು ಮತ್ತು ಅವರ ಕುಟುಂಬದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು.

ವಸ್ತುವಿನ ಅಗತ್ಯ

ನುಡಿ ಬೆಳಗು

ಪಿ.ಚಂದ್ರಿಕಾ

ಗುರು ಗೋವಿಂದರು ಯಮುನಾ ನದಿಯ ತಟದಲ್ಲಿ ಕುಳಿತು ದೈವ ಧ್ಯಾನದಲ್ಲಿ ತೊಡಗಿದ್ದರು. ಅವರ ಅಪಾರ ಶಿಷ್ಯ ಕೋಟಿಗಳಲ್ಲಿ ಒಬ್ಬನಾದ ರಘುನಾಥ ಅವರನ್ನು ಹುಡುಕಿ ಬಂದ. ಅವನು ಅತ್ಯಂತ ಶ್ರೀಮಂತನಾಗಿದ್ದ. ಗುರು ಗೋವಿಂದರು ಶಿಷ್ಯನನ್ನು ನೋಡಿ, ಹೇಗಿದ್ದೀಯ ಎಂದರು. ಕುಶಲೋಪರಿಯ ನಂತರ ಗುರುವಿಗಾಗಿ ತಂದಿದ್ದ ರತ್ನ ಖಚಿತವಾದ ಚಿನ್ನಾಭರಣಗಳನ್ನು ಅವರ ಮುಂದೆ ಇರಿಸಿದ. ಗೋವಿಂದರು, ಏನಿದು ಎಂದು ಪ್ರಶ್ನಿಸಿದರು. ‘ಜಗತ್ತಿನ ಅತ್ಯಂತ ಬೆಲೆಬಾಳುವ ಆಭರಣಗಳು ಇವು, ಇವುಗಳನ್ನು ಇನ್ನೊಬ್ಬರಿಗೆ ಕೊಡುವಷ್ಟು ಶ್ರೀಮಂತಿಕೆ ನನಗೆ ಬಂದಿದೆ’ ಎಂದ ರಘುನಾಥ. ಈ ಮಾತುಗಳನ್ನು ಕೇಳಿ ಗೋವಿದರಿಗೆ ನಗುಬಂತು. ಅದರಲ್ಲಿ ಒಂದು ಆಭರಣವನ್ನು ತೆಗೆದುಕೊಂಡು ನೋಡುವವರಂತೆ ನಟಿಸುತ್ತಾ ನೀರೊಳಗೆ ಬೀಳಿಸಿಬಿಟ್ಟರು. ಬಿದ್ದ ನಂತರ, ‘ಅಯ್ಯಯ್ಯೋ ನೀರೊಳಗೆ ನೀನು ಕೊಟ್ಟ ಆಭರಣ ಬಿದ್ದು ಹೋಯಿತಲ್ಲ’ ಎಂದರು. ಗಾಬರಿಗೊಂಡ ರಘುನಾಥ, ‘ಅದು ಅತ್ಯಂತ ಅಮೂಲ್ಯವಾದ ಆಭರಣ’ ಎಂದು ನೀರೊಳಗೆ ಹುಡುಕಾಟ ನಡಿಸಿದ.

ರಭಸವಾಗಿ ಹರಿಯುತ್ತಿದ್ದ ಯಮುನೆ ಆ ಆಭರಣವನ್ನು ತನ್ನೊಂದಿಗೆ ಸೆಳೆದೊಯ್ದಿದ್ದರಿಂದ ಅದು ರಘುನಾಥನ ಕೈಗೆ ಸಿಗಲಿಲ್ಲ. ಹುಡುಕಿ ಸುಸ್ತಾದ ಅವನು ಗುರುವಿನ ಬಳಿಗೆ ಬಂದು, ‘ಎಲ್ಲಿ ಬಿದ್ದಿತು ಎಂದು ಮತ್ತೊಮ್ಮೆ ತೋರಿಸಿ, ನಾನದನ್ನು ಎತ್ತಿಕೊಂಡು ಬರುತ್ತೇನೆ’ ಎಂದ. ಗೋವಿಂದರು ಮತ್ತೊಂದು ಆಭರಣವನ್ನು ತೆಗೆದುಕೊಂಡು, ‘ಅಗೋ ನೋಡು ಅಲ್ಲಿ’ ಎನ್ನುತ್ತಾ ತಮ್ಮ ಕೈಲಿದ್ದ ಆಭರಣವನ್ನು ತಾವು ತೋರಿಸಿದ ಜಾಗದತ್ತ ಮತ್ತೆ ಎಸೆದರು. ರಘುನಾಥನಿಗೆ ಅಳುವೇ ಬಂತು. ‘ಎಂಥಾ ಕೆಲಸ ಮಾಡಿದಿರಿ ಗುರುಗಳೇ’ ಎನ್ನುತ್ತಾ ಮತ್ತೆ ಯಮುನೆಯ ಒಡಲಿಗೆ ಜಿಗಿದ. ತನ್ನೆಲ್ಲಾ ಶ್ರಮ ಹಾಕಿ ಹುಡುಕಿದ. ಆ ಆಭರಣವೂ ಸಿಗಲಿಲ್ಲ. ನಿರ್ಲಿಪ್ತರಾಗಿದ್ದ ಗುರುಗೋವಿಂದರನ್ನು ನೋಡಿ ರಘುನಾಥನಿಗೆ ಈಗ ಬರಿ ಅಳು ಮಾತ್ರವಲ್ಲ; ಕೋಪವೂ ಬಂತು. ಅವನು ಅವರನ್ನು ಬೈಯ್ಯುತ್ತಾ, ‘ನಾನು ಶ್ರಮಪಟ್ಟು ಗಳಿಸಿದ್ದನ್ನು ಬೆಲೆ ಇಲ್ಲದೆ ಎಸೆದು ತಣ್ಣಗೆ ಕುಳಿತಿದ್ದೀರಲ್ಲ? ಇದು ನ್ಯಾಯವಾ’ ಎಂದು ಜಗಳವಾಡತೊಡಗಿದ.

ಗುರುಗೋವಿಂದರು, ‘ನಿಜವೇ ರಘುನಾಥ, ಶ್ರಮದಿಂದ ಗಳಿಸಿದ್ದು ಕಳೆಯಿತೇ? ನಾನು ಶ್ರಮ ಪಟ್ಟ ಎಲ್ಲವೂ ನನ್ನ ಬಳಿಯೇ ಇದೆ. ನೀನು ಗಳಿಸಿದ್ದು ಮಾತ್ರ ಯಾಕೆ ಹೀಗಾಯಿತು’ ಎಂದರು. ರಘುನಾಥನಿಗೆ ಉತ್ತರಿಸಲು ಮಾತುಗಳೇ ಇರಲಿಲ್ಲ. ಆಗ ಗೋವಿಂದರು ಶಿಷ್ಯನನ್ನು ಉದ್ದೇಶಿಸಿ, ‘ನಿನಗೆ ಅಮೂಲ್ಯವಾದದ್ದು ನನಗೆ ಅಮೂಲ್ಯವಾಗಬೇಕಿಲ್ಲ ಅಲ್ಲವೇ? ನೋಡು ಈ ನದಿಯನ್ನು ಇದಕ್ಕೆ ನಿನ್ನ ಅಮೂಲ್ಯವಾದ ಆಭರಣವೂ, ಕಲ್ಲೂ ಎರಡೂ ಒಂದೇ. ಯಾವುದನ್ನು ಹಾಕಿದರೂ ನಿರ್ಲಿಪ್ತವಾಗಿ ನುಂಗಿಕೊಳ್ಳುತ್ತದೆ. ಜ್ಞಾನಿಗಳು ಹೀಗಿರಬೇಕು’ ಎಂದರು. ರಘುನಾಥನಿಗೆ ತನ್ನ ತಪ್ಪಿನ ಅರಿವಾಗಿತ್ತು. ತನಗೆ ಆಭರಣ ಮಹತ್ವದ್ದು. ಆದರೆ, ಅದು ಗುರುವಿಗೂ ಮಹತ್ವದ್ದು ಎಂದು ತೀರ್ಮಾನಿಸಿದ್ದು ತನ್ನ ಮಿತಿ ಎಂಬುದರ ಅರಿವು ಅವನಿಗಾಗಿತ್ತು.

ಯಾರಿಗಾದರೂ ಏನನ್ನಾದರೂ ಕೊಡುವ ಮುನ್ನ ಆ ವಸ್ತುವಿನ ಅಗತ್ಯ ಅವರಿಗೆ ಇದೆಯಾ, ಇಲ್ಲವಾ ಎಂದು ಯೋಚಿಸುವುದು ಒಳಿತು. ❖

ಗುಂಡಣ್ಣ

ಪದಬಂಧ 6243

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಅತಿಯಾದ ಬಯಕೆ (3)
5.ಅದೇ ತಾನೆ ಮದುವೆಯಾದ ಗಂಡಹೆಂಡತಿ (5)
7.ಭೂಮಿಗೂ ಆಕಾಶಕ್ಕೂ ನಡುವಣ ಪ್ರದೇಶ (4)
9.ವನಿತೆ ತೋರಿಸಿದ ಪರದೆ! (4)
12.ಮರದ ಹತ್ತಿರ ಕಾಣಿಸಿದ ಪಚ್ಚೆ (4)
15.ಪತಿಯೊಳಗಿರುವ ಮೇರೆ ಕಾಣುತ್ತಿದೆಯೇ? (4)
17.ಬೇರೆಯ ಕಾರಣ (5)
18.ಉತ್ತರದವರ ಬಾಯಲ್ಲಿ ವಿಪುಲತೆ (3)

ಮೇಲಿಂದ ಕೆಳಕ್ಕೆ

1.ಕಾಡಿನ ಹೂವು (4)
2.ತರಗತಿಯಲ್ಲಿರುವ ಗುಂಪು (2)
3.ಕಾಗದ ಪತ್ರಗಳ ಕಟ್ಟು (3)
4.ಪ್ರತ್ಯಕ್ಷ ಪದದ ವಿರುದ್ಧ ಪದ (3)
6.ಚಿಗುರು ಎಂಬರ್ಥದ ರಾಜವಂಶ (3)
7.ಹತೋಟಿ ಅಥವಾ ಸಂಖ್ಯೆ (2)
8.ರೀತಿಯೊಡಗೂಡುವ ಜೋಡುನುಡಿ (3)
10.ಇದು ಕರಾರುವಾಕ್ಕಾದುದು (3)
11.ನಗರದಲ್ಲಿ ಕೇಳಿಸಿದ ಚರ್ಮವಾದ್ಯ (3)
12.ಅನುಮತಿ ನೀಡಿದವನ ಬುದ್ಧಿ (2)
13.ಕರದಲ್ಲಿರುವ ಮಣ್ಣಿನ ಭಿಕ್ಷಾಪಾತ್ರೆ (3)
14.ಮನಸ್ಸಿನ ಬಯಕೆ (4)
15.ಪಟದಲ್ಲಿ ಬದಲಾವಣೆ! (3)
16.ನೇಸರನ ಇನ್ನೊಂದು ಹೆಸರು (3)
17.ಕಾದಾಡುವ ಜಾಗದಲ್ಲಿನ ಅರಣ್ಯ (2)



6242ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ವಹಸ್ತಾಕ್ಷರ 3.ವಿಜೇತ 5.ಗಾಯ 6.ಅವಿರತ 8.ತತ 10.ಸಮಜಾಯಿಷಿ 12.ಬಾಹು 14.ಪ್ರಕರಣ 15.ಕಜ್ಜಿ 16.ತವರು 17.ಭೋಜನಕೂಟ

ಮೇಲಿಂದ ಕೆಳಕ್ಕೆ:
1.ಸ್ವಯಂಕೃತ 2.ಕ್ಷತ್ರಿಯ 4.ತರತಮ 7.ವಿದುಷಿ 9.ಹಜಾರ 10.ಸತ್ಕಾರ 11.ಅಪ್ರಸ್ತುತ 13.ಹುಡುಕಾಟ 15.ಕಣಜ

ಸುಡೊಕು 6627

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6			2		5		
5		4			7		2	3
	2		5			6		7
8		1		3		7		9
			9	7	8		1	
9		2		5		3		6
7		3		9				
	8		7		5	9	3	
		9		8				5

6626 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

04 ಡಿಸೆಂಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಚತುರ್ದಶಿ ಗಂ. 8-38 ನಂತರ ಪೂರ್ಣಿಮಾ ಗಂ 28-44 ನಕ್ಷತ್ರ: ಕೃತ್ತಿಕಾ ಗಂ. 14-54 ಯೋಗ: ಶಿವ ಗಂ. 12-34 ಕರಣ: ವಣಿಜ ಗಂ. 8-38 ವೃಶ್ಚಿಕ ಮಾಸದ 18 ನೇ ದಿನ. **ಮಳೆ ನಕ್ಷತ್ರ:** ಜ್ಯೇಷ್ಠ 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 - 03-00, **ಸೂರ್ಯೋದಯ:** 06-43, **ಸೂರ್ಯಾಸ್ತ:** 05-58. **ಮುಸ್ಲಿಂ ದಿನಾಂಕ:** 12 ಜುಮಾದುಸ್ಸಾನಿ. **ದಿನ ವಿಶೇಷ:** ಹುತ್ತರಿ, ದತ್ತಾತ್ರೇಯ ಜಯಂತಿ. **ಅದೃಷ್ಟ ಸಂಖ್ಯೆ:** 4, 11

ಮೇಷ: ಆರ್ಥಿಕತೆ ಮತ್ತು ಆರೋಗ್ಯದ ವಿಷಯದಲ್ಲಿ ಹೆಚ್ಚಿನ ನೆಮ್ಮದಿಯನ್ನು ನೀವು ಈ ದಿನದಲ್ಲಿ ಅಪೇಕ್ಷಿಸಬಹುದು. ಶಿಸ್ತುಬದ್ಧ ಆಹಾರದಿಂದ ಆರೋಗ್ಯ ವೃದ್ಧಿಯಾಗುವುದು. ಮಕ್ಕಳಿಂದ ಸಂತೋಷ ಹೊಂದುವಿರಿ.

ವೃಷಭ: ಸಂಗೀತ ಕ್ಷೇತ್ರದಲ್ಲಿನ ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ನಿಮಗೆ ತಿಳಿಯುವುದು. ವ್ಯವಹಾರ ನಿಮಿತ್ತ ವಿದೇಶಯಾನವನ್ನು ಮಾಡುವ ಅವಕಾಶ ಸಿಗಲಿದೆ. ಯಾರ ಮೇಲೂ ಅಗತ್ಯಕ್ಕಿಂತ ಜಾಸ್ತಿ ಕೋಪಿಸಿಕೊಳ್ಳದಿರಿ.

ಮಿಥುನ: ಸಾಮಾಜಿಕ ಜೀವನದಲ್ಲಿ ಮತ್ತು ಭಾವನಾತ್ಮಕ ಸಂಬಂಧಗಳಲ್ಲಿ ಉತ್ತಮ ಪ್ರಗತಿ ಹೊಂದುವಿರಿ. ನಂಬಿಕಸ್ಥ ಸ್ನೇಹಿತರೊಂದಿಗಷ್ಟೇ ಪ್ರಯಾಣದ ಯೋಜನೆಯನ್ನು ಹಂಚಿಕೊಳ್ಳಿ. ಇಂದಿನ ವೈಫಲ್ಯದ ಬಗ್ಗೆ ನಿರಾಸೆಬೇಡ.

ಕರ್ಕಾಟಕ: ನಿಮ್ಮ ಮನೆಯಲ್ಲಿನ ಅತ್ಯಂತ ಮುಖ್ಯವಾದ ಕಾರ್ಯಕ್ರಮವನ್ನು ಅನಿವಾರ್ಯ ಕಾರಣಗಳಿಂದಾಗಿ ತಪ್ಪಿಸಿಕೊಳ್ಳಬೇಕಾಗಬಹುದು. ಪ್ರತಿದಿನದ ಕೆಲಸಗಳನ್ನೇ ವಿಶೇಷವಾಗಿ ಮಾಡುವುದನ್ನು ಕಲಿಯಿರಿ.

ಸಿಂಹ: ಮಗಳ ಮದುವೆಯ ಜವಾಬ್ದಾರಿಯು ಹೆಂಡತಿಯ ತವರು ಮನೆಯವರ ಸಹಕಾರದಿಂದಾಗಿ ಸುಲಭವೆನಿಸುತ್ತದೆ. ತಾಂತ್ರಿಕ ಕ್ಷೇತ್ರದಲ್ಲಿರುವವರು ಸಾಧನೆಯನ್ನು ಮಾಡುವಿರಿ.

ಕನ್ಯಾ: ಸಮಯೋಚಿತ ಕಾರ್ಯ ನಡೆಸುವಲ್ಲಿ ಆಲಸ್ಯ, ವಾದ-ವಿವಾದಗಳಲ್ಲಿ ಪರಕೀಯರೊಡನೆ ವೈಷಮ್ಯ, ಪರಿವಾರದಲ್ಲಿ ಅಭಿಪ್ರಾಯ ಭೇದಗಳಿಂದ ತಾಪತ್ರಯಗಳಿಗೆ ಗುರಿಯಾಗುವಿರಿ. ಬಟ್ಟೆ ವ್ಯಾಪಾರಿಗಳಿಗೆ ಲಾಭವಿರುವುದು.

ತುಲಾ: ನೂತನ ಗೃಹ ಖರೀದಿ ಇಲ್ಲವೇ ಗೃಹ ನಿರ್ಮಾಣದಂತಹ ಕಾರ್ಯಗಳನ್ನು ಮುಂದೂಡುವುದು ಉತ್ತಮ. ಉದ್ವೇಗಕ್ಕೆ ಒಳಗಾಗದೆ ತಾಳ್ಮೆಯಿಂದ ವ್ಯವಹರಿಸಿದರೆ ನಿಮ್ಮ ಹಾದಿ ಸುಗಮವಾಗಿ ಸಾಗುತ್ತದೆ.

ವೃಶ್ಚಿಕ: ನಿಮ್ಮ ಸಹೋದ್ಯೋಗಿಗಳು ಕೆಲಸವನ್ನು ಮುಂದೆ ಹಾಕುತ್ತಿರುವುದು ನಿಮಗೆ ಗೊಂದಲವನ್ನು ಸೃಷ್ಟಿಸುತ್ತದೆ. ಹಣ್ಣು ತರಕಾರಿ ವ್ಯಾಪಾರಿಗಳಿಗೆ ಸರಕು ಸಾಗಾಣಿಕೆಯಲ್ಲಿ ತೊಂದರೆಗಳಾಗಬಹುದು.

ಧನು: ವಿದ್ಯಾರ್ಥಿಗಳು ನಿತ್ಯದ ಕೆಲಸದಲ್ಲಿ ತೋರಿದ ನಿರ್ಲಕ್ಷ್ಯದಿಂದಾಗಿ ಹೆಚ್ಚು ಹೊತ್ತು ಮನರಂಜನೆಗಳನ್ನೆಲ್ಲವನ್ನು ಬಿಟ್ಟು ಅಧ್ಯಯನದಲ್ಲಿ ತೊಡಗಬೇಕಾಗುತ್ತದೆ. ಮಕ್ಕಳೊಂದಿಗೆ ವಿದೇಶ ಪ್ರಯಾಣ ಮಾಡುವ ಸಂದರ್ಭ ಬರಲಿದೆ.

ಮಕರ: ಪತ್ತೇದಾರಿ ಕೆಲಸದಲ್ಲಿರುವವರಿಗೆ ನಿಮ್ಮ ಗುರುತು ಹಿಡಿದು ದಾರಿ ತಪ್ಪಿಸುವ ಕೆಲಸವನ್ನು ಕೆಲವರು ಮಾಡುವರು. ಈ ದಿನ ವ್ಯವಹರಿಸುವಾಗ ಪ್ರದರ್ಶಿಸಿದ ಬುದ್ಧಿವಂತಿಕೆಯು ಹೆಚ್ಚಿನ ಲಾಭಕ್ಕೆ ಕಾರಣವಾಗುವುದು.

ಕುಂಭ: ವೃತ್ತಿ ಜೀವನದಲ್ಲಿ ನಿಮಗೆ ಅನುಭವವೇ ಇರದಂತಹ ಸವಾಲನ್ನು ಇಂದು ಬುದ್ಧಿವಂತಿಕೆಯಿಂದ ಪರಿಹರಿಸುವಿರಿ. ವರ್ಗಾವಣೆಯ ಸಂದರ್ಭ ಬರಲಿದೆ. ಮದುವೆಯ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ದುಡುಕಬೇಡಿ.

ಮೀನ: ನಿಮ್ಮ ಚಟುವಟಿಕೆಗಳ ಒತ್ತಡದ ನಡುವೆಯು ಇತರರಿಗೆ ಸಹಾಯ ಮಾಡುವ ನಿಮ್ಮ ಪರೋಪಕಾರ ಮನೋಭಾವದಿಂದ ನಿಮಗೆ ಯಶಸ್ಸು ಲಭಿಸಲಿದೆ. ಆರ್ಥಿಕವಾಗಿ ಬೆಳೆಯುವ ಸದವಕಾಶವನ್ನು ಪಡೆಯಲಿದ್ದೀರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	26,032
ಇಂದಿನ ಅಂತ್ಯ:	25,986
ದಿನದ ಕನಿಷ್ಠ:	25,891
	46

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹675
	12 ಕ್ಕೆ	₹96
ಮೈಸೂರು:	100 ಕ್ಕೆ	₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹180.50
ಆರ್‌ಎಸ್‌ಎಸ್-5	₹175.50
ಗುಡ್ ಲಾಟ್	₹163

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹505-795
ದ್ವಿತಳಿ (ಬಿ.ವಿ)	₹388-886

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1530 (1520)
ಸೋಯಾ (ರಿಫೈನ್ಡ್)	₹1290 (1250)
ಸೂರ್ಯಕಾಂತಿ (ರಿಫೈನ್ಡ್)	₹1490 (1480)
ಪಾಮೋಲಿನ್	₹1260 (1250)

ಮುದ್ರೆಮನೆ ಕಾಫಿ

ಎಪಿ	₹28600
ಎಸಿ	₹15540
ಆರ್‌ಪಿ	₹18900
ಆರ್‌ಸಿ	₹10525

ಅಡಿಕೆ ಧಾರಣೆ

ಕುಮಟಾ		ಪುತ್ತೂರು			
ಚಾಲಿ	43999-48199	ಕೋಕ	20000-35000	ಬಿಳಿಗೋಟು	25771-38398
ಚಿಪ್ಪು	25029-34899	ಹೊಸತು	26000-41000	ಚಾಲಿ	44099-49499
ಕೋಕ	12099-31199	ಹಳತು	45000-54000	ಕೆಂಪುಗೋಟು	20099-35599
ಫ್ಯಾಕ್ಟರಿ	4599-23629	ಶಿರಸಿ		ರಾಶಿ	55299-59529
ಹೊಸಚಾಲಿ	33569-37319	ಬೆಟ್ಟೆ	42699-49499		

ದಾಖಲೆ ಮಟ್ಟಕ್ಕೆ ಕುಸಿದ ರೂಪಾಯಿ

ವಿದೇಶಿ ಹೂಡಿಕೆದಾರರಿಂದ ಷೇರುಗಳ ನಿರಂತರ ಮಾರಾಟ ಕುಸಿತಕ್ಕೆ ಕಾರಣ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಬುಧವಾರ ₹90.15ಕ್ಕೆ ಕುಸಿದಿದೆ. ರೂಪಾಯಿಯ ಮೌಲ್ಯವು ವಹಿವಾಟಿನ ಅಂತ್ಯಕ್ಕೆ 90ಕ್ಕಿಂತ ಕಡಿಮೆ ಮಟ್ಟಕ್ಕೆ ಬಂದಿರುವುದು ಇದೇ ಮೊದಲು.

ವಿದೇಶಿ ಬಂಡವಾಳದ ಹೊರಹರಿವು ನಿರಂತರವಾಗಿರುವುದು, ಕಚ್ಚಾ ತೈಲದ ಬೆಲೆಯು ಹೆಚ್ಚಳವಾಗಿರುವುದು ಕೂಡ ರೂಪಾಯಿ ಮೌಲ್ಯ ಕುಸಿಯಲು ಕಾರಣವಾಗಿವೆ. ಅಮೆರಿಕ ಮತ್ತು ಭಾರತದ ನಡುವೆ ವ್ಯಾಪಾರ ಒಪ್ಪಂದ ಏರ್ಪಡುವ ಬಗ್ಗೆ ಅನಿಶ್ಚಿತತೆ ಮುಂದುವರಿದಿರುವುದು, ರೂಪಾಯಿ ಮೌಲ್ಯ ಕುಸಿತವನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೆಚ್ಚಿನ ಯತ್ನ ನಡೆಸುತ್ತಿಲ್ಲದಿರುವುದು ರೂಪಾಯಿಯ ಮೇಲೆ ಒತ್ತಡ ಸೃಷ್ಟಿಸಿವೆ ಎಂದು ವರ್ತಕರು ಹೇಳಿದ್ದಾರೆ.

ಬುಧವಾರ ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು ₹89.96ರಷ್ಟು ಇತ್ತು. ದಿನದ ನಡುವೆ ಅದು ₹90.30ರವರೆಗೂ ಇಳಿದಿತ್ತು. ವಹಿವಾಟಿನ ಕೊನೆಯಲ್ಲಿ ಮೌಲ್ಯವು ₹90.15 ಆಗಿದೆ. ಮಂಗಳವಾರದ ಮೌಲ್ಯಕ್ಕೆ ಹೋಲಿಸಿದರೆ ಬುಧವಾರ ರೂಪಾಯಿ ಮೌಲ್ಯವು 19 ಪೈಸೆಯಷ್ಟು ಕುಸಿದಿದೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿದ್ದರೂ, ರೂಪಾಯಿ ದುರ್ಬಲ ಎನ್ನಲಾಗದು ಎಂದು ಎಸ್‌ಬಿಐನ ಆರ್ಥಿಕ ಸಂಶೋಧನಾ ವಿಭಾಗವು ವರದಿಯೊಂದರಲ್ಲಿ ಹೇಳಿದೆ.

ವಿದೇಶಿ ಹೂಡಿಕೆದಾರರು ಭಾರತದ ಷೇರುಪೇಟೆಗಳಲ್ಲಿ ನಿರಂತರವಾಗಿ ಷೇರು ಮಾರಾಟದಲ್ಲಿ ತೊಡಗಿರುವುದು ರೂಪಾಯಿ ಮೌಲ್ಯ ಕುಸಿಯುತ್ತಿರುವುದಕ್ಕೆ ಕಾರಣ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕ್ರಿಪ್ಟೊಕರೆನ್ಸಿಗಳಲ್ಲಿ ದಿಢೀರ್ ಕುಸಿತ ಉಂಟಾಗಿದ್ದುದು ಡಾಲರ್‌ಗೆ ಹೆಚ್ಚು ಬೇಡಿಕೆ ಬರುವಂತೆ ಮಾಡಿದೆ ಎಂದು ತಜ್ಞರು ಹೇಳಿದ್ದಾರೆ.

ಷೇರುಪೇಟೆಯ ಬುಧವಾರದ ವಹಿವಾಟಿನಲ್ಲಿ ವಿದೇಶಿ ಹೂಡಿಕೆದಾರರು ಒಟ್ಟು ₹3,206 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಬುಧವಾರ ಸೆನ್ಸೆಕ್ಸ್ ಮತ್ತು ನಿಫ್ಟಿ ಇಳಿಕೆ ಕಂಡಿವೆ.

ಸೇವಾ ಚಟುವಟಿಕೆ ಏರಿಕೆ: ದೇಶದ ಸೇವಾ ವಲಯದ ಚಟುವಟಿಕೆಗಳ ಮಟ್ಟವನ್ನು ಸೂಚಿಸುವ ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ನವೆಂಬರ್ ತಿಂಗಳಲ್ಲಿ 59.8ಕ್ಕೆ ಏರಿಕೆ ಕಂಡಿದೆ. ಇದು ಅಕ್ಟೋಬರ್‌ನಲ್ಲಿ 58.9ರಷ್ಟು ಇತ್ತು. ಹೊಸ ವಹಿವಾಟುಗಳಲ್ಲಿನ ಏರಿಕೆಯು ಈ ಬೆಳವಣಿಗೆಗೆ ಪೂರಕವಾಗಿ ಒದಗಿಬಂದಿದೆ.

‘ಸರ್ಕಾರಕ್ಕೆ ನಿದ್ದೆಗೆಡುವ ಸ್ಥಿತಿ ಉಂಟಾಗಿಲ್ಲ’

ನವದೆಹಲಿ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಕುಸಿಯುತ್ತಿರುವುದರಿಂದ ಸರ್ಕಾರವೇನೂ ನಿದ್ದೆಗೆಡುವಂತೆ ಆಗಿಲ್ಲ ಎಂದು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

ಬುಧವಾರದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು ₹90ಕ್ಕಿಂತ ಕೆಳಕ್ಕೆ ಬಂದಿದೆ. ರೂಪಾಯಿ ಮೌಲ್ಯ ಇಳಿಕೆಯು ಹಣದುಬ್ಬರ ಅಥವಾ ರಫ್ತಿನ ಮೇಲೆ ಪರಿಣಾಮ ಬೀರುತ್ತಿಲ್ಲ ಎಂದು ಹೇಳಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆಯು ರಫ್ತು ವೆಚ್ಚವನ್ನು ಕಡಿಮೆ ಮಾಡಲಿದ್ದು, ಆಮದು ವೆಚ್ಚವನ್ನು ಹೆಚ್ಚಿಸಲಿದೆ. ತಯಾರಿಕಾ ವೆಚ್ಚದಲ್ಲಿನ ಹೆಚ್ಚಳದಿಂದ ಹರಳು ಮತ್ತು ಆಭರಣಗಳು, ಪೆಟ್ರೋಲಿಯಂ ಮತ್ತು ಎಲೆಕ್ಟ್ರಾನಿಕ್ಸ್ ವಲಯಗಳು ಕಡಿಮೆ ಪ್ರಯೋಜನವನ್ನು ಪಡೆಯಲಿದ್ದು, ಹಣದುಬ್ಬರದ ಮೇಲೆ ಒತ್ತಡ ಹೇರುವ ನಿರೀಕ್ಷೆ ಇದೆ. ಆದಾಗ್ಯೂ, ಮುಂದಿನ ವರ್ಷದಲ್ಲಿ ರೂಪಾಯಿ ಮೌಲ್ಯದಲ್ಲಿ ಸುಧಾರಣೆ ಕಾಣುವ ನಿರೀಕ್ಷೆ ಇದೆ ಎಂದಿದ್ದಾರೆ.

ಪ್ರಸಕ್ತ ವರ್ಷದಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು ಶೇ 5ರಷ್ಟು ಕುಸಿದಿದೆ.

ಸುದ್ದಿ 2 ನಿಮಿಷ

ಕರ್ನಾಟಕದ ಸಹಕಾರ ಸಂಘಗಳ ಅಭಿವೃದ್ಧಿಗೆ ₹4,164 ಕೋಟಿ

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿನ ಸಹಕಾರ ಸಂಘಗಳ ಅಭಿವೃದ್ಧಿಗೆ ₹4,164 ಕೋಟಿ ನೀಡಲಾಗಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ನವೆಂಬರ್ 25ರವರೆಗೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮವು (ಎನ್‌ಸಿಡಿಸಿ) ದೇಶದಲ್ಲಿನ ಸಹಕಾರ ಸಂಸ್ಥೆಗಳ ಅಭಿವೃದ್ಧಿಗೆ ₹4.67 ಲಕ್ಷ ಕೋಟಿ ಮಂಜೂರು ಮಾಡಿದೆ. ಈ ಪೈಕಿ ಕರ್ನಾಟಕದಲ್ಲಿನ ಸಹಕಾರ ಸಂಘಗಳ ಅಭಿವೃದ್ಧಿಗೆ ₹4,164 ಕೋಟಿ ನೀಡಲಾಗಿದೆ ಎಂದು ಬುಧವಾರ ತಿಳಿಸಿದ್ದಾರೆ.

ರಾಷ್ಟ್ರೀಯ ಸಹಕಾರ ದತ್ತಾಂಶದ ಪ್ರಕಾರ, ಕರ್ನಾಟಕದಲ್ಲಿ 46,798 ಸಹಕಾರ ಸಂಘಗಳು ಇದ್ದು, ಅವು ಒಟ್ಟು 2.38 ಕೋಟಿ ಸದಸ್ಯರನ್ನು ಹೊಂದಿವೆ. 2021ರಲ್ಲಿ ಕೇಂದ್ರ ಸಹಕಾರ ಸಚಿವಾಲಯ ಆರಂಭವಾಯಿತು. ಅಂದಿನಿಂದ ‘ಸಹಕಾರದಿಂದ ಸಮೃದ್ಧಿ’ ಗುರಿ ಸಾಧಿಸಲು ಮತ್ತು ಕರ್ನಾಟಕ ಸೇರಿದಂತೆ ದೇಶದ ಎಲ್ಲೆಡೆ ಹೈನುಗಾರಿಕೆ, ಸಕ್ಕರೆ ಮತ್ತು ಕೃಷಿ ಸಹಕಾರ ಸಂಘಗಳ ಬಲವರ್ಧನೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಐಬಿಎಂ ಜೊತೆ ಕರ್ಣಾಟಕ ಬ್ಯಾಂಕ್ ಒಪ್ಪಂದ

ಬೆಂಗಳೂರು: ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ತನ್ನ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯ ಆಧುನೀಕರಣಕ್ಕೆ ಐಬಿಎಂ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಇದರಿಂದ ಬ್ಯಾಂಕ್‌ಗೆ ಸುರಕ್ಷಿತವಾದ, ಅಭಿವೃದ್ಧಿಪಡಿಸಬಹುದಾದ ಮತ್ತು ಹೊಂದಿಕೊಳ್ಳಬಲ್ಲ ಎಪಿಐ (ಅಪ್ಲಿಕೇಷನ್ ಪ್ರೋಗ್ರಾಮಿಂಗ್ ಇಂಟರ್‌ಫೇಸ್) ವೇದಿಕೆ ಸಿದ್ಧವಾಗಿದೆ. ಇದು ಬ್ಯಾಂಕ್‌ನ ಡಿಜಿಟಲ್ ಮೂಲಸೌಕರ್ಯವನ್ನು ಬಲಪಡಿಸುವುದರ ಜೊತೆಗೆ ಕಾರ್ಯಾಚರಣೆ ವೆಚ್ಚವನ್ನು ಕಡಿಮೆ ಮಾಡಿದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಈ ವೇದಿಕೆಯಿಂದ ಡಿಜಿಟಲ್ ಪಾವತಿ, ಸಾಲ ಪ್ರಕ್ರಿಯೆಯಂತಹ ಸೇವೆಗಳನ್ನು ಬಹಳ ವೇಗವಾಗಿ ಒದಗಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ‘ಇದು ಬ್ಯಾಂಕ್‌ನ ಡಿಜಿಟಲ್ ಪಯಣದಲ್ಲಿ ಬಹುದೊಡ್ಡ ಮೈಲುಗಲ್ಲು. ಇದರಿಂದ ದೇಶದಾದ್ಯಂತ ಬ್ಯಾಂಕ್‌ನ ಕಾರ್ಯಾಚರಣೆ ವಿಸ್ತರಿಸುವುದು, ಖರ್ಚು ಕಡಿಮೆ ಮಾಡುವುದು ಸಾಧ್ಯವಾಗಲಿದೆ’ ಎಂದು ಬ್ಯಾಂಕ್‌ನ ಮುಖ್ಯ ಮಾಹಿತಿ ಅಧಿಕಾರಿ ವೆಂಕಟ್ ಕೃಷ್ಣನ್ ಹೇಳಿದ್ದಾರೆ.

ಬಹಿಷ್ಕಾರ ಶಿಕ್ಷಾರ್ಹ ಅಪರಾಧ

ಒಂದನೇ ಪುಟದಿಂದ...

ಪ್ರಥಮ ದರ್ಜೆ ನ್ಯಾಯಾಧೀಶರಿಗೆ ವಿಚಾರಣೆಯ ಅಧಿಕಾರ ನೀಡಲಾಗಿದೆ. ನೇರವಾಗಿ ಸಲ್ಲಿಕೆಯಾದ ದೂರಿನ ತನಿಖೆ ನಡೆಸುವಂತೆ ನ್ಯಾಯಾಧೀಶರು ಆದೇಶಿಸಬಹುದು. ಪೀಡಿತರಿಗೆ ಸಹಾಯ ಒದಗಿಸಲು ಸೂಚಿಸಬಹುದು. ದಂಡದ ಮೊತ್ತವನ್ನು ಪೀಡಿತರಿಗೆ ಪರಿಹಾರವಾಗಿ ನೀಡಲು ನಿರ್ದೇಶನ ನೀಡಬಹುದು.

ಸಾಮಾಜಿಕ ಬಹಿಷ್ಕಾರದಂತಹ ನಿರ್ಧಾರ ತೆಗೆದುಕೊಳ್ಳಲು ನಡೆಸುವ ಸಭೆಗಳ ಕುರಿತು ಮಾಹಿತಿ ಬಂದರೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ನಿಷೇಧಿಸುವ ಆದೇಶ ಹೊರಡಿಸಬಹುದು. ಗ್ರೂಪ್-ಎ ಅಧಿಕಾರಿಗಳನ್ನು ಸಾಮಾಜಿಕ ಬಹಿಷ್ಕಾರ ತಡೆ ಅಧಿಕಾರಿಗಳನ್ನಾಗಿ ನಿಯೋಜಿಸಬಹುದು. ಈ ಅಧಿಕಾರಿಗಳು ಕಾಯ್ದೆಯ ಜಾರಿ, ಪ್ರಕರಣ ಪತ್ತೆ, ಮತ್ತು ನ್ಯಾಯಾಲಯಕ್ಕೆ ಸಹಕಾರದ ನೀಡುವ ಹೊಣೆಗಾರಿಕೆ ನಿಭಾಯಿಸಲಿದ್ದಾರೆ. ಪರಿಸ್ಥಿತಿಗೆ ಅನುಗುಣವಾಗಿ ಪೊಲೀಸರಿಗೆ ಸಲಹೆ, ಸೂಚನೆ ನೀಡಬಹುದು.

‘ಸಾಮಾಜಿಕ ಸುಧಾರಣೆ, ಜನ ಸಾಮಾನ್ಯರ ಕಲ್ಯಾಣದ ದೃಷ್ಟಿಯಿಂದ ಸಾಮಾಜಿಕ ಬಹಿಷ್ಕಾರವನ್ನು ನಿಷೇಧಿಸುವುದು ಅಗತ್ಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಘನತೆಗೆ ಭಾರತ ಸಂವಿಧಾನದಲ್ಲಿ ಆದ್ಯತೆ ನೀಡಲಾಗಿದ್ದು, ಸಮಾಜದಲ್ಲಿ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಮೇಲೆ ಸಾಮಾಜಿಕ ಬಹಿಷ್ಕಾರ ಹೇರುವುದು ಸಂವಿಧಾನದ ಭಾಗ-3ರ ಅಡಿ ನೀಡಲಾದ ಮೂಲಭೂತ ಹಕ್ಕುಗಳ ಉಲ್ಲಂಘನೆ. ರಾಜ್ಯದ ವಿವಿಧ ಭಾಗಗಳಲ್ಲಿ ಸಾಮಾಜಿಕ ಬಹಿಷ್ಕಾರದ ಅಮಾನುಷ ಪದ್ಧತಿ ಇನ್ನೂ ಮುಂದುವರಿದಿದೆ. ಅದರ ನಿರ್ಮೂಲನೆಗೆ ಮಸೂದೆ ಸಿದ್ಧಪಡಿಸಲಾಗಿದೆ’ ಎನ್ನುತ್ತಾರೆ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿ ನೆನಪು

ಪ್ರಿಯಾಂಕ ಶ್ರೀನಿವಾಸ್
04 12 1982 - 07 08 2001
ನಮ್ಮ ಜೀವನದಲ್ಲಿ
ನೀ ಇಲ್ಲದೆ ಇರಬಹುದು
ಆದರೆ ನಮ್ಮ ಹೃದಯದಲ್ಲಿ
ನೀ ಸದಾ ಇರುವೆ
ಲತಾ ಶ್ರೀನಿವಾಸ್
ಕೆ.ಆರ್.ಶ್ರೀನಿವಾಸ್, ಐ.ಎ.ಎಸ್., (ನಿವೃತ್ತ)
ಪ್ರಜ್ವಲ್ ಮತ್ತು ಐಶ್ವರ್ಯ

ಪಾನ್ ಮಸಾಲಾ ಮೇಲೆ ಬೆಲೆ ನಮೂದು ಕಡ್ಡಾಯ

ನವದೆಹಲಿ (ಪಿಟಿಐ): ಪಾನ್ ಮಸಾಲಾ ಪೊಟ್ಟಣಗಳ ಮೇಲೆ ಚಿಲ್ಲರೆ ಮಾರಾಟ ದರವನ್ನು (ಆರ್‌ಎಸ್‌ಪಿ) ನಮೂದು ಮಾಡುವುದು ಕಡ್ಡಾಯ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ಹೇಳಿದೆ.

ಪೊಟ್ಟಣಗಳ ಗಾತ್ರ ಯಾವುದೇ ಇರಲಿ, ಅದರಲ್ಲಿ ಇರುವ ಉತ್ಪನ್ನದ ತೂಕ ಎಷ್ಟೇ ಇರಲಿ, ಆರ್‌ಎಸ್‌ಪಿ ಹಾಗೂ ‘ಕಾನೂನು ಮಾಪನಶಾಸ್ತ್ರ (ಪೊಟ್ಟಣದಲ್ಲಿನ ಸರಕುಗಳು) ನಿಯಮ–2011’ರ ಅಡಿಯಲ್ಲಿ ಹೇಳಿರುವ ಸಂಗತಿಗಳನ್ನು ನಮೂದು ಮಾಡುವುದು ಕಡ್ಡಾಯ ಎಂದು ಇಲಾಖೆಯು ಸ್ಪಷ್ಟಪಡಿಸಿದೆ.

ಈ ಆದೇಶ ಫೆಬ್ರುವರಿ 1ರಿಂದ ಅನ್ವಯವಾಗಲಿದೆ. 10 ಗ್ರಾಂ ಹಾಗೂ ಅದಕ್ಕಿಂತ ಕಡಿಮೆ ತೂಕದ ಪೊಟ್ಟಣಗಳಲ್ಲಿ ಕೆಲವು ವಿವರಗಳನ್ನು ನೀಡುವ ಅಗತ್ಯ ಇಲ್ಲ ಎಂದು ಈ ಹಿಂದೆ ವಿನಾಯಿತಿ ನೀಡಲಾಗಿತ್ತು. ಆದರೆ ಈಗಿನ ಆದೇಶವು ವಿನಾಯಿತಿಗಳನ್ನು ಇಲ್ಲವಾಗಿಸಲಿದೆ.

ಮುಂಬೈ ಧಾರಣೆ (ಶೇಂಗಾ)

03-12-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1540 (1530)
ಒಂದು ವಾರದ ಡೆಲಿವರಿ	1535 (1525)
ಪಾಮ್ ವಾರದ ಡೆಲಿವರಿ	1258 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1430)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,28,200 (1,27,400)
ಬೆಳ್ಳಿ ಕೆ.ಜಿಗೆ	1,80,000 (1,74,750)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹28200-28200
ಬೆಂಗಳೂರು	₹28000-30000
ತುಮಕೂರು	₹18500-24000

ತಂಬಾಕು ಉತ್ಪನ್ನಗಳ ಮೇಲೆ ಅಬಕಾರಿ ಸುಂಕ ಮಸೂದೆಗೆ ಅನುಮೋದನೆ

ನವದೆಹಲಿ (ಪಿಟಿಐ): ತಂಬಾಕು ಮತ್ತು ಅದಕ್ಕೆ ಸಂಬಂಧಿಸಿದ ಉತ್ಪನ್ನಗಳ ಮೇಲೆ ಹೆಚ್ಚಿನ ಅಬಕಾರಿ ಸುಂಕ ವಿಧಿಸುವ ಮಸೂದೆಯನ್ನು ಲೋಕಸಭೆ ಬುಧವಾರ ಅಂಗೀಕರಿಸಿದೆ.

ಕೇಂದ್ರ ಅಬಕಾರಿ (ತಿದ್ದುಪಡಿ) ಮಸೂದೆ–2025 ಅನ್ನು ಲೋಕಸಭೆಯಲ್ಲಿ ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಪ್ರಸ್ತುತ ಜಾರಿಯಲ್ಲಿರುವ ತೆರಿಗೆ ಪರಿಹಾರದ ಸ್ವರೂಪವು 2026ರ ಮಾರ್ಚ್ ವೇಳೆಗೆ ಸ್ಥಗಿತಗೊಳ್ಳುವ ಸಾಧ್ಯತೆಯಿದೆ. ಈ ಮಸೂದೆ ಜಾರಿಗೆ ಬಂದ ನಂತರ ಸಿಗರೇಟ್, ಜಗಿಯುವ ತಂಬಾಕು, ಸಿಗಾರ್, ಹುಕ್ಕಾ, ಜರ್ದಾ ಮತ್ತು ಪರಿಮಳಯುಕ್ತ ತಂಬಾಕಿನಂತಹ ಎಲ್ಲ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಗರಿಷ್ಠ ಮಟ್ಟದಲ್ಲೇ ಮುಂದುವರಿಸಲು ಅವಕಾಶ ಸಿಗುತ್ತದೆ.

ಪ್ರಸ್ತುತ, ತಂಬಾಕು ಮತ್ತು ಸಂಬಂಧಿತ ಉತ್ಪನ್ನಗಳ ಮೇಲೆ ಶೇ 28ರಷ್ಟು ಜಿಎಸ್‌ಟಿ ಜೊತೆಗೆ ವಿವಿಧ ತೆರಿಗೆ ವಿಧಿಸಲಾಗುತ್ತಿದೆ.

ಈ ಮಸೂದೆಯು, ತಯಾರಿಸದ ತಂಬಾಕಿನ ಮೇಲೆ ಶೇ 60–70ರಷ್ಟು ಅಬಕಾರಿ ಸುಂಕ ವಿಧಿಸಲು ಪ್ರಸ್ತಾಪಿಸುತ್ತದೆ. ಸಿಗಾರ್ ಮತ್ತು ಚುಟ್ಟ ಮೇಲಿನ ಅಬಕಾರಿ ಸುಂಕವು ಶೇ 25ರಷ್ಟು ಅಥವಾ ಒಂದು ಸಾವಿರ ಸಿಗಾರ್ ಮೇಲೆ ₹5 ಸಾವಿರ ಯಾವುದು ಹೆಚ್ಚೋ ಅದನ್ನು ಪ್ರಸ್ತಾಪಿಸಲಾಗಿದೆ.

ಉದ್ದವಿರುವ ಹಾಗೂ ಫಿಲ್ಟರ್ ಆಧರಿಸಿ ಒಂದು ಸಾವಿರ ಸಿಗರೇಟ್ ಮೇಲೆ ₹2,700ರಿಂದ ₹11 ಸಾವಿರವರೆಗೆ ತೆರಿಗೆ ವಿಧಿಸಲು ಪ್ರಸ್ತಾಪಿಸಲಾಗಿದೆ. ಆದರೆ, ಜಗಿಯುವ ತಂಬಾಕಿಗೆ ಪ್ರತಿ ಕೆ.ಜಿಗೆ ₹100ವರೆಗೆ ತೆರಿಗೆ ವಿಧಿಸಲಾಗುತ್ತದೆ.

ಛತ್ತೀಸಗಢ: 12 ನಕ್ಸಲರ ಹತ್ಯೆ

ಬಿಜಾಪುರ (ಛತ್ತೀಸಗಢ) (ಪಿಟಿಐ): ಇಲ್ಲಿನ ಗಂಗಲೂರು ಅರಣ್ಯ ಪ್ರದೇಶದಲ್ಲಿ ನಕ್ಸಲರು ಹಾಗೂ ಭದ್ರತಾ ಸಿಬ್ಬಂದಿಯ ನಡುವೆ ಬುಧವಾರ ಗುಂಡಿನ ಚಕಮಕಿ ನಡೆದಿದೆ. ಘಟನೆಯಲ್ಲಿ 12 ಮಂದಿ ನಕ್ಸಲರನ್ನು ಹೊಡೆದುರುಳಿಸಲಾಗಿದ್ದು, ಜಿಲ್ಲಾ ಮೀಸಲು ಪೊಲೀಸ್ ಪಡೆಯ (ಡಿಆರ್‌ಜಿ) ಮೂವರು ಸಿಬ್ಬಂದಿ ಮೃತಪಟ್ಟಿದ್ದಾರೆ.

ರಾಜ್ಯ ಪೊಲೀಸರ ಡಿಆರ್‌ಜಿ ಘಟಕ ಹಾಗೂ ವಿಶೇಷ ಕಾರ್ಯಪಡೆ ಮತ್ತು ಸಿಆರ್‌ಪಿಎಫ್‌ನ ಕೋಬ್ರಾ ತುಕಡಿಯ ಸಿಬ್ಬಂದಿ ಜಂಟಿಯಾಗಿ ನಕ್ಸಲ್ ನಿಗ್ರಹ ಕಾರ್ಯಾಚರಣೆಗೆ ಮುಂದಾಗಿದ್ದರು. ಈ ವೇಳೆ ಗುಂಡಿನ ಚಕಮಕಿ ನಡೆದಿದೆ.

ಮುಖ್ಯ ಕಾನ್‌ಸ್ಟೆಬಲ್ ಮೋನು ವಡಾದಿ, ಕಾನ್‌ಸ್ಟೆಬಲ್ ದುಕಾರು ಗೋಂಡೆ ಹಾಗೂ ಜವಾನ್ ರಮೇಶ್ ಸೋಧಿ ಅವರು ಮೃತಪಟ್ಟಿದ್ದಾರೆ. ಡಿಆರ್‌ಜಿಯ ಇನ್ನಿಬ್ಬರು ಸಿಬ್ಬಂದಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನಾ ಸ್ಥಳದಿಂದ ಸಿಂಗಲ್ ಲೋಡಿಂಗ್ ರೈಫಲ್ಸ್, ಇನ್ಸಾಸ್ ರೈಫಲ್ಸ್, .303 ರೈಫಲ್ಸ್ ಹಾಗೂ ಇತರೆ ಮದ್ದುಗುಂಡು, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಮೃತ ನಕ್ಸಲರ ಗುರುತನ್ನು ಪತ್ತೆಹಚ್ಚಬೇಕಿದ್ದು, ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂದೂ ಮಾಹಿತಿ ನೀಡಿದ್ದಾರೆ.

‘ನಾಯಕತ್ವದ ಮಾದರಿ ಬದಲಾಗಬೇಕು’

ಮುಂಬೈ (ಪಿಟಿಐ): ಕೃತಕ ಬುದ್ಧಿಮತ್ತೆಯ (ಎ.ಐ) ಕಾಲಘಟ್ಟದಲ್ಲಿ ಕಂಪನಿಗಳ ಆಡಳಿತ ಮಂಡಳಿಗಳು ತೆರೆಯ ಹಿಂದಿನಿಂದ ಮಾರ್ಗದರ್ಶನ ನೀಡುವ ನಾಯಕತ್ವದ ಮಾದರಿಗೆ ಆದ್ಯತೆ ನೀಡಬೇಕು ಎಂದು ಜಾಗತಿಕ ಮಟ್ಟದ ಉದ್ದಿಮೆಗಳ ಸಲಹೆಗಾರ ರಾಮ್ ಚರಣ್ ಅವರು ಹೇಳಿದ್ದಾರೆ.

ಎ.ಐ. ಕಾಲಘಟ್ಟದಲ್ಲಿ ಸಿಇಒ ಆಯ್ಕೆ ಮತ್ತು ನಾಯಕತ್ವದ ಸ್ಥಾನದಲ್ಲಿರುವವರ ವರ್ತನೆಗಳು ಯಾವ ಕಂಪನಿಯು ಬೆಳವಣಿಗೆ ಕಾಣುತ್ತದೆ ಎಂಬುದನ್ನು ನಿರ್ಧರಿಸುತ್ತವೆ; ತಂತ್ರಜ್ಞಾನವೊಂದೇ ಇಲ್ಲಿ ಪರಿಗಣಿತವಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

‘ಮುನೀರ್‌ಗೆ ಭಾರತದ ಜತೆ ಯುದ್ಧ ಮಾಡುವ ಹಪಾಹಪಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪಾಕಿಸ್ತಾನದ ಸೇನೆ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಒಬ್ಬ ಮುಸ್ಲಿಂ ಮೂಲಭೂತವಾದಿಯಾಗಿದ್ದು, ಆತ ಸದಾ ಭಾರತದೊಂದಿಗೆ ಯುದ್ಧ ನಡೆಸಲು ಹಪಾಹಪಿಸುತ್ತಾನೆ’ ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಸಹೋದರಿ ಅಲೀಮಾ ಖಾನ್ ಹೇಳಿದ್ದಾರೆ.

ಸ್ಕೈ ನ್ಯೂಸ್ ಎಂಬ ಮಾಧ್ಯಮ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅಲೀಮಾ ಈ ಹೇಳಿಕೆ ನೀಡಿದ್ದಾರೆ.

ಭಾರತ ಮತ್ತು ಪಾಕಿಸ್ತಾನದ ನಡುವೆ ಮೇ ತಿಂಗಳಲ್ಲಿ ನಡೆದ ಯುದ್ಧಕ್ಕೆ ಕಾರಣ ಏನಿರಬಹುದು ಎಂಬ ಪ್ರಶ್ನೆಗೆ ಅಲೀಮಾ ಈ ಉತ್ತರ ನೀಡಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

‘ಬಾಂಗ್ಲಾದ ಗರ್ಭಿಣಿಗೆ ಪ್ರವೇಶ: ಪರಿಗಣಿಸಲು ಆದೇಶ’

ನವದೆಹಲಿ (ಪಿಟಿಐ): ಈ ವರ್ಷದ ಆರಂಭದಲ್ಲಿ ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಲಾದ ಗರ್ಭಿಣಿ ಹಾಗೂ ಆಕೆಯ ಮಗುವಿಗೆ ಮಾನವೀಯತೆ ಆಧಾರದಲ್ಲಿ ಭಾರತ ಪ್ರವೇಶಿಸಲು ಅವಕಾಶ ಮಾಡಿಕೊಡುವುದನ್ನು ಪರಿಗಣಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು, ಪಶ್ಚಿಮ ಬಂಗಾಳದ ಮಾಲ್ದಾದಲ್ಲಿರುವ ಭಾರತ- ಬಾಂಗ್ಲಾದೇಶ ಗಡಿ ಮೂಲಕ ಪ್ರವೇಶಿಸಲು ಮಹಿಳೆಗೆ ಅವಕಾಶ ನೀಡುವ ಬಗ್ಗೆ ಸೂಚನೆ ನೀಡುವಂತೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಕೇಳಿತು. ‘ನ್ಯಾಯಾಲಯವು ಪ್ರಕರಣವನ್ನು ಮಾನವೀಯ ಆಧಾರದಲ್ಲಿ ಪರಿಗಣಿಸಲು ಕೇಳುತ್ತಿದೆ. ಈ ವಿಷಯದ ಬಗ್ಗೆ ನಮಗೆ ಎರಡು ದಿನ ಕಾಲಾವಕಾಶ ನೀಡಿ. ಈ ಕುರಿತು ಪರಿಶೀಲಿಸುತ್ತೇವೆ’ ಎಂದು ತುಷಾರ್ ಮೆಹ್ತಾ ಹೇಳಿದರು.

ಬಾಂಗ್ಲಾದೇಶದ ಹಲವು ಅಕ್ರಮ ವಲಸಿಗರನ್ನು ಭಾರತವು ಗಡಿಪಾರು ಮಾಡಿದೆ. ಇದನ್ನು ಪ್ರಶ್ನಿಸಿ ಗರ್ಭಿಣಿಯ ತಂದೆ ಕಲ್ಕತ್ತ ಹೈಕೋರ್ಟ್ ಮೊರೆ ಹೋಗಿದ್ದರು. ಗಡೀಪಾರು ಮಾಡಲಾದ 6 ಮಂದಿಯನ್ನು ಒಂದು ತಿಂಗಳೊಳಗಾಗಿ ಭಾರತಕ್ಕೆ ಮರಳಿ ಕರೆಸುವಂತೆ ಹೈಕೋರ್ಟ್ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ಕೇಂದ್ರವು ಸುಪ್ರೀಂ ಮೊರೆ ಹೋಗಿದೆ.

ಸಂಚಾರ ಸಾಥಿ: ಆದೇಶ ಹಿಂದಕ್ಕೆ

ಒಂದನೇ ಪುಟದಿಂದ...

ಈ ಬೆಳವಣಿಗೆಗಳ ಬೆನ್ನಲ್ಲೇ ಕೇಂದ್ರ ಸರ್ಕಾರ, ‘ಸಂಚಾರ ಸಾಥಿ’ ಆ್ಯಪ್‌ನ ಕಡ್ಡಾಯ ಅಳವಡಿಕೆ ಆದೇಶವನ್ನು ಹಿಂದಕ್ಕೆ ಪಡೆದಿರುವುದಾಗಿ ಘೋಷಿಸಿದೆ.

‘ಗೂಢಚಾರಿಕೆ ಸಾಧ್ಯವಿಲ್ಲ’– ಸಿಂಧಿಯಾ: ಇದಕ್ಕೂ ಮುನ್ನ, ವಿರೋಧ ಪಕ್ಷಗಳ ಆಕ್ಷೇಪಗಳ ಕುರಿತು ಲೋಕಸಭೆಯಲ್ಲಿ ಮಾತನಾಡಿದ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ‘ಈ ಅಪ್ಲಿಕೇಷನ್ ಮೂಲಕ ಕಣ್ಗಾವಲು ಅಥವಾ ಬೇಹುಗಾರಿಕೆ ನಡೆಸಲು ಆಗುವುದಿಲ್ಲ. ಮೊಬೈಲ್‌ಗಳಲ್ಲಿ ಈ ಆ್ಯಪ್ ಅಳವಡಿಕೆ ಕುರಿತ ಆದೇಶದಲ್ಲಿ ಬದಲಾವಣೆಗಳನ್ನು ಮಾಡಲು ಸಚಿವಾಲಯ ಸಿದ್ಧವಿದೆ’ ಎಂದು ಹೇಳಿದರು.

‘ಬಳಕೆದಾರರು ಆ್ಯಪ್‌ನಲ್ಲಿ ನೋಂದಾಯಿಸಿಕೊಳ್ಳದಿದ್ದರೆ ಅದು ಕಾರ್ಯ ನಿರ್ವಹಿಸುವುದಿಲ್ಲ. ಅಲ್ಲದೆ ಅವರು ಆ್ಯಪ್ ಅನ್ನು ಅಳಿಸಬಹುದು’ ಎಂದು ಅವರು ಪುನರುಚ್ಚರಿಸಿದರು.

ಸರ್ಕಾರದ ವಿರುದ್ಧ ಕಾಂಗ್ರೆಸ್ ಟೀಕೆ: ಕಾಂಗ್ರೆಸ್ ಸಂಸದ ದೀಪೇಂದರ್ ಸಿಂಗ್ ಹೂಡಾ ಅವರು ‘ಸಂಚಾರ ಸಾಥಿ’ ಆ್ಯಪ್ ಅಳವಡಿಕೆಯಿಂದ ನಾಗರಿಕರ ಮೇಲೆ ಗೂಢಚಾರಿಕೆ ಮಾಡಿದಂತೆ ಆಗುತ್ತದೆ. ಇದು ಸರಿಯಲ್ಲ’ ಎಂದು ಕಳವಳ ವ್ಯಕ್ತಪಡಿಸಿದರು.

‘ಆ್ಯಪ್ ನಿಷ್ಕ್ರಿಯಗೊಳಿಸಿದ ಬಳಿಕವೂ, ಅದರ ಎಲ್ಲ ವೈಶಿಷ್ಟ್ಯಗಳು ನಿಷ್ಕ್ರಿಯವಾಗಿವೆಯೋ, ಇಲ್ಲವೋ ಎಂಬುದು ಬಳಕೆದಾರರಿಗೆ ತಿಳಿಯಲು ಸಾಧ್ಯವಾಗುವುದಿಲ್ಲ. ಇದು ಖಾಸಗಿತನದ ಹಕ್ಕಿನ ಉಲ್ಲಂಘನೆಯಾಗುತ್ತದೆ. ಅಲ್ಲದೆ ಬೇಹುಗಾರಿಕೆಯ ಶಂಕೆ ಮೂಡುತ್ತದೆ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ‘ಈ ಆ್ಯಪ್ ಅನ್ನು ಸರ್ಕಾರ ಭಿನ್ನಮತೀಯರ ವಿರುದ್ಧ ಬಳಸಬಹುದು. ಇದರಿಂದ ಪತ್ರಕರ್ತರು, ವಿರೋಧ ಪಕ್ಷದ ನಾಯಕರ ವಿರುದ್ಧ ಬೇಹುಗಾರಿಕೆ ನಡೆಸಬಹುದು’ ಎಂದು ಆರೋಪಿಸಿದರು.

‘ಅಲ್ಲದೆ ಜನರ ಬ್ಯಾಂಕ್ ಖಾತೆ ಸಂಖ್ಯೆಗಳು, ಪಾಸ್‌ವರ್ಡ್‌ಗಳು, ವೈಯಕ್ತಿಕ ದತ್ತಾಂಶ ಸೇರಿದಂತೆ ಸೂಕ್ಷ್ಮ ಮಾಹಿತಿ ಬಹಿರಂಗ ಆಗಬಹುದಾದ ಅಪಾಯವೂ ಇದೆ’ ಎಂದು ಅವರು ಎಚ್ಚರಿಸಿದರು.

ಆದೇಶದಲ್ಲಿ ಏನಿತ್ತು?: ಭಾರತದಲ್ಲಿ ಮಾರಾಟವಾಗುವ ಎಲ್ಲ ಮೊಬೈಲ್‌ಗಳಲ್ಲಿ ಮತ್ತು ಈಗಾಗಲೇ ಬಳಕೆಯಲ್ಲಿರುವ ಮೊಬೈಲ್‌ಗಳಲ್ಲಿ ಸಾಫ್ಟ್‌ವೇರ್ ನವೀಕರಣದ ಮೂಲಕ ‘ಸಂಚಾರ ಸಾಥಿ’ ಆ್ಯಪ್ ಅನ್ನು ಕಡ್ಡಾಯವಾಗಿ ಅಳವಡಿಸುವಂತೆ ಎಲ್ಲ ಮೊಬೈಲ್ ಫೋನ್ ತಯಾರಕ ಕಂಪನಿಗಳಿಗೆ ಕೇಂದ್ರ ಸರ್ಕಾರ ನವೆಂಬರ್ 28ರಂದು ಆದೇಶಿಸಿತ್ತು. ಇದು ವಿವಾದಕ್ಕೆ ಕಾರಣವಾಗಿತ್ತು.

ಜನರ ದಾರಿತಪ್ಪಿಸಲು ಸ್ಪಷ್ಟನೆ: ಖೇರಾ ಆರೋಪ

‘ಕೇಂದ್ರ ಸರ್ಕಾರವು ಸಂಚಾರ ಸಾಥಿ ಆ್ಯಪ್ ಮೂಲಕ ನಾಗರಿಕರ ಮೇಲೆ ಕಣ್ಗಾವಲಿಡಲು ಮುಂದಾಗಿರುವುದು ಲಜ್ಜೆಗೇಡಿ ನಡೆ. ಈ ವಿಷಯದಲ್ಲಿ ಸರ್ಕಾರ ಸಿಕ್ಕಿಬಿದ್ದಾಗ, ಜನರ ದಾರಿತಪ್ಪಿಸಲು ಸ್ಪಷ್ಟೀಕರಣ ನೀಡುತ್ತಿದೆ’ ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಆರೋಪಿಸಿದರು.

10 ಪಟ್ಟು ಹೆಚ್ಚಿದ ಆ್ಯಪ್ ಅಳವಡಿಕೆ

ನವದೆಹಲಿ: ‘ಸಂಚಾರ ಸಾಥಿ’ ಆ್ಯಪ್ ಕಡ್ಡಾಯ ಅಳವಡಿಕೆ ಆದೇಶ ಹೊರಬಿದ್ದ ಬೆನ್ನಲ್ಲೇ ಮೊಬೈಲ್ ಬಳಕೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತವಾಗಿ ಅದನ್ನು ಅಳವಡಿಸಿಕೊಳ್ಳುತ್ತಿದ್ದಾರೆ ಎಂದು ದೂರಸಂಪರ್ಕ ಇಲಾಖೆ ತಿಳಿಸಿದೆ.

ಕೇವಲ ಒಂದು ದಿನದಲ್ಲಿ 6 ಲಕ್ಷಕ್ಕೂ ಹೆಚ್ಚು ಮೊಬೈಲ್ ಬಳಕೆದಾರರು ಸ್ವಯಂ ಪ್ರೇರಿತವಾಗಿ ಈ ಆ್ಯಪ್ ಅಳವಡಿಸಿಕೊಂಡಿದ್ದಾರೆ. ಅಂದರೆ ಅಳವಡಿಕೆ ಪ್ರಕ್ರಿಯೆ 10 ಪಟ್ಟು ಏರಿಕೆಯಾಗಿದೆ. ಇದರಿಂದ ಒಟ್ಟಾರೆ ಈ ಅಪ್ಲಿಕೇಷನ್ ಬಳಕೆದಾರರ ಸಂಖ್ಯೆ 1.5 ಕೋಟಿ ಆಗಿದೆ ಎಂದು ಅದು ಮಾಹಿತಿ ನೀಡಿದೆ.

‘ಜನರು ತಾವಾಗಿಯೇ ಈ ಆ್ಯಪ್ ಅಳವಡಿಸಿಕೊಳ್ಳಲು ಉತ್ಸುಕತೆ ತೋರುತ್ತಿದ್ದಾರೆ’ ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ರಷ್ಯಾದಿಂದ ಭಾರತಕ್ಕೆ ಯುದ್ಧೋಪಕರಣಗಳ ತ್ವರಿತ ಪೂರೈಕೆ ಕುರಿತು ಮಾತು

ಭಾರತಕ್ಕೆ ಇಂದು ಪುಟಿನ್ ಭೇಟಿ

ನವದೆಹಲಿ (ಪಿಟಿಐ): ಭಾರತ–ರಷ್ಯಾದ 23ನೇ ವಾರ್ಷಿಕ ಶೃಂಗಸಭೆಗಾಗಿ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಡಿ.4, 5ರಂದು ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಪುಟಿನ್ ಅವರೊಂದಿಗೆ ಔತಣಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ರಷ್ಯಾದ ರಕ್ಷಣಾ ಸಚಿವ ಆಂಡ್ರೆ ಬೆಲೊಸೊವ್ ಅವರು ಗುರುವಾರ ಮಾತುಕತೆ ನಡೆಸಲಿದ್ದಾರೆ.

ಪುಟಿನ್ ಅವರ ನಿಯೋಗದಲ್ಲಿ ಆಂಡ್ರೆ ಬೆಲೊಸೊವ್ ಕೂಡ ಇದ್ದಾರೆ.

ಎಸ್– 400 ಕ್ಷಿಪಣಿ ವ್ಯವಸ್ಥೆಗಳ ಖರೀದಿ, ಸುಖೋಯ್–30 ಎಂಕೆಐ ಯುದ್ಧ ವಿಮಾನಗಳನ್ನು ಮೇಲ್ದರ್ಜೆಗೇರಿಸುವುದು ಹಾಗೂ ರಷ್ಯಾದಿಂದ ಇತರ ಮಿಲಿಟರಿ ಸಾಧನಗಳನ್ನು ಖರೀದಿಸುವುದರಲ್ಲಿ ಭಾರತದ ಆಸಕ್ತಿ ಕುರಿತು ಉಭಯ ನಾಯಕರು ಮಾತುಕತೆ ನಡೆಸಲಿದ್ದಾರೆ.

ರಷ್ಯಾದಿಂದ ಭಾರತಕ್ಕೆ, ಯುದ್ಧೋಪಕರಣಗಳ ತ್ವರಿತ ಪೂರೈಕೆ ಹಾಗೂ ಎರಡೂ ದೇಶಗಳ ನಡುವಿನ ರಕ್ಷಣೆ ಮತ್ತು ಭದ್ರತಾ ಸಂಬಂಧಗಳನ್ನು ಮತ್ತಷ್ಟು ವಿಸ್ತರಿಸುವ ಗುರಿ ಇದೆ ಎಂದು ಸೇನೆಯ ಅಧಿಕಾರಿಗಳು ತಿಳಿಸಿದರು.

‘ಅಣು ಸಹಕಾರ: ಭಾರತದ ಜೊತೆ ಒಪ್ಪಂದ’

ಮಾಸ್ಕೊ (ಪಿಟಿಐ): ನಾಗರಿಕ ಅಣುಶಕ್ತಿ ಕ್ಷೇತ್ರದಲ್ಲಿ ಭಾರತದ ಜೊತೆ ಸಹಕಾರವನ್ನು ಮತ್ತಷ್ಟು ವೃದ್ಧಿಸುವುದಕ್ಕೆ ಸಂಬಂಧಿಸಿದ ಒಡಂಬಡಿಕೆಗೆ (ಎಂಒಯು) ರಷ್ಯಾ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಡಿಸೆಂಬರ್ 4 ಮತ್ತು 5ರಂದು ಕೈಗೊಂಡಿರುವ ಭಾರತ ಪ್ರವಾಸ ವೇಳೆ ಈ ಕುರಿತ ಒಪ್ಪಂದಕ್ಕೆ ಉಭಯ ದೇಶಗಳು ಅಂಕಿತ ಹಾಕಲಿವೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ರಷ್ಯಾದ ಅಣು ನಿಗಮ ರೊಸಾಟಮ್, ತಮಿಳುನಾಡಿನ ಕೂಡಂಕುಳಂನಲ್ಲಿರುವ ಅಣುಶಕ್ತಿ ಸ್ಥಾವರದಲ್ಲಿ ಹಲವು ರಿಯಾಕ್ಟರ್‌ಗಳನ್ನು ನಿರ್ಮಿಸುತ್ತಿದೆ. ಈಗ, ಭಾರತದೊಂದಿಗಿನ ಅಣುಶಕ್ತಿ ಒಪ್ಪಂದಕ್ಕೆ ರಷ್ಯಾ ಸರ್ಕಾರದ ಪರವಾಗಿ ಸಹಿ ಹಾಕುವುದಕ್ಕೆ ಈ ನಿಗಮಕ್ಕೆ ಅಧಿಕಾರ ನೀಡಲಾಗಿದೆ ಎಂದೂ ಮಾಧ್ಯಮಗಳು ವರದಿ ಮಾಡಿವೆ.

‘ನವದೆಹಲಿಯಲ್ಲಿ ನಡೆಯುವ ಉಭಯ ದೇಶಗಳ ನಾಯಕರ ಸಭೆಯಲ್ಲಿ ಈ ಕುರಿತ ಪ್ರಸ್ತಾವನೆಗಳನ್ನು ರೊಸಾಟಮ್ ಸಿಇಒ ಅಲೆಕ್ಸಿ ಲಿಗಾಚೆವ್ ಮಂಡಿಸುವರು’ ಎಂದು ಕ್ರೆಮ್ಲಿನ್ ವಕ್ತಾರ ದಿಮಿಟ್ರಿ ಪೆಸ್ಕೋವ್ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವೈಯಕ್ತಿಕ
Change of Name
ಹೆಸರು ಬದಲಾವಣೆ
ಸ್ಫೂರ್ತಿ ಪಿ.ಡಿ. ಬಿನ್ ದಿನೇಶ್ ಪಿ.ಆರ್., ಸುಮಾರು 30 ವರ್ಷ ವಯಸ್ಸು, ದಾವಣಗೆರೆ ನಿವಾಸಿಯದ ನಾನು ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ದಿನಾಂಕ 26.04.2024 ರವರೆಗಿನ ಎಲ್ಲಾ ವಹಿವಾಟುಗಳಲ್ಲಿ ನನ್ನ ಎಲ್ಲಾ ದಾಖಲಾದ ಶಾಲೆ, ಕಾಲೇಜು, ಹೂಡಿಕೆಗಳು, ಮದುವೆ ಪ್ರಮಾಣಪತ್ರ, ಬ್ಯಾಂಕ್ ಖಾತೆಯಲ್ಲಿನ ಎಲ್ಲಾ ದಾಖಲೆಗಳಲ್ಲಿರುವ ಸ್ಫೂರ್ತಿ ಪಿ.ಡಿ. ಎಂಬ ಹೆಸರನ್ನು ಸ್ಫೂರ್ತಿ ಡಿ. ಬಿನ್ ದಿನೇಶ್ ಪಿ.ಆರ್. ಎಂದು ದಿನಾಂಕ 27.04.2024ರಂದು ಬದಲಾಯಿಸಿಕೊಂಡಿದ್ದು, ಭವಿಷ್ಯದಲ್ಲಿ ಇದೇ ಹೆಸರಿನಲ್ಲಿ ನನ್ನ ಎಲ್ಲಾ ವಹಿವಾಟುಗಳಿಗೆ ನೋಟರಿಯವರ ಮುಂದೆ ಅಫಿಡವಿಟ್ ಮಾಡಿಸಿರುತ್ತೇನೆ. ಫೋನ್: 94481–80019

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ ಶೋರೂಮ್‌ಗಳಿಗೆ ಕಂಪನಿಗಳಿಗೆ Cashier, Receptionist, Account ಕೆಲಸಕ್ಕೆ ತಕ್ಷಣ ಯುವಕ,ಯುವತಿಯರು ಬೇಕಾಗಿದ್ದಾರೆ. 20,000, 35,000. SSLC, Degree. 9916788422, 9916744622

Wanted
ತನ್ಮಯಿ ಆಯಿಲ್ ಕಂಪನಿಯಲ್ಲಿ ಪ್ಯಾಕಿಂಗ್ ಮಾಡಲು 10 ಜನ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 18 ಸಾವಿರ ಸ್ಥಳ: ಶೇಷಾದ್ರಿಪುರಂ ಬೆಂಗಳೂರು 9019626612.

ವ್ಯಾಪಾರ
Business Offers
Business For Sale
TEAK WOOD DISCOUNT SALE
BURMA TEAK ~~Rs.14000~~ Rs.8500/- per Cft
INDIAN TEAK ~~Rs.7000~~ Rs.4500/- per Cft
BIJA(HONNE) HALDU ~~Rs.2000~~ Rs.1250/- per Cft
NALLAMADDI ~~Rs.1900~~ Rs.1150/- per Cft
ALL WOOD VERY VALUABLE & STRONG LIFE MORE THAN 100 YEARS
FREE TRANSPORT
ASIAN TIMBER ESTATES
◆Beside ORR, Gachibowli Kollur, Hyderabad
Ph: 098480 28811, 09948517777, 081799 22021, 07842576789

TRAVEL CORNER
ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
ನಂ. 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು
Website : www.orchidtours.net
Orchid ನಿಮ್ಮ ಪ್ರವಾಸ ನಮ್ಮೊಂದಿಗೆ
ದುಬೈ ಶಾಪಿಂಗ್ ಫೆಸ್ಟಿವಲ್ – 2026
ದುಬೈ–ಅಬುದಾಭಿ–ಶಾರ್ಜ



* ಬೆಂಗಳೂರಿನಿಂದ ಎಮಿರೇಟ್ಸ್ ವಿಮಾನದಲ್ಲಿ ಪ್ರಯಾಣ.
* ಪ್ರವಾಸದಲ್ಲಿ ತಂಗಲು 4 ಸ್ಟಾರ್ ಹೋಟೆಲ್ ವ್ಯವಸ್ಥೆ.
* ಮುಖ್ಯ ಪ್ರವಾಸಿ ಸ್ಥಳಗಳ ಪ್ರವೇಶ ಶುಲ್ಕ ಸೇರಿದೆ.
* ಪ್ರವಾಸದಲ್ಲಿ ಕನ್ನಡ ಮಾತನಾಡುವ ಮಾರ್ಗದರ್ಶಕರು.
* ಪ್ರವಾಸದಲ್ಲಿ ದಕ್ಷಿಣ ಭಾರತ ಶೈಲಿಯ ಊಟ ಹಾಗೂ ತಿಂಡಿಯ ವ್ಯವಸ್ಥೆ.
* ವೀಸಾ ಹಾಗೂ ವಿದೇಶಿ ವಿಮಾ ಒಳಗೊಂಡಿದೆ.
* ಪ್ರಯಾಣಕ್ಕೆ ಎ.ಸಿ. ಬಸ್ಸಿನ ವ್ಯವಸ್ಥೆ.
* ಪ್ರತಿದಿನ ಕುಡಿಯಲು ಉಚಿತ 1 ಬಾಟಲ್ ನೀರಿನ ವ್ಯವಸ್ಥೆ ಇರುತ್ತದೆ.
* ಪ್ರಯಾಣದಲ್ಲಿ ಎಲ್ಲಾ ತೆರಿಗೆ, ಟಿಪ್ಸ್, ಟೋಲ್ ಒಳಗೊಂಡಿರುತ್ತದೆ.
99000 80793 / 99000 93613 / 98800 79588

18 ದಿನಗಳ ಗ್ರಾಂಡ್ ಯು.ಕೆ. ಮತ್ತು ಯೂರೋಪ್
10 ದೇಶಗಳು : ಯು.ಕೆ. ಫ್ರಾನ್ಸ್, ನೆದರ್‌ಲ್ಯಾಂಡ್, ಬೆಲ್ಜಿಯಂ, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಲಿಚೆನ್‌ಟೆನ್‌ಸ್ಟೈನ್, ಇಟಲಿ, ಆಸ್ಟ್ರೀಯಾ, ವಾಟಿಕನ್



99000 80794 / 98800 79644
ನಮ್ಮ ಇತರೆ ಪ್ರವಾಸಗಳು
★ ಜಪಾನ್ ಚೆರಿ ಬ್ಲಾಸಮ್ ಸ್ಪೆಷಲ್
★ ಬಾಲಿ (ಇಂಡೋನೇಷಿಯಾ)
★ ವಿಯೇಟ್ನಾಂ ಮತ್ತು ಕಾಂಬೋಡಿಯಾ
★ ಶ್ರೀಲಂಕಾ (ರಾಮಾಯಣ ದರ್ಶನ)
★ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್
★ ನೇಪಾಳ – ಶ್ರೀ ಮುಕ್ತಿನಾಥ ಯಾತ್ರೆ
★ ಸಿಂಗಾಪುರ–ಮಲೇಷಿಯಾ–ಥೈಲ್ಯಾಂಡ್
★ ಗ್ರಾಂಡ್ U.S.A. (ಅಮೇರಿಕಾ)
99000 93615 / 99000 99252

Part-Time Jobs
ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000, 25,000ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188

ಉದ್ಯೋಗಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9886213331

ಪ್ರವಾಸ
Travel
24.12.2025 ರಿಂದ 9 ದಿನಗಳ ಜಾರ್ಖಂಡ್ ವೈದ್ಯನಾಥ ಗಯಾ,ಕಾಶಿ ಚಿತ್ರಕೂಟ ಅಯೋಧ್ಯ ಅಲಹಾಬಾದ್ ನೈಮಿಶಾರಣ್ಯ. 07.01.2026 ರಿಂದ 12 ದಿನಗಳ ಆಗ್ರಾ,ಮಥುರ ಜೈಪುರ್ ಪುಷ್ಕರ್ ಜೈಸಲ್‌ಮೇರ್ ನಾಥದ್ವಾರ್ ಉದಯಪುರ್ ಮೌಂಟ್‌ಅಬು ವಿಮಾನ ಎಸಿರೂಂ ಎಸಿಬಸ್. ಸಂಪರ್ಕಿಸಿ. ವಿಷ್ಣುನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 .9342287551 9482239855

18/13/8 ದಿನಗಳ ಗ್ರಾಂಡ್ ಯುಕೆ ಮತ್ತು ಯುರೋಪ್ 10ದೇಶಗಳು. ಯುಕೆ, ಫ್ರಾನ್ಸ್ ನೆದರ್ಲ್ಯಾಂಡ್, ಬೆಲ್ಜಿಯಂ, ಜರ್ಮನಿ, ಸ್ವಿಜರ್ ಲ್ಯಾಂಡ್, ಲಿಚೆನ್ ಟೆನ್ ಸ್ಟೈನ್, ಇಟಲಿ ಆಸ್ಟ್ರಿಯಾ, ವ್ಯಾಟಿಕನ್ ವಿಮಾನ,ವೀಸಾ,ತೆರಿಗೆ, ಊಟ,ವಸತಿ, ಟಿಪ್ಸ್ ಇನ್ಶೂರೆನ್ಸ್ ಎಲ್ಲಾ ಪ್ರವಾಸದರದಲ್ಲಿ ಒಳಗೊಂಡಿರುತ್ತದೆ. ಸಂಪರ್ಕಿಸಿ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್, ಬಸವನಗುಡಿ, ಬೆಂಗಳೂರು-04, 9880079644, 9900080793, 9900080794

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

‘ದರ್ಶನ್ ಜೊತೆಗಿದ್ದರೆ ಆನೆಬಲ’

ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ, ದರ್ಶನ್ ನಟನೆಯ ‘ದಿ ಡೆವಿಲ್’ ಚಿತ್ರ ಡಿ.11ರಂದು ತೆರೆಕಾಣುತ್ತಿದೆ. ಇತ್ತೀಚೆಗೆ ಸಿನಿಮಾ ತಂಡ ಸುದ್ದಿಗೋಷ್ಠಿ ನಡೆಸಿ ಚಿತ್ರದ ಬಗ್ಗೆ ಮಾಹಿತಿ ಹಂಚಿಕೊಂಡಿತು.

ನಿರ್ದೇಶಕ ಪ್ರಕಾಶ್ ವೀರ್ ಮಾತನಾಡಿ, ‘ಬಿಡುಗಡೆ ಹತ್ತಿರವಿರುವಾಗ ಮೊದಲ ಸುದ್ದಿಗೋಷ್ಠಿ ಮಾಡುತ್ತಿದ್ದೇವೆ. ಈ ಹಿಂದೆ ಸುದ್ದಿಗೋಷ್ಠಿ ಮಾಡಬೇಕು ಎನ್ನುವಾಗ ಕೊಂಚ ಗೊಂದಲಗಳು ಇದ್ದವು. ದರ್ಶನ್ ಬರುತ್ತಾರೆ, ಸುದ್ದಿಗೋಷ್ಠಿಯಲ್ಲಿ ಜೊತೆಗಿರುತ್ತಾರೆ ಎನ್ನುವ ಒಂದು ಆಸೆ ಇಟ್ಟುಕೊಂಡೇ ಇಷ್ಟು ದಿನ ಮುಂದಕ್ಕೆ ತಳ್ಳಿದ್ದೆ. ದರ್ಶನ್ ಜೊತೆಗಿದ್ದರೆ ನನಗೆ ಆನೆಬಲ. ದರ್ಶನ್ ಇಲ್ಲದೇ ಈ ಸಿನಿಮಾದ ಪ್ರಚಾರ ಮಾಡುವುದು ಕಷ್ಟ. ಅವರು ಸುದ್ದಿಗೋಷ್ಠಿಯಲ್ಲಿ ಜೊತೆಗಿರದೇ ಇರುವ ನೋವು ಖಂಡಿತಾ ಇದೆ. ವಿಜಯಲಕ್ಷ್ಮಿ, ದಿನಕರ್ ಅವರು ತಂಡದ ಜೊತೆಗೆ ನಿಂತಿದ್ದಾರೆ. ದರ್ಶನ್ ಅವರ ಅಭಿಮಾನಿಗಳೇ ಪ್ರಚಾರ ಮಾಡುತ್ತಿದ್ದಾರೆ. 2018ರಲ್ಲಿ ಈ ಸಿನಿಮಾದ ಕಥೆಯನ್ನು ದರ್ಶನ್‌ಗೆ ಹೇಳಿದ್ದೆ. ಚಿತ್ರಕಥೆ ಸಿದ್ಧಪಡಿಸಿಕೊಂಡು ಬಂದ ತಕ್ಷಣದಲ್ಲೇ ಶೂಟಿಂಗ್ ಮಾಡೋಣವೆಂದಿದ್ದರು. ಬಳಿಕ ಕೋವಿಡ್ ಬಂತು, ನನ್ನ ತಂದೆ ತೀರಿಕೊಂಡರು. ಹೀಗಾಗಿ ವಿಳಂಬವಾಯಿತು. ‘ಕಾಟೇರ’ ಮುಗಿಸಿದ ತಕ್ಷಣವೆ ಈ ಸಿನಿಮಾ ಕೈಗೆತ್ತಿಕೊಂಡೆವು’ ಎಂದರು.

‘ಸತತವಾಗಿ ಎರಡು ವರ್ಷ ಕಲಾವಿದರೆಲ್ಲರೂ ನನ್ನ ಜೊತೆ ಪಯಣ ಮಾಡಿದ್ದಾರೆ. ಡೆವಿಲ್ ಸಿನಿಮಾ ನನಗೊಂದು ದೊಡ್ಡ ಸವಾಲಾಗಿತ್ತು. ‘ಡೆವಿಲ್’ ಎನ್ನುವ ಶೀರ್ಷಿಕೆ ಬೇರೆಯವರ ಬಳಿ ಇತ್ತು. ಅದನ್ನು ಪಡೆದುಕೊಂಡೆವು. ಕಥೆಗೆ ಸೂಕ್ತವಾಗಿತ್ತು ಎನ್ನುವ ಕಾರಣಕ್ಕೆ ಈ ಶೀರ್ಷಿಕೆ ಇಟ್ಟಿದ್ದೇವೆ. ದರ್ಶನ್ ಅವರಿಗೆ ದೊಡ್ಡ ಅಭಿಮಾನಿ ಬಳಗವಿದೆ. ಹೀಗೆಂದು ಅವರಿಗೆ ಬೇರೆ ಅಭಿಮಾನಿಗಳು ಇಲ್ಲವೆಂದಲ್ಲ. ಇದು ಅಭಿಮಾನಿಗಳಿಗಾಗಿಯೇ ಮಾಡಿದ ಸಿನಿಮಾವಲ್ಲ, ಆದರೆ ಅಭಿಮಾನಿಗಳಿಗೆ ಬೇಕಾಗಿರುವ ಸನ್ನಿವೇಶಗಳು ಇವೆ. ಮಾಸ್ ಎಂಟರ್‌ಟೇನರ್ ಸಿನಿಮಾ ಇದಾಗಿದೆ. ಇದು ‘ಮಿಲನ’ ರೀತಿಯ ಕಥೆಯಲ್ಲ. ಅಂಥ ಕಥೆಯನ್ನೇ ಮಾಡಿಕೊಂಡಿರಲು ಸಾಧ್ಯವಿಲ್ಲ. ನನಗೆ ನಟನನ್ನು ನೋಡಿ ಕಥೆ ಮಾಡಲು ಬರುವುದಿಲ್ಲ. ಕುಟುಂಬ ಸಹಿತ ಕುಳಿತು ನೋಡಬಹುದಾದ ಸಿನಿಮಾ ‘ಡೆವಿಲ್’. ನಾನೂ ಹೊಸದನ್ನು ಪ್ರಯತ್ನಿಸಬೇಕು ಅಲ್ಲವೇ’ ಎನ್ನುತ್ತಾರೆ ಪ್ರಕಾಶ್.

‘ಚಿತ್ರೀಕರಣದ ಸಂದರ್ಭದಲ್ಲಿ ಚಿತ್ರದ ಬಗ್ಗೆಯಷ್ಟೇ ದರ್ಶನ್ ಜೊತೆ ಚರ್ಚೆಯಾಗುತ್ತಿತ್ತು. ಅವರು ತಮ್ಮ ವೈಯಕ್ತಿಕ ಜೀವನವನ್ನು ಸೆಟ್‌ಗೆ ತರಲಿಲ್ಲ. ಈಗಾಗಲೇ ತಡವಾಗಿದೆ, ಬೇಗನೇ ಚಿತ್ರೀಕರಣ ಮುಗಿಸಿಕೊಂಡು ಬಿಡುಗಡೆ ಮಾಡೋಣ ಎನ್ನುತ್ತಿದ್ದರು. ಬೆನ್ನುನೋವಿಗೆ ಎಷ್ಟು ಔಷಧ ಹಾಗೂ ಇಂಜೆಕ್ಷನ್ ತೆಗೆದುಕೊಳ್ಳುತ್ತಿದ್ದರು ಎನ್ನುವುದನ್ನು ಸೆಟ್‌ನಲ್ಲಿರುವ ನಾವೆಲ್ಲರೂ ನೋಡಿದ್ದೇವೆ. ಅವರಿಗೆ ಬೆನ್ನುನೋವು ಖಂಡಿತಾ ಇತ್ತು, ಅದರ ನಡುವೆ ಚಿತ್ರೀಕರಣ ಪೂರ್ಣಗೊಳಿಸಿಕೊಟ್ಟಿದ್ದರು. ಇತ್ತೀಚೆಗೆ ದರ್ಶನ್ ಅವರನ್ನು ಭೇಟಿಯಾಗಿದ್ದೇನೆ. ಭೇಟಿಯಾದಾಗ ಸಿನಿಮಾ ಬಗ್ಗೆಯಷ್ಟೆ ಮಾತನಾಡಿದ್ದಾರೆ. ಅಕ್ಟೋಬರ್‌ನಲ್ಲೇ ರಿಲೀಸ್ ಮಾಡಬೇಕು ಎಂದು ಹೇಳಿದ್ದರು. ಆದರೆ ವಿಎಫ್‌ಎಕ್ಸ್ ಕೆಲಸ, ಪೋಸ್ಟ್ ಪ್ರೊಡಕ್ಷನ್‌ಗೆ ಸಮಯ ಹಿಡಿಯಿತು’ ಎಂದರು.

ಹಿಂದಿನ ಕಥೆ ಗೊತ್ತಿರಲಿಲ್ಲ

‘‘ಇದ್ರೆ ನೆಮ್ದಿಯಾಗ್ ಇರ್ಬೇಕು..’ ಎನ್ನುವುದರ ಹಿಂದೆ ಒಂದು ಕಥೆ ಇದೆ ಎನ್ನುವುದೇ ಗೊತ್ತಿರಲಿಲ್ಲ. ಅನಿರುದ್ಧ್ ಅವರು ಅದನ್ನು ಬರೆದು ಕಳುಹಿಸಿದ ಮೇಲೆ, ಚಿತ್ರೀಕರಣದ ಸಂದರ್ಭದಲ್ಲೇ ಅದು ನನಗೆ ತಿಳಿದಿದ್ದು. ಪಾತ್ರಕ್ಕೆ, ಹಾಡಿಗೆ ಚೆನ್ನಾಗಿದ್ದ ಕಾರಣ ಅದನ್ನು ಬಳಸಿದೆವು. ‘ಎಲ್ಲಾ ಶಿವನಾಟ..’ ಎಂಬ ಸಾಲು ಇತ್ತು. ಈಗಾಗಲೇ ‘KD’ ಸಿನಿಮಾದಲ್ಲಿ ಈ ಸಾಲು ಬಳಸಿದ್ದ ಕಾರಣ ನಾವು ‘ಇದ್ರೆ ನೆಮ್ದಿಯಾಗ್ ಇರ್ಬೇಕು..’ ಎನ್ನುವುದನ್ನು ಬಳಸಿಕೊಂಡೆವು’ ಎಂದರು ಪ್ರಕಾಶ್.

‘ಕರ್ನಾಟಕದ ಮೂಲೆ ಮೂಲೆಯಲ್ಲೂ ಸಿನಿಮಾ ಬಿಡುಗಡೆಯಾಗಲಿದೆ. 11ರಂದು ಬೆಳಿಗ್ಗೆ 6.30ಕ್ಕೆ ಪ್ರದರ್ಶನ ಆರಂಭವಾಗಲಿದೆ’ ಎಂದು ಕಾರ್ಯ ನಿರ್ವಾಹಕ ನಿರ್ಮಾಪಕಿ ತಶ್ವಿನಿ ವೀರ್ ತಿಳಿಸಿದರು.

ತಶ್ವಿನಿ ವೀರ್, ಪ್ರಕಾಶ್ ವೀರ್

> ಈ ಹಿಂದೆ ‘ಸಿದ್ಧಾರ್ಥ’ ಸಿನಿಮಾದಲ್ಲಿ ಪ್ರಕಾಶ್ ಅವರ ಜೊತೆ ಕೆಲಸ ಮಾಡಿದ್ದೆ. ದರ್ಶನ್ ಜೊತೆ ನಾಲ್ಕು ಸಿನಿಮಾದಲ್ಲಿ ನಟಿಸಿದ್ದೇನೆ. ಅವರು ಕೂಲ್ ಆಗಿ ಕೆಲಸ ಮಾಡುವವರು. ಜೊತೆಯಲ್ಲಿರುವ ಕಲಾವಿದರ ಜೊತೆಯಲ್ಲಿ ಸನ್ನಿವೇಶ ಕಟ್ಟುವುದರ ಬಗ್ಗೆಯಷ್ಟೇ ಅವರ ಗಮನವಿರುತ್ತದೆ. ವೃತ್ತಿಪರತೆಯನ್ನು ಮೈಗೂಡಿಸಿಕೊಂಡಿರುವ ಮಹತ್ವದ ನಟ ದರ್ಶನ್.
> –ಅಚ್ಯುತ್ ಕುಮಾರ್, ನಟ

> ಸಿನಿಮಾದಲ್ಲಿನ ನನ್ನ ಪಾತ್ರದ ಅವಧಿ ಕಡಿಮೆ ಇದ್ದರೂ, ಪರಿಣಾಮಕಾರಿಯಾಗಿದೆ. ದರ್ಶನ್ ಅವರ ಜೊತೆ ಎರಡನೇ ಸಿನಿಮಾ ಇದಾಗಿದೆ. ‘ನವಗ್ರಹ’ ತೆರೆಕಂಡು 18 ವರ್ಷ ಕಳೆದಿದೆ.
> –ಶರ್ಮಿಳಾ ಮಾಂಡ್ರೆ, ನಟಿ

ಸೂಪರ್ ಹಿಟ್ ಟೀಸರ್ ಬಿಡುಗಡೆ

ಸದ್ಯ ‘ಬಿಗ್‌ಬಾಸ್’ ರಿಯಾಲಿಟಿ ಶೋನಲ್ಲಿಯೂ ಸ್ಪರ್ಧಿಯಾಗಿ ಜನಪ್ರಿಯವಾಗಿರುವ ಗಿಲ್ಲಿ ನಟಿಸಿರುವ ‘ಸೂಪರ್ ಹಿಟ್’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ‘ರನ್ನಿಂಗ್ ಸಕ್ಸಸ್‌ಫುಲಿ’ ಎಂಬ ಅಡಿಬರಹ ಚಿತ್ರಕ್ಕಿದೆ. ವಿಜಯಾನಂದ್ ನಿರ್ದೇಶನದ ಚಿತ್ರವಿದು.

‘ಸು ಫ್ರಂ ಸೋ’ ರೀತಿಯದ್ದೇ ಹಾಸ್ಯಮಯ ಚಿತ್ರ. ಆ ಚಿತ್ರಕ್ಕೆ ಸಿಕ್ಕ ಅಭೂತಪೂರ್ವ ಬೆಂಬಲ ನಮಗೆ ಹೊಸ ಸ್ಫೂರ್ತಿ ನೀಡಿದೆ. ಈಗಾಗಲೇ ಚಿತ್ರದ ಎಲ್ಲ ಕೆಲಸ ಕಾರ್ಯಗಳೂ ಮುಕ್ತಾಯಗೊಂಡಿವೆ. ಒಂದೊಳ್ಳೆ ಸಮಯ ನೋಡಿ ಬಿಡುಗಡೆ ಮಾಡೋದಷ್ಟೇ ಬಾಕಿ. ಥ್ರಿಲ್ಲರ್, ಕಾಮಿಡಿ ಜಾನರಿನ ಕಥೆ. ಸಿನಿಮಾ ಆರಂಭದಿಂದ ಕೊನೆಯವರೆಗೂ ಪ್ರತೀ ಹತ್ತು ನಿಮಿಷಕ್ಕೊಮ್ಮೆ ಪ್ರೇಕ್ಷಕರನ್ನು ಬೆರಗಾಗಿಸುವಂಥ ಅಂಶಗಳನ್ನು ಹೊಂದಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕಾಮಿಡಿ ಸ್ಟಾರ್‌ಗಳಾದವರು ಈ ಚಿತ್ರದಲ್ಲಿದ್ದಾರೆ’ ಎಂದರು ನಿರ್ದೇಶಕ.

ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಮತ್ತು ಸಂಗೀತ ನಿರ್ದೇಶನ, ಆರ್. ಡಿ ನಾಗಾರ್ಜುನ ಛಾಯಾಚಿತ್ರಗ್ರಹಣ, ಶ್ರೀಕಾಂತ್ ಸಂಕಲನ ಚಿತ್ರಕ್ಕಿದೆ. ಗೌರವ್ ಶೆಟ್ಟಿ ಮತ್ತು, ಗಿಲ್ಲಿ ನಟ ನಾಯಕರಾಗಿ ನಟಿಸಿದ್ದಾರೆ. ಶ್ವೇತಾ ನಾಯಕಿಯಾಗಿ ಜೊತೆಯಾಗಿದ್ದಾರೆ. ವಿಜಯಲಕ್ಷ್ಮಿ ಎಂಟರ್‌ಪ್ರೈಸಸ್ ಬ್ಯಾನರಿನಡಿಯಲ್ಲಿ ಜಿ. ಉಮೇಶ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ವಿ.ನಾಗೇಂದ್ರ ಪ್ರಸಾದ್, ಡ್ರ್ಯಾಗನ್ ಮಂಜು, ಸಾಧು ಕೋಕಿಲ, ಕರಿಸುಬ್ಬು ಮುಂತಾದವರ ತಾರಾಗಣವಿದೆ.

ದೃಶ್ಯಂ–3 ಚಿತ್ರೀಕರಣ ಮುಕ್ತಾಯ

ಮೋಹನ್ ಲಾಲ್ ನಟಿಸಿ, ಜೀತು ಜೋಸೆಫ್ ನಿರ್ದೇಶಿಸುತ್ತಿರುವ ‘ದೃಶ್ಯಂ–3’ ಚಿತ್ರೀಕರಣ ಮುಕ್ತಾಯಗೊಂಡಿದೆ. ಮೋಹನ್ ಲಾಲ್ ಚಿತ್ರದ ಕೊನೆಯ ದಿನದ ಚಿತ್ರೀಕರಣ ವಿಡಿಯೊವನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ.

2013ರಲ್ಲಿ ‘ದೃಶ್ಯಂ’ ಸಿನಿಮಾದೊಂದಿಗೆ ಈ ಜೋಡಿ ಮೋಡಿ ಮಾಡಿತ್ತು. ಸಿನಿಮಾವೊಂದರ ಸೀಕ್ವೆಲ್ ಮೂಲ ಸಿನಿಮಾಕ್ಕಿಂತ ಹೆಚ್ಚು ಯಶಸ್ಸು ಕಾಣುವುದು ಬಲು ವಿರಳ. ಆದರೆ 2021ರಲ್ಲಿ ತೆರೆಕಂಡ ದೃಶ್ಯಂ 2 ಮೂಲ ಸಿನಿಮಾದಷ್ಟೇ ಯಶಸ್ಸು ಗಳಿಸಿತು. ಬೇರೆ ಭಾಷೆಗಳಿಗೂ ಈ ಚಿತ್ರ ರಿಮೇಕ್ ಆಗಿ ಯಶಸ್ಸು ಕಂಡಿತ್ತು. ಅದಾದ ಬಳಿಕ ದೃಶ್ಯಂ 3 ಚಿತ್ರ ಘೋಷಿಸಲಾಗಿತ್ತು.

ಕಥಾನಾಯಕ ಜಾರ್ಜ್‌ಕುಟ್ಟಿಯ ಕಥೆಯೇ ಇಲ್ಲಿ ಮುಂದುವರಿಯಲಿದೆ ಎಂದು ಜೀತು ಹೇಳಿದ್ದರು. ಮೀನಾ, ಅನ್ಸಿಬಾ ಹಸನ್ ಮತ್ತು ಎಸ್ತರ್ ಅನಿಲ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಅನಿಲ್ ಜಾನ್ಸನ್ ಸಂಗೀತ, ಸತೀಶ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಚಿಟಿಕೆ ಸುದ್ದಿ

ತತ್ಕಾಲ್ ಟಿಕೆಟ್ ಖರೀದಿಗೆ ಒಟಿಪಿ ಕಡ್ಡಾಯ: ರೈಲ್ವೆ

ನವದೆಹಲಿ (ಪಿಟಿಐ): ತತ್ಕಾಲ್ ಟಿಕೆಟ್ ಬುಕ್ಕಿಂಗ್ ವ್ಯವಸ್ಥೆಯ ದುರುಪಯೋಗ ತಡೆಯುವುದಕ್ಕಾಗಿ ರೈಲ್ವೆ ಇಲಾಖೆ ಹೊಸ ನಿಯಮವನ್ನು ಜಾರಿಗೆ ತಂದಿದೆ. ಆ ಪ್ರಕಾರ, ಇನ್ನು ಮುಂದೆ, ತತ್ಕಾಲ್ ಟಿಕೆಟ್ ಬುಕ್ಕಿಂಗ್ ಮಾಡುವ ಪ್ರಯಾಣಿಕರು ತಮ್ಮ ಮೊಬೈಲ್ ಫೋನ್‌ಗೆ ಕಳುಹಿಸಲಾಗುವ ಒಟಿಪಿ(ಒನ್ ಟೈಮ್ ಪಾಸ್‌ವರ್ಡ್) ಹೇಳಿ, ಕೌಂಟರ್‌ನಿಂದ ಟಿಕೆಟ್ ಪಡೆಯಬೇಕು ಎಂದು ರೈಲ್ವೆ ಸಚಿವಾಲಯದ ಪ್ರಕಟಣೆ ತಿಳಿಸಿದೆ.

‘ಈ ಒಟಿಪಿ ಆಧಾರಿತ ತತ್ಕಾಲ್ ಟಿಕೆಟ್ ಪಡೆಯುವ ವ್ಯವಸ್ಥೆಯನ್ನು ನವೆಂಬರ್ 17 ರಿಂದ ಆಯ್ದ 52 ರೈಲುಗಳಲ್ಲಿ ಪ್ರಾಯೋಗಿಕವಾಗಿ ಅಳವಡಿಸಿ, ಪರಿಶೀಲಿಸಲಾಗಿದೆ. ತುರ್ತು ಟಿಕೆಟ್ ಕಾಯ್ದಿರಿಸುವ ವ್ಯವಸ್ಥೆಯನ್ನು ಮತ್ತಷ್ಟು ಪ್ರಯಾಣಿಕ ಸ್ನೇಹಿ ಆಗಿಸಲು ಹೊಸ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಶೀಘ್ರದಲ್ಲೇ ಎಲ್ಲ ರೈಲು ನಿಲ್ದಾಣಗಳಿಗೂ ಈ ವ್ಯವಸ್ಥೆ ಅನ್ವಯಿಸಲಾಗುವುದು’ ಎಂದು ಸಚಿವಾಲಯ ತಿಳಿಸಿದೆ.

ಇದೇ ಅಕ್ಟೋಬರ್ 1ರಿಂದ ಐಆರ್‌ಸಿಟಿಸಿಯಲ್ಲಿ ಆನ್‌ಲೈನ್‌ನಲ್ಲಿ ಟಿಕೆಟ್ ಬುಕ್ ಮಾಡುವವರಿಗೆ ಆಧಾರ್ ದೃಢೀಕರಣ ಕಡ್ಡಾಯಗೊಳಿಸಿತ್ತು.

‘ಕೇಂದ್ರದಿಂದ ಬಹುಜನರಿಗೆ ದ್ರೋಹ’

ಜಾತಿವಾರು ಸಮೀಕ್ಷೆ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪ

ನವದೆಹಲಿ (ಪಿಟಿಐ): ‘ನರೇಂದ್ರ ಮೋದಿ ನೇತೃತ್ವದ ಸರ್ಕಾರವು, ಜಾತಿವಾರು ಸಮೀಕ್ಷೆ ಕುರಿತು ಸಂಸತ್ತಿನಲ್ಲಿ ಚರ್ಚೆ ನಡೆಸದೆ, ಕಾಲಮಿತಿಯ ಯೋಜನೆ ಮತ್ತು ಸ್ಪಷ್ಟ ಚೌಕಟ್ಟನ್ನು ರೂಪಿಸದೆ ಬಹಿರಂಗವಾಗಿ ದೇಶದ ಬಹುಜನರಿಗೆ ದ್ರೋಹ ಬಗೆಯುತ್ತಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಆರೋಪಿಸಿದರು.

ಲೋಕಸಭೆಯಲ್ಲಿ ಮುಂದಿನ ಗಣತಿ ಮತ್ತು ಜಾತಿವಾರು ಸಮೀಕ್ಷೆ ಕುರಿತ ಪ್ರಶ್ನೆಗೆ ಸರ್ಕಾರ ಪ್ರತಿಕ್ರಿಯೆ ನೀಡಿದ ಬಳಿಕ ಅವರು ವಾಗ್ದಾಳಿ ನಡೆಸಿದರು.

‘ಸಂಸತ್ತಿನಲ್ಲಿ ಜಾತಿವಾರು ಸಮೀಕ್ಷೆ ಕುರಿತು ಪ್ರಶ್ನೆಯೊಂದನ್ನು ಕೇಳಿದೆ. ಸರ್ಕಾರದ ಪ್ರತಿಕ್ರಿಯೆ ಕೇಳಿ ಆಘಾತವಾಗಿದೆ. ಸರ್ಕಾರಕ್ಕೆ ಇತರ ರಾಜ್ಯಗಳ ಯಶಸ್ವೀ ಜಾತಿವಾರು ಸಮೀಕ್ಷೆಗಳ ಕಾರ್ಯತಂತ್ರವನ್ನು ಕಲಿತುಕೊಳ್ಳುವ, ಹೊಸದನ್ನು ತಿಳಿದುಕೊಳ್ಳುವ ಆಸಕ್ತಿಯೂ ಇಲ್ಲ’ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ರಾಹುಲ್ ಗಾಂಧಿ ಅವರು ಮಂಗಳವಾರ ಜಾತಿವಾರು ಸಮೀಕ್ಷೆ ಕುರಿತ ವಿವರ, ಪ್ರಶ್ನಾವಳಿ ಸಿದ್ಧತೆ ಮತ್ತು ವೇಳಾಪಟ್ಟಿ ಕುರಿತು ಪ್ರಶ್ನೆ ಕೇಳಿದ್ದರು.

‘ಗಣತಿಯ ಪ್ರಶ್ನೆಗಳ ಕರಡನ್ನು ಸಾರ್ವಜನಿಕವಾಗಿ ಪ್ರಕಟಿಸುವ ಮತ್ತು ಜನರಿಂದ ಅಥವಾ ಜನಪ್ರತಿನಿಧಿಗಳಿಂದ ಸಲಹೆಗಳನ್ನು ಪಡೆಯುವ ಉದ್ದೇಶ ಇದೆಯೇ’ ಎಂದೂ ಕೇಳಿದ್ದರು.

ಇದಕ್ಕೆ ಲಿಖಿತ ಪ್ರತಿಕ್ರಿಯೆ ನೀಡಿದ ಕೇಂದ್ರ ಗೃಹ ಇಲಾಖೆಯ ರಾಜ್ಯ ಖಾತೆ ಸಚಿವ ನಿತ್ಯಾನಂದ ರಾಯ್ ಅವರು, ‘2027ರ ಗಣತಿಯು ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ 2026ರ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಮನೆಗಳ ಪಟ್ಟಿ ಮತ್ತು ಮನೆಗಳ ಗಣತಿ ನಡೆಯಲಿದೆ. ನಂತರ ಎರಡನೇ ಹಂತದಲ್ಲಿ 2027ರ ಫೆಬ್ರುವರಿಯಲ್ಲಿ ಜನಸಂಖ್ಯೆಯ ದಾಖಲಾತಿ ನಡೆಸಲಾಗುತ್ತದೆ’ ಎಂದು ತಿಳಿಸಿದ್ದರು.

‘ವಿವಿಧ ಇಲಾಖೆಗಳು, ಸಚಿವಾಲಯಗಳು, ಸಂಸ್ಥೆಗಳಿಂದ ಸಲಹೆ ಮತ್ತು ಸೂಚನೆಗಳನ್ನು ಪಡೆದು ಗಣತಿ ಪ್ರಶ್ನೆಗಳನ್ನು ಸಿದ್ಧಪಡಿಸಲಾಗಿದೆ’ ಎಂದು ಹೇಳಿದ್ದರು.

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಬುಧವಾರ ಮಾತುಕತೆಯಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

‘ಬೌ ಬೌ’: ಹಕ್ಕುಚ್ಯುತಿ ಮಂಡನೆ ವರದಿಗೆ ಸಂಸದೆ ಪ್ರತಿಕ್ರಿಯೆ

ನವದೆಹಲಿ (ಪಿಟಿಐ): ಸಂಸತ್ತಿಗೆ ನಾಯಿ ತಂದಿದ್ದನ್ನು ವಿರೋಧಿಸಿ ಆಡಳಿತ ಪಕ್ಷದ ಸದಸ್ಯರು ತಮ್ಮ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ಯತ್ನಿಸುತ್ತಿದ್ದಾರೆ ಎಂಬ ವರದಿಗಳಿಗೆ ಕಾಂಗ್ರೆಸ್ ಸಂಸದೆ ರೇಣುಕಾ ಚೌಧರಿ ಬುಧವಾರ ‘ಬೌ ಬೌ’ ಎಂದು ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ.

ಅವರ ಪ್ರತಿಕ್ರಿಯೆಯು ಮೀಮ್‌ಗಳಿಗೆ ಆಹಾರವಾಗಿದ್ದು, ಬಹಾ ಮೆನ್ ಬ್ಯಾಂಡ್‌ನ ಪ್ರಸಿದ್ಧ ‘ಹೂ ಲೆಟ್ ದಿ ಡಾಗ್ಸ್ ಔಟ್’ ಹಾಡಿಗೆ ಅವರ ಹೇಳಿಕೆಯನ್ನು ರಿಮಿಕ್ಸ್ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಲಾಗಿದ್ದು, ಅದು ವ್ಯಾಪಕವಾಗಿ ಹರಿದಾಡಿದೆ.

ಹಕ್ಕುಚ್ಯುತಿ ಮಂಡನೆ ವರದಿಗಳ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಬೌ ಬೌ... ನಾನು ಇನ್ನೇನು ಹೇಳಲಿ? ಏನು ಸಮಸ್ಯೆಯಾಗಿದೆ ಎಂದು ಮುಂದೆ ನೋಡೋಣ. ಆಗ ತಕ್ಕ ಉತ್ತರ ನೀಡುತ್ತೇನೆ’ ಎಂದಿದ್ದಾರೆ.

ಅಕ್ರಮ ವಲಸಿಗರ ಪತ್ತೆಗೆ ಯೋಜನೆ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದಲ್ಲಿ ಅಕ್ರಮವಾಗಿ ನೆಲಸಿರುವ ರೋಹಿಂಗ್ಯಾ ಮುಸ್ಲಿಮರು ಮತ್ತು ಬಾಂಗ್ಲಾದೇಶಿ ವಲಸಿಗರನ್ನು ಪತ್ತೆ ಮಾಡಲು ಉತ್ತರ ಪ್ರದೇಶ ಸರ್ಕಾರ ಬಂಧನ ಕೇಂದ್ರಗಳನ್ನು ತೆರೆಯುವ ಯೋಜನೆಯನ್ನು ರೂಪಿಸಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ರಾಜ್ಯದ 17 ನಗರಪಾಲಿಕೆಗಳ ವ್ಯಾಪ್ತಿಯಲ್ಲಿ ನೆಲಸಿರುವ ರೋಹಿಂಗ್ಯಾ ಮುಸ್ಲಿಮರು ಮತ್ತು ಬಾಂಗ್ಲಾದೇಶಿ ಪ್ರಜೆಗಳ ಪಟ್ಟಿ ತಯಾರಿಸುವಂತೆ ಬುಧವಾರ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಇವರೆಲ್ಲರೂ ಉತ್ತರ ಪ್ರದೇಶದಲ್ಲಿ ನೈರ್ಮಲ್ಯ ಕೆಲಸಗಳಲ್ಲಿ ಹೆಚ್ಚಿನದಾಗಿ ತೊಡಗಿಸಿಕೊಂಡಿದ್ದಾರೆ. ಇವರ ವಿವರವುಳ್ಳ ಪಟ್ಟಿಯನ್ನು ಆಯುಕ್ತರು ಮತ್ತು ಪೊಲೀಸ್ ಮಹಾ ನಿರೀಕ್ಷಕರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಮುಖ್ಯಾಂಶಗಳು

- ಬಂಧನ ಕೇಂದ್ರಗಳನ್ನು ತೆರೆಯಲಿರುವ ಉತ್ತರ ಪ್ರದೇಶ ಸರ್ಕಾರ
- 17 ನಗರಪಾಲಿಕೆಗಳ ವ್ಯಾಪ್ತಿಯಲ್ಲಿ ನೆಲಸಿರುವ ರೋಹಿಂಗ್ಯಾ ಮುಸ್ಲಿಮರು

ದೆಹಲಿಗೆ ಹೊಂದಿಕೊಂಡ ಪ್ರತಿ ವಲಯದಲ್ಲೂ ಮೊದಲ ಹಂತದಲ್ಲಿ ಬಂಧನ ಕೇಂದ್ರಗಳನ್ನು ತೆರೆಯಲು ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಕ್ರಮ ವಲಸಿಗರನ್ನು ಇರಿಸಲು ಖಾಲಿ ಇರುವ ಸರ್ಕಾರಿ ಕಟ್ಟಡಗಳು, ಸಮುದಾಯ ಕೇಂದ್ರಗಳು ಮತ್ತು ಪೊಲೀಸ್ ಬಿಗಿ ಕಣ್ಗಾವಲಿನ ವಸತಿಗಳನ್ನು ಆಯ್ಕೆ ಮಾಡಲಾಗುತ್ತಿದೆ.

ಅಕ್ರಮ ವಲಸಿಗರಲ್ಲಿ ಬಹುತೇಕರು ಸರ್ಕಾರಿ ಕಲ್ಯಾಣ ಯೋಜನೆಗಳ ಪ್ರಯೋಜನ ಪಡೆಯಲು ವಾಸಸ್ಥಳ ದಾಖಲೆಗಳನ್ನೂ ಪಡೆದಿದ್ದಾರೆ. ಇಂತಹ ದಾಖಲೆಗಳ ಪರಿಶೀಲನೆಗೆ ಸೂಚಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಹಲವು ಜಿಲ್ಲೆಗಳಲ್ಲಿ ಅಕ್ರಮ ವಲಸಿಗರ ಪತ್ತೆ ಕಾರ್ಯ ನಡೆಯುತ್ತಿದೆ. ದಾಖಲೆಗಳ ಪರಿಶೀಲನೆ ಪೂರ್ಣಗೊಳ್ಳುವವರೆಗೆ ಬಂಧನ ಕೇಂದ್ರಗಳಲ್ಲಿಟ್ಟು, ಆನಂತರ ಅವರ ದೇಶಗಳಿಗೆ ಗಡಿಪಾರು ಮಾಡಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಲೋಕಭವನ ಹೆಸರು: ವಾಗ್ವಾದ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಎಲ್ಲಾ ರಾಜಭವನಗಳನ್ನು ‘ಲೋಕಭವನ’ ಎಂದು ಮರುನಾಮಕರಣ ಮಾಡುವ ವಿಚಾರವು ರಾಜ್ಯಸಭೆಯಲ್ಲಿ ಬುಧವಾರ ವಾಗ್ವಾದಕ್ಕೆ ಕಾರಣವಾಯಿತು.

ಶೂನ್ಯ ವೇಳೆಯಲ್ಲಿ ಟಿಎಂಸಿ ಸಂಸದೆ ಡೋಲಾ ಸೇನ್ ಅವರು, ‘ರಾಜಭವನಗಳನ್ನು ಲೋಕಭವನ ಎಂದು ಮರುನಾಮಕರಣ ಮಾಡುವ ಕುರಿತ ಕಳವಳ’ ಎಂಬ ವಿಷಯದ ಬಗ್ಗೆ ಮಾತನಾಡಿದರು.

ಈ ಕುರಿತಂತೆ ಕೇಂದ್ರ ಗೃಹ ಸಚಿವಾಲಯ ನವೆಂಬರ್ 25ರಂದು ನೀಡಿರುವ ನಿರ್ದೇಶನವನ್ನು ಉಲ್ಲೇಖಿಸಿ ಮಾತನಾಡಿದ ಅವರು, ‘ಮರುನಾಮಕರಣದ ಬಗ್ಗೆ ಸಂಸತ್ತು, ವಿಧಾನಸಭೆ ಅಥವಾ ಸಂಪುಟಕ್ಕೂ ಮಾಹಿತಿ ಇಲ್ಲ. ಅವರು ನಿಮ್ಮೊಂದಿಗೂ (ಸಭಾಪತಿ) ಚರ್ಚಿಸಿಲ್ಲ’ ಎಂದರು.

ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳಕ್ಕೆ ನೀಡಬೇಕಿರುವ ನರೇಗಾ ಮತ್ತು ಸರ್ವ ಶಿಕ್ಷಣ ಅಭಿಯಾನ ಯೋಜನೆಗಳ ಅನುದಾನವನ್ನು ನೀಡಿಲ್ಲ ಎಂದು ದೂರಿದರು. ಜನರನ್ನು ನಿರ್ಲಕ್ಷಿಸಿ ಯಾವ ಲೋಕ (ಜನರು) ಭವನದ ಕತೆಯನ್ನು ನಮಗೆ ಹೇಳಹೊರಟಿದ್ದೀರಿ’ ಎಂದು ಪ್ರಶ್ನಿಸಿದರು.

‘ಶೂನ್ಯ ಅವಧಿಯಲ್ಲಿ ಮರು ನಾಮಕರಣದ ಬಗ್ಗೆ ಮಾತನಾಡಲು ಅವಕಾಶ ನೀಡಿದರೆ ಅವರು ವಿಷಯಾಂತರ ಮಾಡುತ್ತಿದ್ದಾರೆ’ ಎಂದು ಜೆ.ಪಿ.ನಡ್ಡಾ ಆಕ್ಷೇಪಿಸಿದರು.

‘ಸಂಬಂಧಿಸದ ವಿಷಯಗಳನ್ನು ಕಡತಕ್ಕೆ ಸೇರಿಸುವುದಿಲ್ಲ’ ಎಂದು ಸಭಾಪತಿ ಸಿ.ಪಿ.ರಾಧಾಕೃಷ್ಣನ್ ತಿಳಿಸಿದರು.

ಈ ವೇಳೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, ‘ಸೇನ್ ಅವರು ಅಸಂಸದೀಯ ಪದಗಳನ್ನು ಬಳಸಿಲ್ಲ. ಎಲ್ಲವೂ ವಿಷಯಕ್ಕೆ ಸಂಬಂಧಿಸಿದ್ದೇ...ನಡ್ಡಾ ಅವರು ಹಸ್ತಕ್ಷೇಪ ಮಾಡುವಂತಿಲ್ಲ. ಅವರು ಹತ್ತಿಕ್ಕಲು ಯತ್ನಿಸುತ್ತಿದ್ದಾರೆ. ಸಂಸದೀಯ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಕಲಾಪ ನಡೆಯುವುದು ಅವರಿಗೆ ಬೇಕಿಲ್ಲ’ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನಡ್ಡಾ ಅವರು, ‘ಹತ್ತಿಕ್ಕುತ್ತಿಲ್ಲ, ಚರ್ಚೆಯ ವಿಷಯಕ್ಕೆ ಸಂಬಂಧಿಸಿದ್ದು ಮಾತ್ರ ಕಡತದಲ್ಲಿ ದಾಖಲಾಗಲಿ ಎಂದು ಮನವಿ ಮಾಡಲಾಗಿದೆಯಷ್ಟೆ’ ಎಂದರು.

ರಾಜನಾಥ ಹೇಳಿಕೆಗೆ ವಿಪಕ್ಷಗಳು ಕಿಡಿ

ನವದೆಹಲಿ: ‘ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಸಾರ್ವಜನಿಕರ ಹಣ ಬಳಸಿಕೊಂಡು ಬಾಬರಿ ಮಸೀದಿ ನಿರ್ಮಿಸಲು ಬಯಸಿದ್ದರು. ಸರ್ದಾರ್ ವಲ್ಲಭಭಾಯಿ ಪಟೇಲರು ಅದಕ್ಕೆ ಅನುಮತಿಸಿರ ಲಿಲ್ಲ’ ಎಂಬ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರ ಹೇಳಿಕೆಗೆ ಲೋಕಸಭೆಯ ವಿವಿಧ ವಿರೋಧಪಕ್ಷಗಳ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪಟೇಲ್ ಅವರ 150ನೇ ಜನ್ಮ ದಿನಾಚರಣೆ ಅಂಗವಾಗಿ ವಡೋದರಾ ಸಮೀಪದ ಸಾಧ್ಲಿ ಗ್ರಾಮದಲ್ಲಿ ಆಯೋಜಿಸಿದ್ದ ‘ಏಕತಾ ಮೆರವಣಿ’ಗೆಯ ಸಭೆಯಲ್ಲಿ ರಾಜನಾಥ ಸಿಂಗ್ ಈ ಮಾತುಗಳನ್ನಾಡಿದ್ದರು.

ಸಚಿವರ ಹೇಳಿಕೆಗೆ ಕಾಂಗ್ರೆಸ್, ಟಿಎಂಸಿ, ಎಸ್‌ಪಿ ಸೇರಿದಂತೆ ಲೋಕಸಭೆಯ ವಿವಿಧ ವಿರೋಧ ಪಕ್ಷಗಳ ಸಂಸದರು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಸಚಿವರು ಕ್ಷಮೆಯಾಚಿಸಬೇಕು ಮತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಸುದ್ದಿಗಾರರೊಂದಿಗೆ ಮಾತನಾಡಿ, ‘ಪ್ರತಿದಿನ ಇಂಥ ಹೇಳಿಕೆಗಳನ್ನು ನೀಡುತ್ತಾ ಹೊಸ ಗೊಂದಲಗಳನ್ನು ಸೃಷ್ಟಿಸುತ್ತಿದ್ದರೆ, ನಮಗೆ ಜನರ ನೈಜ ಸಮಸ್ಯೆಗಳನ್ನು ಚರ್ಚಿಸಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ಗಮನ ಬೇರೆಡೆ ಸೆಳೆಯುವ ಇಂಥ ಹೇಳಿಕೆಗಳನ್ನು ನೀಡಲಾಗುತ್ತಿದೆ’ ಎಂದು ಟೀಕಿಸಿದ್ದಾರೆ.

‘ರಕ್ಷಣಾ ಸಚಿವರು ಏಕೆ ಇಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ. ನೆಹರೂ ಕುರಿತು ಮಾತನಾಡುವಾಗ, ಅವರ ಬಳಿ ಅದಕ್ಕೆ ಸಂಬಂಧಿಸಿದ ದಾಖಲೆಗಳಿರಬೇಕು’ ಎಂದು ಸಹಾರನ್‌ಪುರ ಕ್ಷೇತ್ರದ ಸಂಸದ ಇಮ್ರಾನ್ ಮಸೂದ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಟಿಎಂಸಿ ಸಂಸದ ಕೀರ್ತಿ ಆಜಾದ್, ‘ರಾಜನಾಥ ಸಿಂಗ್ ಅವರು ತಮ್ಮ ಮಾತಿಗೆ ಪುರಾವೆಗಳನ್ನು ಒದಗಿಸಬೇಕು ಅಥವಾ ಕ್ಷಮೆಕೇಳಬೇಕು ಮತ್ತು ರಾಜೀನಾಮೆ ನೀಡಬೇಕು’ ಎಂದಿದ್ದಾರೆ.

ಕರ್ನಾಟಕ ಸರ್ಕಾರ
ವಿದ್ಯುತ್ ಪರಿವೀಕ್ಷಣಾಲಯ, ಬೆಂಗಳೂರು

ಕಛೇರಿ ವಿಳಾಸ ಬದಲಾವಣೆ

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, 2ನೇ ಮಹಡಿ, ನಿರ್ಮಾಣ ಭವನ, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–560010, ವಿಳಾಸದಲ್ಲಿ ಕಾರ್ಯಾಚರಿಸುತ್ತಿದ್ದ ಕಛೇರಿಯನ್ನು **ದಿನಾಂಕ: 01.12.2025** ರಿಂದ ಈ ಕೆಳಕಂಡ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ.

ಕಛೇರಿಯ ಹೊಸ ವಿಳಾಸ:
ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ
ನಂ.135, 1ನೇ ಮತ್ತು 2ನೇ ಮಹಡಿ, 6ನೇ ಅಡ್ಡ ರಸ್ತೆ, ಬಿಬಿಎಂಪಿ ಶಾಲೆಯ ಎದುರು, ಗಾಂಧಿನಗರ, ಬೆಂಗಳೂರು–560 009.
ದೂರವಾಣಿ: 080–23371693 e-mail: ceigdmn@gmail.com

ಇನ್ನು ಮುಂದೆ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಕಛೇರಿಗೆ ಸಂಬಂಧಪಟ್ಟ ಯಾವುದೇ ಕಡತ ಅಥವಾ ಪತ್ರ ವ್ಯವಹಾರಗಳನ್ನು ನೂತನ ವಿಳಾಸಕ್ಕೆ ಕಳುಹಿಸಿಕೊಡಲು ತಿಳಿಸಲಾಗಿದೆ.

ಸಹಿ/–
ಮುಖ್ಯ ವಿದ್ಯುತ್ ಪರಿವೀಕ್ಷಕರು
ಬೆಂಗಳೂರು

ವಾಸಾಸಂಇ/ವಾಪ್ರ/4179/ಆಕಾರ್/2025–26

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಧಾರವಾಡ ವಿಭಾಗ, ಟೋಲ್‌ನಾಕಾ, ಧಾರವಾಡ.
ಇ–ಮೇಲ್:ksdb.dhrdiv@gmail.com ದೂರವಾಣಿ: 0836–2747842

ಸಂ.ಕಕೊಅಮ/ಕಾಪಾಅ/ಧಾ.ವಿ/ತಾಂ.ಶಾ/ಟೆಂ.ಪ್ರ/2025–26/782 ದಿನಾಂಕ:01.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಬರುವ ಧಾರವಾಡ ಉಪವಿಭಾಗಕ್ಕೆ ಸಂಬಂಧಿಸಿಂತೆ, ಸೆಸ್ ಕ್ರಿಯಾ ಯೋಜನೆಯಡಿಯಲ್ಲಿ Upgradation of CC Road in 1300 Houses PMAY-HFA Layout at Yallapur Village of Hubballi City. KSDB/2025-26/RD/WORK_INDENT362 ಮಂಜೂರಾದ ಕಾಮಗಾರಿಯನ್ನು ನಿರ್ವಹಿಸಲು ನೋಂದಾಯಿತ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಕರೆದಿರುವ ಕಾಮಗಾರಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರ/ವಿಚಾರಣೆ ಇ–ಪ್ರೊಕ್ಯೂರ್‌ಮೆಂಟ್‌ನ **https://kppp.karnataka.gov.in** ನಿಂದ ಟೆಂಡರ್ ದಾಖಲೆಗಳನ್ನು **ದಿನಾಂಕ: 03/12/2025** ರಿಂದ ಡೌನಲೋಡ್ ಮಾಡಿಕೊಂಡು ಟೆಂಡರನ್ನು ಸಲ್ಲಿಸಲು ಕೊನೆಯ **ದಿನಾಂಕ: 12.12.2025 ಸಂಜೆ 5.00 ಗಂಟೆಯವರೆಗೆ** ಸ್ವೀಕೃತವಾದ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 15.12.2025** ರಂದು **ಬೆಳಿಗ್ಗೆ 11.00 ಗಂಟೆಯ** ನಂತರ ತೆರೆಯಲಾಗುವುದು.

ಕಾಮಗಾರಿಯ ಗರಿಷ್ಠ ಮೊತ್ತ **ರೂ.200.00 ಲಕ್ಷಗಳು** ಇದ್ದು, ಟೆಂಡರ್‌ನ ಇ.ಎಮ್.ಡಿ, ಗುತ್ತಿಗೆದಾರರ ಅರ್ಹತೆ/ ಟೆಂಡರ್‌ನ ನಿಯಮ / ಟೆಂಡರ್ ಶುಲ್ಕ ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಚೇರಿ ದಿನಗಳಂದು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ,
ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ/ಧಾರವಾಡ/937/
ದೇಶಪಾಂಡೆಪಬ್ಲಿಸಿಟಿ/2025–26

ದಕ್ಷಿಣ ಆಫ್ರಿಕಾಕ್ಕೆ ಅಮೋಘ ಜಯ

ವಿರಾಟ್, ಋತುರಾಜ್ ಶತಕ
• ತಿರುಗೇಟು ನೀಡಿದ ಮರ್ಕರಂ

720 ರನ್ ಈ ಪಂದ್ಯದಲ್ಲಿ ದಾಖಲಾದ ಒಟ್ಟು ಮೊತ್ತ. ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಏಕದಿನ ಪಂದ್ಯದಲ್ಲಿ ದಾಖಲಾದ ಗರಿಷ್ಠ ಮೊತ್ತ ಇದಾಗಿದೆ. ರಾಂಚಿಯಲ್ಲಿ ನ.30ರಂದು ನಡೆದ ಮೊದಲ ಏಕದಿನ ಪಂದ್ಯದಲ್ಲಿ 681 ರನ್ ದಾಖಲಾಗಿದ್ದು ಈವರೆಗಿನ ದಾಖಲೆಯಾಗಿತ್ತು

ರಾಯಪುರ (ಪಿಟಿಐ): ವಿರಾಟ್ ಕೊಹ್ಲಿ ಮತ್ತು ಋತುರಾಜ್ ಗಾಯಕವಾಡ ಅವರ ಶತಕದ ಬಲದಿಂದ ಭಾರತ ತಂಡವು ದೊಡ್ಡ ಮೊತ್ತ ಪೇರಿಸಿತು. ಆ ಗುರಿಯನ್ನು ಮೀರಿ ನಿಂತ ದಕ್ಷಿಣ ಆಫ್ರಿಕಾ ತಂಡವು ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಅಮೋಘ ಜಯ ಸಾಧಿಸಿತು.

ಬುಧವಾರ ಇಲ್ಲಿ ನಡೆದ ಎರಡನೇ ಪಂದ್ಯದಲ್ಲಿ 359 ರನ್‌ಗಳ ಕಠಿಣ ಗುರಿಯನ್ನು ಯಶಸ್ವಿಯಾಗಿ ಮುಟ್ಟಿದ ಪ್ರವಾಸಿ ಬಳಗವು 4 ವಿಕೆಟ್‌ಗಳಿಂದ ಜಯಿಸಿತು. ಏಡನ್ ಮರ್ಕರಂ (110 ರನ್) ಅವರ ಶತಕ, ಮ್ಯಾಥ್ಯೂ ಬ್ರೀಟ್ಜ್ಕಿ (68 ರನ್) ಹಾಗೂ ಡೆವಾಲ್ಡ್ ಬ್ರೆವಿಸ್ (54 ರನ್) ಅವರು ಗೆಲುವಿನ ರೂವಾರಿಗಳಾದರು. ದಕ್ಷಿಣ ಆಫ್ರಿಕಾ ತಂಡವು ಮೂರು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು. ಇನ್ನೊಂದು ಪಂದ್ಯ ಬಾಕಿ ಇದೆ.

ಈ ಪಂದ್ಯದಲ್ಲಿ ವಿರಾಟ್ ಕೊಹ್ಲಿ (102; 93ಎಸೆತ) ಮತ್ತು ಋತುರಾಜ್ ಗಾಯಕವಾಡ (105; 83ಎಸೆತ) ಅವರ ಶತಕಗಳು ಮಾತ್ರ ಭಾರತದ ಅಭಿಮಾನಿಗಳ ಪಾಲಿಗೆ ಸವಿನೆನಪಾಗಿ ಉಳಿದವು.

ದಕ್ಷಿಣ ಆಫ್ರಿಕಾ ತಂಡದ ಏಡನ್ ಮರ್ಕರಂ ಬ್ಯಾಟಿಂಗ್ ಎಎಫ್‌ಪಿ ಚಿತ್ರ


ವಿರಾಟ್ ಶತಕ ಸಂಭ್ರಮ ಪಿಟಿಐ ಚಿತ್ರ

ವಿರಾಟ್ ಏಕದಿನ ಕ್ರಿಕೆಟ್‌ನಲ್ಲಿ ಗಳಿಸಿದ 53ನೇ ಶತಕ ಇದಾಗಿದೆ. ಋತುರಾಜ್ ಅವರಿಗೆ ಮೊದಲನೇಯದ್ದು. ನಾಯಕ ಕೆ.ಎಲ್ ರಾಹುಲ್ (ಔಟಾಗದೇ 66) ಅವರೂ ಉಪಯುಕ್ತ ಕಾಣಿಕೆ ನೀಡಿದರು. ಅದರಿಂದಾಗಿ ಆತಿಥೇಯ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 358 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 49.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 362 ರನ್ ಗಳಿಸಿತು.

ಭಾರತದ ಬೌಲಿಂಗ್ ಇನಿಂಗ್ಸ್‌ನ ಆರಂಭದಲ್ಲಿ ಸ್ವಲ್ಪ ಉತ್ತಮವಾಗಿತ್ತು. ಆದರೆ ನಂತರದ ಹಂತದಲ್ಲಿ ಬೌಲರ್‌ಗಳು ಹೆಚ್ಚು ದಂಡನೆಗೊಳಗಾದರು. ಅಲ್ಲದೇ ಫೀಲ್ಡಿಂಗ್ ಲೋಪಗಳೂ ಹೆಚ್ಚು ರನ್‌ಗಳು ಪ್ರವಾಸಿ ತಂಡದ ಖಾತೆಗೆ ಸೇರಲು ಕಾರಣವಾದವು.

ಐದನೇ ಓವರ್‌ನಲ್ಲಿ ಕ್ವಿಂಟನ್ ಡಿ ಕಾಕ್ ವಿಕೆಟ್ ಗಳಿಸಿದ ಅರ್ಷದೀಪ್ ಸಿಂಗ್ ಭಾರತಕ್ಕೆ ಉತ್ತಮ ಆರಂಭ ನೀಡಿದ್ದರು. ಆರಂಭಿಕ ಬ್ಯಾಟರ್ ಏಡನ್ ಮರ್ಕರಂ ಅವರು 10 ಬೌಂಡರಿ ಮತ್ತು 4 ಸಿಕ್ಸರ್ ಹೊಡೆಯುವ ಮೂಲಕ ಅಮೋಘ ಆಟವಾಡಿದರು. ಅಲ್ಲದೇ ಅವರು ನಾಯಕ ತೆಂಬಾ ಬವುಮಾ (46 ರನ್) ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 101 ರನ್ ಸೇರಿಸಿದರು.

ಈ ಗಟ್ಟಿ ಅಡಿಪಾಯದ ಮೇಲೆ ಬ್ರೀಟ್ಜ್ಕಿ ಮತ್ತು ಡೆವಾಲ್ಡ್ ಅವರು ಗೆಲುವಿನ ಸೌಧ ಕಟ್ಟಿದರು. ಆದರೂ ಕುಲದೀಪ್ ಯಾದವ್ ಮತ್ತು ಅರ್ಷದೀಪ್ ಸಿಂಗ್ ಅವರು ಇನಿಂಗ್ಸ್ ನಿಯಂತ್ರಿಸಲು ಪ್ರಯತ್ನಿಸಿದರು. ಟೋನಿ ಡಿ ಝೋರ್ಜಿ ಗಾಯಗೊಂಡು ನಿವೃತ್ತರಾದರು. ಆದರೆ, ಕೊನೆಯಲ್ಲಿ ಮತ್ತೆ ಮಿಂಚಿದ ಕಾರ್ಬಿನ್ ಬಾಷ್ ಹಾಗೂ ಕೇಶವ್ ಮಹಾರಾಜ್ ಅವರು ತಂಡವನ್ನು ಗೆಲುವಿನ ದಡ ಮುಟ್ಟಿಸಿದರು.

ಸ್ಕೋರ್ ಕಾರ್ಡ್

ಭಾರತ: 50 ಓವರುಗಳಲ್ಲಿ 5 ವಿಕೆಟ್‌ಗೆ 358
ಜೈಸ್ವಾಲ್ ಬಿ ಬಾಷ್ ಬಿ ಯಾನ್ಸೆನ್ 22 (38ಎ, 4x2, 6x1)
ರೋಹಿತ್ ಸಿ ಡಿಕಾಕ್ ಬಿ ಬರ್ಗರ್ 14 (8ಎ, 4x3)
ಕೊಹ್ಲಿ ಸಿ ಮರ್ಕರಂ ಬಿ ಗಿಡಿ 102 (93ಎ, 4x7, 6x2)
ಋತುರಾಜ್ ಸಿ ಡಿ ಝೋರ್ಜಿ ಬಿ ಯಾನ್ಸೆನ್ 105 (83ಎ, 4x12, 6x2)
ರಾಹುಲ್ ಔಟಾಗದೇ 66 (43ಎ, 4x6, 6x2)
ಸುಂದರ್ ರನೌಟ್ (ಬಾಷ್/ಡಿಕಾಕ್) 1 (8ಎ)
ಜಡೇಜ ಔಟಾಗದೇ 24 (27ಎ, 4x2)
ಇತರೆ: 24 (ಲೆಗ್‌ಬೈ 4, ವೈಡ್ 20)
ವಿಕೆಟ್ ಪತನ: 1–40 (ರೋಹಿತ್ ಶರ್ಮಾ, 4.5), 2–62 (ಯಶಸ್ವಿ ಜೈಸ್ವಾಲ್, 9.4), 3–257 (ಋತುರಾಜ್ ಗಾಯಕವಾಡ, 35.4), 4–284 (ವಿರಾಟ್ ಕೊಹ್ಲಿ, 39.1), 5–289 (ವಾಷಿಂಗ್ಟನ್ ಸುಂದರ್, 40.6)
ಬೌಲಿಂಗ್: ನಾಂಡ್ರೆ ಬರ್ಗರ್ 6.1–0–43–1; ಲುಂಗಿ ಗಿಡಿ 10–1–51–1; ಮಾರ್ಕೊ ಯಾನ್ಸೆನ್ 10–1–63–2; ಕೇಶವ ಮಹಾರಾಜ್ 10–0–70–0; ಕಾರ್ಬಿನ್ ಬಾಷ್ 8–0–79–0; ಏಡನ್ ಮರ್ಕರಂ 5.5–0–48–0

ದಕ್ಷಿಣ ಆಫ್ರಿಕಾ: 49.2 ಓವರುಗಳಲ್ಲಿ 6ಕ್ಕೆ 362
ಮರ್ಕರಂ ಸಿ ಋತುರಾಜ್ ಬಿ ಹರ್ಷಿತ್ 110 (98ಎ, 4x10, 6x4)
ಡಿಕಾಕ್ ಸಿ ವಾಷಿಂಗ್ಟನ್ ಬಿ ಅರ್ಷದೀಪ್ 8 (11ಎ, 4x2)
ಬವುಮಾ ಸಿ ಹರ್ಷಿತ್ ಬಿ ಬವುಮಾ 46 (48ಎ, 4x3, 6x1)
ಬ್ರೀಟ್ಜ್ಕಿ ಎಲ್‌ಬಿಡಬ್ಲ್ಯು ಬಿ ಪ್ರಸಿದ್ಧ 68 (64ಎ, 4x5)
ಬ್ರೆವಿಸ್ ಸಿ ಜೈಸ್ವಾಲ್ ಬಿ ಕುಲದೀಪ್ 54 (34ಎ, 4x1, 6x5)
ಝೋರ್ಜಿ ಗಾಯಾಳಾಗಿ ನಿವೃತ್ತಿ 17 (11ಎ, 6x1)
ಯಾನ್ಸೆನ್ ಸಿ ಋತುರಾಜ್ ಹಿ ಅರ್ಷದೀಪ್ 2 (2ಎ)
ಬಾಷ್ ಔಟಾಗದೇ 29 (15ಎ, 4x4)
ಮಹಾರಾಜ್ ಔಟಾಗದೇ 10 (14ಎ)
ಇತರೆ: 18 (ಬೈ 1, ಲೆಗ್‌ಬೈ 5, ನೋಬಾಲ್ 1, ವೈಡ್ 11)
ವಿಕೆಟ್ ಪತನ: 1–26 (ಕ್ವಿಂಟನ್ ಡಿಕಾಕ್, 4.5), 2–127 (ತೆಂಬಾ ಬವುಮಾ, 20.5), 3–197 (ಏಡನ್ ಮರ್ಕರಂ, 29.6), 4–289 (ಡೆವಾಲ್ಡ್ ಬ್ರೆವಿಸ್, 40.3), 5–317 (ಮ್ಯಾಥ್ಯೂ ಬ್ರೀಟ್ಜ್ಕಿ , 43.5), 6–322 (ಮಾರ್ಕೊ ಯಾನ್ಸೆನ್, 44.3), 6–322* (ಟೋನಿ ಡಿ ಝೋರ್ಜಿ ನಿವೃತ್ತಿ)
ಬೌಲಿಂಗ್: ಅರ್ಷದೀಪ್ 10–0–54–2; ಹರ್ಷಿತ್ ರಾಣಾ 10–1–70–1; ಪ್ರಸಿದ್ಧ ಕೃಷ್ಣ 8.2–0–85–2; ವಾಷಿಂಗ್ಟನ್ ಸುಂದರ್ 4–0–28–0; ರವೀಂದ್ರ ಜಡೇಜ 7–0–41–0; ಕುಲದೀಪ್ ಯಾದವ್ 10–0–78–1.

ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 4 ವಿಕೆಟ್ ಜಯ, ಸರಣಿ 1–1 ಸಮಬಲ

ಟಿ20 ತಂಡಕ್ಕೆ ಮರಳಿದ ಗಿಲ್, ಹಾರ್ದಿಕ್

ರಾಯಪುರ(ಪಿಟಿಐ): ಬ್ಯಾಟರ್ ಶುಭಮನ್ ಗಿಲ್ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಗಾಯದಿಂದ ಚೇತರಿಸಿಕೊಂಡಿದ್ದು ದಕ್ಷಿಣ ಆಫ್ರಿಕಾ ಎದುರಿನ ಟಿ20 ಕ್ರಿಕೆಟ್ ಸರಣಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡವನ್ನು ಬುಧವಾರ ಪ್ರಕಟಿಸಲಾಗಿದೆ. ಗಿಲ್ ಅವರು ಉಪನಾಯಕರಾಗಿ ಆಡುವರು. ಹಾರ್ದಿಕ್ ಕೂಡ ತಂಡದಲ್ಲಿದ್ದಾರೆ.

ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯ ಮಧ್ಯದಲ್ಲಿ ಕತ್ತು ನೋವಿನಿಂದ ಬಳಲಿದ್ದ ಗಿಲ್ ಚಿಕಿತ್ಸೆಗೆ ತೆರಳಿದ್ದರು. ಅವರು ಏಕದಿನ ಸರಣಿಯಲ್ಲಿಯೂ ಆಡಿರಲಿಲ್ಲ. ಈಗಲೂ ಅವರ ಫಿಟ್‌ನೆಸ್ ಕುರಿತು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ವೈದ್ಯರು ಹಸಿರು ನಿಶಾನೆ ತೋರಬೇಕಿದೆ. ಅದರ ನಂತರವಷ್ಟೇ ಅವರು ಆಡುವುದು ಖಚಿತವಾಗಲಿದೆ.

ಹಾರ್ದಿಕ್ ಏಷ್ಯಾ ಕಪ್ ಟೂರ್ನಿಯಲ್ಲಿಯೂ ಆಡಿರಲಿಲ್ಲ. ಅದರ ನಂತರ ಆಸ್ಟ್ರೇಲಿಯಾ ಎದುರಿನ ಐದು ಪಂದ್ಯಗಳ ಸರಣಿಯಲ್ಲಿಯೂ ಕಣಕ್ಕಿಳಿಯಲಿಲ್ಲ. ಗಾಯದಿಂದ ಚೇತರಿಸಿಕೊಂಡ ನಂತರ ಅವರು ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಆಡಿದ್ದರು. ಪಂಜಾಬ್ ಎದುರಿನ ಪಂದ್ಯದಲ್ಲಿ ಆಡಿದ್ದ ಅವರು ತಮ್ಮ ಫಿಟ್‌ನೆಸ್ ಸಾಬೀತುಪಡಿಸಿದ್ದರು.

ಟಿ20 ಸರಣಿಯಲ್ಲಿ 5 ಪಂದ್ಯ ನಡೆಯಲಿವೆ. ಕಟಕ್ (ಡಿ.9), ಚಂಡೀಗಡ (ಡಿ. 11), ಧರ್ಮಶಾಲಾ (ಡಿ. 14), ಲಖನೌ (ಡಿ. 17) ಮತ್ತು ಅಹಮದಾಬಾದ್ (ಡಿ.19)ನಲ್ಲಿ ಪಂದ್ಯಗಳು ನಡೆಯಲಿವೆ.

ತಂಡ: ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್ (ಉಪ ನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ಜಿತೇಶ್ ಶರ್ಮಾ, ಸಂಜು ಸ್ಯಾಮ್ಸನ್ (ಇಬ್ಬರೂ ವಿಕೆಟ್‌ಕೀಪರ್), ಜಸ್‌ಪ್ರೀತ್ ಬೂಮ್ರಾ, ವರುಣ ಚಕ್ರವರ್ತಿ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ವಾಷಿಂಗ್ಟನ್ ಸುಂದರ್.

ಹಾರ್ದಿಕ್ ಪಾಂಡ್ಯ (ಎಡ), ಶುಭಮನ್ ಗಿಲ್

ಆ್ಯಷಸ್ ಪಿಂಕ್‌ಬಾಲ್ ಟೆಸ್ಟ್ ಇಂದಿನಿಂದ

ಬ್ರಿಸ್ಬೇನ್ (ಎಪಿ): ಎರಡೇ ದಿನಗಳಲ್ಲಿ ಮೊದಲ ಟೆಸ್ಟ್ ಪಂದ್ಯ ಗೆದ್ದ ಆಸ್ಟ್ರೇಲಿಯಾ ತಂಡವು ಗುರುವಾರ ಆರಂಭವಾಗುವ ಆ್ಯಷಸ್ ಸರಣಿಯ ಎರಡನೇ ಟೆಸ್ಟ್‌ನಲ್ಲಿ ಪ್ರವಾಸಿ ಇಂಗ್ಲೆಂಡ್ ತಂಡವನ್ನು ಹೆಚ್ಚಿನ ವಿಶ್ವಾಸದೊಡನೆ ಎದುರಿಸಲಿದೆ. ಗ್ಯಾಬಾದಲ್ಲಿ ನಡೆಯುವ ಈ ಪಂದ್ಯ ಪಿಂಕ್‌ಬಾಲ್ (ಹಗಲು–ರಾತ್ರಿ) ಟೆಸ್ಟ್ ಆಗಿದೆ.

ಪರ್ತ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಸ್ಟೀವನ್ ಸ್ಮಿತ್ ಸಾರಥ್ಯದ ಆಸ್ಟ್ರೇಲಿಯಾ ಎಂಟು ವಿಕೆಟ್‌ಗಲಿಂದ ಜಯಗಳಿಸಿತ್ತು.

ಆಸ್ಟ್ರೇಲಿಯಾದ ಆರಂಭ ಆಟಗಾರ ಉಸ್ಮಾನ್ ಖ್ವಾಜಾ ಅವರು ಬೆನ್ನುನೋವಿನ ಕಾರಣ ಈ ಪಂದ್ಯದಲ್ಲಿ ಆಡುತ್ತಿಲ್ಲ. ಹೀಗಾಗಿ ಜೋಶ್ ಇಂಗ್ಲಿಸ್ ಅವರು ಮಧ್ಯಮ ಕ್ರಮಾಂಕದಲ್ಲಿ ಆಡಲಿದ್ದಾರೆ. ಟ್ರಾವಿಸ್ ಹೆಡ್ ಮೊದಲ ಟೆಸ್ಟ್‌ನಲ್ಲಿ ಆರಂಭ ಆಟಗಾರನಾಗಿ ಆಡಿದ್ದರು.

ಪ್ಯಾಟ್ ಕಮಿನ್ಸ್ ಅವರು ಆಡುವುದು ಇನ್ನೂ ಖಚಿತವಾಗಿಲ್ಲ. ಕಮಿನ್ಸ್ ಮೊದಲ ಟೆಸ್ಟ್‌ನಲ್ಲಿ ಆಡಿರಲಿಲ್ಲ. ಆದರೆ ಬುಧವಾರ ಪಿಚ್ ಪರಿಶೀಲನೆ ವೇಳೆ ಹಂಗಾಮಿ ನಾಯಕ ಸ್ಮಿತ್ ಮತ್ತು ಕೋಚ್ ಆ್ಯಂಡ್ರೂ ಮೆಕ್‌ಡೊನಾಲ್ಡ್ ಅವರನ್ನು ಸೇರಿಕೊಂಡರು. 'ನೆಟ್ಸ್‌ನಲ್ಲಿ ಬೌಲಿಂಗ್ ನೋಡಿದಾಗ ಅವರು ಚೆನ್ನಾಗಿಯೇ ಕಂಡರು' ಎಂದು ಸ್ಮಿತ್ ಅವರು ಪೂರ್ಣಾವಧಿ ನಾಯಕನ ಬಗ್ಗೆ ತಿಳಿಸಿದರು.

ಇಂಗ್ಲೆಂಡ್ ತಂಡಕ್ಕೆ ಜ್ಯಾಕ್ಸ್

ಬ್ರಿಸ್ಬೇನ್ (ಎಪಿ): ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಅವರು ಆಸ್ಟ್ರೇಲಿಯಾ ವಿರುದ್ಧದ ಆ್ಯಷಸ್ ಸರಣಿಯ ಎರಡನೇ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ಪರ ಕಣಕ್ಕಿಳಿಯಲಿದ್ದಾರೆ. ಅವರು ಗಾಯಾಳು ಮಾರ್ಕ್ ವುಡ್ ಬದಲಿಗೆ ಆಡುವ 11ರ ಬಳಗದಲ್ಲಿ ಸ್ಥಾನ ಪಡೆದಿದ್ದಾರೆ.

ಜ್ಯಾಕ್ಸ್ ಅವರು 2022ರ ಡಿಸೆಂಬರ್‌ನಲ್ಲಿ ಪಾಕಿಸ್ತಾನ ವಿರುದ್ಧ ಕೊನೆಯ ಬಾರಿ ಟೆಸ್ಟ್ ಪಂದ್ಯ ಆಡಿದ್ದರು. ಬಳಿಕ ಸೀಮಿತ ಓವರ್‌ಗಳ ಪಂದ್ಯಗಳಲ್ಲಷ್ಟೇ ಆಡಿದ್ದರು.

ಹಗಲು–ರಾತ್ರಿ ಟೆಸ್ಟ್‌ಗಳಲ್ಲಿ ಆಸ್ಟ್ರೇಲಿಯಾ ಅತ್ಯುತ್ತಮ ದಾಖಲೆ ಹೊಂದಿದೆ. ತನ್ನ ನೆಲದಲ್ಲಿ ನಡೆದ 13 ಇಂಥ ಪಂದ್ಯಗಳಲ್ಲಿ 12ರಲ್ಲಿ ಜಯಗಳಿಸಿದೆ. ಒಂದು ಟೆಸ್ಟ್‌ನಲ್ಲಿ (2023ರ ಜನವರಿಯಲ್ಲಿ) ಮಾತ್ರ ವೆಸ್ಟ್ ಇಂಡೀಸ್ ಎದುರು ಎಂಟು ರನ್‌ಗಳ ಅನಿರೀಕ್ಷಿತ ಸೋಲು ಅನುಭವಿಸಿತ್ತು. ಗ್ಯಾಬಾದಲ್ಲಿ ಇಂಗ್ಲೆಂಡ್ 1986ರಿಂದೀಚೆಗೆ ಒಮ್ಮೆಯೂ ಆ್ಯಷಸ್ ಟೆಸ್ಟ್ ಪಂದ್ಯ ಗೆದ್ದಿಲ್ಲ.

ಚಿಟಿಕೆ ಸುದ್ದಿ

ಕ್ರಿಕೆಟ್‌ಗೆ ಮೋಹಿತ್ ಶರ್ಮಾ ವಿದಾಯ

ನವದೆಹಲಿ (ಪಿಟಿಐ): ಭಾರತ ತಂಡದ ವೇಗದ ಬೌಲರ್ ಮೋಹಿತ್ ಶರ್ಮಾ (37) ಅವರು ಎಲ್ಲ ಮಾದರಿಯ ಕ್ರಿಕೆಟ್‌ಗೆ ಬುಧವಾರ ನಿವೃತ್ತಿ ಘೋಷಿಸಿದರು.

2013ರಲ್ಲಿ ಅವರು ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು. 26 ಏಕದಿನ ಪಂದ್ಯಗಳಲ್ಲಿ 26 ವಿಕೆಟ್, ಎಂಟು ಟಿ20 ಪಂದ್ಯಗಳಿಂದ ಆರು ವಿಕೆಟ್ ಗಳಿಸಿದ್ದಾರೆ. 2015ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ಭಾರತ ತಂಡದಲ್ಲಿಯೂ ಅವರಿದ್ದರು. ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಅವರು 'ಡೆತ್ ಓವರ್' ಪರಿಣತರಾಗಿ ಗುರುತಿಸಿಕೊಂಡಿದ್ದರು. ಅವರು ಕಿಂಗ್ಸ್ ಇಲೆವನ್ ಪಂಜಾಬ್, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳಲ್ಲಿಯೂ ಆಡಿದ್ದರು.

ಅಕ್ಷತ್ ಪ್ರಭಾಕರ್ ಶತಕ; ಕರ್ನಾಟಕ ಹೋರಾಟ

ಬೆಂಗಳೂರು: ಅಕ್ಷತ್ ಪ್ರಭಾಕರ್ ಅವರು ಅಮೂಲ್ಯ ಶತಕದ (112, 4x11, 6x3) ಮೂಲಕ ಕರ್ನಾಟಕ ತಂಡದ ಸೋಲನ್ನು ಬಹುತೇಕ ತಪ್ಪಿಸಿದರು. ಅವರ ಆಟದಿಂದಾಗಿ ಕರ್ನಾಟಕ ತಂಡವು ಅನಂತಪುರದಲ್ಲಿ ನಡೆಯುತ್ತಿರುವ ಬಿಸಿಸಿಐ ಕೂಚ್ ಬಿಹಾರ್ ಟ್ರೋಫಿ ಪಂದ್ಯದ ಮೂರನೇ ದಿನ ಆತಿಥೇಯ ಆಂಧ್ರ ತಂಡಕ್ಕೆ ದಿಟ್ಟ ಹೋರಾಟ ನೀಡಿತು.

ಆದರೆ ಸಿ ಗುಂಪಿನ ಈ ಪಂದ್ಯದಲ್ಲಿ ಬುಧವಾರ ಆಂಧ್ರ ತಂಡವು 23 ರನ್‌ಗಳ ಮೊದಲ ಇನಿಂಗ್ಸ್ ಪಡೆಯುವಲ್ಲಿ ಯಶಸ್ವಿಯಾಯಿತು. ಆಂಧ್ರದ 415 ರನ್‌ಗಳಿಗೆ ಉತ್ತರವಾಗಿ ಕರ್ನಾಟಕದ ಮೊದಲ ಇನಿಂಗ್ಸ್ 148.1 ಓವರುಗಳಲ್ಲಿ 392 ರನ್‌ಗಳಿಗೆ ಕೊನೆಗೊಂಡಿತು. ದಿನದಾಟ ಮುಗಿದಾಗ ಆಂಧ್ರ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 36 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಆಂಧ್ರ: 415 ಮತ್ತು 18.1 ಓವರುಗಳಲ್ಲಿ 2ಕ್ಕೆ 36; ಕರ್ನಾಟಕ: 148.1 ಓವರುಗಳಲ್ಲಿ 392 (ಮಣಿಕಾಂತ್ ಶಿವಾನಂದ 56, ಸಿದ್ಧಾರ್ಥ ಎ. 83, ಅಕ್ಷತ್ ಪ್ರಭಾಕರ್ 112, ಧ್ಯಾನ್ ಹಿರೇಮಠ 47; ಸಿದ್ದು ಕಾರ್ತಿಕ್ ರೆಡ್ಡಿ 107ಕ್ಕೆ5).

ಹಾಕಿ: ಜರ್ಮನಿಗೆ ಮಣಿದ ಭಾರತ

ಸ್ಯಾಂಟಿಯಾಗೊ: ಜರ್ಮನಿ ತಂಡವು, ಮಹಿಳಾ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಬುಧವಾರ ಭಾರತ ತಂಡವನ್ನು 3–1 ಗೋಲುಗಳಿಂದ ಸೋಲಿಸಿತು.

ಈ ಸೋಲಿನಿಂದಾಗಿ ಕ್ವಾರ್ಟರ್‌ಫೈನಲ್ ತಲುಪುವ ಭಾರತದ ಆಸೆ ಈಗ ತೂಗುಯ್ಯಾಲೆಯಲ್ಲಿದೆ. ಭಾರತ ತಂಡ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ ಗೆಲ್ಲಲೇಬೇಕು. ಜೊತೆಗೆ ಆರು ಗುಂಪುಗಳಲ್ಲಿ ಎರಡನೇ ಸ್ಥಾನ ಪಡೆದ ತಂಡಗಳಲ್ಲಿ ಗೋಲು ಆಧಾರದ ಮೇಲೆ ಮೊದಲ ಅಥವಾ ಎರಡನೇ ಸ್ಥಾನ ಪಡೆಯಬೇಕಾಗುತ್ತದೆ.

ರ್‍ಯಾಂಕಿಂಗ್: ನಾಲ್ಕನೇ ಸ್ಥಾನಕ್ಕೆ ಕೊಹ್ಲಿ

ದುಬೈ (ಪಿಟಿಐ): ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಶತಕ ಬಾರಿಸಿದ್ದ ಭಾರತದ ಬ್ಯಾಟಿಂಗ್ ತಾರೆ ವಿರಾಟ್ ಕೊಹ್ಲಿ ಅವರು ಬುಧವಾರ ಪ್ರಕಟವಾದ ಐಸಿಸಿ ಏಕದಿನ ಬ್ಯಾಟರ್‌ಗಳ ರ್‍ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಏರಿದ್ದಾರೆ.

37 ವರ್ಷ ವಯಸ್ಸಿನ ಕೊಹ್ಲಿ ಭಾನುವಾರ ನಡೆದ ಆ ಪಂದ್ಯದಲ್ಲಿ 120 ಎಸೆತಗಳಲ್ಲಿ 135 ರನ್ ಗಳಿಸಿ 50 ಓವರುಗಳ ಮಾದರಿಯಲ್ಲಿ 52ನೇ ಶತಕ ಬಾರಿಸಿದ್ದರು.

ಕೊಹ್ಲಿ 751 ರ್‍ಯಾಂಕಿಂಗ್ ಪಾಯಿಂಟ್ಸ್ ಗಳಿಸಿದ್ದಾರೆ. ರೋಹಿತ್ ಶರ್ಮಾ (783) ಅವರು ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ನ್ಯೂಜಿಲೆಂಡ್‌ನ ಡೇರಿಲ್ ಮಿಚೆಲ್ (766), ಅಫ್ಗಾನಿಸ್ತಾನದ ಇಬ್ರಾಹಿಂ ಜದ್ರಾನ್ (764) ಮೂರನೇ ಸ್ಥಾನದಲ್ಲಿದ್ದಾರೆ.

ಏಕದಿನ ತಂಡದ ನಾಯಕ ಶುಭಮನ್ ಗಿಲ್ (5ನೇ ಸ್ಥಾನ) ಅವರನ್ನು ಕೊಹ್ಲಿ ಅವರು ಹಿಂದೆಹಾಕಿದ್ದಾರೆ.

ಬೌಲರ್‌ಗಳ ವಿಭಾಗದಲ್ಲಿ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರು ಎರಡು ಸ್ಥಾನ ಬಡ್ತಿ ಪಡೆದು ಆರನೇ ಸ್ಥಾನಕ್ಕೇರಿ ದ್ದಾರೆ. ಅವರು ಮೊದಲ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿದ್ದರು.

ಟೆಸ್ಟ್ ಬೌಲರ್‌ಗಳ ವಿಭಾಗದಲ್ಲಿ ಜಸ್‌ಪ್ರೀತ್ ಬೂಮ್ರಾ 879 ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ. ನ್ಯೂಜಿಲೆಂಡ್‌ನ ಮ್ಯಾಟ್ ಹೆನ್ರಿ (8467) ಎರಡನೇ ಸ್ಥಾನದಲ್ಲಿದ್ದಾರೆ.

ರಾಣಾಗೆ ವಾಗ್ದಂಡನೆ

ದುಬೈ (ಪಿಟಿಐ): ರಾಂಚಿಯಲ್ಲಿ ನಡೆದ ಮೊದಲ ಏಕದಿನ ಕ್ರಿಕೆಟ್ ಪಂದ್ಯದ ವೇಳೆ ದಕ್ಷಿಣ ಆಫ್ರಿಕಾದ ಬ್ಯಾಟರ್ ಡೆವಾಲ್ಡ್ ಬ್ರೆವಿಸ್ ವಿರುದ್ಧ ಆಕ್ರಮಣಕಾರಿ ರೀತಿ ವರ್ತಿಸಿದ್ದಕ್ಕೆ ಭಾರತ ತಂಡದ ವೇಗದ ಬೌಲರ್ ಹರ್ಷಿತ್ ರಾಣಾ ಅವರಿಗೆ ಐಸಿಸಿ ವಾಗ್ದಂಡನೆ ವಿಧಿಸಿದೆ. ಅವರ ಶಿಸ್ತಿನ ದಾಖಲೆಗೆ ಒಂದು ಡಿಮೆರಿಟ್ ಪಾಯಿಂಟ್ ಸಹ ಸೇರಿಸಿದೆ.

ಜರ್ಸಿ ಅನಾವರಣ

ಪಿಟಿಐ ಚಿತ್ರ

ಭಾರತ ಏಕದಿನ ಕ್ರಿಕೆಟ್ ತಂಡದ ಆಟಗಾರ ರೋಹಿತ್ ಶರ್ಮಾ (ಎಡದಿಂದ ಮೂರನೆಯವರು) ಅವರು 2026ರ ಟಿ–20 ವಿಶ್ವಕಪ್‌ನ ಭಾರತ ತಂಡದ ಜರ್ಸಿಯನ್ನು ಬುಧವಾರ ಅನಾವರಣಗೊಳಿಸಿದರು. ರಾಯಪುರದ ಶಹೀದ್ ವೀರ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಎರಡನೇ ಏಕದಿನ ಪಂದ್ಯದ ಇನಿಂಗ್ಸ್ ವಿರಾಮದ ವೇಳೆ ಅನಾವರಣ ಕಾರ್ಯಕ್ರಮ ನಡೆಯಿತು. ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ, ಬ್ಯಾಟರ್ ತಿಲಕ್ ವರ್ಮಾ ಹಾಗೂ 'ಅಡಿದಾಸ್ ಇಂಡಿಯಾ'ದ ಪ್ರಧಾನ ವ್ಯವಸ್ಥಾಪಕ ವಿಜಯ್ ಚೌಹಾನ್ ಇದ್ದಾರೆ

ಗ್ರಾಮಾಂತರ ಕ್ರಿಕೆಟ್ ಬೆಳವಣಿಗೆಗೆ ಬದ್ಧ

2ನೇ ಹಂತದ ನಗರಗಳಲ್ಲಿ ಸೌಲಭ್ಯ ಅಭಿವೃದ್ಧಿ: ಬ್ರಿಜೇಶ್ ಬಣ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಹೆಚ್ಚು ಅವಕಾಶ ನೀಡಲು ನಾವು ಬದ್ಧ. ಬೆಂಗಳೂರಿನಲ್ಲಿ ಆಯೋಜಿಸುವ 12 ವರ್ಷದೊಳಗಿನವರ ವಿಭಾಗದ ಟೂರ್ನಿಯನ್ನು ರಾಜ್ಯದ ಇತರೆ ಭಾಗಗಳಿಗೂ ವಿಸ್ತರಿಸಲಾಗುವುದು' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಚುನಾವಣೆಯಲ್ಲಿ ಸ್ಪರ್ಧಿಸಿರುವ 'ಟೀಮ್ ಬ್ರಿಜೇಶ್' ಬಣದ ಅಭ್ಯರ್ಥಿಗಳು ಭರವಸೆ ನೀಡಿದರು.

'ಮೂರೂವರೆ ದಶಕಗಳ ಕಾಲ ಕ್ರೀಡಾಪಟು, ಆಡಳಿತಗಾರ, ಪ್ರವರ್ತಕರಾಗಿ ಕೆಲಸ ಮಾಡಿದ ಅನುಭವ ಇದ್ದು, ಕೆಎಸ್‌ಸಿಎ ಆಡಳಿತವನ್ನು ಒಂದು ತಂಡವಾಗಿ ಮುನ್ನಡೆಸುವೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವೆ' ಎಂದು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ (ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕಾ ಸಮೂಹ) ನಿರ್ದೇಶಕ ಕೆ.ಎನ್. ಶಾಂತಕುಮಾರ್ ಬುಧವಾರ ನಡೆದ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದ ಎರಡನೇ ಹಂತದ ನಗರಗಳಲ್ಲಿ ಕೆಎಸ್‌ಸಿಎಯಿಂದ ತರಬೇತಿ, ಒಳಾಂಗಣ ಕ್ರೀಡಾಂಗಣಗಳ ನಿರ್ಮಾಣ, ಶಾಲಾ ಹಂತದಲ್ಲಿ ಕ್ರಿಕೆಟ್ ಉತ್ತೇಜಿಸುವ ಗುರಿ ಇದೆ ಎಂದೂ ಹೇಳಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಭಾರತ ತಂಡದ ಮಾಜಿ ಆಟಗಾರ ಬ್ರಿಜೇಶ್ ಪಟೇಲ್, 'ಶಾಂತಕುಮಾರ್ ಸಮರ್ಥ ಕ್ರೀಡಾ ಆಡಳಿತಗಾರ. ಖಂಡಿತವಾಗಿಯೂ ಕೆಎಸ್‌ಸಿಎಯನ್ನು ತಂಡವಾಗಿ ಮುನ್ನಡೆಸಿ ಉತ್ತಮ ಆಡಳಿತ ನೀಡಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಕಳೆದ ಅವಧಿಯಲ್ಲಿ ನಮ್ಮ ತಂಡವು ದುಂದುವೆಚ್ಚಕ್ಕೆ ಅವಕಾಶ ಕೊಟ್ಟಿಲ್ಲ. ಸಾರ್ವಜನಿಕ ಹಣವನ್ನು ಜವಾಬ್ದಾರಿಯುತವಾಗಿ ಬಳಕೆ ಮಾಡಿದ ಪರಿಣಾಮ ಕೆಎಸ್‌ಸಿಎ ಖಾತೆಯಲ್ಲಿ ಈಗ ₹400 ಕೋಟಿ ಠೇವಣಿ ಇದೆ' ಎಂದು ಹೇಳಿದರು.

'ಜೂನ್ 4ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದ ದುರ್ಘಟನೆಗೆ ಕೆಎಸ್‌ಸಿಎಯನ್ನು ಹೊಣೆ ಆಗಿಸುವುದು ಸಲ್ಲ. ದುರ್ಘಟನೆ ನಡೆದದ್ದು ಕ್ರಿಕೆಟ್ ಪಂದ್ಯದ ಸಮಯದಲ್ಲಿ ಅಲ್ಲ. ಬದಲಿಗೆ ಕಾರ್ಯಕ್ರಮವೊಂದರ ಆಯೋಜನೆ ವೇಳೆ. ಅದು ನಮ್ಮ (ಕೆಎಸ್‌ಸಿಎ) ಕೈಯಲ್ಲಿ ಇರಲಿಲ್ಲ. ಈಗ ಚುನಾವಣೆ ದೃಷ್ಟಿಯಿಂದ ಕೆಎಸ್‌ಸಿಎ ಮೇಲೆ ಆರೋಪ ಮಾಡಿ ಸಂಸ್ಥೆಯ ಹಿತಕ್ಕೆ ಧಕ್ಕೆ ತರುವುದು ಸರಿಯಲ್ಲ' ಎಂದು ಹೇಳಿದ ಬ್ರಿಜೇಶ್, 'ಚುನಾವಣೆಯ ನಂತರ ಕ್ರೀಡಾಂಗಣದ ಪ್ರವೇಶ ಹಾಗೂ ನಿರ್ಗಮನದ ದ್ವಾರಗಳಲ್ಲಿ ನವೀಕರಣ ಕಾರ್ಯವನ್ನು ನೂತನ ಸಮಿತಿ ಕೈಗೆತ್ತಿಕೊಳ್ಳಲಿದೆ' ಎಂದರು.

'ದಾವಣಗೆರೆ, ಹಾಸನ, ಕೊಡಗಿನ ಮೂರ್ನಾಡಿನಲ್ಲಿ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡಿದ್ದೇವೆ. ಅಧಿಕಾರಕ್ಕೆ ಬರುತ್ತಿದ್ದಂತೆಯೇ ತುಮಕೂರು, ಮೈಸೂರಿನಲ್ಲಿ ನೂತನ ಕ್ರೀಡಾಂಗಣ ನಿರ್ಮಿಸಾಗುವುದು' ಎಂದರು.

ಟೀಮ್ ಬ್ರಿಜೇಶ್ ಬಣದ ಅಭ್ಯರ್ಥಿಗಳಾದ ಇ.ಎಸ್. ಜಯರಾಮ್, ಡಿ.ವಿನೋದ್ ಶಿವಪ್ಪ, ಬಿ.ಕೆ. ರವಿ, ತಿಲಕ್ ನಾಯ್ಡು, ಡಿ.ಎಸ್. ಅರುಣ್, ವೀರಣ್ಣ ಸವಡಿ, ಡಿ.ಆರ್.ನಾಗರಾಜ್ ಇದ್ದರು.

ಟಿ.ಟಿ: ಅಭಿನವ್, ಸಹನಾಗೆ ಸಿಂಗಲ್ಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿನವ್ ಕೆ.ಮೂರ್ತಿ ಮತ್ತು ಸಹನಾ ಎಚ್.ಮೂರ್ತಿ ಅವರು ಬುಧವಾರ ಮುಕ್ತಾಯಗೊಂಡ 27ನೇ ಡಾ.ಎಂ.ಎಸ್.ರಾಮಯ್ಯ ಸ್ಮರಣಾರ್ಥ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಸಹನಾ ಮೂರ್ತಿ, ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ 8–11, 11–6, 9–11, 10–12, 11–3, 11–6, 11–7 ರಿಂದ ಹಿಮಾನ್ವಿ ಚೌಧರಿ ಅವರನ್ನು ಸೋಲಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಹಿಮಾನ್ವಿ 1–11, 16–14, 11–7, 11–6, 11–6 ರಿಂದ ವೇದಾಲಕ್ಷ್ಮಿ ಡಿ.ಕೆ. ಅವರನ್ನು, ಸಹನಾ ಮೂರ್ತಿ 11–8, 11–9, 11–5, 11–9 ರಿಂದ ಖುಷಿ ಅವರನ್ನು ಪರಾಭವಗೊಳಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಅಭಿನವ್ 13–11, 11–7, 11–6, 5–11, 11–6 ರಿಂದ ಅಥರ್ವ ನವರಂಗೆ ವಿರುದ್ಧ ಗೆಲುವು ಸಾಧಿಸಿದರು.

(ಎಡದಿಂದ) ಪ್ರಶಸ್ತಿ ಪತ್ರದೊಂದಿಗೆ ಅಭಿನವ್ ಕೆ. ಮೂರ್ತಿ, ಸಹನಾ ಎಚ್ ಮೂರ್ತಿ ಹಾಗೂ ಆರ್ಣವ್ ಎನ್.

ಸೆಮಿಫೈನಲ್ ಪಂದ್ಯಗಳಲ್ಲಿ ಅಭಿನವ್ 8–11, 11–8, 9–11, 11–8, 11–4, 11–8 ರಿಂದ ಆರ್ಣವ್ ಎನ್. ಅವರನ್ನು, ಅಥರ್ವ 11–4, 11–6, 11–13, 11–7, 6–11, 11–9 ರಿಂದ ರಾಜು ಕುಂದು ಅವರನ್ನು ಸೋಲಿಸಿದ್ದರು.

ಹಿಮಾನ್ವಿ, ಆರ್ಣವ್‌ಗೆ ಪ್ರಶಸ್ತಿ: ಮಹಿಳೆಯರ ಸಿಂಗಲ್ಸ್‌ನಲ್ಲಿ ರನ್ನರ್ಸ್ ಅಪ್ ಆದ ಹಿಮಾನ್ವಿ ಅವರು 19 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದು ಸಂಭ್ರಮಿಸಿದರು. ಫೈನಲ್ ಹಣಾಹಣಿಯಲ್ಲಿ ಅವರು 11–9, 13–15, 11–9, 11–8, 9–11, 11–8 ರಿಂದ ಹಿಯಾ ಸಿಂಗ್ ವಿರುದ್ಧ ರೋಚಕ ಗೆಲುವು ಸಾಧಿಸಿದರು.

ನಾಲ್ಕರ ಘಟ್ಟದಲ್ಲಿ ಹಿಮಾನ್ವಿ 13–11, 11–6, 10–12, 7–11, 11–5 ರಿಂದ ಕೈರಾ ಬಾಳಿಗಾ ವಿರುದ್ಧ ಹಾಗೂ ಹಿಯಾ 12–14, 11–8, 11–2, 6–11, 11–6 ರಿಂದ ರಾಶಿ ವಿ. ರಾವ್ ವಿರುದ್ಧ ಜಯ ಸಾಧಿಸಿದ್ದರು.

19 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಆರ್ಣವ್ ಅವರು 11–7, 11–5, 11–9, 10–12, 11–5 ರಿಂದ ಬಿ.ಆರ್.ಗೌತಮ್ ಅವರನ್ನು ಮಣಿಸಿ, ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಸೆಮಿಫೈನಲ್ ಪಂದ್ಯಗಳಲ್ಲಿ ಗೌರವ್ 11–7, 11–7, 11–6 ರಿಂದ ಎ.ಆರ್. ಶೆಟ್ಲೂರ್ ಅವರನ್ನು ಹಾಗೂ ಆರ್ಣವ್ 7–11, 11–5, 11–7, 16–14 ರಿಂದ ಆರ್ಯ ಎ.ಜೈನ್ ಅವರನ್ನು ಸೋಲಿಸಿದ್ದರು.

ಪ್ರಿಕ್ವಾರ್ಟರ್‌ಫೈನಲ್‌ಗೆ ತನ್ವಿ, ತರುಣ್ • ಕನ್ನಡಿಗ ಮಿಥುನ್ ಮಂಜುನಾಥ್ ಮುನ್ನಡೆ

ಗುವಾಹಟಿ ಮಾಸ್ಟರ್ಸ್: ಭಾರತ ಪಾರಮ್ಯ

ಗುವಾಹಟಿ (ಪಿಟಿಐ): ತನ್ವಿ ಶರ್ಮಾ, ತರುಣ್ ಮನ್ನೆಪಲ್ಲಿ ಸೇರಿ ಭಾರತದ ಶಟ್ಲರ್‌ಗಳು ಇಲ್ಲಿ ನಡೆಯುತ್ತಿರುವ ಗುವಾಹಟಿ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ದಿನವಾದ ಬುಧವಾರವೂ ಪಾರಮ್ಯ ಮುಂದುವರಿಸಿದರು.

ವಿಶ್ವ ಜೂನಿಯರ್ ಕಂಚು ವಿಜೇತೆ ತನ್ವಿ, 6–21, 21–11, 21–19ರಿಂದ ಇಂಡೊನೇಷ್ಯಾದ ದಲಿಯಾ ಅಫ್ನಿಯಾ ಪುತೆರಿ ವಿರುದ್ಧ ಗೆಲುವು ಸಾಧಿಸಿ ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು.

ತಾನ್ಯಾ ಹೇಮಂತ್ ಅವರು 21–16, 21–12ರಿಂದ ಸ್ವದೇಶದ ಅದಿತಿ ಭಟ್ ವಿರುದ್ಧ ಹಾಗೂ ತಸ್ನೀಮ್ ಮೀರ್ ಅವರು 21–13, 23–21ರಿಂದ ಆಲಿಶಾ ನಾಯಕ್ ವಿರುದ್ಧ ಗೆಲುವು ಸಾಧಿಸಿದರು. ಸ್ಥಳೀಯ ಪ್ರತಿಭೆ ಅಸ್ಮಿತಾ ಚಾಲಿಹಾ ಅವರು 21–17, 21–23, 21–18ರಿಂದ ದೇವಿಕಾ ಸಿಂಗ್ ಅವರನ್ನು ಸೋಲಿಸಿದರು.

ಭಾರತದ ತನ್ವಿ ಶರ್ಮಾ

ಐದನೇ ಶ್ರೇಯಾಂಕದ ಆಟಗಾರ್ತಿ ಅನ್ಮೋಲ್ ಖರ್ಬ್ ಅವರು 21–18, 21–19ರಿಂದ ಸೂರ್ಯ ಚರಿಷ್ಮಾ ತಮಿರಿ ಎದುರು ಜಯ ಸಾಧಿಸಿದರು. ನಾಲ್ಕನೇ ಶ್ರೇಯಾಂಕದ ಅನುಪಮಾ ಉಪಾಧ್ಯಾಯ ಅವರು 21–15, 21–10ರಿಂದ ಮೇಘನಾ ರೆಡ್ಡಿ ಮರೆಡ್ಡಿ ಅವರನ್ನು ಹಿಮ್ಮೆಟ್ಟಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ತರುಣ್ ಅವರು 21–13, 21–16ರಿಂದ ಇಂಡೊನೇಷ್ಯಾದ ರಿಚೀ ದುತಾ ರಿಚಾರ್ಡೊ ವಿರುದ್ಧ ಸುಲಭ ಜಯ ಸಾಧಿಸಿದರು. ಸಂಸ್ಕಾರ್ ಸಾರಸ್ವತ್ ಅವರು 21–18, 21–19ರಿಂದ ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ವಿಜೇತ ಜೇಸನ್ ಗುಣವನ್ ಅವರಿಗೆ ಆಘಾತ ನೀಡಿದರು.

ಕನ್ನಡಿಗ ಮಿಥುನ್ ಮಂಜುನಾಥ್ ಅವರು ಆರನೇ ಶ್ರೇಯಾಂಕದ ಆಟಗಾರ ಎಸ್.ಶಂಕರ್ ಮುತ್ತುಸ್ವಾಮಿ ವಿರುದ್ಧ ವಾಕ್‌ಓವರ್ ಪಡೆದರು.

ಮೆಯಿರಾಬಾ ಲುವಾಂಗ್ ಮೈಸನಾಮ್, ಸಮರವೀರ್, ಮಾನವ್ ಚೌಧರಿ, ಸನೀತ್ ದಯಾನಂದ್, ಆರ್ಯಮನ್ ಟಂಡನ್ ಹಾಗೂ ಪ್ರಣಯ್ ಶೆಟ್ಟಿಗಾರ್ ಅವರು ತಮ್ಮ ತಮ್ಮ ಪಂದ್ಯಗಳಲ್ಲಿ ಗೆಲುವಿನೊಂದಿಗೆ 16ರ ಘಟ್ಟ ಪ್ರವೇಶಿಸಿದರು.